prajavani.net | prajavani
ಬುಧವಾರ, ನವೆಂಬರ್ 12, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 312 | ಪುಟ 16
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ನಟ ವಿಜಯ್ ವಿಚಾರಣೆ

ಆನ್‌ಲೈನ್ ಬೆಟ್ಟಿಂಗ್ ಆ್ಯಪ್‌ಗಳನ್ನು ಪ್ರಚಾರ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ನಟ ವಿಜಯ್ ದೇವರಕೊಂಡ ಅವರು ಮಂಗಳವಾರ ತೆಲಂಗಾಣ ಎಸ್‌ಐಟಿ ಎದುರು ಹಾಜರಾಗಿ ವಿಚಾರಣೆ ಎದುರಿಸಿದರು

ಬೀದಿ ನಾಟಕ

ದಾವಣಗೆರೆಯ ರಾಂ&ಕೋ ವೃತ್ತದಲ್ಲಿ ನಡೆದ 'ತೃತೀಯ ಲಿಂಗಿಗಳ ಕಾನೂನಾತ್ಮಕ ಹಕ್ಕುಗಳು' ಕುರಿತ ಬೀದಿ ನಾಟಕದ ಒಂದು ದೃಶ್ಯ

ಸೆನ್ಸೆಕ್ಸ್ 83,871 | ನಿಫ್ಟಿ 25,694 | $/₹ 88.50 | ಚಿನ್ನ (Std. 10g) ₹1,30,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,64,800 (ಬೆಂಗಳೂರು)

ಕಾರು ಸ್ಫೋಟ: ಎನ್‌ಐಎ ತನಿಖೆ

ಸಾವಿನ ಸಂಖ್ಯೆ 12ಕ್ಕೆ ಏರಿಕೆ
ಯುಎಪಿಎ ಅಡಿ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ನವದೆಹಲಿ: ಕೆಂಪುಕೋಟೆ ಬಳಿ ಹುಂಡೈ ಐ20 ಕಾರಿನಲ್ಲಿ ಸ್ಫೋಟ ಸಂಭವಿಸಿ ಕನಿಷ್ಠ 12 ಜೀವಗಳನ್ನು ಬಲಿ ಪಡೆದ ದುರ್ಘಟನೆಯು 'ಆತ್ಮಹತ್ಯಾ ಬಾಂಬ್ ದಾಳಿ' ಅಥವಾ 'ದೊಡ್ಡ ಭಯೋತ್ಪಾದಕ ಸಂಚಿನ ಪ್ರಕರಣ ವಾಗಿರಬಹುದೇ' ಎಂದು ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಉನ್ನತ ಮಟ್ಟದ ಅಧಿಕಾರಿ ಗಳೊಂದಿಗೆ ಸಭೆಗಳನ್ನು ನಡೆಸಿದ ಬಳಿಕ ಈ ಪ್ರಕರಣವನ್ನು ರಾಷ್ಟ್ರೀಯ ತನಿಖಾ ದಳಕ್ಕೆ (ಎನ್‌ಐಎ) ಹಸ್ತಾಂತರಿಸಲಾಗಿದೆ.

ದುರ್ಘಟನೆ ಸಂಬಂಧ ದೆಹಲಿ ಪೊಲೀಸರು ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆ (ಯುಎಪಿಎ) ಅಡಿ ಪ್ರಕರಣ ದಾಖಲಿಸಿ ದ್ದಾರೆ. ಇದು ಭಯೋತ್ಪಾದಕ ಪ್ರಕರಣ ಗಳಲ್ಲಿ ಅನ್ವಯಿಸುವ ಕಾನೂನು. ಸ್ಫೋಟಕ ವಸ್ತುಗಳ ಕಾಯ್ದೆಯಡಿಯಲ್ಲೂ ಪ್ರಕರಣ ದಾಖಲಿಸಿರುವ ಪೊಲೀಸರು, ರಾಷ್ಟ್ರ ರಾಜಧಾನಿಯ ವಿವಿಧ ಕಡೆಗಳಲ್ಲಿ ಹಾಗೂ ಫರೀದಾಬಾದ್‌ನಲ್ಲಿ ಶೋಧ ಕಾರ್ಯಾಚರಣೆ ನಡೆಸಿದ್ದಾರೆ.

ದಕ್ಷಿಣ ಕಾಶ್ಮೀರದ ಪುಲ್ವಾಮಾದ ವೈದ್ಯ ಡಾ. ಉಮರ್ ನಬಿ (34) ಎಂಬಾತ ಕಾರು ಸ್ಫೋಟದ ಪ್ರಮುಖ ಶಂಕಿತ ವ್ಯಕ್ತಿ. ಆತ ಫರೀದಾಬಾದ್‌ನಲ್ಲಿ ಪತ್ತೆಯಾದ ಭಯೋತ್ಪಾದಕರ ಜಾಲದೊಂದಿಗೆ ಸಂಪರ್ಕ ಹೊಂದಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಆದರೆ, ಈ ಆರೋಪವನ್ನು ಆತನ ಕುಟುಂಬ ಸದಸ್ಯರು ತಳ್ಳಿಹಾಕಿದ್ದಾರೆ.

ಫರೀದಾಬಾದ್‌ನಲ್ಲಿ 360 ಕೆ.ಜಿ ಅಮೋನಿಯಂ ನೈಟ್ರೇಟ್ ಸೇರಿದಂತೆ 2,900 ಕೆ.ಜಿ ಸ್ಫೋಟಕ ಗಳನ್ನು ಸೋಮವಾರ ವಶಪಡಿಸಿಕೊಳ್ಳ ಲಾಗಿತ್ತು. ಈ ಪ್ರಕರಣಕ್ಕೂ ಸ್ಫೋಟ ಘಟನೆಗೂ ಸಂಬಂಧವಿರುವುದು ಪ್ರಾಥಮಿಕ ತನಿಖೆಗಳಿಂದ ಗೊತ್ತಾಗಿದೆ ಎಂದು ಮೂಲಗಳು ತಿಳಿಸಿವೆ.

ಘಟನಾ ಸ್ಥಳದಿಂದ ಸಂಗ್ರಹಿಸಲಾದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ವಿಶ್ಲೇಷಿಸಿದ ನಂತರ, ಸ್ಫೋಟಕ್ಕೆ ಬಳಸಲಾದ ಕಾರನ್ನು ಚಾಲನೆ ಮಾಡಿದ ವ್ಯಕ್ತಿ ಪುಲ್ವಾಮಾದ ವೈದ್ಯ ಉಮರ್ ನಬಿ ಎಂದು ತನಿಖಾಧಿ- ಕಾರಿಗಳು ಗುರುತಿಸಿದ್ದಾರೆ. ಸ್ಫೋಟಕ್ಕೆ ಅಮೋನಿಯಂ ನೈಟ್ರೇಟ್ ಮತ್ತು ಡಿಟೋನೇಟರ್‌ಗಳನ್ನು ಬಳಸಿರ ಬಹುದು ಎಂದು ಪ್ರಾಥಮಿಕ ತನಿಖೆಗಳಿಂದ ಗೊತ್ತಾಗಿದೆ.

▶ 7

ದೆಹಲಿಯ ಕೆಂಪುಕೋಟೆ ಮೆಟ್ರೊ ನಿಲ್ದಾಣದ ಬಳಿ ಸೋಮವಾರ ಸಂಭವಿಸಿದ ಪ್ರಬಲ ಸ್ಫೋಟದಲ್ಲಿ ಸುಟ್ಟು ನಾಶವಾಗಿರುವ ವಾಹನಗಳನ್ನು ಪೊಲೀಸರು ಮಂಗಳವಾರ ಪರಿಶೀಲಿಸಿದರು — ಪಿಟಿಐ ಚಿತ್ರ

'ಸ್ಫೋಟಕದೊಂದಿಗೆ ಕಾರು ರಾಜಧಾನಿ ಪ್ರವೇಶಿಸಿದ್ದು ಹೇಗೆ?'

ಕಾರಿನಲ್ಲಿ ಸಂಭವಿಸಿದ ಸ್ಫೋಟವು ಭದ್ರತಾ ಮತ್ತು ಗುಪ್ತಚರ ವೈಫಲ್ಯವನ್ನು ಬೊಟ್ಟು ಮಾಡಿ ತೋರಿಸಿದೆ.

ಫರೀದಾಬಾದ್‌ನಲ್ಲಿ ಸ್ಫೋಟಕಗಳ ವಶ ಹಾಗೂ ದೆಹಲಿಯ ಆಜುಬಾಜಿನಿಂದ ಕಾರ್ಯ ನಿರ್ವಹಿಸುತ್ತಿರುವ 'ವೈಟ್ ಕಾಲರ್ ಭಯೋತ್ಪಾದಕ ಜಾಲ'ದ ತನಿಖೆ ನಡೆಸುತ್ತಿದ್ದ ಸಂದರ್ಭದಲ್ಲೇ ಶಂಕಿತನು ಸ್ಫೋಟಕಗಳೊಂದಿಗೆ ಮಧ್ಯ ದೆಹಲಿಗೆ ಕಾರನ್ನು ಹೇಗೆ ಓಡಿಸಿದ ಎಂಬ ಪ್ರಶ್ನೆ ಉದ್ಭವವಾಗಿದೆ. '2,900 ಕೆ.ಜಿ ಸ್ಫೋಟಕಗಳನ್ನು ಪೊಲೀಸರು ವಶಕ್ಕೆ ಪಡೆದ ಘಟನೆಯ ನಂತರವೂ ಕಾರಿನ ಚಾಲಕ ರಾಷ್ಟ್ರ ರಾಜಧಾನಿಗೆ ನುಸುಳುವಲ್ಲಿ ಯಶಸ್ವಿಯಾದ. ಪಾರ್ಕಿಂಗ್ ಸ್ಥಳದಲ್ಲಿ ಕಾರನ್ನು ಮೂರು ಗಂಟೆ ನಿಲ್ಲಿಸಲಾಗಿತ್ತು' ಎಂದು ಪೊಲೀಸರೇ ಹೇಳಿದ್ದಾರೆ.

▶ 7

ಆಕಸ್ಮಿಕವಾಗಿ ಸ್ಫೋಟ?

'ಐ20 ಕಾರ್‌ನಲ್ಲಿ ಸಾಗಿಸಲಾಗಿದ್ದ ವಸ್ತುವು ಆಕಸ್ಮಿಕವಾಗಿ ಸ್ಫೋಟಗೊಂಡಿರಬಹುದು ಎಂದು ಶಂಕಿಸಲಾಗಿದೆ. ಸ್ಫೋಟದ ನಂತರ ಯಾವುದೇ ಕುಳಿ ಉಂಟಾಗಿಲ್ಲ. ಹೀಗಾಗಿ ಸ್ಫೋಟಕ ವಸ್ತುಗಳನ್ನು ಬೇರೆಡೆಗೆ ಸಾಗಿಸುವಾಗ ಅಥವಾ ಇನ್ನೆಲ್ಲೋ ಬಚ್ಚಿಡಲು ಕೊಂಡೊಯ್ಯುವಾಗ ಆಕಸ್ಮಿಕವಾಗಿ ಅವಘಡ ಉಂಟಾಗಿರಬಹುದು. ಇದು ವ್ಯವಸ್ಥಿತ ಆತ್ಮಹತ್ಯಾ ದಾಳಿ ಆಗಿರಲಿಕ್ಕಿಲ್ಲ' ಎಂದು ತನಿಖೆ ನಡೆಸುತ್ತಿರುವ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 'ಕುಳಿ ಉಂಟಾಗದೇ ಇದ್ದಲ್ಲಿ ಸ್ಫೋಟಕವನ್ನು ದೊಡ್ಡ ಮಟ್ಟದ ಹಾನಿಗೆ ತಕ್ಕಂತೆ ತಾಂತ್ರಿಕವಾಗಿ ಅಣಿಗೊಳಿಸಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ' ಎಂದಿದ್ದಾರೆ.

ದಿನದ ಬೆಳವಣಿಗೆ

- ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳ ವಿಶ್ಲೇಷಣೆ
- ದೆಹಲಿ ಪೊಲೀಸರಿಂದ ಕೊತ್ವಾಲಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲು
- ಬೆಳಿಗ್ಗೆ ಹಾಗೂ ಮಧ್ಯಾಹ್ನ ಉನ್ನತ ಮಟ್ಟದ ಸಭೆ ನಡೆಸಿದ ಗೃಹ ಸಚಿವ ಅಮಿತ್ ಶಾ
- ರಾಷ್ಟ್ರ ರಾಜಧಾನಿ ಹಾಗೂ ಫರೀದಾಬಾದ್‌ನ ವಿವಿಧ ಕಡೆಗಳಲ್ಲಿ ಪೊಲೀಸರಿಂದ ಶೋಧ ಕಾರ್ಯಾಚರಣೆ
- ವೈದ್ಯ ಉಮರ್ ನಬಿ ತಾಯಿಯ ಡಿಎನ್‌ಎ ಪರೀಕ್ಷೆ
- ರಾಜಧಾನಿಯಲ್ಲಿ ಕಣ್ಗಾವಲು ಮತ್ತಷ್ಟು ಹೆಚ್ಚಳ

ಕಾರು ಸ್ಫೋಟದ ಹಿಂದಿನ ಸಂಚುಕೋರರನ್ನು ಸುಮ್ಮನೆ ಬಿಡುವುದಿಲ್ಲ. ಕೃತ್ಯಕ್ಕೆ ಕಾರಣರಾದ ಪ್ರತಿಯೊಬ್ಬರನ್ನೂ ನಮ್ಮ ತನಿಖಾ ಸಂಸ್ಥೆಗಳು ಕಾನೂನಿನ ಎದುರು ತಂದು ನಿಲ್ಲಿಸಲಿವೆ

ನರೇಂದ್ರ ಮೋದಿ, ಪ್ರಧಾನಿ

'6,000 ಕೆಪಿಎಸ್ ಶಾಲೆ ತೆರೆಯಲು ಚಿಂತನೆ'

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಆರು ಸಾವಿರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತಲಾ ಒಂದರಂತೆ ಆರು ಸಾವಿರ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು (ಕೆಪಿಎಸ್) ತೆರೆಯುವ ಚಿಂತನೆ ಇದೆ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

ಡಾ. ಅಬುಲ್ ಕಲಾಂ ಆಜಾದ್ ಅವರ ಜನ್ಮ ದಿನದ ಅಂಗವಾಗಿ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಮಂಗಳವಾರ ಆಯೋಜಿಸಿದ್ದ 'ರಾಷ್ಟ್ರೀಯ ಶಿಕ್ಷಣ ದಿನ'ದ ಕಾರ್ಯಕ್ರಮ- ದಲ್ಲಿ ಅವರು ಮಾತನಾಡಿದರು.

'ರಾಜ್ಯದಲ್ಲಿ ಪ್ರಸ್ತುತ 308 ಕೆಪಿಎಸ್ ಶಾಲೆಗಳಿವೆ. ಬಜೆಟ್‌ನಲ್ಲಿ ಘೋಷಿಸಿದ 500 ಶಾಲೆಗಳು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ನೆರವಿನಲ್ಲಿ 200 ಶಾಲೆ ಹಾಗೂ ಗಣಿಬಾಧಿತ 10 ತಾಲ್ಲೂಕುಗಳಿಗೆ ತಲಾ 10ರಂತೆ 100 ಶಾಲೆಗಳನ್ನು ತೆರೆಯಲಾಗುತ್ತಿದೆ. ಅಲ್ಪಸಂಖ್ಯಾತ ಇಲಾಖೆಯಿಂದ 100 ಶಾಲೆ. ಹೀಗೆ, ಒಂದೇ ವರ್ಷದಲ್ಲಿ ಒಟ್ಟು 900 ಹೊಸ ಶಾಲೆಗಳನ್ನು ಆರಂಭಿಸ- ಲಾಗುತ್ತದೆ. ಈ ಶಾಲೆಗಳಲ್ಲಿ ಒಂದನೇ ತರಗತಿಯಲ್ಲಿ ಕಂಪ್ಯೂಟರ್ ಶಿಕ್ಷಣ ಹಾಗೂ ಆರನೇ ತರಗತಿಯಲ್ಲಿ ಕೌಶಲ ಅಭಿವೃದ್ಧಿ ತರಬೇತಿ ನೀಡಲಾಗುತ್ತದೆ' ಎಂದು ಮಾಹಿತಿ ನೀಡಿದರು.

'ಕೆಪಿಎಸ್ ಶಾಲೆಯಲ್ಲಿ ಎಲ್‌ಕೆಜಿ ಯಿಂದ ಪಿಯುಸಿವರೆಗೂ ವಿದ್ಯಾಭ್ಯಾಸ ಮಾಡಬಹುದು ಎಂದರು.

▶ 4

ಜಾಹೀರಾತು



ಸಮೀಕ್ಷೆ: ಎನ್‌ಡಿಎಗೆ ಬಹುಮತ

ಬಿಹಾರ ಚುನಾವಣೆಯ ಮತಗಟ್ಟೆ ಸಮೀಕ್ಷೆಗಳು ಮಂಗಳವಾರ ಹೊರಬಿದ್ದಿವೆ. ಎಲ್ಲ ಸಮೀಕ್ಷೆಗಳೂ ಎನ್‌ಡಿಎ ಪಾಳಯಕ್ಕೆ ಬಹುಮತ ನೀಡಿವೆ. 'ಇಂಡಿಯಾ' ಕೂಟವು ಬಹುಮತದಿಂದ ದೂರವೇ ಇರಲಿದೆ ಎಂದೂ ಹೇಳಿವೆ. ಹೊಸದಾಗಿ ಬಿಹಾರ ರಾಜಕಾರಣಕ್ಕೆ ಪ್ರವೇಶ ಪಡೆದಿದ್ದ, ಪ್ರಶಾಂತ್ ಕಿಶೋರ್ ಅವರ ಜನ ಸುರಾಜ್ ಪಕ್ಷವು ಖಾತೆ ತೆರೆಯಲಿದೆ ಎಂದು ಕೆಲವು ಸಮೀಕ್ಷೆಗಳು ಹೇಳಿವೆ. ಮುಂದಿನ ಮುಖ್ಯಮಂತ್ರಿ ಯಾರಾಗಬಹುದು ಎಂದು 'ಪೀಪಲ್ಸ್ ಪಲ್ಸ್' ಸಂಸ್ಥೆ ನಡೆಸಿದ ಸಮೀಕ್ಷೆಯಲ್ಲಿ 'ಇಂಡಿಯಾ'ದ ಮುಖ್ಯಮಂತ್ರಿ ಅಭ್ಯರ್ಥಿ ತೇಜಸ್ವಿ ಯಾದವ್ ಅವರಿಗೆ ಶೇ 32ರಷ್ಟು ಮತಗಳು ಬಂದಿವೆ. ಎರಡನೇ ಸ್ಥಾನದಲ್ಲಿರುವ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಶೇ 30ರಷ್ಟು ಮತ ಪಡೆದಿದ್ದಾರೆ



ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ಸಂಸ್ಥೆ	ಎನ್‌ಡಿಎ	'ಇಂಡಿಯಾ'	ಜನಸುರಾಜ್	ಇತರರು
ಪಿ–ಮಾರ್ಕ್	142-162	80-98	1-4	0-3
ಜೆವಿಸಿ ಪೋಲ್ಸ್	135-150	88-103	0-1	3-6
ದೈನಿಕ್ ಭಾಸ್ಕರ್	145-160	73-91	0	5-10
ಪೀಪಲ್ಸ್ ಇನ್‌ಸೈಟ್	133-148	87-102	0-2	3-6
ಪೋಲ್‌ಸ್ಟಾರ್	133-148	87-102	0	3-5
ಚಾಣಕ್ಯ	130-138	100-108	0	3-5

ಎಲ್ಲರ ಚಿತ್ತ 14ರತ್ತ

ಪ್ರಜಾವಾಣಿ ವಾರ್ತೆ/ಪಿಟಿಐ

ಪಟ್ನಾ: ಬಿಹಾರ ವಿಧಾನಸಭಾ ಚುನಾವಣೆಯ ಎರಡನೇ ಹಂತದ ಮತದಾನ ಮಂಗಳವಾರ ಪೂರ್ಣಗೊಂಡಿದೆ. ಎರಡನೇ ಮತ್ತು ಕೊನೆಯ ಹಂತದಲ್ಲಿ 122 ಕ್ಷೇತ್ರಗಳಿಗೆ ನಡೆದ ಮತದಾನದಲ್ಲಿ ದಾಖಲೆ ಪ್ರಮಾಣದ ಶೇ 68.79ರಷ್ಟು ಮಂದಿ ಹಕ್ಕು ಚಲಾಯಿಸಿದ್ದಾರೆ.

ಕೆಲ ಸಣ್ಣಪುಟ್ಟ ಘಟನೆಗಳನ್ನು ಹೊರತುಪಡಿಸಿದರೆ ಎರಡನೇ ಹಂತದ ಮತದಾನ ಬಹುತೇಕ ಶಾಂತಿಯುತವಾಗಿ ನಡೆದಿದೆ. 'ಸದ್ಯದ ಮಾಹಿತಿ ಪ್ರಕಾರ ಕೊನೆಯ ಹಂತದಲ್ಲಿ ಶೇ 68.79ರಷ್ಟು ಮತದಾನ ನಡೆದಿದೆ. ಎರಡೂ ಹಂತಗಳಲ್ಲಿ ರಾಜ್ಯದಲ್ಲಿ ಒಟ್ಟಾರೆ ಶೇ 66.90ರಷ್ಟು ಮತದಾನ ದಾಖಲಾಗಿದ್ದು, ಕಳೆದ ವಿಧಾನಸಭಾ ಚುನಾವಣೆಗಿಂತ ಶೇ 9.6ರಷ್ಟು ಏರಿಕೆಯಾಗಿದೆ' ಎಂದು ಮುಖ್ಯ ಚುನಾವಣಾ ಅಧಿಕಾರಿ ವಿನೋದ್ ಸಿಂಗ್ ಗುಂಜಿಯಾಲ್ ತಿಳಿಸಿದ್ದಾರೆ.

▶ 10

ಜೈಲು: ಮದ್ಯ ಕುಡಿದು ನೃತ್ಯ ಮಾಡಿದವರ ಗುರುತು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಮದ್ಯ ಕುಡಿದು ನೃತ್ಯ ಮಾಡಿದವರ ಗುರುತು ಪತ್ತೆ ಮಾಡಲಾಗಿದ್ದು, ನಾಲ್ವರು ವಿಚಾರಣಾಧೀನ ಕೈದಿಗಳ ವಿರುದ್ಧ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಜೈಲರ್ ಗೋಪಿನಾಥ್ ಅವರ ದೂರಿನ ಮೇರೆಗೆ ಕಾರ್ತಿಕ್, ಧನಂಜಯ್, ಮಂಜುನಾಥ್, ಬಿ.ಚರಣ್ ರಾವ್ ವಿರುದ್ಧ ಜೈಲು ನಿಯಮಗಳ ಉಲ್ಲಂಘನೆ ಆರೋಪ ಸಂಬಂಧ ಪ್ರಕರಣ ದಾಖಲಿಸಿಕೊಂಡು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ವಿವಿಧ ಪೊಲೀಸ್ ಠಾಣಾ ವ್ಯಾಪ್ತಿ ಗಳಲ್ಲಿ ದಾಖಲಾಗಿದ್ದ ಬೇರೆ ಬೇರೆ ಅಪರಾಧ ಪ್ರಕರಣಗಳಲ್ಲಿ ಈ ಆರೋಪಿ ಗಳನ್ನು ಬಂಧಿಸಲಾಗಿತ್ತು. ಈ ಪೈಕಿ ಕಾರ್ತಿಕ್ ಹೊರತುಪಡಿಸಿ ಇತರೆ ಆರೋಪಿಗಳು ಜಾಮೀನು ಪಡೆದು ಬಿಡುಗಡೆಯಾಗಿದ್ದಾರೆ.

ಮಾದನಾಯಕನಹಳ್ಳಿ ಠಾಣೆಯಲ್ಲಿ ದಾಖಲಾಗಿದ್ದ ಕೊಲೆ ಪ್ರಕರಣದಲ್ಲಿ ಜೈಲು ಸೇರಿರುವ ಕಾರ್ತಿಕ್ ಒಂದು ವರ್ಷದಿಂದ ಜೈಲಿನಲ್ಲಿದ್ದು, ಜತೆಗೆ ಇತರೆ ಆರೋಪಿಗಳು ಇದ್ದರು. ಆದರೆ, ಮಂಜುನಾಥ್, ಧನಂಜಯ್, ಚರಣ್ ರಾವ್ ಈಗಾಗಲೇ ಬಿಡುಗಡೆಯಾಗಿ ದ್ದಾರೆ. ಈ ಮೂವರು ಆರೋಪಿಗಳಿಗಾಗಿ ಶೋಧ ನಡೆಯುತ್ತಿದೆ. ಅವರ ವಿಳಾಸ ಮತ್ತು ಸಂಪರ್ಕ ಸಂಖ್ಯೆ ನೀಡುವಂತೆ ಜೈಲಿನ ಅಧಿಕಾರಿಗಳಿಗೆ ಕೋರಲಾಗಿದೆ. ಅವರಿಂದ ಬಂದ ಮಾಹಿತಿ ಆಧರಿಸಿ ಅವರನ್ನು ಕರೆಸಿ ವಿಚಾರಣೆ ನಡೆಸಲಾಗು- ತ್ತದೆ ಎಂದು ಮೂಲಗಳು ತಿಳಿಸಿವೆ.

ಆರೋಪಿಗಳಿಗೆ ಮೊಬೈಲ್‌ಗಳು ಸಿಕ್ಕಿದ್ದು ಹೇಗೆ? ಯಾವಾಗ ಚಿತ್ರೀಕರಿಸ ಲಾಯಿತು? ಕೊಟ್ಟವರು ಯಾರು? ಮಾಧ್ಯಮಗಳಿಗೆ ವಿಡಿಯೊಗಳನ್ನು ಹರಿಬಿಟ್ಟವರು ಯಾರು? ಎಂಬುದರ ಕುರಿತು ತನಿಖೆ ನಡೆಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಜೈಲರ್ ಗೋಪಿನಾಥ್ ದೂರಿನಲ್ಲಿ ತಿಳಿಸಿದ್ದಾರೆ.

ಕೈದಿಗಳೇ ವಿಡಿಯೊ ಮಾಡಿ ಹೊರ- ಬಿಟ್ಟಿದ್ದಾರೆ ಎಂಬ ಸಂಶಯದ ಮೇಲೆ ಕೆಲ ಸಜಾಬಂಧಿ ಹಾಗೂ ವಿಚಾರಣಾಧೀನ ಕೈದಿಗಳನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿದ್ದಾರೆ. ವಿಡಿಯೊ ತುಣುಕುಗಳ ಬಗ್ಗೆ ವಿವಿಧ ಆಯಾಮಗಳಿಂದ ತನಿಖೆ ಕೈಗೊಂಡಿದ್ದಾರೆ.

▶ 4

ಚಿನಕುರುಳಿ — ಪ್ರಕಾಶ್ ಶೆಟ್ಟಿ



15ರಂದು ದೆಹಲಿಗೆ: ಸಿ.ಎಂ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಮೈಸೂರು: ದೆಹಲಿಗೆ ನ. 15ರಂದು ಹೋಗುತ್ತಿದ್ದೇನೆ. ಆ ದಿನವೇ ವಾಪಸ್ ಬರುವ ಅಂದಾಜಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲ್ಲಿ ತಿಳಿಸಿದರು.

ಹಿರಿಯ ನಾಯಕ ಕಪಿಲ್ ಸಿಬಲ್ ಅವರ ಕಾರ್ಯಕ್ರಮದಲ್ಲಿ ಭಾಗವಹಿಸಲು ಅಂದು ಹೋಗುತ್ತಿರುವುದಾಗಿಯೂ ಅವರು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'ಈ ಅವಧಿಯಲ್ಲಿ ರಾಹುಲ್ ಗಾಂಧಿ ಅವರ ಭೇಟಿಗೆ ಸಮಯ ಕೋರಲಾಗಿದೆ. ಅವಕಾಶ ಸಿಕ್ಕರೆ ಹೈಕಮಾಂಡ್ ಭೇಟಿಯಾಗುತ್ತೇನೆ' ಎಂದೂ ಮುಖ್ಯಮಂತ್ರಿ ತಿಳಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಎನ್.ಆರ್. ಚೌಕ, ಬೆಂಗಳೂರು–560 002

ಸಂ:ಮು.ಆ/ಜಿ.ಬಿ.ಎ/ಪಿಆರ್/138/2025–26 ದಿನಾಂಕ:10.11.2025

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 515 ಎಂಎನ್ಜೆ 2025 (ಇ), ದಿನಾಂಕ:10.10.2025 ಮತ್ತು ಅಧಿಸೂಚನೆ ಸಂಖ್ಯೆ:ನಅಇ 515 ಎಂಎನ್ಜೆ 2025 (ಭಾ–4) (ಇ), ದಿನಾಂಕ:03.11.2025 ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 4–ಬಿ ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಅಧಿಸೂಚನೆ ಸಂಖ್ಯೆ:ನಅಇ 169 ಎಂಎನ್ಜೆ 2016, ದಿನಾಂಕ:18.11.2017 ರಲ್ಲಿ ಘೋಷಿಸಲಾದ ಪರಿಷ್ಕೃತ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಒಟ್ಟು 305 ಗ್ರಾಮಗಳ ಹಾಗೂ ಬೆಂಗಳೂರು ಕೇಂದ್ರ ಪೇಟೆ ಪ್ರದೇಶ ಸೇರಿದಂತೆ 68681.88 ಹೆಕ್ಟೇರ್ ಪ್ರದೇಶವನ್ನು ಪರಿಷ್ಕೃತ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಿಂದ ಹೊರತುಪಡಿಸಿ ಪರಿಷ್ಕೃತ ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಸರ್ಕಾರದ ಅಧಿಸೂಚನೆ ದಿನಾಂಕ:10.10.2025 ರಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರಡಿಯಲ್ಲಿ ಯೋಜನಾ ಪ್ರಾಧಿಕಾರವೆಂದು ಘೋಷಿಸಲಾಗಿದೆ. ಸದರಿ ಅಧಿಸೂಚನೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುವ ದಿನಾಂಕ: 10.10.2025 ರಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಯೋಜನಾ ಪ್ರಾಧಿಕಾರವಾಗಿ ಕಾರ್ಯಾನಿರ್ವಹಿಸುತ್ತಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಗೆ ಈ ಕೆಳಕಂಡ 305 ಗ್ರಾಮಗಳು ಹಾಗೂ ಬೆಂಗಳೂರು ಕ್ರೇಂದ್ರ ಪೇಟೆ ಪ್ರದೇಶವು ಒಳಪಡುತ್ತದೆ.

ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ ಕಂದಾಯ ಗ್ರಾಮಗಳ ವಿವರ

ಕ್ರ.ಸಂ	ತಾಲ್ಲೂಕು	ಹೋಬಳಿ	ಗ್ರಾಮಗಳ ವಿವರ	ಗ್ರಾಮ ಮತ್ತು ಕಂದಾಯ ಸ.ನಂ ಗಳು
1	ಆನೇಕಲ್	ಸರ್ಜಾಪುರ	ಕೂಡ್ಲು	ಪೂರ್ಣ ಕಂದಾಯ ಗ್ರಾಮ
2	ಬೆಂಗಳೂರು ಪೂರ್ವ	ಬಿದರಹಳ್ಳಿ	ಬೆಳತ್ತೂರು	
3			ಭಟ್ಟರಹಳ್ಳಿ	
4			ಬಿಳಿಶಿವಾಲೆ	
5			ಭೈರತಿ	
6			ಚನ್ನಸಂದ್ರ	
7			ಕಾಡುಗೋಡಿ	
8			ಕಾಡುಗೋಡಿ ಪ್ಲಾಂಟೇಷನ್	
9			ಕುಂಬೇನ ಅಗ್ರಹಾರ	ಭಾಗಶಃ ಕಂದಾಯ ಗ್ರಾಮ
10			ಮೇಡಹಳ್ಳಿ	ಪೂರ್ಣ ಕಂದಾಯ ಗ್ರಾಮ
11			ಸಿಗೇಹಳ್ಳಿ	ಭಾಗಶಃ ಕಂದಾಯ ಗ್ರಾಮ
12			ವಾರಣಾಸಿ	ಪೂರ್ಣ ಕಂದಾಯ ಗ್ರಾಮ
13		ಕೆ.ಆರ್ ಪುರಂ	ಬಾಣಸವಾಡಿ	
14			ಬಸವನಪುರ	
15			ಬೆನ್ನಿಗಾನಹಳ್ಳಿ	
16			ಬಿನ್ನಮಂಗಲ ಮನವಂತೆ ಕಾವಲ್	
17			ಭೈಯಪ್ಪನಹಳ್ಳಿ ಮನವಂತೆ ಕಾವಲ್	
18			ಭೈಯಪ್ಪನಹಳ್ಳಿ	
19			ಬ್ಯಾಟರಾಯನಪುರ ನಾರಾಯಣಪುರ	
20			ಭೈರಸಂದ	
21			ಭೈರತಿಖಾನೆ	
22			ಚನ್ನಸಂದ	
23			ಚೆಳ್ಳಕೆರೆ	
24			ಚಿನ್ನಪ್ಪನಹಳ್ಳಿ	
25			ದಾಸರಹಳ್ಳಿ	
26			ದೊಡ್ಡನೆಕ್ಕುಂದಿ	
27			ದೈವಸಂದ	
28			ಗೆದ್ದಲಹಳ್ಳಿ	
29			ಹಗದೂರು	
30			ಹೂಡಿ	
31			ಹೊರಮಾವು	
32			ಹೊರಮಾವು ಅಗರ	
33			ಕಗ್ಗದಾಸಪುರ	
34			ಕಲ್ಕೆರೆ	
35			ಕೌದೇನಹಳ್ಳಿ	
36			ಕೊಡಿಗೇಹಳ್ಳಿ	
37			ಕೊತ್ತನೂರು	
38			ಕೊತ್ತನೂರು ನಾರಾಯಣಪುರ	
39			ಕೃಷ್ಣರಾಜಪುರ	
40			ಕುಂದಲಹಳ್ಳಿ	
41			ಕ್ಯಾಲಸನಹಳ್ಳಿ	
42			ಮಹದೇವಪುರ	
43			ನಗರೇಶ್ವರ ನಾಗೇನಹಳ್ಳಿ	
44			ನಾಗೊಂಡನಹಳ್ಳಿ	
45			ನಲ್ಲೂರಹಳ್ಳಿ	
46			ಪಟ್ಟಂದೂರು ಅಗ್ರಹಾರ	
47			ರಾಚೇನಹಳ್ಳಿ	
48			ರಾಮಗೊಂಡನಹಳ್ಳಿ ನಾರಾಯಣಪುರ	
49			ಸಾದರಮಂಗಲ	
50			ಶೀಗೇಹಳ್ಳಿ	
51			ಸಣ್ಣತಮ್ಮನಹಳ್ಳಿ	
52			ಸೊನ್ನೆನಹಳ್ಳಿ	
53			ಶ್ರೀನಿವಾಸಪುರ	
54			ಥಣಿಸಂದ್ರ	
55			ತಿಪ್ಪಸಂದ್ರ	
56			ತಿಪ್ಪಸಂದ್ರ ಕಾವಲ್	
57			ವಿಭೂತಿಪುರ	
58			ವಿಜನಪುರ	
59			ವೈಟ್‌ಫೀಲ್ಡ್	
60		ವರ್ತೂರು	ಅಂಬಲಿಪುರ	
61			ಬಳಗೆರೆ	
62			ಬೆಳ್ಳಂದೂರು	
63			ಬೆಳ್ಳಂದೂರು ಅಮಾನಿಕೆರೆ	
64			ಬೇಲೂರು	
65			ಬೇಲೂರು ನಾಗಸಂದ್ರ	
66			ಭೋಗನಹಳ್ಳಿ	
67			ಚಲ್ಲಗಟ್ಟ	
68			ಚಿಕ್ಕಬೆಳ್ಳಂದೂರು	
69			ದೇವರಬೀಸನಹಳ್ಳಿ	
70			ದೊಡ್ಡಕನ್ನೇನಹಳ್ಳಿ	
71			ಗುಂಜೂರು	
72			ಹಾಲನಾಯಕನಹಳ್ಳಿ	ಭಾಗಶಃ ಕಂದಾಯ ಗ್ರಾಮ
73			ಅರಳೂರು	ಪೂರ್ಣ ಕಂದಾಯ ಗ್ರಾಮ
74			ಜುನ್ನಸಂದ್ರ	
75			ಕಾಡುಬೀಸನಹಳ್ಳಿ	
76			ಕೈಕೊಂಡನಹಳ್ಳಿ	
77			ಕರಿಯಮ್ಮನ ಅಗ್ರಹಾರ	
78			ಕಸವನಹಳ್ಳಿ	
79			ಕೆಂಪಾಪುರ	
80			ಖಾನೆ ಕಂದಾಯ	
81			ಕೋಡಿಹಳ್ಳಿ	
82			ಕೋನೇನ ಅಗ್ರಹಾರ	
83			ಮಾರತಹಳ್ಳಿ	
84			ಮುನ್ನೇಕೊಳಲು	
85			ಪಣತ್ತೂರು	
86			ರಾಮಗೊಂಡನಹಳ್ಳಿ	
87			ಸಿದ್ದಾಪುರ	
88			ಸೋರುಣಸೆ	
89			ತೂಬರಹಳ್ಳಿ	
90			ವಲೀಪುರ	
91			ವರ್ತೂರು	
92			ಯಮಲೂರು	
93	ಬೆಂಗಳೂರು ಉತ್ತರ	ಜಾಲ	ಕಟ್ಟಿಗೇನಹಳ್ಳಿ	
94		ಕಸಬಾ	ಬ್ಯಾಟರಾಯನಪುರ	
95			ಗವಿಪುರ	
96			ಜೇಡಿಹಳ್ಳಿ	ಪೂರ್ಣ ಕಂದಾಯ ಗ್ರಾಮ
97			ಕರಿತಿಮ್ಮನಹಳ್ಳಿ	
98			ಕೆಂಪಾಬುದಿಕೆರೆ	
99			ಭೂಪಸಂದ್ರ	
100			ಬ್ಯಾಟಗುಟ್ಟಪಾಳ್ಯ	
101			ಚಿಕ್ಕಮಾರನಹಳ್ಳಿ	
102			ಚೋಳನಾಯಕನಹಳ್ಳಿ	
103			ದೇವರ ಜೀವನಹಳ್ಳಿ	
104			ದ್ಯಾವಸಂದ್ರ	
105			ಗಂಗೇನಹಳ್ಳಿ	
106			ಗೆದ್ದಲಹಳ್ಳಿ	
107			ಗುಡ್ಡದಹಳ್ಳಿ	
108			ಹೆಬ್ಬಾಳ	
109			ಹೆಬ್ಬಾಳ ಅಮಾನಿಕೆರೆ	
110			ಹೆಣ್ಣೂರು	
111			ಕಾಚರಕನಹಳ್ಳಿ	
112			ಕಲಗೊಂಡಹಳ್ಳಿ	
113			ಕಾವಲ್ ಬೈರಸಂದ್ರ	
114			ಲಿಂಗರಾಜಪುರ	
115			ಲೊಟ್ಟೆಗೊಲ್ಲಹಳ್ಳಿ	
116			ಮಠದಹಳ್ಳಿ	
117			ಮತ್ತೀಕೆರೆ	
118			ನಾಗಶೆಟ್ಟಿಹಳ್ಳಿ	
119			ನಾಗವಾರ	
120			ಪೂರ್ಣಪುರ	
121			ಶಾಮಪುರ	
122			ಟಾಟಾ ರೀಸರ್ಚ್ ಇನ್‌ಸ್ಟ್ಯೂಟ್	
123			ವಿಶ್ವನಾಥನಾಗೇನಹಳ್ಳಿ	
124		ಯಲಹಂಕ	ಅಗ್ರಹಾರ	
125			ಅಳ್ಳಾಳಸಂದ್ರ	
126			ಅಮೃತಹಳ್ಳಿ	
127			ಅನಂತಪುರ	
128			ಅಟ್ಟೂರು	
129			ಬೆಳ್ಳಹಳ್ಳಿ	
130			ಬ್ಯಾಟರಾಯನಪುರ	
131			ಚಿಕ್ಕಬೆಟ್ಟಹಳ್ಳಿ	
132			ಚಿಕ್ಕಬೊಮ್ಮಸಂದ್ರ	
133			ಚೊಕ್ಕನಹಳ್ಳಿ	
134			ದೊಡ್ಡ ಬೊಮ್ಮಸಂದ್ರ	
135			ದೊಡ್ಡಬೆಟ್ಟಹಳ್ಳಿ	
136			ಗಸ್ತಿಕೆಂಪನಹಳ್ಳಿ	
137			ಗೊಲ್ಲಹಳ್ಳಿ (ಗೋವಿಂದಪುರ)	
138			ಹಾರೋಹಳ್ಳಿ	
139			ಜಕ್ಕೂರು	
140			ಜಕ್ಕೂರು ಪ್ಲಾಂಟೇಷನ್	
141			ಜರಕಬಂಡಿಕಾವಲ್ [ಕೆ]	
142			ಕಸಬ ಯಲಹಂಕ	
143			ಕೆಂಪಾಪುರ	
144			ಕೆಂಚನಹಳ್ಳಿ	
145			ಕೊಡಿಗೇಹಳ್ಳಿ	
146			ಕೊಡಿಗೇಹಳ್ಳಿ ಪ್ಲಾಂಟೇಷನ್	
147			ಕೋಗಿಲು	
148			ಕೋತಿ ಹೊಸಹಳ್ಳಿ	
149			ಮಂಚೇನಹಳ್ಳಿ	
150			ಮಂಡಲಕುಂಟೆ	
151			ನರಸಿಪುರ	
152			ಪುಟ್ಟೇನಹಳ್ಳಿ	
153			ರಾಮಚಂದ್ರಪುರ	
154			ಸಂಪಿಗೇಹಳ್ಳಿ	
155			ಶಿಂಗಪುರ	
156			ಶಿವನಹಳ್ಳಿ	
157			ಶ್ರೀನಿವಾಸಪುರ	
158			ಶ್ರೀರಾಮಪುರ	
159			ತಿಂಡ್ಲು	
160			ತಿಂಡ್ಲು ಪ್ಲಾಂಟೇಷನ್ (ತಿಂಡ್ಲು)	
161			ತಿರುಮಲೇನಹಳ್ಳಿ	
162			ವಡೇರಪುರ	
163			ವಾಸುದೇವಪುರ	
164			ವೆಂಕಟಾಲ	
165			ವೆಂಕಟೇಶಪುರ	
166			ಯಲಹಂಕ ಅಮಾನಿಕೆರೆ	
167		ಯಶವಂತಪುರ	ಅಬ್ಬಿಗೆರೆ	
168			ಅಗ್ರಹಾರ ದಾಸರಹಳ್ಳಿ	
169			ಬಾಗಲಗುಂಟೆ	
170			ಚಿಕ್ಕಸಂದ್ರ	
171			ಚೊಕ್ಕಸಂದ್ರ	
172			ದಾಸರಹಳ್ಳಿ	
173			ದೊಡ್ಡಬಿದರಕಲ್ಲು	
174			ಗಿಡದಕೊನೆಹಳ್ಳಿ	
175			ಅಂದ್ರಹಳ್ಳಿ	ಭಾಗಶಃ ಕಂದಾಯ ಗ್ರಾಮ
176			ಹೆಗ್ಗನಹಳ್ಳಿ	ಪೂರ್ಣ ಕಂದಾಯ ಗ್ರಾಮ
177			ಹೇರೋಹಳ್ಳಿ	
178			ಹೊಸಹಳ್ಳಿ ಗೊಲ್ಲರಪಾಳ್ಯ	ಭಾಗಶಃ ಕಂದಾಯ ಗ್ರಾಮ
179			ಜಾಲಹಳ್ಳಿ	ಪೂರ್ಣ ಕಂದಾಯ ಗ್ರಾಮ
180			ಜರಕಬಂಡೆ ಕಾವಲ್	
181			ಕಮ್ಮಗೊಂಡನಹಳ್ಳಿ	
182			ಕರಿಹೋಬನಹಳ್ಳಿ	
183			ಕಸಬ ಯಶವಂತಪುರ	
184			ಕೇತಮಾರನಹಳ್ಳಿ	
185	ಬೆಂಗಳೂರು ದಕ್ಷಿಣ		ಲಗ್ಗೆರೆ	
186			ಲಿಂಗದೇವರನಹಳ್ಳಿ	
187			ಮಾಳಗಾಳ	
188			ಮಾಳಗಾಳ ಎಸ್.ಎಫ್	
189			ಮಲ್ಲಸಂದ್ರ	
190			ಮಲ್ಲತಹಳ್ಳಿ	
191			ಮ್ಯಾದರಹಳ್ಳಿ	
192			ಮ್ಯಾಕಲಚಿನ್ನಹಳ್ಳಿ	
193			ನಾಗರಬಾವಿ	
194			ನಾಗಸಂದ್ರ	
195			ನೆಲಗದರನಹಳ್ಳಿ	
196			ಪೀಣ್ಯ	
197			ಪೀಣ್ಯ ಕಂಟೋನ್‌ಮೆಂಟ್	
198			ಪೀಣ್ಯ ಪ್ಲಾಂಟೇಷನ್	
199			ಸಜ್ಜೇಪಾಳ್ಯ	
200			ಸಾಣೆಗುರುವನಹಳ್ಳಿ	
201			ಶೆಟ್ಟಿಹಳ್ಳಿ	
202			ಸಿಡೆದನಹಳ್ಳಿ	
203			ಶಿವನಹಳ್ಳಿ	
204			ಶ್ರೀಗಂಧ ಕಾವಲ್	
205			ಥಣ್ಣೀರನಹಳ್ಳಿ	ಪೂರ್ಣ ಕಂದಾಯ ಗ್ರಾಮ
206			ಉಲ್ಲಾಳು	ಭಾಗಶಃ ಕಂದಾಯ ಗ್ರಾಮ
207			ಲಕ್ಷ್ಮೀಪುರ	ಪೂರ್ಣ ಕಂದಾಯ ಗ್ರಾಮ
208		ಬೇಗೂರು	ಆಡುಗೋಡಿ	
209			ಅಗರ	
210			ಅರೆಕೆರೆ	
211			ಬಸಾಪುರ	ಭಾಗಶಃ ಕಂದಾಯ ಗ್ರಾಮ
212			ಬಸವನಪುರ [ಎಫ್]	
213			ಬೇಗೂರು	
214			ಬೆರಟನ ಅಗ್ರಹಾರ	
215			ಬಿಳೇಕಹಳ್ಳಿ	ಪೂರ್ಣ ಕಂದಾಯ ಗ್ರಾಮ
216			ಬೊಮ್ಮನಹಳ್ಳಿ	
217			ಚಂದ್ರಶೇಖರಪುರ	
218			ಚಿಕ್ಕತೋಗೂರು	ಭಾಗಶಃ ಕಂದಾಯ ಗ್ರಾಮ
219			ದೇವರ ಚಿಕ್ಕನಹಳ್ಳಿ	ಪೂರ್ಣ ಕಂದಾಯ ಗ್ರಾಮ
220			ದೊಡ್ಡ ತೋಗೂರು	ಭಾಗಶಃ ಕಂದಾಯ ಗ್ರಾಮ
221			ಈಜೀಪುರ	ಪೂರ್ಣ ಕಂದಾಯ ಗ್ರಾಮ
222			ಗೊಟ್ಟಿಗೆರೆ	ಭಾಗಶಃ ಕಂದಾಯ ಗ್ರಾಮ
223			ಹರಕಲಕುಂಟೆ	ಪೂರ್ಣ ಕಂದಾಯ ಗ್ರಾಮ
224			ಹೊಂಗಸಂದ್ರ	
225			ಹುಳಿಮಾವು	
226			ಇಬ್ಬಲೂರು	
227			ಜಕ್ಕಸಂದ್ರ	
228			ಕಾಳೇನ ಅಗ್ರಹಾರ	
229			ಕಮ್ಮನಹಳ್ಳಿ	ಭಾಗಶಃ ಕಂದಾಯ ಗ್ರಾಮ
230			ಕೋಡಿ ಚಿಕ್ಕನಹಳ್ಳಿ	ಪೂರ್ಣ ಕಂದಾಯ ಗ್ರಾಮ
231			ಕೋರಮಂಗಲ	
232			ಲಕ್ಕಸಂದ್ರ	
233			ಮಡಿವಾಳ	
234			ನಾಗನಾಥಪುರ	
235			ನಾರಾಯಣಪ್ಪನಪಾಳ್ಯ	
236			ನ್ಯಾನಪ್ಪನಶೆಟ್ಟಿ ಫಾಳ್ಯ	
237			ಪರಪ್ಪರ ಅಗ್ರಹಾರ	
238			ರೂಪೇನ ಅಗ್ರಹಾರ	
239			ಸಾರಕ್ಕಿ ಅಗ್ರಹಾರ	
240			ಶೀನಿವಾಗಿಲು ಕೆರೆ	
241			ಶೀನಿವಾಗಿಲು	
242			ಸಿಂಗಸಂದ್ರ	
243			ತಾವರೇಕೆರೆ	
244			ವೆಂಕೋಜಿರಾವ್ ಕೆರೆ	
245			ಯಲಕುಂಟೆ	
246			ಎಳೇನಹಳ್ಳಿ	ಭಾಗಶಃ ಕಂದಾಯ ಗ್ರಾಮ
247		ಕೆಂಗೇರಿ	ಚೌಡೇನಪುರ	
248			ದೇವಟಿಗೆ ರಾಮನಹಳ್ಳಿ	
249			ಗಾಣಕಲ್ಲು	
250			ಹಲಗೇವಡೇರಹಳ್ಳಿ	ಪೂರ್ಣ ಕಂದಾಯ ಗ್ರಾಮ
251			ಹೆಮ್ಮಿಗೇಪುರ	ಭಾಗಶಃ ಕಂದಾಯ ಗ್ರಾಮ
252			ಕೆಂಚೇನಹಳ್ಳಿ	ಪೂರ್ಣ ಕಂದಾಯ ಗ್ರಾಮ
253			ಕೆಂಗೇರಿ	ಭಾಗಶಃ ಕಂದಾಯ ಗ್ರಾಮ
254			ಲಿಂಗದೀರನಹಳ್ಳಿ	ಪೂರ್ಣ ಕಂದಾಯ ಗ್ರಾಮ
255			ಮೈಲಸಂದ್ರ	
256			ನಾಗದೇವನಹಳ್ಳಿ	
257			ನಾಯಂಡನಹಳ್ಳಿ	
258			ಪಂತರಪಾಳ್ಯ	ಭಾಗಶಃ ಕಂದಾಯ ಗ್ರಾಮ
259			ಪಟ್ಟಣಗೆರೆ	ಪೂರ್ಣ ಕಂದಾಯ ಗ್ರಾಮ
260			ಸೊಣ್ಣೇನಹಳ್ಳಿ	
261			ವಲಗೇರಹಳ್ಳಿ	
262		ಉತ್ತರಹಳ್ಳಿ	ಅಲಹಳ್ಳಿ	
263			ಅಂಜನಾಪುರ	ಭಾಗಶಃ ಕಂದಾಯ ಗ್ರಾಮ
264			ಅರೇಹಳ್ಳಿ	
265			ಅವಲಹಳ್ಳಿ	
266			ಬೈರಸಂದ್ರ	ಪೂರ್ಣ ಕಂದಾಯ ಗ್ರಾಮ
267			ಬಿಕಸಿಪುರ	
268			ಚನ್ನಸಂದ್ರ	ಭಾಗಶಃ ಕಂದಾಯ ಗ್ರಾಮ
269			ಚಿಕ್ಕಕಲ್ಲಸಂದ್ರ	ಪೂರ್ಣ ಕಂದಾಯ ಗ್ರಾಮ
270			ಚುಂಚಘಟ್ಟ	
271			ದಾಸರಹಳ್ಳಿ	
272			ದೊಡ್ಡಕಲ್ಲಸಂದ್ರ	
273			ಗೊಲ್ಲಹಳ್ಳಿ	ಭಾಗಶಃ ಕಂದಾಯ ಗ್ರಾಮ
274			ಗೋಪಿನಾಯಕನಹಳ್ಳಿ	ಪೂರ್ಣ ಕಂದಾಯ ಗ್ರಾಮ
275			ಗುಬ್ಬಲಾಳ	
276			ಹೊಸಹಳ್ಳಿ	
277			ಹೊಸಕೆರೆಹಳ್ಳಿ	ಭಾಗಶಃ ಕಂದಾಯ ಗ್ರಾಮ
278			ಇಟ್ಟಮಡು	ಪೂರ್ಣ ಕಂದಾಯ ಗ್ರಾಮ
279			ಜರಗನಹಳ್ಳಿ	
280			ಕದಿರೇನಹಳ್ಳಿ	
281			ಕರಿಸಂದ್ರ	
282			ಕತ್ರಿಗುಪ್ಪೆ	
283			ಕೆಂಬತನಹಳ್ಳಿ	ಭಾಗಶಃ ಕಂದಾಯ ಗ್ರಾಮ
284			ಕೋಣನಕುಂಟೆ	ಪೂರ್ಣ ಕಂದಾಯ ಗ್ರಾಮ
285			ಕೊತ್ತನೂರು	
286			ಮಾರಸಂದ್ರ (ಸುಬ್ರಮಣ್ಯಪುರ)	
287			ಮಾರೇನಹಳ್ಳಿ	
288			ಪುಟ್ಟೇನಹಳ್ಳಿ	
289			ರಾಘವನಪಾಳ್ಯ	
290			ರಘುವನಹಳ್ಳಿ	
291			ಸಾರಕ್ಕಿ	
292			ಸಾರಕ್ಕಿ ಕೆರೆ	
293			ತಲಘಟ್ಟಪುರ	ಭಾಗಶಃ ಕಂದಾಯ ಗ್ರಾಮ
294			ತಾಯಪ್ಪನಹಳ್ಳಿ	ಪೂರ್ಣ ಕಂದಾಯ ಗ್ರಾಮ
295			ತಿಪ್ಪಸಂದ್ರ	
296			ತುರಹಳ್ಳಿ	
297			ಉತ್ತರಹಳ್ಳಿ	ಭಾಗಶಃ ಕಂದಾಯ ಗ್ರಾಮ
298			ಉತ್ತರಹಳ್ಳಿ ಮನವರ್ತೆಕಾವಲ್	
299			ವಡ್ಡರಪಾಳ್ಯ	
300			ವಾಜರಹಳ್ಳಿ	ಪೂರ್ಣ ಕಂದಾಯ ಗ್ರಾಮ
301			ವಸಂತಪುರ	
302			ಯಡಿಯೂರು	
303			ಯಡಿಯೂರು ನಾಗಸಂದ್ರ	
304			ಯಲಚೇನಹಳ್ಳಿ	
305			ಮಲ್ಲಸಂದ್ರ	ಭಾಗಶಃ ಕಂದಾಯ ಗ್ರಾಮ

ಆದ್ದರಿಂದ, ಮೇಲ್ಕಂಡ ಗ್ರಾಮಗಳ ವ್ಯಾಪ್ತಿಯಲ್ಲಿ ಅಭಿವೃದ್ಧಿಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದಿಂದ ನಿಯಂತ್ರಿಸಬೇಕಾಗಿರುವುದರಿಂದ, ಸಾರ್ವಜನಿಕರು ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಪೂರ್ವದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ, 1961 ಹಾಗೂ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ, 2024 ರನ್ವಯ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿದೆ ಎಂದು ಈ ಮೂಲಕ ತಿಳಿಯಪಡಿಸಿದೆ.

ವಿ.ಸೂ: ಪರಿಷ್ಕೃತ ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಯ ನಕ್ಷೆಯನ್ನು ಹಾಗೂ ವಿವಿಧ ಅಭಿವೃದ್ಧಿ ಯೋಜನೆಗಳಿಗಾಗಿ ಪ್ರಾಧಿಕಾರದ ಅನುಮೋದನೆಗಾಗಿ ಸಲ್ಲಿಸಬೇಕಾದ ಅರ್ಜಿ ನಮೂನೆಗಳನ್ನು ಪ್ರಾಧಿಕಾರದ ವೆಬ್‌ಸೈಟ್: http://bbmp.gov.in ರಲ್ಲಿ ವೀಕ್ಷಿಸಬಹುದಾಗಿದೆ

ಸಹಿ/–
ಮುಖ್ಯ ಆಯುಕ್ತರು
ಹಾಗೂ ಸದಸ್ಯ ಕಾರ್ಯದರ್ಶಿ
ಗ್ರೇಟರ್ ಬೆಂಗಳೂರು ಪ್ರಾಧಿಕಾರ ಬೆಂಗಳೂರು

‘5 ಕಡೆ ಏರೋಸ್ಪೇಸ್ ಪಾರ್ಕ್’

ಕಾಲಿನ್ಸ್ ಇಂಡಿಯಾ ಆಪರೇಷನ್ ಸೆಂಟರ್‌ಗೆ ಚಾಲನೆ

ದೇವನಹಳ್ಳಿಯ ಕೆಐಎಡಿಬಿ ಏರೋಸ್ಪೇಸ್ ಪಾರ್ಕ್‌ನಲ್ಲಿ ಕಾಲಿನ್ಸ್ ಇಂಡಿಯಾ ಆಪರೇಷನ್ ಸೆಂಟರ್ ಉದ್ಘಾಟನೆ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಕಾಲಿನ್ಸ್ ಏರೋಸ್ಪೇಸ್ ಕಂಪನಿಯ ಹಿರಿಯ ಉಪಾಧ್ಯಕ್ಷ ರಾಯ್ ಗಲಿಕನ್ಸ್, ಎಂ.ಬಿ.ಪಾಟೀಲ ಪಾಲ್ಗೊಂಡಿದ್ದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ಸೇರಿದಂತೆ ಬೆಳಗಾವಿ, ಮೈಸೂರು, ತುಮಕೂರು ಮತ್ತು ಚಾಮರಾಜನಗರದಲ್ಲಿ ವಿಶ್ವ ದರ್ಜೆಯ ಏರೋಸ್ಪೇಸ್ ಮತ್ತು ಡಿಫೆನ್ಸ್ ಪಾರ್ಕ್‌ಗಳನ್ನು ಸ್ಥಾಪಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ದೇವನಹಳ್ಳಿಯ ಕೆಐಎಡಿಬಿ ಏರೋಸ್ಪೇಸ್ ಪಾರ್ಕ್‌ನಲ್ಲಿ ಕಾಲಿನ್ಸ್ ಏರೋಸ್ಪೇಸ್ ಕಂಪನಿಯು ಅಭಿವೃದ್ಧಿ ಪಡಿಸಿರುವ ಕಾಲಿನ್ಸ್ ಇಂಡಿಯಾ ಆಪರೇಷನ್ ಸೆಂಟರ್‌ಗೆ ಅವರು ಚಾಲನೆ ನೀಡಿ ಮಾತನಾಡಿದರು.

ಕಾಲಿನ್ಸ್ ಏರೋಸ್ಪೇಸ್ ರಾಜ್ಯದಲ್ಲಿ 25 ದಶಲಕ್ಷ ಡಾಲರ್ ಹೂಡಿಕೆ ಮಾಡುತ್ತಿದೆ. ಈ ನೂತನ ಘಟಕದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ, ಆಧುನಿಕ ತಯಾರಿಕೆಗಳಲ್ಲಿ ಎರಡು ಸಾವಿರಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗಲಿವೆ. ಭಾರತದ ವೈಮಾಂತರಿಕ್ಷ ಮತ್ತು ರಕ್ಷಣಾ ವಲಯದಲ್ಲಿ ಕರ್ನಾಟಕದ ಕೊಡುಗೆ ಶೇ.65ರಷ್ಟಿದೆ ಎಂದು ಹೇಳಿದರು.

ವೈಮಾಂತರಿಕ್ಷ ಮತ್ತು ರಕ್ಷಣಾ ವಲಯದಲ್ಲಿ ತೊಡಗಿಸಿಕೊಂಡಿರುವ ಎರಡು ಸಾವಿರಕ್ಕೂ ಹೆಚ್ಚು ಸಣ್ಣ ಮತ್ತು ಮಧ್ಯಮ ಉದ್ಯಮಗಳು ರಾಜ್ಯದಲ್ಲಿವೆ. ಮಹೀಂದ್ರ ಏರೋಸ್ಪೇಸ್, ರಂಗ್‌ಸನ್ಸ್ ರೀತಿಯ ವೈಮಾಂತರಿಕ್ಷ ಕಂಪನಿಗಳು ರಾಜ್ಯದಲ್ಲಿ ಅಪಾರ ಮೊತ್ತದ ಹೂಡಿಕೆ ಮಾಡಿದ್ದು, ಈ ವಲಯದಲ್ಲಿ 48 ಒಡಂಬಡಿಕೆಗಳಾಗಿವೆ. ರಂಗ್‌ಸನ್ಸ್ ಕಂಪನಿಯು ಬೋಯಿಂಗ್ ಕಂಪನಿ ಜತೆ ಸಹಭಾಗಿತ್ವ ಹೊಂದಿದ್ದು, ₹2,915 ಕೋಟಿ ಹೂಡಿಕೆ ಮಾಡುತ್ತಿದೆ. ಮುಂದಿನ ಐದು ವರ್ಷಗಳಲ್ಲಿ ₹45,000 ಕೋಟಿ ಹೂಡಿಕೆ ಆಕರ್ಷಿಸಿ, 60 ಸಾವಿರ ಉದ್ಯೋಗ ಸೃಷ್ಟಿ ಮಾಡುವ ಗುರಿ ಇದೆ ಎಂದು ಅವರು ವಿವರಿಸಿದರು.

ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ‘ಭಾರತದ ವೈಮಾನಿಕ ಮಾರುಕಟ್ಟೆಯು 2032ರ ವೇಳೆಗೆ ಜಗತ್ತಿನಲ್ಲಿ ಮೂರನೇ ಸ್ಥಾನಕ್ಕೇರಲಿದೆ. ಇಲ್ಲಿ ನಿರ್ವಹಣೆ, ದುರಸ್ತಿ ಮತ್ತು ಓವರ್‌ಹಾಲ್ ಯೋಜನೆಯಡಿ ಈಗ ವರ್ಷಕ್ಕೆ 1.2 ಶತಕೋಟಿ ಡಾಲರ್ ವಹಿವಾಟು ನಡೆಯುತ್ತಿದೆ. ಮುಂದಿನ ಏಳು ವರ್ಷಗಳಲ್ಲಿ ಅದು 4.6 ಶತಕೋಟಿ ಡಾಲರ್‌ಗೆ ಬೆಳೆಯಲಿದೆ’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ಇಂಧನ ಸಚಿವ ಕೆ.ಜೆ.ಜಾರ್ಜ್, ಆಹಾರ ಸಚಿವ ಕೆ.ಎಚ್.ಮುನಿಯಪ್ಪ, ಸಂಸದ ಡಾ.ಕೆ.ಸುಧಾಕರ್ ಹಾಗೂ ಕಾಲಿನ್ಸ್ ಏರೋಸ್ಪೇಸ್ ಕಂಪನಿಯ ಹಿರಿಯ ಉಪಾಧ್ಯಕ್ಷ ರಾಯ್ ಗಲಿಕನ್ಸ್ ಇದ್ದರು.

‘ಏರೋಸ್ಪೇಸ್ ಪರಿಣತರ ಕರ್ಮಭೂಮಿ’

‘ಏರೋಸ್ಪೇಸ್ ತಂತ್ರಜ್ಞಾನದ ಹಲವಾರು ಪರಿಣಿತರು ಬೆಂಗಳೂರನ್ನೇ ಕರ್ಮಭೂಮಿಯನ್ನಾಗಿ ಮಾಡಿಕೊಂಡಿದ್ದು, ಜ್ಞಾನ, ತಂತ್ರಜ್ಞಾನದ ನಗರವಾಗಿ ನಮ್ಮ ರಾಜಧಾನಿಯು ಗುರುತಿಸಿಕೊಂಡಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

‘ನಮ್ಮ ಸರ್ಕಾರವೂ ಉದ್ಯೋಗದಾತರಿಗೆ ಸದಾ ಬೆಂಬಲ ನೀಡಲಿದೆ. ಸರ್ಕಾರದ ಬಾಗಿಲು ಸದಾ ತೆರೆದಿರುತ್ತದೆ. ಕರ್ನಾಟಕದ ಎರಡನೇ ಹಾಗೂ ಮೂರನೇ ಹಂತದ ನಗರಗಳಲ್ಲೂ ಕೈಗಾರಿಕೆಗಳ ಸ್ಥಾಪನೆಗೆ ಗಮನ ಹರಿಸಬೇಕು’ ಎಂದು ಅವರು ಉದ್ಯಮಿಗಳಿಗೆ ಸಲಹೆ ನೀಡಿದರು.

‘ಪ್ರತಿ ವರ್ಷ 1.5 ಲಕ್ಷಕ್ಕೂ ಹೆಚ್ಚು ಎಂಜಿನಿಯರಿಂಗ್ ವಿದ್ಯಾರ್ಥಿಗಳು ರಾಜ್ಯದಿಂದ ಹೊರಹೊಮ್ಮುತ್ತಿದ್ದಾರೆ. ಭಾರತವನ್ನು ಬೆಂಗಳೂರು ಮೂಲಕ ನೋಡಲಾಗುತ್ತಿದೆ’ ಎಂದು ಶಿವಕುಮಾರ್ ಹೇಳಿದರು.

ಮುಖ್ಯಾಂಶಗಳು

- ₹45,000 ಕೋಟಿ ಹೂಡಿಕೆ, 60 ಸಾವಿರ ಉದ್ಯೋಗ ಸೃಷ್ಟಿ ಗುರಿ
- 2032ರ ವೇಳೆಗೆ ದೇಶದ ವೈಮಾನಿಕ ಮಾರುಕಟ್ಟೆ 3ನೇ ಸ್ಥಾನಕ್ಕೆ

ಚಟಕೆ ಸುದ್ದಿ

ಎಐಸಿಸಿ ಕಾರ್ಯದರ್ಶಿಯಾಗಿ ಶ್ರೀನಿವಾಸ್, ಆಳ್ವ

ಶ್ರೀನಿವಾಸ್

ನಿವೇದಿತ್ ಆಳ್ವ

ನವದೆಹಲಿ: ಎಐಸಿಸಿ ಕಾರ್ಯದರ್ಶಿಗಳಾಗಿ ರಾಷ್ಟ್ರೀಯ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಹಾಗೂ ಯುವ ಮುಖಂಡ ನಿವೇದಿತ್ ಆಳ್ವ ಅವರನ್ನು ಮಂಗಳವಾರ ನೇಮಿಸಲಾಗಿದೆ. ಶ್ರೀನಿವಾಸ್ ಅವರಿಗೆ ಗುಜರಾತ್ ಹಾಗೂ ಆಳ್ವ ಅವರಿಗೆ ತಮಿಳುನಾಡು ಹೊಣೆ ವಹಿಸಲಾಗಿದೆ. ಶ್ರೀನಿವಾಸ್ ಅವರು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ.

ಸರ್ಕಾರಿ ಶಾಲೆಗೆ ₹3.50 ಕೋಟಿ ವೆಚ್ಚದ ಕಟ್ಟಡ ನಿರ್ಮಾಣ

ಆನೇಕಲ್ : ಇಲ್ಲಿಯ ಕರ್ನಾಟಕ ಪಬ್ಲಿಕ್ ಶಾಲೆಯನ್ನು ಯುನೈಟೆಡ್ ವೇ ಆಫ್ ಬೆಂಗಳೂರು ಸಂಸ್ಥೆ ₹3.50 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸುತ್ತಿದೆ.

12 ಕೊಠಡಿ, ಸುಸಜ್ಜಿತ ಸಭಾಂಗಣ, ಗ್ರಂಥಾಲಯ, ಪ್ರಯೋಗಾಲಯ ಸೌಲಭ್ಯ ನೀಡಲು ಕ್ರಿಯಾ ಯೋಜನೆ ರೂಪಿಸಲಾಗಿದೆ. ಕೊಠಡಿ ಮತ್ತು ಸಭಾಂಗಣ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

ಫುಡಾನ್ ವಿ.ವಿ ಪ್ರತಿನಿಧಿಗಳೊಂದಿಗೆ ಬಿಳಿಮಲೆ ಸಭೆ

‘ಭಾರತ–ಚೀನಾ ಸಂಬಂಧ ವೃದ್ಧಿ’

ಪ್ರಜಾವಾಣಿ ವಾರ್ತೆ

ಚೀನಾದ ಫುಡಾನ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರೊಂದಿಗೆ ಪುರುಷೋತ್ತಮ ಬಿಳಿಮಲೆ

ಬೆಂಗಳೂರು: ‘ಶೈಕ್ಷಣಿಕ ವಿನಿಮಯಗಳು ಭಾರತ ಮತ್ತು ಚೀನಾ ನಡುವಿನ ಸಂಬಂಧ ವೃದ್ಧಿಸುವಲ್ಲಿ ಪ್ರಧಾನ ಪಾತ್ರ ವಹಿಸಲಿವೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅಭಿಪ್ರಾಯಪಟ್ಟರು.

ಚೀನಾದ ಫುಡಾನ್ ವಿಶ್ವವಿದ್ಯಾಲಯದ ಪ್ರತಿನಿಧಿಗಳೊಂದಿಗೆ ನಗರದಲ್ಲಿ ಮಂಗಳವಾರ ಸಭೆ ನಡೆಸಿ ಮಾತನಾಡಿದ ಅವರು, ‘ವಸಾಹತುಶಾಹಿ ವ್ಯವಸ್ಥೆಗೂ ಪೂರ್ವದಲ್ಲಿ ಭಾರತ ಮತ್ತು ಏಷ್ಯಾ ಖಂಡದ ದೇಶಗಳ ನಡುವೆ ಅತ್ಯುತ್ತಮ ಸಂವಹನ ಜಾರಿಯಲಿತ್ತು. ಚೀನಾ ದೇಶದ ಸಂಸ್ಕೃತಿಯ ಪ್ರಭಾವವನ್ನು ಭಾರತ ಹೊಂದಿತ್ತು. ಅದೇ ರೀತಿ, ಇಲ್ಲಿನ ಬೌದ್ಧ ಧರ್ಮವು ಚೀನಾವನ್ನು ಅತ್ಯಂತ ಪರಿಣಾಮಕಾರಿಯಾಗಿ ಆಕರ್ಷಿಸಿತು. ಜಾಗತೀಕರಣದ ನಂತರ ಈ ಎರಡು ದೇಶಗಳು ಪರಸ್ಪರ ಅವಲಂಬಿತವಾಗುವ ಎಲ್ಲ ಅವಕಾಶಗಳಿದ್ದರೂ, ಕೆಲವು ಅನಿಯಂತ್ರಿತ ಸಂಘರ್ಷಗಳು ಇದನ್ನು ತಡೆಯುತ್ತಿವೆ’ ಎಂದು ಹೇಳಿದರು.

‘ಕೌಟುಂಬಿಕತೆ ಎನ್ನುವ ಒಂದೇ ಮಾದರಿಯ ಸಂಸ್ಕೃತಿಯನ್ನು ಹೊಂದಿರುವ ಭಾರತ ಮತ್ತು ಚೀನಾವು ಇಂದು ಒಗ್ಗಟ್ಟಾಗಿ ಯೋಚಿಸಬೇಕಿದೆ’ ಎಂದರು.

‘ಭಾರತೀಯ ಜ್ಞಾನ ವ್ಯವಸ್ಥೆಯಲ್ಲಿ ಜನಪದ ಮತ್ತು ಮುಖ್ಯ ಸಂಸ್ಕೃತಿಗಳ ನಡುವೆ ಯಾವುದೇ ಸಂಘರ್ಷ ಇಲ್ಲದಿರುವ ಕಾರಣ, ಈ ದೇಶವು ಸುದೀರ್ಘ ಅವಧಿಗೆ ಒಂದಾಗಿ ಉಳಿಯಲು ಸಾಧ್ಯವಾಗಿದೆ’ ಎಂದರು.

ಸಭೆಯಲ್ಲಿ ಫುಡಾನ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಝಾಂಗ್ ಜಿಯಡಾಂಗ್, ಜಿಯನ್ ಜಂಬೋ, ಗುಯೋ ಡಿಂಗ್ ಪಿಂಗ್, ವೆನ್ ಯವ್ರೋ ಉಪಸ್ಥಿತರಿದ್ದರು.

ಚಿನ್ನ ಕಳವು ಪ್ರಕರಣ: ಟಿಡಿಬಿ ಮಾಜಿ ಅಧ್ಯಕ್ಷನ ಬಂಧನ

ತಿರುವನಂತಪುರ (ಪಿಟಿಐ): ಶಬರಿಮಲೆ ದೇಗುಲದ ಚಿನ್ನ ಕಳವು ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ) ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ಮಾಜಿ ಅಧ್ಯಕ್ಷ ಎನ್. ವಾಸು ಅವರನ್ನು ಮಂಗಳವಾರ ಬಂಧಿಸಿದೆ.

‘ಅಧ್ಯಕ್ಷರಾಗುವ ಮೊದಲು ಎರಡು ಅವಧಿಗೆ ಟಿಡಿಬಿ ಆಯುಕ್ತರಾಗಿದ್ದ ವಾಸು ಅವರನ್ನು ವಿಚಾರಣೆಗೆ ಒಳಪಡಿಸಿ, ಬಳಿಕ ಬಂಧಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ರಾಜ್ಯ ಸರ್ಕಾರದ ಪ್ರಮುಖರಿಗೆ ಆಪ್ತರಾಗಿರುವ ವಾಸು ಅವರ ಬಂಧನವು ಪ್ರಕರಣದ ಮಹತ್ವದ ಬೆಳವಣಿಗೆ ಆಗಿದೆ. ವಾಸು ಅವರು ಶಬರಿಮಲೆ ದೇಗುಲದ ಶ್ರೀಕೋವಿಲ್ (ಗರ್ಭಗುಡಿ) ಬಾಗಿಲಿನ ಚೌಕಟ್ಟಿನಿಂದ ಚಿನ್ನ ಕಳವಾಗಿರುವ ಪ್ರಕರಣದ ಆರೋಪಿಗಳಲ್ಲಿ ಒಬ್ಬರು ಎಂದು ಮೂಲಗಳು ತಿಳಿಸಿವೆ.

ಕಲಾ ಲೋಕ ಮಳಿಗೆಗೆ ಮುಖ್ಯಮಂತ್ರಿ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕದ ಅಭಿಮಾನದ ಪಯಣ ಅರ್ಥವಾಗಬೇಕು ಎನ್ನುವ ಉದ್ದೇಶದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಲಾ ಲೋಕ ಮಳಿಗೆ ನಿರ್ಮಿಸಲಾಗಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಮಾನ ನಿಲ್ದಾಣದ ಎರಡನೇ ಟರ್ಮಿನಲ್‌ನಲ್ಲಿ ಕೈಗಾರಿಕಾ ಇಲಾಖೆ ವತಿಯಿಂದ ನಿರ್ಮಿಸಿರುವ ‘ಕಲಾ ಲೋಕ ಮಳಿಗೆ’ಯನ್ನು ಚಿತ್ರಕಲಾ ರಚನೆ ಮತ್ತು ಘಂಟಾನಾದದ ಮೂಲಕ ಅವರು ಮಂಗಳವಾರ ಉದ್ಘಾಟಿಸಿದರು.

ಕೆಐಎಬಿ

‘ಕರ್ನಾಟಕದ ಕೈಗಾರಿಕಾ ಭೂಪಟದಲ್ಲಿ ಇದೊಂದು ಸಂತಸದ ಕ್ಷಣವಾಗಿದೆ. ನಮ್ಮ ವಿಮಾನ ನಿಲ್ದಾಣವು ದೇಶದಲ್ಲೆ ಮೂರನೇ ಸ್ಥಾನದಲ್ಲಿದೆ. ಪ್ರತಿದಿನವೂ ಹತ್ತಾರು ಸಾವಿರ ಪ್ರಯಾಣಿಕರು ಬರುತ್ತಿರುತ್ತಾರೆ. ಅವರಿಗೆ ಅಭಿಮಾನದ ಪಯಣ ಅರ್ಥವಾಗಬೇಕು. ಈ ಕಲಾ ಲೋಕ ಮಳಿಗೆ ಮೂಲಕ ರಾಜ್ಯದ ಹೆಮ್ಮೆಯ ಉತ್ಪನ್ನಗಳಿಗೆ ಜಾಗತಿಕ ಮಟ್ಟದಲ್ಲಿ ವ್ಯಾಪಕ ಪ್ರಚಾರ, ಬ್ರ್ಯಾಂಡಿಂಗ್ ನೀಡಿ, ಮಾರಾಟ ಹೆಚ್ಚಿಸಲಾಗುವುದು’ ಎಂದರು.

ಬೃಹತ್ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಮಾತನಾಡಿ, ‘ಟರ್ಮಿನಲ್-2ರ ಸಮೀಪ ನಿರ್ಮಿತವಾಗಿರುವ ಕಲಾ ಲೋಕ ಮಳಿಗೆಯಲ್ಲಿ ರಾಜ್ಯದ ಪಾರಂಪರಿಕ ಉತ್ಪನ್ನಗಳಾದ ಮೈಸೂರು ಸ್ಯಾಂಡಲ್ ಸೋಪ್, ಗಂಧದ ಎಣ್ಣೆ, ಅಗರಬತ್ತಿ, ಮೈಸೂರು ಸಿಲ್ಕ್, ಚನ್ನಪಟ್ಟಣದ ಬೊಂಬೆ, ಲಿಡ್ಕರ್ ಉತ್ಪನ್ನಗಳು, ಬಗೆಬಗೆಯ ಪರಿಮಳವಿರುವ ಕಾಫಿಪುಡಿ ಮತ್ತು ಪಾನೀಯ, ಕೈಮಗ್ಗದ ಉತ್ಪನ್ನಗಳು, ಇಳಕಲ್ ಸೀರೆ, ಲಂಬಾಣಿ ಉಡುಪು, ಗಂಧದ ಕಲಾಕೃತಿ, ಬಿದರಿ ಕಲಾಕೃತಿ, ಮೈಸೂರು ಶೈಲಿಯ ಕಲಾಕೃತಿಗಳು, ಮುಂತಾದವು ಸಿಗಲಿವೆ. ಒಟ್ಟಾರೆಯಾಗಿ ಜಿ.ಐ. ಮಾನ್ಯತೆ ಹೊಂದಿರುವ ರಾಜ್ಯದ 45 ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಎರಡೂ ಈ ಮಳಿಗೆಯಲ್ಲಿ ನಡೆಯಲಿದೆ’ ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಕೆ.ಜೆ. ಜಾರ್ಜ್, ಕೆ.ಎಚ್. ಮುನಿಯಪ್ಪ, ಶರಣಬಸಪ್ಪ ದರ್ಶನಾಪುರ, ಪ್ರಿಯಾಂಕ್ ಖರ್ಗೆ, ಕೆಎಸ್‌ಡಿಎಲ್ ಅಧ್ಯಕ್ಷ ಸಿ.ಎಸ್.ನಾಡಗೌಡ, ಕೈಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಜವಳಿ ಆಯುಕ್ತರಾದ ಜ್ಯೋತಿ, ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಎ.ಪಿ. ಬಸವರಾಜು ಉಪಸ್ಥಿತರಿದ್ದರು.

ರಾಷ್ಟ್ರೀಯ ದತ್ತು ಜಾಗೃತಿ ಮಾಸಾಚರಣೆಯ ಅಂಗವಾಗಿ ಬೆಂಗಳೂರು ಪೂರ್ವ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಶಿಶು ಮಂದಿರದ ಸಹಯೋಗದಲ್ಲಿ ಆಯೋಜಿಸಿದ್ದ ‘ಡ್ರೈವ್ ಫಾರ್ ಆಸರೆ’ ಎಂಬ ಇ–ಆಟೊ ರ್‍ಯಾಲಿಗೆ ಮಕ್ಕಳ ರಕ್ಷಣಾ ನಿರ್ದೇಶನಾಲಯದ ಯೋಜನಾ ನಿರ್ದೇಶಕಿ ಹಲೀಮಾ, ವೈಟ್‌ಫೀಲ್ಡ್ ಎಸಿಪಿ ಎನ್. ರೀನಾ ಸುವರ್ಣ ಅವರು ಚಾಲನೆ ನೀಡಿದರು. ಬೆಂಗಳೂರು ಪೂರ್ವ ತಹಶೀಲ್ದಾರ್ ರಾಜೀವ್ ಬಿ.ಎಸ್., ವೈಟ್‌ಫೀಲ್ಡ್ ಸಂಚಾರ ವಿಭಾಗದ ಎಸಿಪಿ ರಮೇಶ್ ವಿ.ಎಲ್., ಬೆಂಗಳೂರು ಪೂರ್ವ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷ ಚೌಡಪ್ಪ ಎಸ್.ಎಸ್. ಉಪಸ್ಥಿತರಿದ್ದರು

ತಾಂತ್ರಿಕ ನಿರ್ದೇಶಕರಾಗಿ ರವೀಂದ್ರ ಶೆಟ್ಟಿ



ಬೆಂಗಳೂರು: 2026ರ ಫೆಬ್ರುವರಿ ಮತ್ತು ಮಾರ್ಚ್‌ನಲ್ಲಿ ನಡೆಯಲಿರುವ ವಿಶ್ವ ಸೂಪರ್ ಕಬಡ್ಡಿ ಲೀಗ್ ಉದ್ಘಾಟನಾ ಆವೃತ್ತಿಯ ಟೂರ್ನಿಯ ತಾಂತ್ರಿಕ ನಿರ್ದೇಶಕರಾಗಿ ಅಂತರರಾಷ್ಟ್ರೀಯ ತರಬೇತುದಾರ ರವೀಂದ್ರ ಶೆಟ್ಟಿ ಅವರನ್ನು ನೇಮಿಸಲಾಗಿದೆ.

ಕರ್ನಾಟಕದ ರವೀಂದ್ರ ಅವರು ಕರ್ನಾಟಕ ರಾಜ್ಯ ತಂಡದ ಮುಖ್ಯ ಕೋಚ್ (2001–19) ಆಗಿ ಸೇವೆ ಸಲ್ಲಿಸಿದ್ದಾರೆ. ಜೂನಿಯರ್ ಕಬಡ್ಡಿ ವಿಶ್ವಕಪ್‌ನಲ್ಲಿ (ಇರಾನ್, 2023) ಭಾರತದ ಜೂನಿಯರ್ ತಂಡಕ್ಕೆ ಮಾರ್ಗದರ್ಶನ ನೀಡಿದ್ದಾರೆ. ಪ್ರೊ ಕಬಡ್ಡಿ ಲೀಗ್‌ನಲ್ಲೂ ಹಲವು ತಂಡಗಳಿಗೆ ಕೋಚ್ ಆಗಿ ಕಾರ್ಯ ನಿರ್ವಹಿಸಿದ್ದಾರೆ.

ರವೀಂದ್ರ ಅವರು ಲೀಗ್‌ನ ತಾಂತ್ರಿಕ ಮತ್ತು ಸ್ಪರ್ಧಾತ್ಮಕ ಚೌಕಟ್ಟನ್ನು ಮುನ್ನಡೆಸಲಿದ್ದಾರೆ. ಆಟದ ರಚನೆ, ರೆಫರಿ, ತರಬೇತುದಾರರ ಅಭಿವೃದ್ಧಿ ಮತ್ತು ಪಂದ್ಯಗಳ ಸ್ವರೂಪಗಳಲ್ಲಿನ ನಾವೀನ್ಯವನ್ನು ಮೇಲ್ವಿಚಾರಣೆ ಮಾಡಲಿದ್ದಾರೆ.

ಬಿಎಫ್‌ಎಸ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಪರಿಕ್ರಮ ತಂಡದ ಟೆನ್ಜಿನ್ ವೋಸರ್ (ಎಡ) ಮತ್ತು ಎಂಎಫ್‌ಎಆರ್ ತಂಡದ ಅನಸ್ ಯೂಸುಫ್ ಚೆಂಡಿಗಾಗಿ ಸೆಣೆಸಿದರು — ಚಿತ್ರ: ಬಿ.ಕೆ. ಜನಾರ್ದನ್

ಪರಿಕ್ರಮ ಎಫ್‌ಸಿ ತಂಡಕ್ಕೆ ಗೆಲುವು

ಬೆಂಗಳೂರು: ಥಾಂಗ್‌ಜಲೆನ್ ಹಾವೋಕಿಪ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಪರಿಕ್ರಮ ಎಫ್‌ಸಿ ತಂಡವು ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ 3–2ರಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವನ್ನು ಮಣಿಸಿತು.

ಇತರ ಪಂದ್ಯಗಳಲ್ಲಿ ಬಿಎಫ್‌ಸಿ 2–2ರಿಂದ ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡದೊಂದಿಗೆ ಡ್ರಾ ಮಾಡಿಕೊಂಡಿತು. ಬೆಂಗಳೂರು ಡ್ರೀಮ್ ಯುನೈಟೆಡ್ 3–1ರಿಂದ ಭಾರತ್ ಬೆಂಗಳೂರು ವಿರುದ್ಧ ಜಯಿಸಿತು.

ಅರಿವು ಕೇಂದ್ರ ಉದ್ಘಾಟಿಸಿದ ಪ್ರಿಯಾಂಕ್ ಖರ್ಗೆ, ಕೇಂದ್ರದ ಕುರಿತು ಮಾಹಿತಿ ಪಡೆದರು. ಕೃಷ್ಣ ಬೈರೇಗೌಡ, ಆರ್.ಬೈರೇಗೌಡ, ಗೌರಮ್ಮ ಕೃಷ್ಣಪ್ಪ, ಎನ್.ಕೆ.ಮಹೇಶ್ ಕುಮಾರ್, ಸಿಂಗಹಳ್ಳಿ ವೆಂಕಟೇಶ್, ಬಿ.ಕೆ.ನಾರಾಯಣಸ್ವಾಮಿ ಉಪಸ್ಥಿತರಿದ್ದರು

‘ಅರಿವು ಕೇಂದ್ರ ಭವಿಷ್ಯ ರೂಪಿಸುವ ಜ್ಞಾನ ಕೇಂದ್ರ’

ಪ್ರಜಾವಾಣಿ ವಾರ್ತೆ

ಯಲಹಂಕ: ಅರಿವು ಕೇಂದ್ರಗಳು ಮೇಲ್ನೋಟದ ಕಟ್ಟಡಗಳಾಗಿರದೆ, ಮಕ್ಕಳ ಭವಿಷ್ಯ ರೂಪಿಸುವ ಜ್ಞಾನ ಕೇಂದ್ರಗಳಾಗಿ ಪರಿವರ್ತನೆಯಾಗಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅಭಿಪ್ರಾಯಪಟ್ಟರು.

ಬ್ಯಾಟರಾಯನಪುರ ಕ್ಷೇತ್ರದ ದೊಡ್ಡಜಾಲ ಗ್ರಾಮದಲ್ಲಿ ಅರಿವು ಕೇಂದ್ರ, ಸ್ತ್ರೀ ಶಕ್ತಿ ಭವನ, ನಮ್ಮ ಮೆಡಿಕಲ್, ನಮ್ಮ ಕ್ಲಿನಿಕ್ ಮತ್ತು ಬಸ್ ತಂಗುದಾಣ ಸೌಲಭ್ಯಗಳಿಗೆ ಚಾಲನೆ ನೀಡಿದ ಅವರು ಮಾತನಾಡಿದರು.

‘ಗ್ರಂಥಾಲಯ ಎಂಬ ಹೆಸರಿನಿಂದ ಕರೆಯಲಾಗುತ್ತಿದ್ದ ಕೇಂದ್ರಗಳನ್ನು ನಮ್ಮ ಸರ್ಕಾರ ‘ಅರಿವು ಕೇಂದ್ರ’ ಎಂಬ ಹೆಸರಿನೊಂದಿಗೆ ಹೊಸ ಪರಿಕಲ್ಪನೆ ಮತ್ತು ಆಧುನಿಕ ಶೈಲಿಯಲ್ಲಿ ರೂಪಿಸುತ್ತಿದ್ದು, ಯುವ ಸಮುದಾಯದ ಜ್ಞಾನವೃದ್ಧಿಗೆ ಅಗತ್ಯವಿರುವ ಎಲ್ಲಾ ಸೌಕರ್ಯಗಳನ್ನು ಇಲ್ಲಿ ಕಲ್ಪಿಸಲಾಗುತ್ತಿದೆ’ ಎಂದರು.

‘ರಾಜ್ಯದಲ್ಲಿ 5,770 ಅರಿವು ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲಾಗುವುದು. ರಾಜ್ಯದ 51 ಲಕ್ಷ ಯುವಕರು ಈ ಕೇಂದ್ರಗಳಲ್ಲಿ ಹೆಸರು ನೋಂದಣಿ ಮಾಡಿಸಿಕೊಂಡಿದ್ದಾರೆ’ ಎಂದರು.

ದೊಡ್ಡಜಾಲ ಗ್ರಾಮ ಪಂಚಾಯಿತಿ ರಾಜ್ಯದಲ್ಲೇ ಅತಿಹೆಚ್ಚು ತೆರಿಗೆ ಸಂಗ್ರಹವಾಗುವ ಗ್ರಾಮ ಪಂಚಾಯಿತಿಗಳ ಪಟ್ಟಿಯಲ್ಲಿದೆ. ಈ ಪಂಚಾಯಿತಿಗೆ ₹1 ಕೋಟಿ ವಿಶೇಷ ಅನುದಾನ ನೀಡಲಾಗುವುದು ಎಂದರು.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, ‘ಜ್ಞಾನಕ್ಕೆ ಎಲ್ಲಾ ರೀತಿಯ ಉತ್ತಮ ಅವಕಾಶಗಳ ಬಾಗಿಲು ತೆರೆಯುವ ಶಕ್ತಿಯಿದೆ’ ಎಂದರು.

ಸಾರ್ವಜನಿಕ ಸೂಚನೆ

‘ಶೆಡ್ಯೂಲ್’ ನಲ್ಲಿ ಸಂಪೂರ್ಣವಾಗಿ ವಿವರಿಸಲಾದ ಮತ್ತು ಇನ್ನು ಮುಂದೆ ‘ಅನುಚ್ಛೇದ ಆಸ್ತಿ’ ಎಂದು ಉಲ್ಲೇಖಿಸಲಾದ ಸ್ಥಿರ ಆಸ್ತಿಗಳ ಶೀರ್ಷಿಕೆ ತನಿಖೆಯನ್ನು ನಾವು ಕೈಗೊಳ್ಳುತ್ತಿದ್ದೇವೆ. ಸದರಿ ಶೀರ್ಷಿಕೆಯ ವಿಚಾರಣೆಯನ್ನು ನಮ್ಮ ಕ್ಲೈಂಟ್ ಪರವಾಗಿ ನಡೆಸಲಾಗುತ್ತಿದೆ, ಅವರು ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಅದರ ಪ್ರಸ್ತುತ ಮಾಲೀಕರೊಂದಿಗೆ ವ್ಯವಹಾರವನ್ನು ಮಾಡಿಕೊಳ್ಳಲು ಬಯಸುತ್ತಾರೆ, ಅವುಗಳೆಂದರೆ: (i) ದಿವಂಗತ ಶ್ರೀ ಆರ್ ಟಿ ಪಟಲಪ್ಪ ಅವರ ಪತ್ನಿ ಶ್ರೀಮತಿ ಗೌರಮ್ಮ; (ii) ದಿವಂಗತ ಶ್ರೀ ಮುನೇಗೌಡ ಅವರ ಪತ್ನಿ ಶ್ರೀಮತಿ ಅಕ್ಕಯಮ್ಮ; (iii) ದಿವಂಗತ ಶ್ರೀ ಪಿಳ್ಳಪ್ಪ ಅವರ ಪುತ್ರಿ ಶ್ರೀಮತಿ ಅಮ್ಮಯಮ್ಮ; (iv) ಶ್ರೀ ಡಿ ಎಂ ನಾರಾಯಣಸ್ವಾಮಿ ಅವರ ಪತ್ನಿ ಶ್ರೀಮತಿ ಸರಸ್ವತಮ್ಮ; (v) ಶ್ರೀ ದೊಡ್ಡಪಟಲಪ್ಪ ಅವರ ಪತ್ನಿ ಶ್ರೀಮತಿ ಗೌರಮ್ಮ; ಮತ್ತು (vi) ದಿವಂಗತ ಶ್ರೀ ತಮ್ಮಯ್ಯ ಅವರ ಮಗ ಶ್ರೀ ನಾರಾಯಣಪ್ಪ (ಇನ್ನು ಮುಂದೆ ಒಟ್ಟಾರೆಯಾಗಿ ‘ಮಾಲೀಕರು’ ಎಂದು ಉಲ್ಲೇಖಿಸಲಾಗುತ್ತದೆ); ಮತ್ತು ಮೆಸರ್ಸ್ ಎಎಸ್‌ಆರ್ ಬಿಲ್ಡರ್ಸ್ ಮತ್ತು ಡೆವಲಪರ್ಸ್ (‘ಡೆವಲಪರ್’). ಮಾಲೀಕರು ಮತ್ತು ಡೆವಲಪರ್ ನಮ್ಮ ಕ್ಲೈಂಟ್‌ಗೆ ಮಾಲೀಕರು ಶೆಡ್ಯೂಲ್ ಆಸ್ತಿಯ ಸಂಪೂರ್ಣ ಮಾಲೀಕರು ಮತ್ತು ಅದರ ಮೇಲೆ ಸಂಪೂರ್ಣ ಮತ್ತು ಅನಿಯಂತ್ರಿತ ಪರಭಕ್ಷಕ ಹಕ್ಕುಗಳನ್ನು ಹೊಂದಿದ್ದಾರೆ ಮತ್ತು ಡೆವಲಪರ್ ನೋಂದಾಯಿತ ಜಂಟಿ ಅಭಿವೃದ್ಧಿ ಒಪ್ಪಂದದ ಅಡಿಯಲ್ಲಿ ಶೆಡ್ಯೂಲ್ ಆಸ್ತಿಯ SI ಸಂಖ್ಯೆ 1 ಅನ್ನು ಅಭಿವೃದ್ಧಿಪಡಿಸುವ ಹಕ್ಕನ್ನು ಹೊಂದಿದ್ದಾರೆ ಎಂದು ಪ್ರತಿನಿಧಿಸಿದ್ದಾರೆ.

ಮಾಲೀಕರು ಮತ್ತು ಡೆವಲಪರ್ ಹೊರತುಪಡಿಸಿ ಯಾವುದೇ ವ್ಯಕ್ತಿ/ವ್ಯಕ್ತಿಗಳು, ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು, ಶೀರ್ಷಿಕೆ, ಶುಲ್ಕ, ಹಕ್ಕುದಾರಿಕೆ, ಹಕ್ಕುಗಳು ಅಥವಾ ಯಾವುದೇ ಹಿತಾಸಕ್ತಿಯನ್ನು ಪ್ರತಿಪಾದಿಸಿದರೆ, ಕೆಳಗೆ ಸಹಿ ಮಾಡಿದವರಿಗೆ, ಶೆಡ್ಯೂಲ್ ಆಸ್ತಿಯ ಮೇಲೆ ಅವರ ಹಕ್ಕು/ಗಳು, ಯಾವುದಾದರೂ ಇದ್ದರೆ, ಅಥವಾ ಮೇಲೆ ತಿಳಿಸಲಾದ ವಹಿವಾಟಿಗೆ ಅವರ ಆಕ್ಷೇಪಣೆಗಳನ್ನು ಸಲ್ಲಿಸಲು ಇಲ್ಲಿ ಸಾರ್ವಜನಿಕರಿಗೆ ಸೂಚನೆ ನೀಡಲಾಗಿದೆ. ಹೇಳಲಾದ ಹಕ್ಕು/ಗಳು ಅಥವಾ ಆಕ್ಷೇಪಣೆಗಳು ಲಿಖಿತವಾಗಿರಬೇಕು, ಅಂತಹ ಹಕ್ಕು/ಗಳು ಅಥವಾ ಆಕ್ಷೇಪಣೆಗಳನ್ನು ಬೆಂಬಲಿಸಲು ದಾಖಲೆ ಪುರಾವೆಗಳೊಂದಿಗೆ ಇರಬೇಕು ಮತ್ತು ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ 15 (ಹದಿನೈದು) ದಿನಗಳ ಒಳಗೆ ಕೆಳಗೆ ನೀಡಲಾದ ವಿಳಾಸಕ್ಕೆ ನಮಗೆ ತಲುಪಿಸಬೇಕು. ನಿಗದಿತ ಸಮಯದೊಳಗೆ ಅಂತಹ ಯಾವುದೇ ಹಕ್ಕು/ಗಳು ಅಥವಾ ಆಕ್ಷೇಪಣೆಗಳು ಸ್ವೀಕರಿಸದಿದ್ದರೆ, ಮಾಲೀಕರು ಮತ್ತು ಡೆವಲಪರ್ ಹೊರತುಪಡಿಸಿ ಬೇರೆ ಯಾರೂ ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು, ಶೀರ್ಷಿಕೆ, ಆಸಕ್ತಿ ಅಥವಾ ಹಕ್ಕು ಹೊಂದಿಲ್ಲ ಎಂದು ಪರಿಗಣಿಸಲಾಗುತ್ತದೆ ಮತ್ತು ನಮ್ಮ ಕ್ಲೈಂಟ್ ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಪ್ರಸ್ತಾವಿತ ವಹಿವಾಟನ್ನು ಮುಂದುವರಿಸಲು ಸ್ವಾತಂತ್ರ್ಯ ಹೊಂದಿರುತ್ತಾರೆ.

ಅನುಚ್ಛೇದ ಆಸ್ತಿ
(ಶೆಡ್ಯೂಲ್‌ಆಸ್ತಿಯ ವಿವರಣೆ)

ಬೆಂಗಳೂರು ನಗರ ಜಿಲ್ಲೆಯ ಯಲಹಂಕ ಹೋಬಳಿಯ ಯಲಹಂಕ ತಾಲ್ಲೂಕಿನ ಜರಕಬಂಡೆ ಕಾವಲ್ ಗ್ರಾಮದಲ್ಲಿ ನೆಲೆಗೊಂಡಿರುವ ಮತ್ತು ಈ ಕೆಳಗಿನಂತೆ ಸುತ್ತುವರಿದ ಸ್ಥಿರಾಸ್ತಿಗಳ ಎಲ್ಲಾ ಭಾಗಗಳು:

ಕ್ರ. ಸಂ.	ಸರ್ವೇ ಸಂ.	ಒಟ್ಟು ವಿಸ್ತಾರ ಎಕರೆ	ಗುಂಟೆ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1.	74/4	2	13	ರಾಮಗೊಂಡನಹಳ್ಳಿ ಗ್ರಾಮದ ಗಡಿ	ಸರ್ವೆ ನಂ. 74/6	ಸರ್ವೆ ಸಂಖ್ಯೆಗಳು 74/14, 74/15, ಮತ್ತು 74/16	ಸರ್ವೆ ನಂ. 74/5
2.	74/14	0	20	ಸರ್ವೆ ನಂ. 74/15	ರಸ್ತೆ	ಸರ್ವೆ ನಂ. 74/17	ಸರ್ವೆ ಸಂಖ್ಯೆಗಳು 74/6 ಮತ್ತು 74/4
3.	74/15	0	20	ಸರ್ವೆ ನಂ. 74/16	ಸರ್ವೆ ನಂ. 74/14	ಸರ್ವೆ ನಂ. 74/18	ಸರ್ವೆ ನಂ. 74/4
4.	74/16	0	20	ರಾಮಗೊಂಡನಹಳ್ಳಿ ಗ್ರಾಮದ ಗಡಿ;	ಸರ್ವೆ ನಂ. 74/15	ಸರ್ವೆ ನಂ. 74/19	ಸರ್ವೆ ನಂ. 74/4
5.	74/17	0	21	ಸರ್ವೆ ನಂ. 74/18	ರಸ್ತೆ	ಸರ್ವೆ ನಂ. 74/3	ಸರ್ವೆ ನಂ. 74/14
6.	74/18	0	21	ಸರ್ವೆ ನಂ. 74/19	ಸರ್ವೆ ಸಂಖ್ಯೆಗಳು 74/17	ಸರ್ವೆ ನಂ. 74/3	ಸರ್ವೆ ನಂ. 74/15
7.	74/19	0	21	ಸರ್ವೆ ನಂ. 74/18	ಸರ್ವೆ ಸಂಖ್ಯೆಗಳು 74/18	ಸರ್ವೆ ನಂ. 74/3	ಸರ್ವೆ ನಂ. 74/16

DSK Legal,
ಪ್ರೆಸ್ಟೀಜ್ ಲೋಕ, ಸಂಖ್ಯೆ 201, 2ನೇ ಮಹಡಿ,
ಸಂಖ್ಯೆ 7/1 & 7/7, ಬ್ರಂಟನ್ ರಸ್ತೆ,
ಬೆಂಗಳೂರು – 560 025.
ಇ–ಮೆಯಿಲ್ ಐಡಿ: mamtajdsklegal.com
ಫೋನ್: 080–69548770

‘ಯೋಜನೆಗೆ ತಾತ್ಕಾಲಿಕ ತಡೆ; ಕಣ್ಣೊರೆಸುವ ತಂತ್ರ’

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಹೆಚ್ಚಿದ ವಿರೋಧ • ಜನಾಭಿಪ್ರಾಯ ರೂಪಿಸಲು ಪರಿಸರಾಸಕ್ತರ ತೀರ್ಮಾನ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ತಾತ್ಕಾಲಿಕ ತಡೆ ನೀಡಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿರುವುದು ಕೇವಲ ಕಣ್ಣೊರೆಸುವ ತಂತ್ರ’ ಎಂದು ಶರಾವತಿ ನದಿ ಕಣಿವೆ ಉಳಿಸಿ ಸಮಿತಿ, ಅಭಿಪ್ರಾಯಪಟ್ಟಿದೆ. ಮೊದಲ ಹಂತದಲ್ಲಿ ಯೋಜನೆಯ ವಿರುದ್ಧ ರಾಜ್ಯದಾದ್ಯಂತ ಜನಾಭಿಪ್ರಾಯ ಮೂಡಿಸಲು ಹಾಗೂ 2ನೇ ಹಂತದಲ್ಲಿ ಕಾನೂನು ಹೋರಾಟ ನಡೆಸಲೂ ತೀರ್ಮಾನಿಸಿದೆ.

ಜನಾಭಿಪ್ರಾಯ ರೂಪಿಸಲು ರೈತಸಂಘ, ದಲಿತ ಸಂಘರ್ಷ ಸಮಿತಿ ಹಾಗೂ ಕನ್ನಡಪರ ಮತ್ತು ಪರಿಸರಾಸಕ್ತ ಸಂಘಟನೆಗಳ ಮುಖಂಡರೊಂದಿಗೆ ಸಭೆ ನಡೆಸಿ ಮುಂದಿನ ಹೋರಾಟದ ರೂಪುರೇಷೆ ಬಗ್ಗೆ ಚರ್ಚಿಸಲು ಮಂಗಳವಾರ ಇಲ್ಲಿ ಶರಾವತಿ ನದಿ ಕಣಿವೆ ಉಳಿಸಿ ಸಮಿತಿ ನೇತೃತ್ವದಲ್ಲಿ ನಡೆದ ಪರಿಸರಾಸಕ್ತರ ಹಾಗೂ ಪರಿಸರ ಹೋರಾಟಗಾರರ ದುಂಡುಮೇಜಿನ ಸಭೆಯಲ್ಲಿ ಈ ನಿಲುವು ತಳೆಯಲಾಗಿದೆ.

ಸಭೆಗೆ ಮುನ್ನ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಂಗಾರಮಕ್ಕಿ ಕ್ಷೇತ್ರದ ಮಾರುತಿ ಗುರೂಜಿ, ಪಂಪ್ಡ್ ಸ್ಟೋರೇಜ್ ಯೋಜನೆಗೆ ಕೇಂದ್ರದಿಂದ ತಾತ್ಕಾಲಿಕ ತಡೆ ನೀಡಿರುವ ಸಂದೇಶ ಬಿತ್ತರವಾಗಿದೆ. ಇದು ಪರಿಸರ ಹೋರಾಟಗಾರರ ಸಂಘಟನೆಯನ್ನು ಒಡೆಯುವ ಹಾಗೂ ಸಮಾಜವನ್ನು ದಿಕ್ಕು ತಪ್ಪಿಸುವ ತಂತ್ರ ಎಂದರು.

‘ಪಂಪ್ಡ್ ಸ್ಟೋರೇಜ್ ಯೋಜನೆ ಅನುಷ್ಠಾನದ ನಿಟ್ಟಿನಲ್ಲಿ ನವೆಂಬರ್‌ನಲ್ಲಿ ಪರಿಸರ ಅಧ್ಯಯನಕ್ಕೆ ತಜ್ಞರ ನಿಯೋಗವನ್ನು ಕರ್ನಾಟಕಕ್ಕೆ ಕಳುಹಿಸಿ ವರದಿ ಪಡೆದು ನಂತರ ಮುಂದುವರಿಯುವುದಾಗಿ ಕೇಂದ್ರ ಸಚಿವ ಭೂಪೇಂದ್ರ ಯಾದವ್ ಅಧಿಕೃತವಾಗಿಯೇ ಹೇಳಿದ್ದರು. ಆ ನಿಯೋಗ ಬರುವ ಮುನ್ನವೇ ತಾತ್ಕಾಲಿಕ ತಡೆ ಎಂದು ಹೇಳುತ್ತಿದ್ದಾರೆ. ಈ ತಂತ್ರಕ್ಕೆ ಹೋರಾಟಗಾರರು ತಲೆ ಬಾಗುವುದಿಲ್ಲ’ ಎಂದು ಹೇಳಿದರು.

‘ಶರಾವತಿ ಪಂಪ್ಡ್ ಸ್ಟೋರೇಜ್ ಸೇರಿದಂತೆ ಪರಿಸರಕ್ಕೆ ಮಾರಕವಾದ ಯಾವುದೇ ಯೋಜನೆಗಳನ್ನು ಪಶ್ಚಿಮ ಘಟ್ಟದಲ್ಲಿ ಕೈಗೆತ್ತಿಕೊಳ್ಳುವುದಿಲ್ಲ ಎಂದು ಸರ್ಕಾರ ಗೆಜೆಟ್ ನೋಟಿಫಿಕೇಶನ್ ಹೊರಡಿಸುವವರೆಗೂ ನಮ್ಮ ಹೋರಾಟ ನಿರಂತರವಾಗಿರುತ್ತದೆ. ನಮ್ಮನ್ನು (ಹೋರಾಟಗಾರರು) ಒಡೆಯುವ ಕೆಲಸ ಬೇಡ ಎಂದು ಸರ್ಕಾರಕ್ಕೆ ಎಚ್ಚರಿಸುತ್ತೇವೆ’ ಎಂದರು.

‘ಯೋಜನೆಗಾಗಿ ಅರಣ್ಯ ಭೂಮಿ 54 ಹೆಕ್ಟೇರ್ ಅಲ್ಲ 142.7 ಹೆಕ್ಟೇರ್ ಬಳಕೆ ಆಗುತ್ತಿದೆ. ಸಿಂಹ ಬಾಲದ ಸಿಂಗಳೀಕಗಳ ನೆಲೆಯಲ್ಲಿ ಕ್ವಾರಿಗಳನ್ನು ಬಳಕೆ ಮಾಡಲಾಗುತ್ತಿದೆ. ವಿದ್ಯುತ್ ಪ್ರಸರಣಕ್ಕೆ ಹೆಚ್ಚುವರಿ ಭೂಮಿ ಬೇಕಿದೆ. ಇಷ್ಟೆಲ್ಲ ಸಂಗತಿ ಮುಚ್ಚಿಟ್ಟು ಕೆಪಿಸಿಎಲ್ ಸುಳ್ಳು ಹೇಳುತ್ತಿರುವುದು ಕಾನೂನು ಬಾಹಿರ ಎಂದು ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಹೇಳಿದರು.

ನಿಡಸೋಸಿ ಮಠದ ನಿಜಲಿಂಗಾನಂದ ಸ್ವಾಮೀಜಿ, ಮಾಜಿ ಶಾಸಕ ಮಹಿಮ ಪಟೇಲ್, ಕಪತ್ತಗುಡ್ಡದಲ್ಲಿರುವ ನಂದಿವೇರಿ ಮಠದ ಶಿವಕುಮಾರ ಸ್ವಾಮೀಜಿ, ಮೂಲಗದ್ದೆ ಮಠದ ಅಭಿನವ ಚನ್ನಬಸವ ಸ್ವಾಮೀಜಿ, ಬಂಗಾರುಮಕ್ಕಿ ಮಠದ ಮಾರುತಿ ಗುರೂಜಿ, ಬಸವ ಕೇಂದ್ರ ಬಸವ ಮರುಳಸಿದ್ಧ ಸ್ವಾಮೀಜಿ, ಧರ್ಮಗುರು ರೋಷನ್ ಪಿಂಟೋ, ಮುಸ್ಲಿಂ ಸಮುದಾಯದ ಮುಖಂಡ ಅಬ್ದುಲ್ ವಹಾಬ್, ಪರಿಸರವಾದಿಗಳಾದ ಡಾ.ಎಲ್.ಕೆ. ಶ್ರೀಪತಿ, ಪ್ರೊ.ಬಿ.ಎಂ. ಕುಮಾರಸ್ವಾಮಿ, ಅಖಿಲೇಶ್ ಚಿಪ್ಪಳಿ, ವಕೀಲ ಕೆ.ಪಿ. ಶ್ರೀಪಾಲ್, ರೈತ ಮುಖಂಡರಾದ ಕೆ.ಟಿ.ಗಂಗಾಧರ್, ದಿನೇಶ್ ಶಿರಿವಾಳ ಸಭೆಯಲ್ಲಿ ಪಾಲ್ಗೊಂಡಿದ್ದರು.

ಅನುಮತಿಗೆ ಮುನ್ನ ಟೆಂಡರ್ ಕರೆದಿದ್ದೇಕೆ?

‘ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯನ್ನು ಮೆಗಾ ಎಂಜಿನಿಯರಿಂಗ್ ಕಂಪನಿಗೆ ಟೆಂಡರ್ ಕರೆದು ಗುತ್ತಿಗೆ ನೀಡಲಾಗಿದೆ. ಯೋಜನೆಯ ಅನುಷ್ಠಾನಕ್ಕೆ ಬೇರೆ ಬೇರೆ ಇಲಾಖೆಗಳು ಇನ್ನೂ ಅನುಮತಿ ಕೊಟ್ಟಿಲ್ಲ. ಅನುಮತಿಯೇ ಇಲ್ಲದೇ ಹೇಗೆ ಟೆಂಡರ್ ಕರೆದರು’ ಎಂದು ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಪ್ರಶ್ನಿಸಿದರು.

‘‘ಅವರಿಗೆಲ್ಲ (ಸರ್ಕಾರ) ಮುಂದಿನ ಚುನಾವಣೆಯ ಬಗ್ಗೆ ಆಸಕ್ತಿಯೇ ಹೊರತು, ನೆಲದ ಮಕ್ಕಳ ಬಗ್ಗೆ ಅಲ್ಲ. ಇವರು ಇಷ್ಟೊಂದು ಕೃತಜ್ಞಹೀನರು ಆಗುತ್ತಾರೆ ಎಂದು ಭಾವಿಸಿರಲಿಲ್ಲ. ಸೇವೆ ಮಾಡುವ ಜಾಗದಲ್ಲಿ ಸೇವಿಸುತ್ತಿದ್ದಾರೆ. ಸಂಪದ್ಭರಿತ, ಸುಸಂಸ್ಕೃತ ರಾಜ್ಯ ಕರ್ನಾಟಕ ಅಸಂಸ್ಕೃತರ ಕೈಗೆ ಸಿಕ್ಕು ಸಂಕಷ್ಟಕ್ಕೆ ಒಳಗಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಕೆಲವರ ಲಾಭಕ್ಕಾಗಿ ಬಹಳಷ್ಟು ಜನರ ಭವಿಷ್ಯ ಬಲಿಕೊಡುವ ಯತ್ನ ನಡೆಯುತ್ತಿದೆ. ಭವಿಷ್ಯದ ಪೀಳಿಗೆಗೂ ಇಂತಹ ಯೋಜನೆಗಳು ಬೇಡ. ಜನರನ್ನು ಒಗ್ಗೂಡಿಸಿ ಅವರ ನೆರವು ಪಡೆದು ಹೋರಾಟ ರೂಪಿಸಬೇಕಿದೆ

ಸಂತೋಷ ಹೆಗ್ಡೆ, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ

ಪಶ್ಚಿಮಘಟ್ಟವನ್ನೇ ನಾಶ ಮಾಡುವ ಪ್ರಯತ್ನ ಸರ್ಕಾರದಿಂದಲೇ ಆಗುತ್ತಿದೆ. ಸೋಲಾರ್, ಪವನ ವಿದ್ಯುತ್ ಇದ್ದರೂ ಈ ಯೋಜನೆಗೆ ವೆಚ್ಚ ಮಾಡುತ್ತಿರುವ ₹10,474 ಕೋಟಿ ಸಾರ್ವಜನಿಕರ ಹಿತಾಸಕ್ತಿಗೆ ಅಲ್ಲ

ಗೋಪಾಲಗೌಡ, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ

ಶರಾವತಿ ಕಣಿವೆ ಉಳಿಸಿ ಸಮಿತಿಯಿಂದ ಮಂಗಳವಾರ ದುಂಡುಮೇಜಿನ ಸಭೆ ನಡೆಯಿತು

‘21 ಲಕ್ಷ ಮರಗಳ ಹನನಕ್ಕೆ ಸಿದ್ಧತೆ’

‘ಯೋಜನೆಗೆ 16,000 ಮರಗಳನ್ನು ಕಡಿಯಲಾಗುತ್ತಿದೆ ಎಂದು ಕೆಪಿಸಿಎಲ್ ಹೇಳುತ್ತಿದೆ. ಆದರೆ, ಅರಣ್ಯ ಇಲಾಖೆಯ ಪರಿವೇಶ್ ಪೋರ್ಟಲ್‌ನಲ್ಲಿ 1.20 ಲಕ್ಷ ಮರಗಳು ಎಂಬ ಉಲ್ಲೇಖವಿದೆ. ಇನ್ನು ಶರಾವತಿಯಿಂದ ಬೆಂಗಳೂರಿಗೆ ಕುಡಿಯುವ ನೀರು ಒಯ್ಯಲು 2 ಲಕ್ಷ ಮರಗಳನ್ನು ಕಡಿಯುವ ಪ್ರಸ್ತಾವ ಇದೆ. ಪಂಪ್ಡ್ ಸ್ಟೋರೇಜ್ ಸೇರಿದಂತೆ ಶರಾವತಿ ಕಣಿವೆಯಲ್ಲಿ 12 ಬೇರೆ ಬೇರೆ ಯೋಜನೆಗಳ ಅನುಷ್ಠಾನಕ್ಕೆ ಸಿದ್ಧತೆ ನಡೆದಿದ್ದು, 21 ಲಕ್ಷ ಮರಗಳ ಕಡಿಯುವ ಯೋಜನೆ ಇದೆ. ಈ ಬಗ್ಗೆ ಮಾಧ್ಯಮಗಳು ಹೆಚ್ಚು ಹೆಚ್ಚು ಬೆಳಕು ಚೆಲ್ಲಬೇಕಿದೆ’ ಎಂದು ಬಂಗಾರಮಕ್ಕಿ ಕ್ಷೇತ್ರದ ಮಾರುತಿ ಗುರೂಜಿ ಮನವಿ ಮಾಡಿದರು.

ವಿದ್ಯಾರ್ಥಿಗಳಿಗೆ ಪ್ರಜಾವಾಣಿ ರಸಪ್ರಶ್ನೆ: ನೋಂದಣಿ ಶುರು

ಬೆಂಗಳೂರು: ವಿದ್ಯಾರ್ಥಿಗಳಲ್ಲಿನ ಜ್ಞಾನದ ಮಟ್ಟವನ್ನು ಪರೀಕ್ಷಿಸಲು ‘ಪ್ರಜಾವಾಣಿ–ರಸಪ್ರಶ್ನೆ ಚಾಂಪಿಯನ್‌ಶಿಪ್’ ಮತ್ತೆ ಬಂದಿದ್ದು, ಈ ಸ್ಪರ್ಧೆಯ ನೋಂದಣಿ ಪ್ರಕ್ರಿಯೆ ಆರಂಭವಾಗಿದೆ.

ಈ ಚಾಂಪಿಯನ್‌ಶಿಪ್‌ನಲ್ಲಿ 7ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಭಾಗವಹಿಸಬಹುದು. ಸ್ಪರ್ಧೆಯು ಆರು ವಲಯಗಳಲ್ಲಿ ಮೊದಲ ಹಂತದಲ್ಲಿ ನಡೆಯಲಿದೆ. ಮೈಸೂರು, ಹುಬ್ಬಳ್ಳಿ, ಬಾಗಲಕೋಟೆ, ಬೀದರ್, ದಾವಣಗೆರೆ ಮತ್ತು ಬೆಂಗಳೂರು ವಲಯಗಳಲ್ಲಿ ಗೆಲುವು ಸಾಧಿಸಿದವರು ರಾಜ್ಯಮಟ್ಟದ ಸ್ಪರ್ಧೆಗೆ ಪಾಲ್ಗೊಳ್ಳುವ ಅರ್ಹತೆ ಪಡೆಯಲಿದ್ದಾರೆ.

ವಲಯಗಳಲ್ಲಿ ವಿಜೇತರಾದ ಎಲ್ಲರಿಗೂ ಒಂದು ದಿನದ ಆವಿಷ್ಕಾರ ಕಾರ್ಯಾಗಾರವನ್ನು ಆಯೋಜಿಸಲಾಗುತ್ತದೆ. ಈ ಕಾರ್ಯಾಗಾರದಲ್ಲಿ ಸಮೃದ್ಧ ಕಲಿಕೆಯ ಅನುಭವ ಪಡೆಯಬಹುದು. ವಿದ್ಯಾರ್ಥಿಗಳಲ್ಲಿನ ಸೃಜನಶೀಲತೆ ಹೊರಹೊಮ್ಮಲು ಈ ಆವಿಷ್ಕಾರ ಕಾರ್ಯಾಗಾರವು ವೇದಿಕೆಯನ್ನು ಕಲ್ಪಿಸಲಿದೆ.

ಪ್ರಕ್ರಿಯೆ ಹೇಗೆ?: ಇದು ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ರಸಪ್ರಶ್ನೆ ಸ್ಪರ್ಧೆಯಾಗಿದ್ದು, ವಿದ್ಯಾರ್ಥಿಗಳು ಶಾಲೆಗಳ ಮೂಲಕ ತಂಡವಾಗಿ ನೋಂದಾಯಿಸಿಕೊಳ್ಳಬೇಕು. ಪ್ರತಿ ತಂಡದಲ್ಲಿ ಕಡ್ಡಾಯವಾಗಿ ಇಬ್ಬರು ವಿದ್ಯಾರ್ಥಿಗಳು ಇರಬೇಕು. ಬೇರೆ ಬೇರೆ ತರಗತಿಯ ವಿದ್ಯಾರ್ಥಿಗಳೂ ತಂಡವಾಗಿ ಭಾಗವಹಿಸಬಹುದು.

ನೋಂದಾಯಿತ ತಂಡಗಳಿಗೆ ಪ್ರಾಥಮಿಕ ಹಂತದ ಪರೀಕ್ಷೆ ನಡೆಸಲಾಗುತ್ತದೆ. ಪ್ರತಿ ವಲಯದಲ್ಲಿ 6 ಅಗ್ರ ತಂಡಗಳು ವಲಯ ಮಟ್ಟದ ಅಂತಿಮ ಹಂತಕ್ಕೆ ತಲುಪುತ್ತವೆ. ಆರು ವಲಯಗಳ ವಿಜೇತರು ರಾಜ್ಯಮಟ್ಟದ ಸ್ಪರ್ಧೆಗೆ ಅರ್ಹತೆ ಪಡೆಯುತ್ತಾರೆ. ಅಂತಿಮ ಹಂತದ ಎಲ್ಲ ಸ್ಪರ್ಧಿಗಳಿಗೆ ಆವಿಷ್ಕಾರ ಕಾರ್ಯಾಗಾರ ನಡೆಸಲಾಗುತ್ತದೆ. ಬೆಂಗಳೂರಿನಲ್ಲಿ ರಾಜ್ಯಮಟ್ಟದ ಸ್ಪರ್ಧೆ ನಡೆಯಲಿದೆ.

ನೋಂದಣಿ ಉಚಿತವಾಗಿದ್ದು, ಆಸಕ್ತರು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ‘ಪ್ರಜಾವಾಣಿ–ರಸಪ್ರಶ್ನೆ ಚಾಂಪಿಯನ್‌ಶಿಪ್’ಗೆ ನೋಂದಾಯಿಸಿಕೊಳ್ಳಬಹುದು.

ORCHIDS The International School Presents ಪ್ರಜಾವಾಣಿ QUIZ CHAMPIONSHIP

ನೋಂದಣಿಗೆ ಸ್ಕ್ಯಾನ್ ಮಾಡಿ

ಸಂಪರ್ಕಕ್ಕೆ: 7338018541 (ಕಚೇರಿ ಅವಧಿಯಲ್ಲಿ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಲಭ್ಯ)

ಟನ್ ಕಬ್ಬಿಗೆ ₹3,500 ದರ ನಿಗದಿಪಡಿಸುವಂತೆ ಬೆಳೆಗಾರರ ಒತ್ತಾಯ; ಪ್ರತಿಭಟನೆ

ಹಾವೇರಿ, ಮುಧೋಳ: ರೈತರ ಹೋರಾಟ ತೀವ್ರ

ಪ್ರಜಾವಾಣಿ ವಾರ್ತೆ

ಹಾವೇರಿ/ಮುಧೋಳ: ಟನ್ ಕಬ್ಬಿಗೆ ಸರ್ಕಾರ ನಿಗದಿಪಡಿಸಿರುವ ದರ ನೀಡಲು ಒತ್ತಾಯಿಸಿ ಹಾವೇರಿಯಲ್ಲಿ ನಡೆದಿರುವ ಅಹೋರಾತ್ರಿ ಧರಣಿ ಮತ್ತು ಪ್ರತಿ ಟನ್ ಕಬ್ಬಿಗೆ ₹3,500 ದರ ನಿಗದಿಪಡಿಸುವಂತೆ ಆಗ್ರಹಿಸಿ ಬಾಗಲಕೋಟೆ ಜಿಲ್ಲೆಯ ಮುಧೋಳದಲ್ಲಿ ನಡೆದಿರುವ ಪ್ರತಿಭಟನೆ ಮಂಗಳವಾರವೂ ಮುಂದುವರೆಯಿತು.

‘ಹಾವೇರಿ ಜಿಲ್ಲೆಯಲ್ಲಿ ಮೂರು ಸಕ್ಕರೆ ಕಾರ್ಖಾನೆಗಳಿವೆ. ಟನ್ ಕಬ್ಬಿಗೆ ₹2,711ರಿಂದ ₹2,740ರವರೆಗೆ ದರ ನಿಗದಿಪಡಿಸುವುದಾಗಿ ಕಾರ್ಖಾನೆಯವರು ಹೇಳುತ್ತಾರೆ. ಆದರೆ, ನಾವು ಒಪ್ಪುವುದಿಲ್ಲ. ಟನ್ ಕಬ್ಬಿಗೆ ₹3,300 ದರ ನಿಗದಿಪಡಿಸುವವರಗೆ ಧರಣಿ ಹಿಂಪಡೆಯಲ್ಲ’ ಎಂದು ರೈತರು ಪಟ್ಟು ಹಿಡಿದರು. ಜಿಲ್ಲಾಧಿಕಾರಿ ವಿಜಯ ಮಹಾಂತೇಶ ಅವರು ಬಂದು ಮನವೊಲಿಸಲು ಪ್ರಯತ್ನಿಸಿದರೂ ಪ್ರತಿಭಟನಕಾರರು ಒಪ್ಪಲಿಲ್ಲ.

‘ಬೆಳಗಾವಿ ರೈತರಿಗೆ ನೀಡಿರುವ ಬೆಲೆಯನ್ನು ಹಾವೇರಿ ಜಿಲ್ಲೆಯ ರೈತರಿಗೆ ನೀಡುವವರೆಗೂ ಧರಣಿ ನಡೆಸುತ್ತೇವೆ’ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಭುವನೇಶ್ವರ ಶಿಡ್ಲಾಪೂರ ತಿಳಿಸಿದರು.

ಮುಧೋಳದಲ್ಲಿ ಹಸಿರು ಸೇನೆ ರಾಜ್ಯ ಘಟಕದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ‘ಸರ್ಕಾರವು ಕಬ್ಬಿಗೆ ವೈಜ್ಞಾನಿಕ ದರ ನಿಗದಿ ಮಾಡುವವರೆಗೆ ಹೋರಾಟ ಮುಂದುವರೆಯಲಿದೆ. 2013ರಲ್ಲಿ ರಾಜ್ಯ ಸರ್ಕಾರ ಪ್ರತಿ ಟನ್‌ಗೆ ₹350 ಪ್ರೋತ್ಸಾಹ ಧನ ಘೋಷಿಸಿತ್ತು. ಈಗಲೂ ಅಂತಹದೇ ನಿರ್ಧಾರ ಕೈಗೊಳ್ಳಬೇಕು’ ಎಂದರು.

‘ರೈತರು ಕಾರ್ಖಾನೆಗಳಿಗೆ ಕಬ್ಬು ಪೂರೈಸಿದರೆ ನುರಿಸುತ್ತೇವೆ. ಇಲ್ಲದಿದ್ದರೆ, ಬಂದ್ ಇರಲಿವೆ. ರೈತರು ಕಬ್ಬು ನೀಡಲು ಒಪ್ಪಿದರೆ, ಜಿಲ್ಲಾಡಳಿತ ಬಂದೋಬಸ್ತ್ ಮಾಡಬೇಕು’ ಎಂದು ಜಮಖಂಡಿ ಶುಗರ್ಸ್ ಮಾಲೀಕ ಆನಂದ ನ್ಯಾಮಗೌಡ ಹೇಳಿದರು.

ಕಾರ್ಖಾನೆಗೆ ಕಬ್ಬು ಸಾಗಿಸುತ್ತಿದ್ದ ಲಾರಿಯೊಂದನ್ನು ಮುಧೋಳ ಬಳಿಯ ಮಹಾಲಿಂಗಪುರ ಬೈಪಾಸ್ ಬಳಿ ಕೆಲ ಕಿಡಿಗೇಡಿಗಳು ರಸ್ತೆಯಿಂದ ಕೆಳಕ್ಕೆ ಉರುಳಿಸಿದರು. ಚಕ್ರದ ಗಾಳಿ ತೆಗೆದರು.

ಹಾವೇರಿಯಲ್ಲಿ ಮಂಗಳವಾರವೂ ಕಬ್ಬು ಬೆಳೆಗಾರರ ಧರಣಿ ಮುಂದುವರಿಯಿತು (ಎಡಚಿತ್ರ). ಕಾರ್ಖಾನೆಗೆ ಕಬ್ಬು ಸಾಗಿಸುತ್ತಿದ್ದ ಲಾರಿಯನ್ನು ಉರುಳಿಸಲಾಗಿತ್ತು

ಮಲ್ಲಿಕಾರ್ಜುನ ಖರ್ಗೆ ಮನೆಯ ಕದ ತಟ್ಟಿದ ಸಚಿವರು, ಶಾಸಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಹಾರ ಚುನಾವಣೆಯ ಮತದಾನ ಮುಕ್ತಾಯಗೊಳ್ಳುತ್ತಿದ್ದಂತೆಯೇ ರಾಜ್ಯ ಸಚಿವ ಸಂಪುಟ ಪುನರ್ ರಚನೆಯ ಸಾಧ್ಯತೆಗಳ ಕುರಿತು ಕಾಂಗ್ರೆಸ್ ಪಾಳಯದಲ್ಲಿ ಚರ್ಚೆ ನಡೆಯುತ್ತಿದೆ. ಇದರ ಬೆನ್ನಲ್ಲೇ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕೆಲವು ಸಚಿವರು, ಶಾಸಕರು ಭೇಟಿ ಮಾಡಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಸದಾಶಿವನಗರದಲ್ಲಿರುವ ಖರ್ಗೆ ಅವರ ನಿವಾಸಕ್ಕೆ ಪೌರಾಡಳಿತ ಸಚಿವ ರಹೀಂ ಖಾನ್, ಅರಣ್ಯ ಸಚಿವ ಈಶ್ವರ ಖಂಡ್ರೆ, ಶಾಸಕ ಆರ್.ವಿ. ದೇಶಪಾಂಡೆ ಸೇರಿದಂತೆ ಕೆಲವು ಸಚಿವರು, ಶಾಸಕರು ಮಂಗಳವಾರ ಭೇಟಿ ನೀಡಿ ಕೆಲಹೊತ್ತು ವಿಚಾರವಿನಿಮಯ ನಡೆಸಿದರು.

ಸಂಪುಟದಲ್ಲಿ ಹೊಸಬರಿಗೆ ಅವಕಾಶ ಮಾಡಿಕೊಡಬೇಕೆಂಬ ಕಾರಣಕ್ಕೆ, ಕೆಲವರನ್ನು ಕೈಬಿಡುವ ಕುರಿತು ಕಾಂಗ್ರೆಸ್ ವರಿಷ್ಠರ ಮಟ್ಟದಲ್ಲಿ ಹಲವು ತಿಂಗಳುಗಳಿಂದ ಚರ್ಚೆ ನಡೆಯುತ್ತಿದೆ. ಸಂಪುಟ ಪುನರ್ ರಚನೆಯಾದರೆ ಹೊರಗುಳಿಯ ಬಹುದೆಂಬ ಆತಂಕದಿಂದ ಖರ್ಗೆ ಅವರನ್ನು ಕೆಲವು ಸಚಿವರು ಭೇಟಿ ಮಾಡಿದರೆ, ಸಂಪುಟ ಸೇರುವ ನಿರೀಕ್ಷೆಯಲ್ಲಿರುವ ಕೆಲವು ಶಾಸಕರೂ ಖರ್ಗೆಯವರ ಮನೆಯ ಕದ ತಟ್ಟುತ್ತಿದ್ದಾರೆ.

ಖರ್ಗೆಯವರ ಭೇಟಿ ಬಳಿಕ ಮಾತನಾಡಿದ ಆರ್.ವಿ. ದೇಶಪಾಂಡೆ, ‘ನಾನು ಖರ್ಗೆಯವರ ಜೊತೆ ರಾಜಕೀಯ ಮಾಡಿದವನು. ಬೆಂಗಳೂರಿನಲ್ಲಿ ಇದ್ದಾಗಲೆಲ್ಲ ಅವರನ್ನು ನಾನು ಭೇಟಿ ಮಾಡುತ್ತೇನೆ. ಈ ಭೇಟಿಯಲ್ಲಿ ವಿಶೇಷ ಏನೂ ಇಲ್ಲ’ ಎಂದರು

ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ದೇಶಪಾಂಡೆ, ‘ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಯಾರು ಹೇಳಿದ್ದಾರೆ. ಸಂಪುಟಕ್ಕೆ ನಾನು ಸೇರಲಿದ್ದೇನೆ ಎನ್ನುವುದು ನಿಮಗೆ (ಮಾಧ್ಯಮ) ಹೇಗೆ ಗೊತ್ತು. ಈ ಬಗ್ಗೆ ನನಗೇನೂ ಗೊತ್ತಿಲ್ಲ’ ಎಂದರು.

ಚಿಟಿಕೆ ಸುದ್ದಿ

ಕರ್ಕಿ ಪ್ರಶಸ್ತಿಗೆ ಆಯ್ಕೆ

ಹುಬ್ಬಳ್ಳಿ: ಡಿ.ಎಸ್.ಕರ್ಕಿ ಸಾಹಿತ್ಯ ವೇದಿಕೆ ಟ್ರಸ್ಟ್‌ನ 2023ನೇ ಸಾಲಿನ ‘ಡಾ. ಡಿ.ಎಸ್.ಕರ್ಕಿ ಕಾವ್ಯ ಪ್ರಶಸ್ತಿ’ಗೆ ಗದಗ ಜಿಲ್ಲೆ ಶಿರಹಟ್ಟಿಯ ಸಂತೋಷ ಅಂಗಡಿ ಅವರ ‘ಭವದ ಅಗುಳಿ’ ಮತ್ತು 2024ನೇ ಸಾಲಿನ ಪ್ರಶಸ್ತಿಗೆ ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಯಡ್ರಾವಿಯ ರಾಮಚಂದ್ರ ಎಸ್.ಕುಲಕರ್ಣಿ ಅವರ ‘ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತಾ’ ಕೃತಿ ಆಯ್ಕೆಯಾಗಿದೆ. ಪ್ರಶಸ್ತಿಯು ₹10 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ. ಹುಬ್ಬಳ್ಳಿಯಲ್ಲಿ ನವೆಂಬರ್ 16ರಂದು ಸಂಜೆ 5.30ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಟ್ರಸ್ಟ್ ಅಧ್ಯಕ್ಷ ಎಂ.ಎ.ಸುಬ್ರಹ್ಮಣ್ಯ ತಿಳಿಸಿದರು.

ಸಂತೋಷ ಅಂಗಡಿ

ರಾಮಚಂದ್ರ ಎಸ್‌.ಕುಲಕರ್ಣಿ

ಲಂಚ: ಲೋಕಾ ಬಲೆಗೆ ಇಬ್ಬರು ಎಂಜಿನಿಯರ್

ತುಮಕೂರು: ಸರ್ಕಾರಿ ಶಾಲೆ ದುರಸ್ತಿ ಕಾಮಗಾರಿ ಬಿಲ್ ಮಂಜೂರಾತಿಗೆ ಗುತ್ತಿಗೆದಾರನ ಬಳಿ ಲಂಚಕ್ಕೆ ಕೈ ಒಡ್ಡಿದ್ದ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಎಂಜಿನಿಯರಿಂಗ್ ತಿಪಟೂರು ಉಪ ವಿಭಾಗದ ಇಬ್ಬರು ಎಂಜಿನಿಯರ್ ಮತ್ತು ಕಂಪ್ಯೂಟರ್ ಆಪರೇಟರ್ ಮಂಗಳವಾರ ಲೋಕಾಯಕ್ತ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

ಪ್ರವಾಸಿ ಮಂದಿರದ ಬಳಿ ಗುತ್ತಿಗೆದಾರನಿಂದ ₹34,500 ಹಣ ಪಡೆಯುವಾಗ ಎಇಇ ಬಿ.ಸಿ.ಸ್ವಾಮಿ ಅವರನ್ನು ಹಾಗೂ ನಂತರ ಕಚೇರಿಯಲ್ಲಿ ಎಇ ಸುಹಾಸ್, ಕಂಪ್ಯೂಟರ್ ಆಪರೇಟರ್ ಹರೀಶ್ ಎಂಬುವರನ್ನು ವಶಕ್ಕೆ ಪಡೆದರು. ಗುತ್ತಿಗೆದಾರನಿಂದ ಗೂಗಲ್ ಪೇ ಮೂಲಕವೂ ಹಣ ಪಡೆಯಲಾಗಿದೆ.

ಪಿಜಿ ವೈದ್ಯಕೀಯ 4,007 ಸೀಟು ಲಭ್ಯ

ಬೆಂಗಳೂರು: ‘ಪ್ರಸಕ್ತ ಸಾಲಿನ ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ 4,007 ಸೀಟು ಹಂಚಿಕೆಗೆ ಲಭ್ಯವಿದ್ದು, ಅವುಗಳ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ’ ಎಂದು ಕೆಇಎ ತಿಳಿಸಿದೆ.

ಪ್ರತ್ಯೇಕ ರಾಜ್ಯ: ಸಿ.ಎಂ.ಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಅಭಿವೃದ್ಧಿಯಲ್ಲಿ ತಾರತಮ್ಯ ನಿವಾರಿಸಬೇಕು. ಇಲ್ಲವೇ ಉತ್ತರ ಕರ್ನಾಟಕವನ್ನು ಪ್ರತ್ಯೇಕ ರಾಜ್ಯ ಮಾಡಲು ಕೇಂದ್ರಕ್ಕೆ ಶಿಫಾರಸು ಮಾಡಬೇಕು’ ಎಂದು ಆಗ್ರಹಿಸಿ ಕಾಗವಾಡದ ಕಾಂಗ್ರೆಸ್ ಶಾಸಕ ಭರಮಗೌಡ (ರಾಜು) ಕಾಗೆ ಅವರು ತಮ್ಮದೇ ಪಕ್ಷದ ಸರ್ಕಾರದ ವಿರುದ್ಧ ಮತ್ತೆ ಅಸಮಾಧಾನ ಹೊರಹಾಕಿದರು.

ಭರಮಗೌಡ (ರಾಜು) ಕಾಗೆ

‘ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ಅಧಿವೇಶನದಲ್ಲಿ ಈ ವಿಚಾರ ಪ್ರಸ್ತಾಪಿಸಲಾಗುವುದು. ಹೋರಾಟದ ನೇತೃತ್ವ ನಾನೇ ವಹಿಸುವೆ. ಈ ಭಾಗದ ಎಲ್ಲ ಶಾಸಕರೂ ನನ್ನ ಜೊತೆಗಿದ್ದಾರೆ. ಮುಖ್ಯಮಂತ್ರಿ ಅವರಿಗೂ ಈ ಬಗ್ಗೆ ಪತ್ರ ಬರೆದಿದ್ದೇನೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ಅಭಿವೃದ್ಧಿ ವಿಷಯದಲ್ಲಿ ದಕ್ಷಿಣ ಕರ್ನಾಟಕಕ್ಕೆ ಹೋಲಿಸಿದರೆ ಉತ್ತರ ಕರ್ನಾಟಕ ತೀರ ಹಿಂದುಳಿದಿದೆ. ದಕ್ಷಿಣ ಭಾಗಕ್ಕೆ ತೋರಿಸುವ ವಿಶೇಷ ಕಾಳಜಿ ಉತ್ತರಕ್ಕೆ ಏಕಿಲ್ಲ? ಇದು ಮಲತಾಯಿ ಧೋರಣೆ’ ಎಂದರು.

‘ಕಿತ್ತೂರು ಕರ್ನಾಟಕ’ ಧ್ವಜ ಹಾರಾಟ’

ಬೆಳಗಾವಿ: ‘ಕಿತ್ತೂರು ಕರ್ನಾಟಕದಲ್ಲಿ ಐಟಿ–ಬಿಟಿ ಕಂಪನಿ ಸ್ಥಾಪಿಸಬೇಕು. ಇಲ್ಲದಿದ್ದರೆ ಸುವರ್ಣ ವಿಧಾನ ಸೌಧದ ಮೇಲೆ ಕಿತ್ತೂರು ಕರ್ನಾಟಕ ಧ್ವಜ ಹಾರಿಸಬೇಕಾಗುವುದು’ ಎಂದು ಉತ್ತರ ಕರ್ನಾಟಕ ವಿಕಾಸ ವೇದಿಕೆ, ಹೋರಾಟ ಸಮಿತಿ ಕಾರ್ಯಕರ್ತರು ಎಚ್ಚರಿಕೆ ಕೊಟ್ಟರು.

ಸುವರ್ಣ ವಿಧಾನಸೌಧ ಬಳಿ ಮಂಗಳವಾರ ಧರಣಿ ನಡೆಸಿದ ಅವರು, ‘ಬೆಳಗಾವಿಯನ್ನು ರಾಜ್ಯದ ಎರಡನೇ ರಾಜಧಾನಿಯಾಗಿ ಘೋಷಿಸಬೇಕು’ ಎಂದು ಆಗ್ರಹಿಸಿದರು.

‘ಉತ್ತರ ಕರ್ನಾಟಕ ಹೋರಾಟ ಸಮಿತಿ ಜನಪ್ರತಿನಿಧಿ ಸಹಿ ಸಂಗ್ರಹಣಾ ಅಭಿಯಾನಕ್ಕೆ ನನ್ನ ಬೆಂಬಲವಿದೆ. ಈಗಾಗಲೇ, ಕೋಟಿಗೂ ಅಧಿಕ ಜನರಿಂದ ಸಹಿ ಪಡೆದುಕೊಂಡಿದ್ದಾರೆ. ರಾಷ್ಟ್ರಪತಿ, ಪ್ರಧಾನಿಗೂ ಪತ್ರ ಬರೆದಿರುತ್ತಾರೆ. ಈ ಭಾಗದ ಸರ್ವತೋಮುಖ ಅಭಿವೃದ್ಧಿಗಾಗಿ ಈ ಬೇಡಿಕೆ ಇಟ್ಟಿದ್ದಾರೆ ಎಂದೂ ಹೇಳಿದ್ದಾರೆ.

ಬೇಡಿಕೆ ಈಡೇರದಿದ್ದರೆ ಲಸಿಕೆ ಅಭಿಯಾನ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಮೀಣ ಪ್ರದೇಶದ ಪಶು ವೈದ್ಯರ ಬೇಡಿಕೆಗಳನ್ನು ಈಡೇರಿಸದೇ ಇದ್ದರೆ, ಇದೇ 17 ರಿಂದ ಕಾಲು ಬಾಯಿ ಜ್ವರಕ್ಕೆ ಲಸಿಕೆ ಹಾಕುವ ಅಭಿಯಾನವನ್ನು ಸಂಪೂರ್ಣ ನಿಲ್ಲಿಸಲಾಗುವುದು ಎಂದು ಕರ್ನಾಟಕ ಪಶುವೈದ್ಯಕೀಯ ಸಂಘ ಎಚ್ಚರಿಸಿದೆ.

‘ದೀರ್ಘಕಾಲದಿಂದ ಬಾಕಿ ಉಳಿದಿರುವ ಸೇವಾ ಸೌಲಭ್ಯಗಳ ಬೇಡಿಕೆಗಳ ಈಡೇರಿಸಿಲ್ಲ. ಆದ್ದರಿಂದ ಲಸಿಕೆ ಕಾರ್ಯಕ್ರಮದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದನ್ನು ಮಂಗಳವಾರದಿಂದ ನಿಲ್ಲಿಸಲಾಗಿದೆ’ ಎಂದು ಸಂಘ ಅಧ್ಯಕ್ಷ ಡಾ.ಶಿವಶರಣಪ್ಪ ಜಿ.ಯಲಗೋಡ ಅವರು ಹೇಳಿದ್ದಾರೆ.

ಪಶು ವೈದ್ಯ ಸೇವಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪಶು ವೈದ್ಯರಿಗೆ 2012 ರ ಡಿಸೆಂಬರ್ 31 ರಿಂದ ಪೂರ್ವಾನ್ವಯವಾಗುವಂತೆ 6 ಮತ್ತು 13 ವರ್ಷಗಳ ಪದೋನ್ನತಿ ನೀಡಬೇಕು ಮತ್ತು ಅರ್ಹ ಪಶು ವೈದ್ಯರಿಗೆ 6 ಮತ್ತು 13 ವರ್ಷಗಳ ಕಾಲಮಿತಿ ಬಡ್ತಿ ನೀಡಬೇಕು ಎಂದು ಅವರು ಮುಖ್ಯಮಂತ್ರಿ ಅವರಿಗೆ ಬರೆದಿರುವ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ನಿವೃತ್ತಿ ಹೊಂದಿದ ಪಶುವೈದ್ಯರಿಗೆ ನಿಯಮಿತವಾಗಿ ನಿವೃತ್ತಿ ಸೌಲಭ್ಯದ ಪಸ್ತಾವನೆಗಳು ಮತ್ತು ಅರ್ಹ ನಿವೃತ್ತ ಪಶು ವೈದ್ಯರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಗಳು 247–ಎ ರಂತೆ ಅರ್ಹತಾದಾಯಕ ಸೇವೆಯನ್ನು ಪಿಂಚಣಿ ಉದ್ದೇಶಕ್ಕೆ ಪರಿಗಣಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಇಲಾಖೆಯ ಸಚಿವರು, ಕಾರ್ಯದರ್ಶಿ ಮತ್ತು ಆಯುಕ್ತರ ನೇತೃತ್ವದಲ್ಲಿ ಕಳೆದ 2 ವರ್ಷಗಳಲ್ಲಿ ಸುಮಾರು 7 ಸಭೆಗಳಾಗಿವೆ. ಇದೇ ವೇಳೆ 6 ಜನ ಕಾರ್ಯದರ್ಶಿಗಳು ಬದಲಾವಣೆ ಆಗಿದ್ದಾರೆ. ಇದರ ಪರಿಣಾಮವಾಗಿ, ಕಾಲಬದ್ಧ ಬಡ್ತಿ ಕೊಟ್ಟಿಲ್ಲ. ಅನಿವಾರ್ಯವಾಗಿ ಹೋರಾಟದ ಹಾದಿ ಹಿಡಿಯಬೇಕಾಗಿದೆ ಎಂದಿದ್ದಾರೆ.

ಗಡುವು: ‘ಸೇವಾ ಸೌಲಭ್ಯಗಳ ಈಡೇರಿಕೆಗೆ ಇದೇ 16 ರವರೆಗೆ ಗಡುವು ನೀಡಲಾಗಿದೆ. 16 ಒಳಗೆ ಬೇಡಿಕೆ ಈಡೇರಿಸದಿದ್ದರೆ, ಅನಿವಾರ್ಯವಾಗಿ ಇದೇ 17 ರಿಂದ ಕಾಲುಬಾಯಿ ಲಸಿಕಾ ಕಾರ್ಯಕ್ರಮವನ್ನು ನಿಲ್ಲಿಸಲಾಗುವುದು’ ಎಂದು ಶಿವಶರಣಪ್ಪ ಹೇಳಿದ್ದಾರೆ.

ಜೈಲು: ಮದ್ಯ ಕುಡಿದು ನೃತ್ಯ, ಗುರುತು ಪತ್ತೆ

ಒಂದನೇ ಪುಟದಿಂದ...

ಬ್ಯಾರಕ್‌ನ 7 ಮತ್ತು 8ನೇ ಕೊಠಡಿಯಲ್ಲಿ ವಿಚಾರಣಾಧೀನ ಕೈದಿಗಳು ಮದ್ಯದ ಬಾಟಲ್ ಇಟ್ಟುಕೊಂಡು ಪಾರ್ಟಿ ಹಾಗೂ ನೃತ್ಯ ಮಾಡಿರುವ 1 ನಿಮಿಷ 44 ಸೆಕೆಂಡಿನ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.

ಅತ್ಯಾಚಾರ, ಸರಣಿ ಕೊಲೆಯ ಪಾತಕಿ ಉಮೇಶ್ ರೆಡ್ಡಿ, ಇಸ್ಲಾಮಿಕ್ ಸ್ಟೇಟ್ (ಐಎಸ್) ಭಯೋತ್ಪಾದಕ ಸಂಘಟನೆಯ ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ, ದುಬೈನಿಂದ ಚಿನ್ನ ಕಳ್ಳಸಾಗಣೆ ಮಾಡಿದ ಪ್ರಕರಣದ ಆರೋಪಿ ತರುಣ್ ರಾಜ್ ಮೊಬೈಲ್ ಬಳಕೆ ಮಾಡಿರುವ ಸಂಬಂಧವೂ ಮೂರು ಎನ್‌ಸಿಆರ್ ದಾಖಲಾಗಿವೆ.

ನ್ಯಾಯಾಲಯದ ಅನುಮತಿ ಪಡೆದು ಎಫ್‌ಐಆರ್ ದಾಖಲಿಸಿ ಆರೋಪಿಗಳನ್ನು ಕಸ್ಟಡಿಗೆ ಪಡೆಯಲು ಪೊಲೀಸರು ಸಿದ್ಧತೆ ನಡೆಸಿದ್ದಾರೆ.

ಕೈದಿಗಳಿಗೆ ವಿಶೇಷ ಸೌಲಭ್ಯ, ಮೊಬೈಲ್ ಬಳಕೆಗೆ ಅವಕಾಶ ನೀಡಿದ್ದ ಪ್ರಕರಣದಲ್ಲಿ ಜೈಲಿನ ಸೂಪರಿಂಟೆಂಡೆಂಟ್ ಇಮಾಮ್‌ಸಾಬ್ ಮ್ಯಾಗೇರಿ ಹಾಗೂ ಸಹಾಯಕ ಸೂಪರಿಂಟೆಂಡೆಂಟ್ ಅಶೋಕ್ ಭಜಂತ್ರಿ ಅವರನ್ನು ಅಮಾನತುಗೊಳಿಸಿದ್ದು, ಕಾರಾಗೃಹದ ಮುಖ್ಯ ಅಧೀಕ್ಷಕ ಕೆ.ಸುರೇಶ್ ಅವರನ್ನು ವರ್ಗಾವಣೆ ಮಾಡಿ ಸರ್ಕಾರ ಸೋಮವಾರ ಆದೇಶ ಹೊರಡಿಸಿತ್ತು.

ಮುದಗಲ್: ಪೊಲೀಸರ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಮುದಗಲ್ (ರಾಯಚೂರು ಜಿಲ್ಲೆ): ಲಿಂಗಸುಗೂರು ತಾಲ್ಲೂಕಿನ ಮಟ್ಟೂರು ತಾಂಡಾಕ್ಕೆ ಪ್ರಕರಣ ಸಂಬಂಧ ಆರೋಪಿಗಳ ವಿಚಾರಣೆಗೆ ಮಂಗಳವಾರ ತೆರಳಿದ್ದ ಪೊಲೀಸರ ಮೇಲೆ ಹಲ್ಲೆ ಮಾಡಲಾಗಿದೆ.

ಮಟ್ಟೂರು ತಾಂಡಾದಲ್ಲಿ ಹಳೆಯ ವೈಷಮ್ಯದಿಂದ ಕೆಲವು ದಿನಗಳ ಹಿಂದೆ ಮಲ್ಲಪ್ಪ ಚವ್ಹಾಣ್ ಹಾಗೂ ರಾಮಪ್ಪ ಜಾಧವ ಕುಟುಂಬದ ಮಧ್ಯೆ ಜಗಳವಾಗಿತ್ತು. ಮಲ್ಲಪ್ಪ ನೀಡಿದ ದೂರಿನ ಮೇರೆ ಆರೋಪಿ ರಾಮಪ್ಪ ಹಾಗೂ ಆತನ ಪತ್ನಿ ಸಕ್ಕುಬಾಯಿ ಅವರ ವಿಚಾರಣೆಗೆ ಎಎಸ್‌ಐ ವೆಂಕಟಪ್ಪ ನಾಯಕ, ಹೆಡ್‌ಕಾನ್‌ಸ್ಟೆಬಲ್ ರಾಮಪ್ಪ ಅವರು ತಾಂಡಾಕ್ಕೆ ತೆರಳಿದ್ದರು. ಇದೇ ವೇಳೆ ರಾಮಪ್ಪ ಹಾಗೂ ಪತ್ನಿ ಸಕ್ಕುಬಾಯಿ ಸೇರಿಕೊಂಡು ಕಲ್ಲು, ದೊಣ್ಣೆಯಿಂದ ಹಲ್ಲೆ ಮಾಡಿದ್ದಾರೆ.

ವಿಷಯ ತಿಳಿದು ತೆರಳಿದ್ದ ಪಿಎಸ್‌ಐ ವೆಂಕಟೇಶ ಮಾಡಗೇರಿ ಮೇಲೂ ಹಲ್ಲೆ ಮಾಡಿದ್ದಾರೆ. ‘ಪ್ರಕರಣ ದಾಖಲಿಸಿದ್ದು, ಕ್ರಮ ತಗೆದುಕೊಳ್ಳಲಾಗುವುದು’ ಎಂದು ಎಸ್‌ಪಿ ಪುಟ್ಟಮಾದಯ್ಯ ತಿಳಿಸಿದ್ದಾರೆ.

ಮಾಲೂರು ಕ್ಷೇತ್ರ: ಫಲಿತಾಂಶ ಯಥಾಸ್ಥಿತಿ?

ಕೋಲಾರ: ಕುತೂಹಲ ಮೂಡಿಸಿದ್ದ ಮಾಲೂರು ಕ್ಷೇತ್ರದ ಮತಗಳ ಮರು ಎಣಿಕೆ ಬಿಗಿ ಭದ್ರತೆಯಲ್ಲಿ ಮಂಗಳವಾರ ನಡೆಯಿತು. ಫಲಿತಾಂಶದಲ್ಲಿ ಬದಲಾವಣೆ ಸಾಧ್ಯತೆ ಕಡಿಮೆ ಎನ್ನಲಾಗಿದೆ.

ರಾತ್ರಿ 8 ಗಂಟೆಗೆ ಎಣಿಕೆ ಕೇಂದ್ರದಿಂದ ಹೊರಬಂದ ಶಾಸಕ ಕೆ.ವೈ.ನಂಜೇಗೌಡ, ‘ಮರು ಮತ ಎಣಿಕೆಯಲ್ಲಿ ವ್ಯತ್ಯಾಸ ಕಂಡು ಬಂದಿಲ್ಲ. ನನಗೆ ನ್ಯಾಯ ದೊರಕಿದೆ’ ಎಂದರು.

ಸುಪ್ರೀಂ ಕೋರ್ಟ್ ಸೂಚನೆಯಂತೆ ಮರು ಮತ ಎಣಿಕೆ ಕಾರ್ಯ ನಡೆಯಿತು. ಫಲಿತಾಂಶ ಪ್ರಕಟಿಸದಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಹೀಗಾಗಿ, ಆಯೋಗ ಫಲಿತಾಂಶವನ್ನು ಮುಚ್ಚಿದ ಲಕೋಟೆಯಲ್ಲಿ ಕೋರ್ಟ್‌ಗೆ ಸಲ್ಲಿಸಲಿದೆ. ನ.24ಕ್ಕೆ ವಿಚಾರಣೆ ಸಾಧ್ಯತೆ ಇದೆ.

ಬಿಜೆಪಿಯ ಕೆ.ಎಸ್.ಮಂಜುನಾಥ ಗೌಡ, ಪಕ್ಷೇತರ ಅಭ್ಯರ್ಥಿ ಹೂಡಿ ವಿಜಯ ಕುಮಾರ್, ಜಿಲ್ಲಾಧಿಕಾರಿ ಎಂ.ಆರ್.ರವಿ, ಚುನಾವಣಾಧಿಕಾರಿ ಡಾ.ಮೈತ್ರಿ, ವೀಕ್ಷಕ ಪ್ರಭು ನಾರಾಯಣಸಿಂಗ್ ಕೇಂದ್ರದಲ್ಲಿದ್ದರು.

2023ರ ಚುನಾವಣೆಯಲ್ಲಿ ನಂಜೇಗೌಡ 248 ಮತಗಳಿಂದ ಗೆದ್ದಿದ್ದರು. ಫಲಿತಾಂಶ ಪ್ರಶ್ನಿಸಿ ಮಂಜುನಾಥ ಗೌಡ ಕೋರ್ಟ್ ಮೆಟ್ಟಿಲೇರಿದ್ದರು.

ಹೈದರಾಬಾದ್‌ನ ಸಿಸಿಎಂಬಿಗೆ ಮಾದರಿ ರವಾನೆ • ಪೂರ್ಣ ಪ್ರಮಾಣದಲ್ಲಿ ಆರಂಭವಾಗದ ರಾಜ್ಯ ‘ಕೋಶ’

ಹುಲಿ ಡಿಎನ್‌ಎ: ನೆರೆ ರಾಜ್ಯದ ಅವಲಂಬನೆ

• ಮೋಹನ್ ಕುಮಾರ ಸಿ.

ಮೈಸೂರು: ಜಿಲ್ಲೆಯ ನುಗು ವನ್ಯಜೀವಿಧಾಮ ಹಾಗೂ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಗ್ರಾಮಗಳಲ್ಲಿ ಮೂವರ ಬಲಿ ಪಡೆದಿದ್ದ ಹುಲಿಯ ಡಿಎನ್‌ಎ ಮಾದರಿಯನ್ನು ಹೈದರಾಬಾದ್‌ನ ಜೀವಕೋಶ ಮತ್ತು ಆಣ್ವಿಕ ಜೀವವಿಜ್ಞಾನ ಕೇಂದ್ರಕ್ಕೆ (ಸಿಸಿಎಂಬಿ) ಪರೀಕ್ಷೆಗೆ ಕಳುಹಿಸಲಾಗಿದ್ದು, ಇನ್ನೂ ವರದಿ ಬಂದಿಲ್ಲ.

ಅರಣ್ಯ ಇಲಾಖೆಯು ನೆರೆ ರಾಜ್ಯ ತೆಲಂಗಾಣದ ಪ್ರಯೋಗಾಲಯವನ್ನೇ ಅವಲಂಬಿಸಿದೆ. ಬೆಂಗಳೂರಿನ ರಾಜ್ಯ ವಿಧಿ ವಿಜ್ಞಾನ ಪ್ರಯೋಗಾಲಯದ ಆವರಣದಲ್ಲಿ ಸ್ಥಾಪಿಸಿರುವ ₹2.7 ಕೋಟಿ ವೆಚ್ಚದ ವನ್ಯಜೀವಿ ವಿಧಿವಿಜ್ಞಾನ ಕೋಶ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಿಲ್ಲವೇಕೆ ಎಂಬ ಪ್ರಶ್ನೆಯೂ ಮೂಡಿದೆ.

ವನ್ಯಜೀವಿ ಜೆನೆಟಿಕ್ಸ್ ಪ್ರಯೋಗಾಲಯಗಳ ಸ್ಥಾಪನೆ ಕುರಿತು ವನ್ಯಜೀವಿ ತಜ್ಞ ಸಂಜಯ್ ಗುಬ್ಬಿ 2024ರ ಫೆ.16ರಂದು ಈಶ್ವರ ಖಂಡ್ರೆ ಅವರಿಗೆ ಪತ್ರ ಬರೆದಿದ್ದರು. ಅದೇ ವರ್ಷದ ಮಾರ್ಚ್‌ನಲ್ಲಿ ಪ್ರತಿಕ್ರಿಯಿಸಿದ್ದ ಆಗಿನ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಕುಮಾರ್ ಪುಷ್ಕರ್, ‘ಮಡಿವಾಳದಲ್ಲಿ ವನ್ಯಜೀವಿ ವಿಧಿವಿಜ್ಞಾನ ಕೋಶ ಸ್ಥಾಪಿಸುತ್ತಿದ್ದು ಹೊಸ ಪ್ರಯೋಗಾಲಯ ಅಗತ್ಯವಿಲ್ಲ’ ಎಂದಿದ್ದರು.

ಖಚಿತ ಪಡಿಸಿಕೊಳ್ಳಿ: ರೈತರ ಮೇಲೆ ದಾಳಿ ಮಾಡಿದ್ದ ಹುಲಿಯನ್ನು ನ.8ರ ರಾತ್ರಿ ಇಲಾಖೆ ಸರಗೂರು ತಾಲ್ಲೂಕಿನ ಹೊಸಕೋಟೆಯಲ್ಲಿ ಸೆರೆ ಹಿಡಿದಿತ್ತು. ‘ಡಿಎನ್‌ಎ ಮಾದರಿ ಆಧರಿಸಿ, ಇದು ದಾಳಿ ಮಾಡಿದ್ದ ಹುಲಿ ಎಂದು ಖಚಿತಪಡಿಸಿಕೊಳ್ಳಬೇಕು’ ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅಧಿಕಾರಿಗಳಿಗೆ ಸೂಚಿಸಿದ್ದರು.

ಆದರೆ, ಹುಲಿ ಡಿಎನ್‌ಎ ಮಾದರಿಯ ವರದಿ ಹೈದರಾಬಾದ್‌ನಿಂದ ವರದಿ ಬರುವುದು ತಡವಾಗಲಿದೆ. ‘ದಾಳಿ ಮಾಡಿದ್ದ ಹುಲಿ ಯಾವುದು’ ಎಂಬುದು ಕೆಳ ಹಂತದ ಅಧಿಕಾರಿಗಳಿಗೆ ಇನ್ನೂ ಖಚಿತವಾಗದೆ, ಕಾಣಿಸಿದ ಹುಲಿಗಳನ್ನು ಸೆರೆ ಹಿಡಿಯುವ ಕಾರ್ಯ ನಡೆದಿದೆ.

‘ಹೊಸಕೋಟೆಯಲ್ಲಿ ಸೆರೆಸಿಕ್ಕ ಹುಲಿ, ಹಿಂದೆ ಸೆರೆಯಾಗಿದ್ದ ಹುಲಿಗಳ ಕೂದಲು, ಎಂಜಲಿನ ಮಾದರಿ ಸೇರಿದಂತೆ ಡಿಎನ್‌ಎ ಮಾದರಿಗಳನ್ನು ಹೈದರಾಬಾದ್‌ಗೆ ಕಳುಹಿಸಲಾಗಿದೆ. ಅದರ ವರದಿ ಬರಲು ತಿಂಗಳಾಗಬಹುದು’ ಎಂದು ಇಲ್ಲಿನ ಅರಣ್ಯ ಇಲಾಖೆ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

ತರಬೇತಿ ಹಂತದಲ್ಲಿದ್ದಾರೆ: ‘ಹುಲಿ ಅಥವಾ ಇನ್ನಾವುದೇ ವನ್ಯಜೀವಿಗಳು ಸತ್ತರೆ, ಅದಕ್ಕೆ ಕಾರಣಗಳೇನು ಎಂದು ರಾಜ್ಯದ ಪ್ರಯೋಗಾಲಯದಲ್ಲಿ ಪತ್ತೆ ಮಾಡಲಾಗುತ್ತಿದೆ. ರಾಜ್ಯದ ಸಿಬ್ಬಂದಿಯೇ ಇಲ್ಲಿದ್ದು, ತರಬೇತಿ ಹಂತದಲ್ಲಿದ್ದಾರೆ’ ಎಂದು ಮಡಿವಾಳದ ವನ್ಯಜೀವಿ ವಿಧಿವಿಜ್ಞಾನ ಕೋಶದ ತಜ್ಞರು ಖಚಿತ ಪಡಿಸಿದ್ದಾರೆ.

‘ಆಮೆಗತಿಯಲ್ಲಿಯೇ ಇದೆ’

‘ರಾಜ್ಯದಲ್ಲಿ ಮಾನವ– ವನ್ಯಜೀವಿ ಸಂಘರ್ಷ ಹೆಚ್ಚುತ್ತಿರುವ ಕಾರಣ ವಿಧಿವಿಜ್ಞಾನ ಪ್ರಯೋಗಾಲಯದ ಮಾಹಿತಿ ನಿರ್ಣಾಯಕ. ಪ್ರಯೋಗಾಲಯ ಸ್ಥಾಪನೆ ದಶಕದಿಂದ ಆಮೆಗತಿಯಲ್ಲಿದೆ’ ಎಂದು ವನ್ಯಜೀವಿ ತಜ್ಞ ಸಂಜಯ್ ಗುಬ್ಬಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ದಾಳಿಕೋರ ಹುಲಿ ಮತ್ತು ಸೆರೆ ಸಿಕ್ಕ ಹುಲಿ ಬೇರೆಯಾಗಿರಬಹುದು. ತೊಂದರೆ ಮಾಡದ ಪ್ರಾಣಿಗಳ ಸೆರೆ ತಪ್ಪಿಸಲು ಪ್ರಯೋಗಾಲಯದ ಸ್ಥಾಪನೆ ಅತ್ಯಗತ್ಯ’ ಎಂದರು.

ಸಂಜಯ್ ಗುಬ್ಬಿ

‘6,000 ಕೆಪಿಎಸ್ ಶಾಲೆ ತೆರೆಯಲು ಚಿಂತನೆ’

ಒಂದನೇ ಪುಟದಿಂದ...

ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡಲು ದ್ವಿಭಾಷಾ ಮಾಧ್ಯಮದ ಕಲಿಕೆಗೆ ಅವಕಾಶ ನೀಡಲಾಗಿದೆ. ಆರನೇ ತರಗತಿಯಿಂದ ವಿದ್ಯಾರ್ಥಿಗಳು ಕನ್ನಡ, ಇಂಗ್ಲಿಷ್ ಭಾಷಾ ಮಾಧ್ಯಮ ಆಯ್ಕೆ ಮಾಡಿಕೊಳ್ಳಬಹುದು’ ಎಂದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಸಚಿವ ಬಿ.ಝೆಡ್. ಜಮೀರ್ ಅಹಮದ್ ಖಾನ್ ಮಾತನಾಡಿ, ‘ದೇಶದ ಮೊದಲ ಶಿಕ್ಷಣ ಸಚಿವರಾಗಿದ್ದ ಮೌಲಾನಾ ಅಬುಲ್ ಕಲಾಂ ಆಜಾದ್ ಅವರು ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ನಾವು ಸ್ಮರಿಸಿಕೊಳ್ಳಬೇಕು. ಅವರು ಹಾಕಿಕೊಟ್ಟ ಹಾದಿಯಲ್ಲಿ ಸಾಗಬೇಕು. ನಮ್ಮ ಸರ್ಕಾರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿದೆ’ ಎಂದು ಹೇಳಿದರು.

ಶಾಸಕ ರಿಜ್ವಾನ್ ಅರ್ಷದ್ ಮಾತನಾಡಿ, ‘ದೇಶದ ಮೊದಲ ಶಿಕ್ಷಣ ಸಚಿವರಾಗಿದ್ದ ಮೌಲಾನಾ ಅಬುಲ್ ಕಲಾಂ ಆಜಾದ್ ಅವರನ್ನು ಕೆಲವು ಕೋಮುವಾದಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ವಿದ್ಯಾವಂತರಲ್ಲ ಎಂದು ಬಿಂಬಿಸುತ್ತಿರುವುದು ಖಂಡನೀಯ. ಈ ಕೋಮುವಾದಿಗಳು ಓದಿದ ಶಾಲಾ–ಕಾಲೇಜುಗಳು, ವಿಶ್ವವಿದ್ಯಾಲಯಗಳು, ಐಐಟಿಗಳಿಗೆ ಇದೇ ಮೌಲಾನಾ ಅವರು ಬುನಾದಿ ಹಾಕಿದ್ದರು’ ಎಂದರು.

ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಅಂಕಣಕಾರ ಎ.ನಾರಾಯಣ, ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಯು. ನಿಸಾರ್ ಅಹಮದ್, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಮೆಹರೋಜ್ ಖಾನ್, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ಕೆ.ಅಲ್ತಾಫ್ ಇದ್ದರು.

ರಿಜ್ವಾನ್ ಅರ್ಷದ್, ಮಧು ಬಂಗಾರಪ್ಪ, ಬಿ.ಝೆಡ್‌. ಜಮೀರ್ ಅಹಮದ್ ಖಾನ್, ನಸೀರ್ ಅಹ್ಮದ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

ಬೀದಿ ನಾಯಿಗಳಿಗೆ ಆಶ್ರಯ ತಾಣ

ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಕ್ರಮ ಕೈಗೊಳ್ಳಲು 3 ನಗರ ಪಾಲಿಕೆಗಳು ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್ ಆದೇಶದಂತೆ ಬೀದಿ ನಾಯಿಗಳಿಗೆ ಆಶ್ರಯ ಕಲ್ಪಿಸಲು ಬೆಂಗಳೂರು ದಕ್ಷಿಣ, ಕೇಂದ್ರ, ಪೂರ್ವ ನಗರ ಪಾಲಿಕೆಗಳು ಸಿದ್ಧತೆ ಆರಂಭಿಸಿವೆ.

ದಕ್ಷಿಣ ನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಶಾಲೆಗಳು, ಕಾಲೇಜುಗಳು, ಆಸ್ಪತ್ರೆಗಳು, ಬಸ್ ನಿಲ್ದಾಣಗಳು, ಕ್ರೀಡಾ ಸಂಕೀರ್ಣಗಳು/ ಮೈದಾನಗಳ ಮಾಹಿತಿಯನ್ನು ಸಂಗ್ರಹಿಸಿ, ಅವುಗಳ ಆವರಣಗಳಲ್ಲಿರುವ ಬೀದಿ ನಾಯಿಗಳನ್ನು ಹಿಡಿದು ಆಶ್ರಯ ತಾಣಗಳಲ್ಲಿ ಇರಿಸಬೇಕು ಎಂದು ಆಯುಕ್ತ ಕೆ.ಎನ್. ರಮೇಶ್ ಅವರು ಅಧಿಕಾರಿಗಳಿಗೆ ಮಂಗಳವಾರ ಸೂಚಿಸಿದರು.

ಸ್ಥಳಾಂತರಿಸಬೇಕಾದ ನಾಯಿಗಳ ಅಂದಾಜು, ಆಶ್ರಯ ತಾಣ ನಿರ್ಮಿಸಲು ಸ್ಥಳ ಗುರುತಿಸುವುದು, ನಾಯಿಗಳನ್ನು ಹಿಡಿಯಲು ಮತ್ತು ನಿರ್ವಹಿಸಲು ಎನ್‌ಜಿಒಗಳನ್ನು ಗುರುತಿಸುವುದು, ನಾಯಿಗಳನ್ನು ಹಿಡಿದು ಅವುಗಳಿಗೆ ಲಸಿಕೆ ಹಾಕುವುದು ಮತ್ತು ಅವುಗಳನ್ನು ಪೋಷಿಸುವುದು, ಆಹಾರ ಮತ್ತು ಪಶುವೈದ್ಯಕೀಯ ಆರೈಕೆಗೆ ಕ್ರಮ, ಕೆನ್ನೆಲ್ ಮೂಲಸೌಕರ್ಯ ಅಭಿವೃದ್ಧಿಗಾಗಿ ಅನುದಾನ ನಿಗದಿಪಡಿಸಲು ಪ್ರಸ್ತಾವ ಸಲ್ಲಿಸಲು ತಿಳಿಸಿದರು.

ಅಧಿಕಾರಿಗಳು ಈ ವಿಷಯಕ್ಕೆ ಹೆಚ್ಚಿನ ಪ್ರಾಮುಖ್ಯ ನೀಡಿ, ಪ್ರತಿಯೊಂದು ಕಾರ್ಯವನ್ನೂ ನಿಗದಿತ ಸಮಯದೊಳಗೆ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.



ಕ್ರಮಗಳ ಬಗ್ಗೆ ಸೂಚನೆ: ಬೀದಿ ನಾಯಿಗಳ ನಿಯಂತ್ರಣ, ಪ್ರಾಣಿಗಳ ಕಲ್ಯಾಣ ಹಾಗೂ ನಾಗರಿಕರ ಸುರಕ್ಷತೆಯ ದೃಷ್ಟಿಯಿಂದ ಕೈಗೊಳ್ಳಬೇಕಾದ ಕ್ರಮಗಳನ್ನು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಅವರು ಅಧಿಕಾರಿಗಳಿಗೆ ತಿಳಿಸಿದರು.

ನಾಯಿಗಳ ನಿಖರ ಸಂಖ್ಯೆ, ಸ್ಥಳ ಹಾಗೂ ಅವುಗಳ ಆರೋಗ್ಯ ಸ್ಥಿತಿಯ ಮಾಹಿತಿಯನ್ನು ಸಂಗ್ರಹಿಸಿ ವರದಿ ಸಲ್ಲಿಸಬೇಕು. ಆರೋಗ್ಯ, ಶಿಕ್ಷಣ, ಸಾರಿಗೆ, ಯೋಜನೆ ಹಾಗೂ ರೈಲ್ವೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಕ್ರಮ ಕೈಗೊಳ್ಳಬೇಕು.

ಬೀದಿ ನಾಯಿಗಳ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮತ್ತು ಆರೈಕೆಗೆ ಸೂಕ್ತವಾದ ಸ್ಥಳವನ್ನು ನಗರ ಜಿಲ್ಲಾಡಳಿತದ ಸಹಕಾರದೊಂದಿಗೆ ಗುರುತಿಸಬೇಕು. ಪ್ರಾಣಿ ಕಲ್ಯಾಣ ಸಂಸ್ಥೆಗಳು ಹಾಗೂ ಪಶುಸಂಗೋಪನೆ ಇಲಾಖೆಯ ಸಹಯೋಗದೊಂದಿಗೆ ಉದ್ದೇಶಿತ ಸ್ಥಳಾಂತರ ಮಾಡಲಾಗುವ ಬೀದಿ ನಾಯಿಗಳ ಆಶ್ರಯ ತಾಣಗಳು/ಕೇಂದ್ರ ನಿರ್ವಹಣೆಗಾಗಿ ಆಸಕ್ತರನ್ನು ಆಹ್ವಾನಿಸಬೇಕು ಎಂದು ಸೂಚಿಸಿದರು.

ಶಸ್ತ್ರ ಚಿಕಿತ್ಸೆ ಹೆಚ್ಚಿಸಲು ಸೂಚನೆ

ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೀದಿ ನಾಯಿಗಳಿಗೆ ಸಂತಾನಶಕ್ತಿ ಹರಣ ಶಸ್ತ್ರ ಚಿಕಿತ್ಸೆ ಪ್ರಗತಿ ಹೆಚ್ಚಿಸಬೇಕು ಎಂದು ಆಯುಕ್ತ ಡಾ. ಕೆ.ವಿ. ರಾಜೇಂದ್ರ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ 63,340 ಬೀದಿ ನಾಯಿಗಳಿವೆ. ವಲಯಕ್ಕೆ ಒಂದರಂತೆ ಎರಡು ಎಬಿಸಿ -ಎ.ಆರ್.ವಿ ಕೇಂದ್ರಗಳಲ್ಲಿ ಒಟ್ಟಾರೆ 171 ಶ್ವಾನ ಸಾಮರ್ಥ್ಯದ ಕೊಠಡಿಗಳಿವೆ. ಇಬ್ಬರು ಸೇವಾದಾರರ ಮೂಲಕ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ಒಟ್ಟಾರೆ 4,068 ನಾಯಿಗಳಿಗೆ ಸಂತಾನಶಕ್ತಿ ಹರಣ ಶಸ್ತ್ರ ಚಿಕಿತ್ಸೆ, 27,581 ನಾಯಿಗಳಿಗೆ ಎ.ಆರ್.ವಿ ಹಾಗೂ ಸಿ.ವಿ ಲಸಿಕೆಯನ್ನು ನೀಡಲಾಗಿದೆ ಎಂದು ಮುಖ್ಯ ಪಶುವೈದ್ಯಾಧಿಕಾರಿ ಮಾಹಿತಿ ನೀಡಿದರು.

‘ಅಮ್ಮ–90’ ಕಾರ್ಯಕ್ರಮದಲ್ಲಿ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ

‘ಬದುಕಿದ್ದಾಗಲೇ ತಾಯಿಯನ್ನು ಗೌರವಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅತ್ಯಂತ ಪ್ರೀತಿಯಿಂದ ತಾಯಿಯನ್ನು ನೋಡಿಕೊಳ್ಳುವುದು ಆದರ್ಶ ಕಾರ್ಯ. ಬದುಕಿರುವಾಗಲೇ ತಾಯಿಯನ್ನು ಗೌರವಿಸಬೇಕು’ ಎಂದು ತುಮಕೂರು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಹೇಳಿದರು.

ವಚನಜ್ಯೋತಿ ಬಳಗ ಆಯೋಜಿಸಿದ್ದ ‘ಅಮ್ಮ-90’ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ‘ಬದುಕಿನಲ್ಲಿ ತಾಯಿಯ ಸ್ಥಾನ ಬಹು ದೊಡ್ಡದು. ‘ಅಮ್ಮ ತೊಂಬತ್ತು’ ಕಾರ್ಯಕ್ರಮ ಎಲ್ಲರಿಗೂ ಮಾದರಿ ಆಗಿದ್ದು, ಎಲ್ಲರೂ ಅನುಕರಿಸಬೇಕು’ ಎಂದು ಸಲಹೆ ನೀಡಿದರು.

‘ಅಮ್ಮ–90’ ಕಾರ್ಯಕ್ರಮದಲ್ಲಿ ಸಿದ್ಧಲಿಂಗ ಸ್ವಾಮೀಜಿ, ಪಾರ್ವತಮ್ಮ ಪಂಡಿತ್, ಶಿವರುದ್ರ ಸ್ವಾಮೀಜಿ, ವಿಶ್ವಬಂಧು ಸೇವಾ ಪ್ರತಿಷ್ಠಾನದ ಸಿದ್ದಯ್ಯ ಗುರುಗಳು, ನಾರಸಂದ್ರ ಮಠದ ಸಿದ್ಧಲಿಂಗ ಸ್ವಾಮೀಜಿ, ಎಚ್.ಎಲ್. ಪುಷ್ಪ, ಸಿ. ಸೋಮಶೇಖರ, ಎಸ್. ಪಿನಾಕಪಾಣಿ, ಸಾಹಿತಿ ಆರ್.ಜಿ. ಹಳ್ಳಿ ನಾಗರಾಜ್, ಕನ್ನಡ ಶ್ರೀಸಾಮಾನ್ಯರ ಕೂಟದ ಅಧ್ಯಕ್ಷ ಶ್ರ.ದೇ. ಪಾರ್ಶ್ವನಾಥ್, ಗಾಯಕ ದೇವೇಂದ್ರಕುಮಾರ ಪತ್ತಾರ್ ಭಾಗವಹಿಸಿದ್ದರು

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಮಾತನಾಡಿ, ‘ಕೌಟುಂಬಿಕ ಕಾರ್ಯವನ್ನು ಸಾಂಸ್ಕೃತಿಕ ಉತ್ಸವವನ್ನಾಗಿ ರೂಪಿಸಿರುವ ‘ಅಮ್ಮ ತೊಂಬತ್ತು’ ವಿಶಿಷ್ಟ ಕಾರ್ಯಕ್ರಮ, ತಾಯಿಯನ್ನು ಗೌರವಿಸುತ್ತಿರುವುದು ಎಲ್ಲರಿಗೂ ಮಾದರಿಯಾಗಿದೆ’ ಎಂದರು.

ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ್ ಮಾತನಾಡಿ ‘ವಚನಗಳನ್ನು ಆಧಾರವಾಗಿಟ್ಟುಕೊಂಡು ನಿರಂತರ ಚಟುಟಿಕೆಗಳನ್ನು ನಡೆಸುವ ವಚನಜ್ಯೋತಿ ಬಳಗವು ಇಂದು ಮತ್ತೊಂದು ವಿಶೇಷಕ್ಕೆ ಕಾರಣವಾಗಿದೆ. ನಿಧನರಾದಾಗ ಅವರ ಹೆಸರಿನಲ್ಲಿ ಸ್ಮರಣೆ ನಡೆಸಿ ಊಟೋಪಚಾರ ಮಾಡುವುದಕ್ಕಿಂತ ಅಮ್ಮ ಬದುಕಿದ್ದಾಗಲೇ ಅವಳಿಗೆ ಹೂಮಳೆ ಸುರಿಸಿ ಊಟೋಪಚಾರ ನಡೆಸುವುದು ಒಳ್ಳೆಯ ಕೆಲಸ’ ಎಂದರು.

ವಚನಜ್ಯೋತಿ ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ ಮಾತನಾಡಿ, ‘ಅತ್ಯಂತ ಸಂಕಷ್ಟಗಳನ್ನು ಎದುರಿಸಿ ನೋವಿನ ಅಲೆಯಲಿ ತೇಲಿ ಮುಳುಗಿದ್ದರೂ, ಮಕ್ಕಳನ್ನು ಜತನದಿಂದ ಕಾಪಾಡಿಕೊಂಡು ಬೆಳೆಸಿದ ತಾಯಿಯನ್ನು ಅವಳ ಕಣ್ಣು ಮುಂದೆಯೇ ಸತ್ಕರಿಸಿ ಗೌರವಿಸುವುದು ಬಹು ಮುಖ್ಯವಾಗಿದೆ. ಹಾಗಾಗಿಯೇ ವಚನಜ್ಯೋತಿ ಬಳಗ ಅಮ್ಮ ಎಂಬತ್ತನ್ನು ಹತ್ತು ವರ್ಷದ ಹಿಂದೆ ಆಚರಿಸಿತ್ತು. ಇದೀಗ ಅಮ್ಮ ತೊಂಬತ್ತನ್ನು ನಾಡಿನ ಪ್ರತಿಭಾವಂತ ಗಾಯಕರ ಗೀತ, ಗಾಯನದಿಂದ ಆಚರಿಸುತ್ತಿದೆ’ ಎಂದು ತಿಳಿಸಿದರು.

ಬೇಲಿಮಠದ ಶಿವರುದ್ರಸ್ವಾಮೀಜಿ, ಸಾಹಿತಿ ವಸುಧೇಂದ್ರ, ಗಾಯಕರಾದ ದೇವೇಂದ್ರಕುಮಾರ ಪತ್ತಾರ್, ರವೀಂದ್ರ ಸೊರಗಾವಿ, ಸಿದ್ಧರಾಮ ಕೇಸಾಪುರ, ಮೀನಾಕ್ಷಿ ಮೇಟಿ, ಟಿ.ಎಂ. ಜಾನಕಿ, ಶ್ವೇತಾ ಪ್ರಭು, ನಾಗಚಂದ್ರಿಕಾ ಭಟ್, ಅಮರೇಶ ಗವಾಯಿ, ಪ್ರಭಾ ಇನಾಂದಾರ್, ಈರಯ್ಯ ಚಿಕ್ಕಮಠ್, ಚೇತನಾ ಮುಧೋಳ್, ಗೀತಾ ಭತ್ತದ್, ಸುನೀತ ಗಂಗಾವತಿ ಉಪಸ್ಥಿತರಿದ್ದರು.

ಬೆಂಗಳೂರು ವೈದ್ಯಕೀಯ ಕಾಲೇಜು ಹಳೆ ವಿದ್ಯಾರ್ಥಿಗಳ ಸಂಘವು ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ‘ಭಾವ ಸಂಗಮ’ ಭಾವ ಗೀತೆಗಳ ಗಾಯನ ಕಾರ್ಯಕ್ರಮ ನಡೆಸಿತು. (ಎಡದಿಂದ ಬಲಕ್ಕೆ) ಡಾ.ಚಂದ್ರಕಲಾ, ಡಾ.ಮುರಳೀಧರ್, ಡಾ.ಎಚ್.ಎಚ್.ಸುರೇಶ್, ಪ್ರೊ. ಲಿಂಗರಾಜ ಗಾಂಧಿ, ಡಾ.ಸುಭಾಸ್, ಡಾ.ಆರ್.ಕೆ.ಸರೋಜ, ಮಂಜುಳಾ ಗೋನಾಳ್, ಡಾ.ಎಚ್.ಎಸ್.ಸತೀಶ್ ಹಾಗೂ ಡಾ.ರಾಮಕೃಷ್ಣಾ ರೆಡ್ಡಿ ಉಪಸ್ಥಿತರಿದ್ದರು

‘ಇದೇ 19ಕ್ಕೆ ಗೃಹಲಕ್ಷ್ಮಿ ಸಹಕಾರ ಸಂಘಕ್ಕೆ ಚಾಲನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇದೇ 19ರಂದು ನಡೆಯಲಿರುವ ಅಂಗನವಾಡಿ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಗೃಹಲಕ್ಷ್ಮಿ ವಿವಿಧೋದ್ದೇಶ ಸಹಕಾರ ಸಂಘಕ್ಕೆ ಅಧಿಕೃತವಾಗಿ ಚಾಲನೆ ನೀಡಲಾಗುವುದು’ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳಕರ ತಿಳಿಸಿದರು.

ಗೃಹಲಕ್ಷ್ಮಿ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತದ ನೋಂದಣಿ ಪ್ರಮಾಣಪತ್ರವನ್ನು ಹೆಬ್ಬಾಳಕರ ಅವರಿಗೆ ಸಹಕಾರ ಇಲಾಖೆಯ ಸಹಕಾರ ಸಂಘಗಳ ಹೆಚ್ಚುವರಿ ರಿಜಿಸ್ಟ್ರಾರ್ ಲಕ್ಷ್ಮೀಪತಯ್ಯ ಮಂಗಳವಾರ ಹಸ್ತಾಂತರಿಸಿದರು.

‘ಫಲಾನುಭವಿಗಳಿಗೆ ಈ ಸಂಘದ ಮೂಲಕ ಕಡಿಮೆ ಬಡ್ಡಿ ದರದಲ್ಲಿ ₹3 ಲಕ್ಷದವರೆಗೆ ಸಾಲ ನೀಡಲಾಗುವುದು. ಇದರಿಂದ ಮಹಿಳೆಯರಿಗೆ ಮತ್ತಷ್ಟು ಆರ್ಥಿಕ ಶಕ್ತಿ ತುಂಬಿದಂತಾಗುತ್ತದೆ. ಮಹಿಳೆಯರ ಸುರಕ್ಷತೆ ಹಾಗೂ ಆರ್ಥಿಕವಾಗಿ ಸ್ವಾವಲಂಬನೆ ಮಾಡುವುದೇ ಸರ್ಕಾರದ ಮುಖ್ಯ ಗುರಿ’ ಎಂದರು.

‘ಪಂಚ ಗ್ಯಾರಂಟಿ’ ಪ್ರಚಾರಕ್ಕೆ ಸಿ.ಎಂ, ಡಿಸಿಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ‘ಶಕ್ತಿ’ ಯೋಜನೆ ಸೇರಿದಂತೆ ಪಂಚ ಗ್ಯಾರಂಟಿಗಳಿಗೆ ಹೆಚ್ಚಿನ ಪ್ರಚಾರ ನೀಡಲು ಸರ್ಕಾರಿ ಬಸ್‌ಗಳಲ್ಲಿ ಭಿತ್ತಿಪತ್ರಗಳನ್ನು ಅಳವಡಿಸಬೇಕು ಎಂದು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರೂ ಆಗಿರುವ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಅಲ್ಲದೆ, ಗ್ಯಾರಂಟಿ ಸಮಿತಿಯ ಜಿಲ್ಲಾ, ತಾಲ್ಲೂಕು ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರ ಗೌರವಧನ ಹಾಗೂ ಭತ್ಯೆಯನ್ನೂ ಹೆಚ್ಚಿಸಬೇಕು ಎಂದೂ ಅವರು ಕೋರಿದ್ದಾರೆ. ಈ ಮನವಿಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಮುಖ್ಯಮಂತ್ರಿ, ಅಗತ್ಯ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

‘ಸರ್ಕಾರದ ಮಹತ್ವಕಾಂಕ್ಷೆಯ ಗ್ಯಾರಂಟಿ ಯೋಜನೆಗಳ ಕುರಿತು ರಾಜ್ಯದ ಸಾರಿಗೆ ನಿಗಮಗಳ ವಾಹನಗಳ ಮೇಲೆ ಭಿತ್ತಿ ಪತ್ರಗಳನ್ನು ಅಳವಡಿಸುವ ಮೂಲಕ ಹೆಚ್ಚಿನ ಪ್ರಚಾರ ನೀಡಬೇಕು. ‘ಶಕ್ತಿ’ ಯೋಜನೆಯ ಅಡಿಯಲ್ಲಿ ಮಹಿಳೆಯರು ಒಟ್ಟು 595 ಕೋಟಿ ಬಾರಿ ಉಚಿತ ಬಸ್ ಪ್ರಯಾಣ ಮಾಡಿದ್ದಾರೆ. ಉಚಿತ ಸಾರಿಗೆಯ ಮೂಲಕ ಮಹಿಳೆಯರ ಸಬಲೀಕರಣವು ಸಾಮಾಜಿಕ ಕಲ್ಯಾಣ ಮತ್ತು ಲಿಂಗ ಸಮಾನತೆಗೆ ಮಹತ್ವದ ಕೊಡುಗೆ ಎಂದು ಲಂಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ದಾಖಲಾಗಿದೆ. ಈ ಬಗ್ಗೆ ಭಿತ್ತಿಪತ್ರಗಳನ್ನು ಅಳವಡಿಸಲು ಸಂಬಂದಪಟ್ಟ ಇಲಾಖಾ ಮುಖ್ಯಸ್ಥರಿಗೆ ಸೂಚಿಸಬೇಕು’ ಎಂದು ದಿನೇಶ್ ಗೂಳಿಗೌಡ ಕೋರಿದ್ದರು.

ತ್ಯಾಮಗೊಂಡ್ಲು ಹೋಬಳಿಯಲ್ಲಿ ಕೆಐಎಡಿಬಿ ಸಭೆ, ಹೊರ ನಡೆದ ರೈತರು

ಗೊಂದಲದ ನಡುವೆ ಜಮೀನು ದರ ನಿಗದಿ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ (ಕೆಐಎಡಿಬಿ) ತ್ಯಾಮಗೊಂಡ್ಲು ಹೋಬಳಿ ಹನುಮಂತಪುರದ, ಬಿದಲೂರು ಹಾಗೂ ಕೋಡಿಪಾಳ್ಯ ಗ್ರಾಮಗಳಲ್ಲಿ ಭೂ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳಿಗೆ ದರ ನಿಗದಿ ಮಾಡುವ ಸಂಬಂಧ ಆಯೋಜಿಸಿದ್ದ ರೈತರ ಜೊತೆ ಸಭೆ ಗೊಂದಲದ ಗೂಡಾಯಿತು.

ಕೆಐಎಡಿಬಿ ವಿಶೇಷ ಜಿಲ್ಲಾಧಿಕಾರಿ ರಘುನಂದನ್ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಮಾತನಾಡಿದ ರೈತರು, ‘ಭೂಮಿ ಖರೀದಿಗೆ ನ್ಯಾಯಾಲಯ ಮಧ್ಯಂತರ ತಡೆಯಾಜ್ಞೆ ನೀಡಿದೆ. ಅಧಿಕಾರಿಗಳು ತಡೆಯಾಜ್ಞೆ ಉಲ್ಲಂಘಿಸಿ ದರ ನಿಗದಿ ಮಾಡಲು ಬಂದಿದ್ದಾರೆ. ಈ ಸಂಬಂಧ ಪೂರ್ಣ ತೀರ್ಪು ಬರುವವರೆಗೆ ಯಾವುದೇ ಕಾರಣಕ್ಕೂ ದರ ನಿಗದಿ ಮಾಡಬಾರದು’ ಎಂದು ಆಗ್ರಹಿಸಿದರು

ನಿಗದಿತ ದರ ಎಷ್ಟು?

ದರ ನಿಗದಿ ಸಭೆಯಲ್ಲಿ ಅಧಿಕಾರಿಗಳೊಂದಿಗೆ ರೈತರು ವಾಗ್ವಾದ ನಡೆಸಿದರು

ನೆಲಮಂಗಲ ತಾಲ್ಲೂಕು ವಿಶೇಷ ಭೂ ಸ್ವಾಧೀನಾಧಿಕಾರಿ ಶಿವೇಗೌಡ, ‘ನಾವು ಜಮೀನಿಗೆ ದರ ನಿಗದಿ ಮಾಡಲು ಬಂದಿದ್ದೇವೆ. ರಾಷ್ಟ್ರೀಯ ಹೆದ್ದಾರಿಗೆ 100 ಮೀಟರ್ ಅಂತರಕ್ಕೆ ಎಕರೆಗೆ ₹4.40 ಕೋಟಿ, ಹನುಮಂತಪುರ ಗ್ರಾಮಕ್ಕೆ ₹2.25 ಕೋಟಿ ಹಾಗೂ ಬಿದಲೂರು/ ಕೋಡಿಪಾಳ್ಯ ಗ್ರಾಮಕ್ಕೆ ₹2.05 ಕೋಟಿ ನಿಗದಿಯಾಗಿದೆ’ ಎಂದು ಪ್ರಕಟಿಸಿದರು.

‘ಕೆಐಎಡಿಬಿ ಮಧ್ಯವರ್ತಿಗಳ ಜಾಲವಾಗಿ ಮಾರ್ಪಟ್ಟಿದೆ. ಅಲ್ಲಿನ ಕೆಲವು ಅಧಿಕಾರಿಗಳೇ ಕೆಐಎಡಿಬಿಗೆ ತಕರಾರು ಅರ್ಜಿ ಹಾಕುವಂತೆ ಮಾಡಿ, ಅದನ್ನು ಬಗೆಹರಿಸುವ ನೆಪದಲ್ಲಿ ರೈತರಿಂದ ಅತಿ ಹೆಚ್ಚು ಕಮಿಷನ್ ವಸೂಲಿ ಮಾಡುತ್ತಿದ್ದಾರೆ’ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

‘ನಾವು ಫಲವತ್ತಾದ ಕೃಷಿ ಭೂಮಿಯನ್ನು ಕಳೆದುಕೊಳ್ಳುತ್ತಿದ್ದೇವೆ. ಇವತ್ತು ನೀವು ಕೊಡುವ ಹಣಕ್ಕೆ ದಾಬಸ್‌ಪೇಟೆ ಪಟ್ಟಣದಲ್ಲಿ ಎರಡು ನಿವೇಶನ ಬರುವುದಿಲ್ಲ. ನಾವು ಭೂಮಿ ನೀಡಿ ಕೇವಲ 6 ತಿಂಗಳಿಗೆ ಬೀದಿಗೆ ಬರುತ್ತೇವೆ. ಒಳ್ಳೆಯ ಬೆಲೆ ಕೊಡಿ’ ಎಂದು ಆಗ್ರಹಿಸಿದರು.

‘ನ್ಯಾಯಾಲಯ ಉಲ್ಲೇಖಿಸಿರುವ ಸರ್ವೆ ನಂಬರ್ ಜಮೀನುಗಳನ್ನು ಹೊರತುಪಡಿಸಿ 386 ಎಕರೆಯಲ್ಲಿ 100 ಎಕರೆ ಜಮೀನಿಗೆ ದರ ನಿಗದಿಪಡಿಸಲಾಗುವುದು’ ಎಂದು ರಘುನಂದನ್ ತಿಳಿಸಿದರು.

‘ಹೈಕೋರ್ಟ್ ಸೂಚನೆ ನಂತರವೂ ಅಧಿಕಾರಿಗಳು ದರ ನಿಗದಿಗೆ ಬಂದಿರುವುದು ಸರಿಯಲ್ಲ. ನ.21ಕ್ಕೆ ನಡೆಯಲಿರುವ ವಿಚಾರಣೆ ವೇಳೆ ಇದನ್ನು ಹೈಕೋರ್ಟ್ ಗಮನಕ್ಕೆ ತರುತ್ತೇವೆ’ ಎಂದು ಕಾನೂನು ಹೋರಾಟ ನಡೆಸುತ್ತಿರುವ ವಿಜಯಕುಮಾರ್ ಸಹಿತ ಹಲವರು ಸಭೆಯಿಂದ ಹೊರ ನಡೆದರು.

‘ಜಾತಿಗೆ ಸೀಮಿತಗೊಳಿಸಬೇಡಿ’

ಒನಕೆ ಓಬವ್ವ ಜಯಂತಿಯಲ್ಲಿ ಸಚಿವ ಶಿವರಾಜ ತಂಗಡಗಿ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಾಜಕ್ಕೆ ಕೊಡುಗೆ ನೀಡಿದ ಮಹಾಪುರುಷರನ್ನು ಜಾತಿಗೆ ಸೀಮಿತಗೊಳಿಸಬಾರದು’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ಕನ್ನಡ ಮತ್ತು ಸಂಸ್ಕತಿ ಇಲಾಖೆ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ವೀರವನಿತೆ ಒನಕೆ ಓಬವ್ವ ಜಯಂತಿ ಸಮಾರಂಭದಲ್ಲಿ ಓಬವ್ವ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಅವರು ಮಾತನಾಡಿದರು.

‘ಕನಕದಾಸರನ್ನು ಕುರುಬ ಸಮುದಾಯಕ್ಕೆ, ವಾಲ್ಮೀಕಿಯವರನ್ನು ನಾಯಕ ಸಮುದಾಯಕ್ಕೆ, ಅಂಬೇಡ್ಕರ್ ಅವರನ್ನು ಪರಿಶಿಷ್ಟ ಸಮುದಾಯಕ್ಕೆ ಸೀಮಿತಗೊಳಿಸಲಾಗುತ್ತಿದೆ. ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರು ಎಲ್ಲರಿಗೂ ಸೇರಿದವರಾಗಿದ್ದಾರೆ. ಯಾವುದೇ ಮಹಾಪುರುಷರನ್ನು ಒಂದು ಜಾತಿಗೆ ಸೀಮಿತಗೊಳಿಸಬಾರದು’ ಎಂದು ಅಭಿಪ್ರಾಯಪಟ್ಟರು.

‘ಒನಕೆ ಓಬವ್ವ ಅವರ ಶೌರ್ಯ, ಸಾಹಸ ಮತ್ತು ಸಮಯ ಪ್ರಜ್ಞೆಯನ್ನು ಎಲ್ಲ ಮಹಿಳೆಯರು ಅಳವಡಿಸಿಕೊಳ್ಳುವ ಅಗತ್ಯ ಇದೆ. ಅವರು ಮಡಿದ ದಿನವನ್ನು ಮಹಿಳಾ ಯೋಧರ ದಿನಾಚರಣೆಯಾಗಿ ಆಚರಿಸುವ ಬಗ್ಗೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ಜತೆಗೆ ಚರ್ಚಿಸಿ, ಕ್ರಮ ಕೈಗೊಳ್ಳಲಾಗುವುದು’ ಎಂದು ಭರವಸೆ ನೀಡಿದರು.

ಒನಕೆ ಓಬವ್ವ ಅವರ ಬಗ್ಗೆ ಉಪನ್ಯಾಸ ನೀಡಿದ ಲೇಖಕಿ ಸಾವಿತ್ರಿ ಮುಜುಂದಾರ, ‘ಓಬವ್ವ ಅವರು ಕುಟುಂಬ ಮತ್ತು ರಾಜ್ಯವನ್ನು ಸಮರ್ಥವಾಗಿ ನಿಭಾಯಿಸಿದ್ದರು. ದುಡಿಯುವ ಮಹಿಳೆಯ ಪ್ರತಿನಿಧಿಯಾಗಿ ಅವರು ಕಾಣುತ್ತಾರೆ. ಪುಟ್ಟಣ್ಣ ಕಣಗಾಲ್ ಅವರು ನಿರ್ದೇಶಿಸಿರುವ ‘ನಾಗರಹಾವು’ ಚಿತ್ರದ ‘ಕನ್ನಡ ನಾಡಿನ ವೀರರಮಣಿಯ...’ ಹಾಡಿನ ಕೊನೆಯಲ್ಲಿ ಓಬವ್ವ ಸಾಯುವುದನ್ನು ತೋರಿಸಿದ್ದಾರೆ. ಅಧ್ಯಯನಗಳ ಪ್ರಕಾರ ಅವರು ಆ ದಾಳಿಯ ನಂತರವೂ ಮೂರು ವರ್ಷ ಬದುಕಿದ್ದರು. ಅವರು ಮೃತರಾದಾಗ ಅವರ ಪಾರ್ಥಿವ ಶರೀರವನ್ನು ರಾಜ್ಯದ ತುಂಬೆಲ್ಲ ಮೆರವಣಿಗೆ ಮಾಡಿದ್ದರು. ಸಿನಿಮಾದಲ್ಲಿ ತಪ್ಪಾಗಿ ತೋರಿಸಲಾಗಿದೆ. ಅವರ ಬಗ್ಗೆ ಸಂಶೋಧನೆ ನಡೆಯಬೇಕು’ ಎಂದರು.

ವನಕಲ್ಲು ಮಲ್ಲೇಶ್ವರ ಮಠದ ಬಸವರಮಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಕೆ.ಮಾನಸ, ಇಲಾಖೆ ನಿರ್ದೇಶಕಿ ಕೆ.ಎಂ.ಗಾಯಿತ್ರಿ, ಜಂಟಿ ನಿರ್ದೇಶಕರಾದ ಬಲವಂತರಾವ್ ಪಾಟೀಲ, ಅಶೋಕ್ ಛಲವಾದಿ ಉಪಸ್ಥಿತರಿದ್ದರು.

ಸಮಾರಂಭದಲ್ಲಿ (ಎಡದಿಂದ) ಕೆ.ಎಂ.ಗಾಯಿತ್ರಿ, ಸಾವಿತ್ರಿ ಮುಜುಂದಾರ, ಬಸವರಮಾನಂದ ಸ್ವಾಮೀಜಿ, ಶಿವರಾಜ ತಂಗಡಗಿ ಮತ್ತು ಕೆ.ಮಾನಸ ಅವರು ಒನಕೆ ಓಬವ್ವ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು

ಪ್ರಜಾವಾಣಿ ಚಿತ್ರ

ಹ್ಯಾಂಡಲ್ ಲಾಕ್ ಮುರಿದು ಕಳ್ಳತನ, ಕಡಿಮೆ ಬೆಲೆಗೆ ಮಾರಾಟ

42 ರಾಯಲ್ ಎನ್‌ಫೀಲ್ಡ್ ಕದ್ದವನ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ರಾಯಲ್ ಎನ್‌ಫೀಲ್ಡ್ 350 ಕ್ಲಾಸಿಕ್ ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ ಆರೋಪಿಯನ್ನು ಆಡುಗೋಡಿ ಠಾಣೆ ಪೊಲೀಸರು ಬಂಧಿಸಿ, ₹1 ಕೋಟಿ ಮೌಲ್ಯದ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ರಾಜು

ತಮಿಳುನಾಡಿನ ರಾಜು (38) ಬಂಧಿತ ಆರೋಪಿ. ಒಂದು ತಿಂಗಳ ಅವಧಿಯಲ್ಲಿ ಈತ ಕಳ್ಳತನ ಮಾಡಿದ್ದ 42 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ.

ಠಾಣಾ ವ್ಯಾಪ್ತಿಯ ಜಯನಗರ ಎರಡನೇ ಬ್ಲಾಕ್ ನಿವಾಸಿಯೊಬ್ಬರು ವಿಲ್ಸನ್ ಗಾರ್ಡನ್‌ನಲ್ಲಿರುವ ಸ್ನೇಹಿತನ ಮನೆಯ ಮುಂಭಾಗ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳ್ಳತನವಾಗಿತ್ತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಬಾತ್ಮೀದಾರರ ಮಾಹಿತಿ, ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಯ ಸುಳಿವು ಆಧರಿಸಿ, ವಿವಿಧ ಆಯಾಮಗಳಲ್ಲಿ ತನಿಖೆ ಕೈಗೊಂಡು ದ್ವಿಚಕ್ರ ವಾಹನ ಸಮೇತ ಆರೋಪಿಯನ್ನು ಬಂಧಿಸಿದರು.

ಆರೋಪಿಯನ್ನು ವಿಚಾರಣೆಗೆ ಒಳಪಡಿಸಿದಾಗ ನಗರದ ವಿವಿಧ ಕಡೆ ರಾಯಲ್ ಎನ್‌ಫೀಲ್ಡ್ ದ್ವಿಚಕ್ರ ವಾಹನಗಳನ್ನು ಕಳವು ಮಾಡಿ, ತಮಿಳುನಾಡಿನಲ್ಲಿರುವ ಸ್ನೇಹಿತರು ಮತ್ತು ಸಂಬಂಧಿಕರಿಗೆ ಮಾರಾಟ ಮಾಡಿರುವುದಾಗಿ ತಿಳಿಸಿದ್ದಾನೆ ಎಂದು ಪೊಲೀಸರು ತಿಳಿಸಿದರು.

‘ಆರೋಪಿಯು ಅಕ್ಟೋಬರ್ 17ರಿಂದ ನವೆಂಬರ್ 7ರ ಅವಧಿಯಲ್ಲಿ ಕಳವು ಮಾಡಿದ್ದ 42 ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ತಮಿಳುನಾಡಿನಿಂದ ಬಸ್‌ನಲ್ಲಿ ಬರುತ್ತಿದ್ದ ಆರೋಪಿ, ನಗರದಲ್ಲಿ ಬೈಕ್‌ನಲ್ಲಿ ಸಂಚರಿಸಿ ಎನ್‌ಫೀಲ್ಡ್ ವಾಹನದ ಹ್ಯಾಂಡಲ್ ಲಾಕ್ ಮುರಿದು ಕಳವು ಮಾಡುತ್ತಿದ್ದ. ದುಬಾರಿ ಬೆಲೆ ಎಂಬ ಕಾರಣಕ್ಕೆ ಈ ವಾಹನಗಳನ್ನು ಕಳವು ಮಾಡಿದ ಬಳಿಕ ಸ್ನೇಹಿತರು ಹಾಗೂ ಸಂಬಂಧಿಕರಿಗೆ ₹25 ಸಾವಿರ ಹಾಗೂ ₹ 50 ಸಾವಿರಕ್ಕೆ ಮಾರಾಟ ಮಾಡಿದ್ದಾನೆ. ತಮಿಳುನಾಡಿನಲ್ಲಿ ನಂಬರ್ ಪ್ಲೇಟ್ ತೆಗೆದು ಓಡಿಸುತ್ತಿರುವುದು ಗೊತ್ತಾಗಿದೆ. ಈ ಬಗ್ಗೆ ಆ ರಾಜ್ಯದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಪತ್ರ ಬರೆದು ತಿಳಿಸಲಾಗಿದೆ’ ಎಂದು ಹೇಳಿದರು.

ತಮಿಳುನಾಡಿನಲ್ಲಿ ಆರೋಪಿ ವಿರುದ್ಧ ವಾಹನ ಕಳ್ಳತನ ಸೇರಿ ಐದು ಪ್ರಕರಣಗಳು ದಾಖಲಾಗಿವೆ. ಈತನ ಬಂಧನದಿಂದ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ಐದು, ಸಿದ್ದಾಪುರದಲ್ಲಿ ನಾಲ್ಕು, ಆಡುಗೋಡಿ, ಹಲಸೂರು ಗೇಟ್‌ನಲ್ಲಿ ತಲಾ ಮೂರು, ವಿವೇಕನಗರ, ಬೈಯಪ್ಪನಹಳ್ಳಿ, ಕೆ.ಜಿ.ನಗರ, ಎಸ್.ಜಿ.ಪಾಳ್ಯದಲ್ಲಿ ತಲಾ ಎರಡು, ಬಂಡೇಪಾಳ್ಯ, ಬೊಮ್ಮನಹಳ್ಳಿ, ಚಾಮರಾಜಪೇಟೆ, ಕಾಟನ್‌ಪೇಟೆ, ಕಲಾಸಿಪಾಳ್ಯ, ಕೊಡಿಗೆಹಳ್ಳಿ, ಮಡಿವಾಳ, ಮಹದೇವಪುರ, ಮೈಕೋ ಲೇಔಟ್, ಎಚ್‌ಎಸ್‌ಆರ್, ಹಲಸೂರು, ವಿ.ವಿ ಪುರ, ಎಸ್.ಆರ್.ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ತಲಾ ಒಂದು ದ್ವಿಚಕ್ರ ವಾಹನ ಕಳವು ಪ್ರಕರಣ ಪತ್ತೆಯಾಗಿದೆ. ನೋಂದಣಿ ಸಂಖ್ಯೆ, ಚಾಸಿಸ್ ಆಧರಿಸಿ ಮಾಲೀಕರನ್ನು ಪತ್ತೆ ಹಚ್ಚಿ ವಾಹನವನ್ನು ಹಿಂತಿರುಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ಅಪರಾಧ ಸುದ್ದಿ

ದೌರ್ಜನ್ಯ: ಯೂಟ್ಯೂಬರ್ ವಿರುದ್ಧ ಪ್ರಕರಣ

ಯುವತಿಯ ಮೇಲೆ ಹಲ್ಲೆ ನಡೆಸಿ ದೌರ್ಜನ್ಯ ಎಸಗಿದ ಆರೋಪದ ಮೇಲೆ ಮುತ್ತುರಾಜು ಉರುಫ್ ಸೂರ್ಯ ಎಂಬ ಯೂಟ್ಯೂಬರ್ ವಿರುದ್ಧ ಕೋಣನಕುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೋಣನಕುಂಟೆಯ ಆದರ್ಶ ನಗರದಲ್ಲಿ ವಾಸವಾಗಿರುವ ಮುತ್ತುರಾಜು, ವಿ-2 ಎಂಬ ಯೂಟ್ಯೂಬ್ ಚಾನೆಲ್ ನಡೆಸುತ್ತಿದ್ದಾರೆ. ಇದೇ ಯೂಟ್ಯೂಬ್ ಚಾನೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಯುವತಿಯ ಮೇಲೆ ಹಲ್ಲೆ ನಡೆಸಿ, ದೌರ್ಜನ್ಯ ಎಸಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಮುತ್ತುರಾಜು, ನನ್ನ ಫೇಸ್‌ಬುಕ್, ಜಿ-ಮೇಲ್ ಹಾಗೂ ಇನ್‌ಸ್ಟಾಗ್ರಾಮ್ ಖಾತೆಯನ್ನು ದುರ್ಬಳಕೆ ಮಾಡಿಕೊಂಡು ವೈಯಕ್ತಿಕ ಫೋಟೊಗಳನ್ನು ಕಳವು ಮಾಡಿದ್ದಾರೆ. ಈ ವಿಚಾರ ಗೊತ್ತಾಗಿ ವಿಚಾರಿಸಲು ಅವರ ಮನೆಗೆ ಹೋದಾಗ, ನನ್ನ ಮೇಲೆ ಹಲ್ಲೆ ನಡೆಸಿ, ಖಾಸಗಿ ಅಂಗಾಂಗಗಳನ್ನು ಮುಟ್ಟಿ ದೌರ್ಜನ್ಯ ಎಸಗಿದ್ದಾರೆ. ಅಲ್ಲದೆ, ನನ್ನ ಮೊಬೈಲ್ ಮತ್ತು ಕೈಗಡಿಯಾರ ಕಿತ್ತುಕೊಂಡು ಹಾಳು ಮಾಡಿದ್ದಾರೆ’ ಎಂದು ಸಂತ್ರಸ್ತ ಯುವತಿಯು ದೂರಿನಲ್ಲಿ ಆರೋಪಿಸಿದ್ದಾರೆ. ‘ವೈಯಕ್ತಿಕ ಫೋಟೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕುವುದಾಗಿ ಬೆದರಿಕೆ ಹಾಕಿದ್ದಾರೆ. ಜತೆಗೆ, ಕುಟುಂಬ ಸದಸ್ಯರಿಗೆ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ’ ಎಂದು ಸಂತ್ರಸ್ತೆಯು ದೂರಿನಲ್ಲಿ ಹೇಳಿದ್ದಾರೆ.

ಹಲ್ಲೆ, ದೌರ್ಜನ್ಯ, ಮಹಿಳೆಯ ಗೌರವಕ್ಕೆ ಧಕ್ಕೆ ತಂದಿರುವುದು, ಬೆದರಿಕೆ ಆರೋಪದಡಿ ಆರೋಪಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಪ್ರಕರಣ ಸಂಬಂಧ 7 ದಿನದೊಳಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಲಾಗಿದೆ. ವಿಚಾರಣೆಗೆ ಬರದಿದ್ದರೆ ಬಂಧಿಸಲಾಗುವುದು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ನಿಧನ ವಾರ್ತೆ

ಕಾಶಿವಿಶ್ವನಾಥ್

ಕಾಶಿವಿಶ್ವನಾಥ್

ಬೆಂಗಳೂರು: ಅನಾರೋಗ್ಯದಿಂದ ಬಳಲುತ್ತಿದ್ದ ರಾಜಾಜಿನಗರ ನಿವಾಸಿ ಎಂ.ಕಾಶಿವಿಶ್ವನಾಥ್ (45) ಅವರು ಮಂಗಳವಾರ ನಿಧನರಾದರು.

ಅವರಿಗೆ ತಾಯಿ, ಇಬ್ಬರು ಸಹೋದರಿಯರು ಇದ್ದಾರೆ. ಎರಡು ದಶಕಗಳಿಂದ ‘ಪ್ರಜಾವಾಣಿ’ ಪತ್ರಿಕೆ ವಿತರಕರಾಗಿದ್ದರು. ಚಾಮರಾಜಪೇಟೆ ಹಿಂದೂ ರುದ್ರಭೂಮಿಯಲ್ಲಿ ಮಂಗಳವಾರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಸುದ್ದಿ ವೈವಿಧ್ಯಕ್ಕೆ
prajavani.netಗೆ ಭೇಟಿ ಮಾಡಿ

ವೀರಲೋಕ ಪುಸ್ತಕ ಸಂತೆ 14ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೀರಲೋಕ ಬುಕ್ಸ್ ಆಯೋಜಿಸುತ್ತಿರುವ ಮೂರನೇ ಆವೃತ್ತಿಯ ‘ಪುಸ್ತಕ ಸಂತೆ’ ನ.14ರಿಂದ 16ರವರೆಗೆ ಜಯನಗರದ ಶಾಲಿನಿ ಮೈದಾನದಲ್ಲಿ ನಡೆಯಲಿದೆ.

‘ಪ್ರತಿ ಕನ್ನಡಿಗರಿಗೆ ಕನ್ನಡದ ಪುಸ್ತಕಗಳನ್ನು ತಲುಪಿಸಲೆಂದು ಶುರುವಾದ ವೀರಲೋಕ ಬುಕ್ಸ್, ಎರಡು ವರ್ಷದಿಂದ ಪ್ರಕಾಶಕರು-ಲೇಖಕರು-ಓದುಗರನ್ನು ಒಂದೆಡೆ ಸೇರಿಸುವ ಸೇತುವೆಯಾಗಿ 'ಪುಸ್ತಕ ಸಂತೆ' ಎನ್ನುವ ಸಾಹಿತ್ಯ ಸಂತೆಯನ್ನು ಆಯೋಜಿಸುತ್ತಿದೆ. ಈ ಬಾರಿ ಮಳಿಗೆಗಳ ಸಂಖ್ಯೆ 200ಕ್ಕೂ ಹೆಚ್ಚಿರಲಿವೆ. ಎರಡು ಲಕ್ಷಕ್ಕೂ ಹೆಚ್ಚು ಓದುಗರು ಬರುವ ನಿರೀಕ್ಷೆಯಿದ್ದು, ಪ್ರಮುಖ ಲೇಖಕರೊಂದಿಗೆ ಮುಖಾಮುಖಿಗೂ ಅವಕಾಶವಿದೆ’ ಎಂದು ವೀರಕಪುತ್ರ ಶ್ರೀನಿವಾಸ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

‘ಹಿಂದಿನ ಎರಡು ವರ್ಷಕ್ಕೆ ಹೋಲಿಸಿದರೆ ಈ ಬಾರಿಯ ಪುಸ್ತಕ ಸಂತೆಯ ಕಾರ್ಯಕ್ರಮಗಳು ವೈವಿಧ್ಯಮಯವಾಗಿರಲಿವೆ. ಓದುಗ- ಲೇಖಕರ ಸಂವಾದ, 22 ಲೇಖಕರ ಪುಸ್ತಕ ಜನಾರ್ಪಣೆಯನ್ನೂ ಹಮ್ಮಿಕೊಳ್ಳಲಾಗಿದೆ. ಆಹಾರ, ಆರೋಗ್ಯ ಮೇಳದ ಜತೆಗೆ ನಟ–ನಟಿಯರ ತಾರಾ ಮೇಳವೂ ಇರಲಿವೆ. ಮೂರು ದಿನವೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ರಾಮಾಯಣ ದರ್ಶನಂ ನಾಟಕ, ಯಕ್ಷಗಾನವೂ ವಿಶೇಷ ಆಕರ್ಷಣೆಯಾಗಲಿದೆ’ ಎಂದು ಹೇಳಿದರು.

200	ಕ್ಕೂ ಅಧಿಕ ಮಳಿಗೆಗಳು
2	ಲಕ್ಷ ಓದುಗರ ನಿರೀಕ್ಷೆ
1000	ಲೇಖಕರ ಭಾಗಿ
100	ಕ್ಕೂ ಅಧಿಕ ಲೇಖಕರ ಜತೆಗೆ ಮುಖಾಮುಖಿ
40	ಲೇಖಕರೊಂದಿಗೆ ಸಂವಾದ
22	ಕೃತಿಗಳ ಜನಾರ್ಪಣೆ

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನ.14ರ ಸಂಜೆ 5ಕ್ಕೆ ಪುಸ್ತಕ ಸಂತೆ ಉದ್ಘಾಟಿಸುವರು. ಸಚಿವರಾದ ಡಾ.ಎಂ.ಸಿ.ಸುಧಾಕರ್, ಮಧು ಬಂಗಾರಪ್ಪ, ರಾಮಲಿಂಗಾರೆಡ್ಡಿ ಅವರೂ ಭಾಗಿಯಾಗುವರು. ಮೂರು ದಿನವೂ ವಿವಿಧ ವಿಚಾರದಲ್ಲಿ ಸಂಕಿರಣ ನಡೆಯಲಿವೆ’ ಎಂದು ಹೇಳಿದರು.

ಮಕ್ಕಳನ್ನು ಸೆಳೆಯಲು ನಾನಾ ಚಟುವಟಿಕೆ ಜತೆಗೆ ಸ್ಪರ್ಧೆಗಳನ್ನು ರೂಪಿಸಲಾಗುತ್ತಿದೆ. ಪೋಷಕರು ಈ ವಾರಾಂತ್ಯದಲ್ಲಿ ಮಾಲ್‌ಗಳಿಗೆ ಮಕ್ಕಳನ್ನು ಕರೆದುಕೊಂಡು ಹೋಗುವ ಬದಲು ಪುಸ್ತಕ ಸಂತೆಗೆ ಬಂದರೆ ಇಲ್ಲಿಯೇ ಖರೀದಿಗೆ ಅವಕಾಶವಿದ್ದು, ಪುಸ್ತಕಗಳ ಅರಿವಿಗೂ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಮಾಜಿ ಸಂಸದ ಉಗ್ರಪ್ಪ, ಲೇಖಕ ಎಸ್.ದಿವಾಕರ್ ಉಪಸ್ಥಿತರಿದ್ದರು.

ಪೋಕ್ಸೊ: ಶಿಕ್ಷೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೋಕ್ಸೊ ಕಾಯ್ದೆಯಡಿ ರೂಪಿಸಲಾಗಿರುವ ನ್ಯಾಯಯುತ ವಿಚಾರಣೆಯ ನಿಯಮ ಉಲ್ಲಂಘಿಸಲಾಗಿದೆ’ ಎಂದು ಪ್ರಕರಣವೊಂದರಲ್ಲಿ ನಿಷ್ಕರ್ಷಿರುವ ಹೈಕೋರ್ಟ್, ಪೋಕ್ಸೊ ಅಪರಾಧಿಯೊಬ್ಬರಿಗೆ ಸೆಷನ್ಸ್ ನ್ಯಾಯಾಲಯ ವಿಧಿಸಿದ್ದ ಶಿಕ್ಷೆಯನ್ನು ರದ್ದುಗೊಳಿಸಿದೆ.

‘ಸಿಟಿ ಸಿವಿಲ್ ಕೋರ್ಟ್‌ನ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ (ಎಫ್‌ಟಿಎಸ್‌ಸಿ–I) ನನಗೆ ವಿಧಿಸಿರುವ ಶಿಕ್ಷೆಯನ್ನು ರದ್ದುಗೊಳಿಸಬೇಕು’ ಎಂದು ಕೋರಿ 50 ವರ್ಷದ ಅಪರಾಧಿಯೊಬ್ಬರು ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜಿ.ಬಸವರಾಜ್ ಅವರಿದ್ದ ಏಕದಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಮೇಲ್ಮನವಿದಾರರ ಪರ ಹೈಕೋರ್ಟ್ ವಕೀಲ ಅಭಿಷೇಕ್ ಆರ್.ಹುದ್ದಾರ ಅವರ ವಾದ ಮನ್ನಿಸಿರುವ ನ್ಯಾಯಪೀಠ, ಪ್ರಕರಣವನ್ನು ವಿಚಾರಣಾ ನ್ಯಾಯಾಲಯಕ್ಕೆ ಹಿಂತಿರುಗಿಸಿದೆ.

‘ಪ್ರತಿವಾದಿಯಿಂದ ಪರೀಕ್ಷಿಸದೆ ಬಿಟ್ಟಿರುವ ಎಲ್ಲಾ ಪ್ರಮುಖ ಸಾಕ್ಷಿಗಳನ್ನು ಪಾಟಿ ಸವಾಲಿಗೆ ಒಳಪಡಿಸಿ ನ್ಯಾಯಿಕ ಪ್ರಕ್ರಿಯೆ ಮುಂದುವರಿಸಬೇಕು. ಒಂದು ವೇಳೆ ಆರೋಪಿ ವಕೀಲರನ್ನು ನೇಮಿಸಿಕೊಳ್ಳಲು ಸಾಧ್ಯವಾಗದಿದ್ದರೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ವಿಷಯವನ್ನು ಅರುಹಬೇಕು’ ಎಂದು ನಿರ್ದೇಶಿಸಿದೆ.

ಮೇಲ್ಮನವಿದಾರನು ಆರು ವರ್ಷದ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ಕಾಯ್ದೆಯ ಕಲಂ 4(2), 5(ಎಂ), 6 ಮತ್ತು 8ರ ಅಡಿಯಲ್ಲಿ ಸೆಷನ್ಸ್ ನ್ಯಾಯಾಲಯ 20 ವರ್ಷಗಳ ಜೈಲು ಶಿಕ್ಷೆ ಮತ್ತು ₹2.5 ಲಕ್ಷ ದಂಡ ವಿಧಿಸಿ 2024ರ ಫೆಬ್ರುವರಿ 5ರಂದು ಆದೇಶಿಸಿತ್ತು.

ನಗರದಲ್ಲಿ ಇಂದು

‘ಲಕ್ಷ್ಯ’ ಉದ್ಘಾಟನೆ: ಅತಿಥಿಗಳು: ಉದಯ್ ಬಿ. ಗರುಡಾಚಾರ್, ಪ್ರಣವ್ ಮೊಹಾಂತಿ, ಸುಚೇಂದ್ರ ಪ್ರಸಾದ್, ಮಂಜುನಾಥ್ ಬಾಬು, ಬ್ರಾಜ ಕಿಶೋರ್ ಪ್ರಧಾನ್, ಸಿ.ಎ. ಕಿಶೋರ್, ಆಯೋಜನೆ: ಆಹ್ವಾಹನ್ ಫೌಂಡೇಶನ್, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10

ವಿದ್ಯಾರ್ಥಿಗಳ ಸ್ವಾಗತ ಸಮಾರಂಭದ ಉದ್ಘಾಟನೆ: ವೆಂಕಟರಾಮೇಗೌಡ, ಅತಿಥಿಗಳು: ಬಿ.ಎಂ. ಪಟೇಲ್ ಪಾಂಡು, ರಂಗರಾಜು, ರಾಮಕೃಷ್ಣ ನಾಯ್ಡು, ಸ್ಥಳ: ಪಟೇಲ್ ಗುಳ್ಳಪ್ಪ ಪದವಿಪೂರ್ವ ಹಾಗೂ ಪದವಿ ಕಾಲೇಜು, ಮೈಸೂರು ರಸ್ತೆ, ಬೆಳಿಗ್ಗೆ 10.30

ಇನ್ನೊವೇಶನ್–2025: ಅತಿಥಿಗಳು: ವೈ. ರಾಜಾರೆಡ್ಡಿ, ಅರುಣ್ ಎಚ್.ಆರ್., ಕಿರಣ್ ಎಚ್.ಆರ್., ಉಪಸ್ಥಿತಿ: ಮಹೇಂದ್ರ ಕೆ.ವಿ., ಎನ್.ಎಂ. ರಾಘವೇಂದ್ರ, ಗುರುರಾಜ್ ಶ್ರೀಧರ, ಆಯೋಜನೆ ಮತ್ತು ಸ್ಥಳ: ಆರ್. ಆರ್. ಇನ್‌ಸ್ಟಿಟ್ಯೂಷನ್ಸ್, ಬೆಳಿಗ್ಗೆ 10.30

ಅಂತರ್ ಕಾಲೇಜು ಅಥ್ಲೆಟಿಕ್ಸ್: ಅತಿಥಿಗಳು: ಬಿ. ರಮೇಶ್, ನವೀನ್ ಜೋಸೆಫ್, ರಮೇಶ್ ಬಿ.ಕೆ., ವಿಜಯಲಕ್ಷ್ಮಿ ಎಂ.ವಿ., ಬಿ.ಆರ್. ಸುಪ್ರೀತ್, ಬಿ.ಎಸ್. ಲೋಕೇಶ್, ಅಧ್ಯಕ್ಷತೆ: ಶಿವಶಂಕರ್ ಕೆ., ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಶ್ರೀ ಕಂಠೀರವ ಕ್ರೀಡಾಂಗಣ, ಕಸ್ತೂರಬಾ ರಸ್ತೆ, ಬೆಳಿಗ್ಗೆ 11.30

‘ಸಂತವಾಣಿ’– ಚಲನಚಿತ್ರಗಳು, ಪುಸ್ತಕಗಳು, ಉಪನ್ಯಾಸಗಳು, ಸಂಗೀತ, ನೃತ್ಯ, ನಾಟಕ ಮತ್ತು ವಿಚಾರಗೋಷ್ಠಿಗಳು: ‘ಸಂತ ತುಕಾರಾಂ’ ಚಲನಚಿತ್ರ ಪ್ರದರ್ಶನ, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 4

ಆರ್. ಸುನಂದಮ್ಮ ಅವರ ‘ಎದೆಯ ಪದ’ ಪುಸ್ತಕ ಬಿಡುಗಡೆ: ಹೇಮಲತಾ ಮಹಿಷಿ, ಪುಸ್ತಕದ ಕುರಿತು: ಎನ್. ಗಾಯತ್ರಿ, ಅಧ್ಯಕ್ಷತೆ: ಆರ್. ಪೂರ್ಣಿಮಾ, ಆಯೋಜನೆ: ಹಿತೈಷಿಣಿ ಮಹಿಳಾ ಅಧ್ಯಯನ ಕೇಂದ್ರ, ಮಹಿಳಾ ದೌರ್ಜನ್ಯ ವಿರೋಧ ಒಕ್ಕೂಟ, ಸಮತಾ ಅಧ್ಯಯನ ಕೇಂದ್ರ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಸಂಜೆ 4.30

ಅನಂತಕುಮಾರ್ ಸ್ಮೃತಿ ದಿನ, ಪಂಜಿನ ಮೆರವಣಿಗೆ: ಆಯೋಜನೆ: ಅನಂತಕುಮಾರ್ ಪ್ರತಿಷ್ಠಾನ, ಸ್ಥಳ: ಅನಂತ ಪ್ರೇರಣಾ ಕೇಂದ್ರ, ಸೌತ್ ಎಂಡ್ ವೃತ್ತದಿಂದ ಮೆರವಣಿಗೆ, ಸಂಜೆ 5.30

ಅನಂತಕುಮಾರ್ ಸ್ಮರಣೆ: ಭಾಗವಹಿಸುವವರು: ಎಸ್. ಸುರೇಶಕುಮಾರ್, ಎಲ್. ವೆಂಕಟಪ್ಪ, ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘದ ಆವರಣ, ಕೆಂಪೇಗೌಡನಗರ, ಸಂಜೆ 6

37 ದಿನಗಳ ಸಾಹಿತ್ಯ–ಸಂಸ್ಕೃತಿ ಉತ್ಸವ: ವೀಣಾವಾದನ: ಸದ್ಗುರು ಸಂಗೀತಶಾಲೆಯ ವಿದ್ಯಾರ್ಥಿಗಳು, ‘ಅರಸಿ ಅಗ್ನಿಕನ್ಯೆ’ ಏಕವ್ಯಕ್ತಿ ತಾಳಮದ್ದಲೆ: ದಿವಾಕರ ಹೆಗಡೆ, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವ ಶಿಲ್ಪ ಸಭಾಂಗಣ, ರಾಷ್ಟ್ರೋತ್ಥಾನ ಪರಿಷತ್ ಆವರಣ, ಕೆಂಪೇಗೌಡನಗರ, ಸಂಜೆ 6

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಆರೆಸ್ಸೆಸ್ ವಿರುದ್ಧ ನೈತಿಕ ಸಮರಕ್ಕೆ ಸಕಾಲ

ಡಿಎಸ್‌ಎಸ್ ಪ್ರತಿರೋಧ ಸಮಾವೇಶದಲ್ಲಿ ಇಂದೂಧರ ಹೊನ್ನಾಪುರ ಸಲಹೆ

ಆರ್‌ಎಸ್‌ಎಸ್ ವಿರುದ್ಧ ಡಿಎಸ್‌ಎಸ್ ಪ್ರತಿರೋಧ ಸಮಾವೇಶದಲ್ಲಿ ಮಾವಳ್ಳಿ ಶಂಕರ್, ಗುರುಪ್ರಸಾದ ಕೆರಗೋಡು ಮತ್ತು ಇಂದೂಧರ ಹೊನ್ನಾಪುರ ಸಮಾಲೋಚನೆ ನಡೆಸಿದರು ಪ್ರಜಾವಾಣಿ ಚಿತ್ರ.

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನ, ಪ್ರಜಾಪ್ರಭುತ್ವ ವಿರೋಧಿಯಾಗಿ ನಡೆದುಕೊಳ್ಳುತ್ತಲೇ ಇಲ್ಲಿನ ಕಾನೂನನ್ನು ಗೌರವಿಸದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವಿರುದ್ಧ ನೈತಿಕ ಯುದ್ಧವನ್ನು ದಲಿತ ಸಂಘರ್ಷ ಸಮಿತಿ ಸಾರುವ ಸಮಯ ಬಂದಿದ್ದು, ಬಹುಜನ ಸಂಘಟನೆಗಳು ಒಗ್ಗಟ್ಟಾಗಿ ಸಮರ್ಥವಾಗಿ ಎದುರಿಸಬೇಕು' ಎಂದು ದಲಿತ, ಪ್ರಗತಿಪರ ಸಂಘಟನೆಗಳ ಹೋರಾಟಗಾರರು ಪ್ರತಿಪಾದಿಸಿದರು.

ಗಾಂಧಿಭವನದಲ್ಲಿ ಮಂಗಳವಾರ ದಲಿತ ಸಂಘರ್ಷ ಸಮಿತಿ (ಡಿಎಸ್‌ಎಸ್) ಸಂಘಟನೆಗಳ ಜಂಟಿ ವೇದಿಕೆ ಆಯೋಜಿಸಿದ್ದ 'ಆರ್‌ಎಸ್‌ಎಸ್ ವಿರುದ್ಧ ಡಿಎಸ್‌ಎಸ್ ಪ್ರತಿರೋಧ ಸಮಾವೇಶ'ದಲ್ಲಿ ಜೈ ಭೀಮ್ ಘೋಷಣೆ ಮೊಳಗಿಸಿದರು.

ಸಮಾವೇಶ ಉದ್ಘಾಟಿಸಿದ ಪತ್ರಕರ್ತ ಇಂದೂಧರ ಹೊನ್ನಾಪುರ, 'ನೂರು ವರ್ಷ ತುಂಬಿದ ಸಂದರ್ಭದಲ್ಲಿ ಸೌಹಾರ್ದಯುತ ಕಾರ್ಯಕ್ರಮ ನಡೆಸುವ ಬದಲು ಖಾಕಿ ಪ್ಯಾಂಟ್, ಕರಿ ಟೋಪಿ ಧರಿಸಿ ಕೈಯಲ್ಲಿ ಲಾಠಿ ಹಿಡಿದು ಭಯ ಹುಟ್ಟಿಸುವ ಕೆಲಸವನ್ನು ಆರ್‌ಎಸ್‌ಎಸ್ ದೇಶದಾದ್ಯಂತ ಮಾಡುತ್ತಿದೆ. ರಾಷ್ಟ್ರೀಯ ಸುಳ್ಳುಗಾರರ ಸಂಘವಾಗಿ ಮಾರ್ಪಟ್ಟಿದೆ. ಇಂತಹ ನಡೆ ವಿರುದ್ಧದ ಹೋರಾಟದ ನಿರ್ಣಾಯಕ ಘಟ್ಟಕ್ಕೆ ಭಾರತವೂ ಬಂದು ನಿಂತಿದೆ. ಕೋಮುವಾದಿಗಳಿಂದ ದೇಶ ಉಳಿಸಿ ಬಹುಜನರ ಭಾರತವಾಗಿ ಉಳಿಸಿಕೊಳ್ಳಲು ಇದು ಸಕಾಲ' ಎಂದರು.

'ಕೇಂದ್ರದಲ್ಲಿ ಛಾಯಾ ಸರ್ಕಾರವಾಗಿ ಕೆಲಸ ಮಾಡುತ್ತಲೇ ಬಹುತ್ವ ಭಾರತ ಹಾಳು ಮಾಡುವ ಪ್ರಯತ್ನವನ್ನು ಆರ್‌ಎಸ್‌ಎಸ್ ಮಾಡುತ್ತಿದೆ. ನೂರು ವರ್ಷದಿಂದಲೂ ಬರೀ ದೇಶದ್ರೋಹಿ, ಸಂವಿಧಾನ ವಿರೋಧಿ ಚಟುವಟಿಕೆಯನ್ನೇ ಮಾಡಿಕೊಂಡು ಬಂದು ಈಗಲೂ ದೇಶಕ್ಕಿಂತ ನಾವೇ ದೊಡ್ಡವರು ಎನ್ನುವ ರೀತಿಯಲ್ಲಿ ವರ್ತಿಸುವುದನ್ನು ಒಪ್ಪಲಾಗದು. ತೆರಿಗೆ ಕಟ್ಟದೇ, ಗುರುದಕ್ಷಿಣೆ ಹೆಸರಲ್ಲಿ ಕೋಟಿಗಟ್ಟಲೇ ಹಣ ಪಡೆಯುತ್ತಿರುವುದನ್ನು ನಾವು ಪ್ರಶ್ನಿಸಲೇಬೇಕಿದೆ' ಎಂದು ತಿಳಿಸಿದರು.

ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿ, 'ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಕಳೆದ ವರ್ಷ ದಾಳಿ ಮಾಡಿದ್ದ ಬೆಂಗಳೂರಿನ ಪಿಇಎಸ್ ಸಂಸ್ಥೆಯಲ್ಲಿ ಮೋಹನ್ ಭಾಗವತ್ ಭಾಷಣ ಮಾಡಿ ಹೋಗಿದ್ದಾರೆ. ಇಂತಹ ಸಂಸ್ಥೆ ಜತೆ ಸೇರುವ ಒಳತಂತ್ರವಾದರೂ ಏನು ಎನ್ನುವುದು ಬಯಲಾಗಬೇಕಿದೆ. ಭಾರತೀಯ ಸಂವಿಧಾನ, ಪ್ರಜಾಪ್ರಭುತ್ವವನ್ನು ಎಂದಿಗೂ ಒಪ್ಪದ ಆರ್‌ಎಸ್‌ಎಸ್ ಅನ್ನು ಬೇರು ಸಹಿತ ಕಿತ್ತುಹಾಕುವ ಶಕ್ತಿ ನಮಗೂ ಇದೆ. ಯುವಜನರನ್ನು ಈ ವಿಚಾರದಲ್ಲಿ ಜಾಗೃತಿಗೊಳಿಸಬೇಕಿದೆ' ಎಂದರು.

ಅಧ್ಯಕ್ಷತೆ ವಹಿಸಿದ್ದ ಸಮಿತಿ ಸಂಚಾಲಕ ಗುರುಪ್ರಸಾದ್ ಕೆರಗೋಡು ಮಾತನಾಡಿ, 'ನೂರು ವರ್ಷ ತುಂಬಿದೆ ಎಂದು ಹೇಳಿಕೊಳ್ಳುತ್ತಾ ಆರ್‌ಎಸ್‌ಎಸ್ ಜಾತಿ ಧರ್ಮಗಳ ಹೆಸರಿನಲ್ಲಿ ಬೆಂಕಿ ಹಚ್ಚುವ ಕೆಲಸ ಹೆಚ್ಚಿದೆ. ಜೈ ಶ್ರೀರಾಮ್ ಎನ್ನುವ ಅವರ ಘೋಷಣೆಗೆ ಎದುರಾಗಿ ಜೈ ಭೀಮ್ ಸಮರ್ಥವಾಗಿದೆ. ಶೂದ್ರ ಸಮುದಾಯಗಳನ್ನು ಒಟ್ಟುಗೂಡಿಸಿ ಆರ್‌ಎಸ್‌ಎಸ್ ವಿರುದ್ಧ ಹೋರಾಡಲೇಬೇಕಿದೆ' ಎಂದರು.

ಡಿಎಸ್‌ಎಸ್‌ನ ವಿ.ನಾಗರಾಜ್, ಇಂದಿರಾ ಕೃಷ್ಣಪ್ಪ, ಎನ್. ವೆಂಕಟೇಶ್, ಎನ್. ಮುನಿಸ್ವಾಮಿ, ಅಲಗೂಡು ಶಿವಕುಮಾರ್, ಗಿರಿಜಮ್ಮ, ಅಣ್ಣಯ್ಯ, ಹಿಂದುಳಿದ ವರ್ಗಗಳ ಸಮಿತಿಯ ಬಸವರಾಜ ಮಾಳಗಿ ಹಾಜರಿದ್ದರು.

'ಪ್ರಿಯಾಂಕ್ ಕೇಳಿದ್ದರಲ್ಲಿ ತಪ್ಪೇನಿದೆ?'

'ರಾಷ್ಟ್ರೀಯ ಸ್ವಯಂ ಸೇವಕ ಸಂಘದವರು ಯಾವುದೇ ಚಟುವಟಿಕೆ ನಡೆಸಲು ಅನುಮತಿ ಪಡೆಯಬೇಕು. ಲೆಕ್ಕಪತ್ರ ಕೊಡಬೇಕು ಎಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ಕೇಳಿದ್ದರಲ್ಲಿ ತಪ್ಪೇನಿದೆ. ಅವರೇನೂ ಯಾರದ್ದಾದರೂ ಗಂಟಲಿಗೆ ಖಾರ ಸುರಿದರಾ' ಎಂದು ಇಂದೂಧರ ಹೊನ್ನಾಪುರ ಪ್ರಶ್ನಿಸಿದರು.

'ಜವಾಬ್ದಾರಿಯುತ ಸಚಿವರಾಗಿ ಪ್ರಶ್ನೆ ಮಾಡಿದ ಅವರನ್ನೇ ಕೆಲವರು ಬೆದರಿಸುತ್ತಿದ್ದಾರೆ. ಈ ದಬ್ಬಾಳಿಕೆ ಸಹಿಸಲಾಗದು. ಅವರೊಬ್ಬ ವ್ಯಕ್ತಿಯಲ್ಲ. ದಲಿತ, ಹಿಂದುಳಿದವರು, ಶೂದ್ರ ಸಮುದಾಯಗಳ ಶಕ್ತಿ' ಎಂದು ಹೇಳಿದರು.

'ಆರ್‌ಎಸ್‌ಎಸ್ ಸಂಘಟನೆ ನೋಂದಣಿ ಮಾಡಿಸಿಕೊಳ್ಳುವ ಅಗತ್ಯವಿಲ್ಲ ಎಂದು ಹೇಳುವ ಮೂಲಕ ಭಾಗವತ್ ಅವರು ಸಂವಿಧಾನ ವಿರೋಧಿ ನಡೆ ಪ್ರದರ್ಶಿಸಿರುವುದರಿಂದ ಅವರ ವಿರುದ್ಧ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿ ಒಳಗೆ ಹಾಕಬೇಕು' ಎಂದು ಹೇಳಿದರು.

ಮೀಸಲಾತಿ ನಿಗದಿಗೆ 150 ದಿನ ಅಗತ್ಯ : ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈ ವರ್ಷಾಂತ್ಯಕ್ಕೆ 195 ನಗರ ಸ್ಥಳೀಯ ಸಂಸ್ಥೆಗಳ ಅವಧಿ ಮುಕ್ತಾಯವಾಗಲಿದೆ. ಇವುಗಳ ವಾರ್ಡ್‌ವಾರು ಮೀಸಲಾತಿ ನಿಗದಿಪಡಿಸಿ ಅಂತಿಮಅಧಿಸೂಚನೆ ಹೊರಡಿಸಲು 150 ದಿನ ಬೇಕು. ಬಳಿಕ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಮತದಾರರ ಪಟ್ಟಿ ಸಿದ್ಧಪಡಿಸಿಕೊಳ್ಳಲು ರಾಜ್ಯ ಚುನಾವಣಾ ಆಯೋಗಕ್ಕೆ 60 ದಿನಗಳ ಕಾಲಾವಕಾಶ ಬೇಕು...'

'ಅವಧಿ ಮುಗಿಯಲಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಆಡಳಿತಾಧಿಕಾರಿ ನೇಮಕ ಮಾಡುವ ಕ್ರಮಕ್ಕೆ ಮುಂದಾಗದಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ, ಈ ಸಂಸ್ಥೆಗಳ ಚುನಾಯಿತ ಸದಸ್ಯರು ಪ್ರತ್ಯೇಕವಾಗಿ ಸಲ್ಲಿಸಿರುವ 75 ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ಈ ವೇಳೆ ರಾಜ್ಯ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಅವರು ನ್ಯಾಯಪೀಠಕ್ಕೆ ಅರುಹಿದ ಅಂಶಗಳಿವು.

'ಈ ವರ್ಷ ಅವಧಿ ಮುಕ್ತಾಯಗೊಳ್ಳಲಿರುವ ಸ್ಥಳೀಯ ಸಂಸ್ಥೆಗಳ ಪೈಕಿ 50 ನಗರ ಸ್ಥಳೀಯ ಸಂಸ್ಥೆಗಳಿಗೆ ಮುಂದಿನ 15 ದಿನಗಳಲ್ಲಿ ವಾರ್ಡ್‌ವಾರು ಮೀಸಲಾತಿ ನಿಗದಿಪಡಿಸಿ ಚುನಾವಣಾ ಆಯೋಗಕ್ಕೆ ಸಲ್ಲಿಸಲಾಗುವುದು. ಉಳಿದ 145 ನಗರ ಸ್ಥಳೀಯ ಸಂಸ್ಥೆಗಳಿಗೆ ಆಯಾ ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆದು ವಾರ್ಡ್‌ವಾರು ಮೀಸಲಾತಿ ನಿಗದಿಪಡಿಸಲು 150 ದಿನಗಳೊಳಗಾಗಿ ಅಂತಿಮ ಮೀಸಲಾತಿ ಅಧಿಸೂಚನೆ ಹೊರಡಿಸಲಾಗುವುದು' ಎಂದು ತಿಳಿಸಿದರು.

ಆಡಳಿತಾಧಿಕಾರಿ ನೇಮಕ: '2025ರ ಅಕ್ಟೋಬರ್ 18ರಿಂದ ನವೆಂಬರ್ 6ರವರೆಗೆ ಐದು ವರ್ಷದ ಅಧಿಕಾರಾವಧಿ ಮುಕ್ತಾಯಗೊಂಡಿರುವ 42 ನಗರಸಭೆ, 53 ಪುರಸಭೆ ಹಾಗೂ 23 ಪಟ್ಟಣ ಪಂಚಾಯತಿಗಳೂ ಸೇರಿದಂತೆ ಒಟ್ಟು 118 ನಗರ ಸ್ಥಳೀಯ ಸಂಸ್ಥೆಗಳಿಗೆ ಆಡಳಿತಾಧಿಕಾರಿ ನೇಮಕ ಮಾಡಿ ನವೆಂಬರ್ 6ಕ್ಕೆ ಅಧಿಸೂಚನೆ ಹೊರಡಿಸಲಾಗಿದೆ' ಎಂದು ಪ್ರತಿಮಾ ಇದೇ ವೇಳೆ ನ್ಯಾಯಪೀಠಕ್ಕೆ ಮಾಹಿತಿ ನೀಡಿದರು.

ಇದೇ ವೇಳೆ ಅರ್ಜಿದಾರರ ಪರ ವಕೀಲರು, 'ಆಡಳಿತಾಧಿಕಾರಿಗಳನ್ನು ನೇಮಕ ಮಾಡಿ ಸರ್ಕಾರ ಹೊರಡಿಸಿರುವ ಆದೇಶ ರದ್ದುಪಡಿಸುವಂತೆ ಕೋರಿ ಮಧ್ಯಂತರ ಅರ್ಜಿ ಸಲ್ಲಿಸಲಾಗುವುದು. ಅದಕ್ಕಾಗಿ ಮೂಲ ಅರ್ಜಿ ತಿದ್ದುಪಡಿಗೆ ಅವಕಾಶ ನೀಡಬೇಕು' ಎಂದು ಮನವಿ ಮಾಡಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 18ಕ್ಕೆ ಮುಂದೂಡಿತು.

ಜಾತಿವಾರು ಸಮೀಕ್ಷೆ: 30ರವರೆಗೆ ಅವಕಾಶ

ಬೆಂಗಳೂರು: ವಿವಿಧ ಕಾರಣಗಳಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ (ಜಾತಿವಾರು ಸಮೀಕ್ಷೆ) ಭಾಗವಹಿಸಲು ಸಾಧ್ಯವಾಗದೇ ಇರುವವರು ನವೆಂಬರ್ 30ರವರೆಗೆ ಆನ್‌ಲೈನ್ ಮೂಲಕ ವಿವರಗಳನ್ನು ನಮೂದಿಸಬಹುದು ಎಂದು ಹಿಂದುಳಿದ ವರ್ಗಗಳ ಆಯೋಗ ತಿಳಿಸಿದೆ.

ಸಮೀಕ್ಷಕರು ಮನೆ–ಮನೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುವ ಕಾರ್ಯವು ಅ. 31ಕ್ಕೆ ಅಂತ್ಯವಾಗಿತ್ತು. ಆನ್‌ಲೈನ್ ಮೂಲಕ ಜನರು ಸ್ವಯಂ ಮಾಹಿತಿ ದಾಖಲಿಸಲು ನ. 10ರವರೆಗೆ ಆಯೋಗ ಅವಕಾಶ ನೀಡಲಾಗಿತ್ತು. ಇದೀಗ ಈ ಅವಧಿಯನ್ನು ವಿಸ್ತರಿಸಲಾಗಿದೆ.

ಸಮೀಕ್ಷೆಯಲ್ಲಿ https://kscbcselfdeclaration.karnataka.gov.in ಲಿಂಕ್ ಮೂಲಕ ಭಾಗವಹಿಸಬಹುದು. ಜನರು ತಮ್ಮ ಮನೆಗೆ ನೀಡಲಾಗಿರುವ ಯುಎಚ್‌ಐಡಿ ಅಥವಾ ವಿದ್ಯುತ್ ಮೀಟರ್‌ನ ಆರ್‌ಆರ್ ಸಂಖ್ಯೆಯನ್ನು ಬಳಸಿಕೊಂಡು ಈ ಪೋರ್ಟಲ್‌ನಲ್ಲಿ ಮಾಹಿತಿ ತುಂಬಬಹುದು ಎಂದು ಆಯೋಗದ ಸದಸ್ಯ ಕಾರ್ಯದರ್ಶಿ ಕೆ.ಎ. ದಯಾನಂದ ತಿಳಿಸಿದ್ದಾರೆ.

ಬೆಂಗಳೂರಿನ ಗಾಂಧಿ ಭವನದಲ್ಲಿ ಮಂಗಳವಾರ ಆದಿವಾಸಿ ಬುಡಕಟ್ಟು ಸಮುದಾಯಗಳ ಒಳ ಮೀಸಲಾತಿ ಕುರಿತು ಆಯೋಜಿಸಲಾಗಿದ್ದ ಸಭೆಯಲ್ಲಿ ಸಿ.ಎಸ್ ದ್ವಾರಕಾನಾಥ್ ಅವರು ಆದಿವಾಸಿ ಸಮುದಾಯಗಳ ಸಂಘಟನೆಗಳ ಪ್ರತಿನಿಧಿಗಳ ಜತೆಗೆ ಸಮಾಲೋಚನೆ ನಡೆಸಿದರು –ಪ್ರಜಾವಾಣಿ ಚಿತ್ರ

'ಆದಿವಾಸಿಗಳಿಗೆ ಒಳಮೀಸಲಾತಿ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಪಂಗಡಗಳ ಬುಡಕಟ್ಟು ಸಮುದಾಯಗಳಿಗೂ ಒಳ ಮೀಸಲಾತಿ ಕಲ್ಪಿಸಲು ಆಯೋಗ ರಚಿಸಿ ಎಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಲು ಆದಿವಾಸಿ ಮತ್ತು ಅಲೆಮಾರಿ ಸಮುದಾಯಗಳ ಸಂಘಟನೆಗಳು ನಿರ್ಧರಿಸಿವೆ.

ಕರ್ನಾಟಕ ಅಲೆಮಾರಿ ಹಕ್ಕಿಪಿಕ್ಕಿ ಬುಡಕಟ್ಟು ಸಂರಕ್ಷಣಾ ಸಮಿತಿ, ಕರ್ನಾಟಕ ರಾಜ್ಯ ಅಲೆಮಾರಿ ಬುಡಕಟ್ಟು ಮಹಾಸಭಾ, ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್, ಪಾರ್ಧಿ ಹರಣಾ ಶಿಕಾರಿ ಸಂಘ ನಗರದ ಗಾಂಧಿ ಭವನದಲ್ಲಿ ಮಂಗಳವಾರ ಜಂಟಿಯಾಗಿ ಆಯೋಜಿಸಿದ್ದ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಂಡಿವೆ.

ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್. ದ್ವಾರಕನಾಥ್ ಅವರ ನೇತೃತ್ವದಲ್ಲಿ ಸಭೆ ನಡೆಯಿತು. 'ರಾಜ್ಯದಲ್ಲಿ ಪರಿಶಿಷ್ಟ ಪಂಗಡಗಳಿಗೆ 15 ವಿಧಾನಸಭಾ ಮತ್ತು ಮೂರು ಲೋಕಸಭಾ ಮೀಸಲು ಕ್ಷೇತ್ರಗಳಿವೆ. ರಾಜ್ಯದ 49 ಆದಿವಾಸಿ ಸಮುದಾಯಗಳ ಒಬ್ಬರೂ ಈ ಕ್ಷೇತ್ರಗಳನ್ನು ಪ್ರತಿನಿಧಿಸುತ್ತಿಲ್ಲ. ಈ ಜಾತಿ ಸಮುದಾಯಗಳು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿದಿವೆ. ಇವತ್ತಿಗೂ ಹಲವರು ಗಂಜಿ ಮತ್ತು ಜಾನುವಾರುಗಳಿಗೆ ನೀಡುವ ಬೂಸಾ ತಿಂದು ಬದುಕುತ್ತಿದ್ದಾರೆ' ಎಂದು ಅವರು ವಿಷಯ ಪ್ರಸ್ತಾಪಿಸಿದರು.

'ಆದಿವಾಸಿ ಸಮುದಾಯಗಳಲ್ಲಿ ಒಗ್ಗಟ್ಟು ಮತ್ತು ನಾಯಕತ್ವದ ಕೊರತೆ ಇದೆ. ಹತ್ತು ವರ್ಷಗಳಲ್ಲಿ 19 ಆದಿವಾಸಿ ಜನರನ್ನು ಅರಣ್ಯ ಇಲಾಖೆಯವರು ಕೊಂದಿದ್ದಾರೆ. ಈ ಸಮುದಾಯಗಳ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರಗಳಾಗಿವೆ. ಇವರ ಸಂಖ್ಯೆ 10 ಸಾವಿರದಿಂದ 50 ಸಾವಿರದಷ್ಟು ಮಾತ್ರ ಇದ್ದು, ಪ್ರತ್ಯೇಕ ಹೋರಾಟದ ಮನವಿಯು ಸರ್ಕಾರಕ್ಕೆ ತಲುಪುವುದೇ ಇಲ್ಲ' ಎಂದರು.

ಧರ್ಮಸ್ಥಳ: ಸಮೀರ್ ಅರ್ಜಿ ಧಾರವಾಡ ಪೀಠಕ್ಕೆ

ಬೆಂಗಳೂರು: ಸೌಜನ್ಯ ಪ್ರಕರಣ ಮುಂದಿಟ್ಟುಕೊಂಡು ಶ್ರೀಕ್ಷೇತ್ರ ಧರ್ಮಸ್ಥಳ ಮತ್ತು ಅದರ ಧರ್ಮಾಧಿಕಾರಿ ಹಾಗೂ ಅವರ ಕುಟುಂಬದವರನ್ನು ದೂಷಿಸಿ ಯೂ-ಟ್ಯೂಬ್ ಚಾನೆಲ್‌ನಲ್ಲಿ ವಿಡಿಯೊ ಪ್ರಸಾರ ಮಾಡಿದ್ದಾರೆ ಎಂಬ ಆರೋಪಗಳಿಗೆ ಸಂಬಂಧಿಸಿದಂತೆ ಎಂ.ಡಿ.ಸಮೀರ್ ವಿರುದ್ಧ ದಾಖಲಾಗಿರುವ ಎಫ್ಐಆರ್ ರದ್ದು ಕೋರಿದ ಅರ್ಜಿ ವಿಚಾರಣೆಯನ್ನು ಧಾರವಾಡ ಹೈಕೋರ್ಟ್ ಪೀಠಕ್ಕೆ ವರ್ಗಾಯಿಸಲಾಗಿದೆ.

ತಮ್ಮ ವಿರುದ್ಧದ ಎಫ್ಐಆರ್ ರದ್ದು ಕೋರಿ ಎಂ.ಡಿ.ಸಮೀರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಅವರು ಮಂಗಳವಾರ ಬೆಂಗಳೂರು ಪ್ರಧಾನ ಪೀಠದಲ್ಲಿ ವಿಚಾರಣೆ ನಡೆಸಿದರು.

'ಈ ಅರ್ಜಿಯ ವಿಚಾರಣಾ ವ್ಯಾಪ್ತಿಯನ್ನು ಧಾರವಾಡ ಹೈಕೋರ್ಟ್ ಪೀಠ ಹೊಂದಿರುವ ಕಾರಣ ಅರ್ಜಿಯನ್ನು ಧಾರವಾಡ ಪೀಠಕ್ಕೆ ವರ್ಗಾಯಿಸಲಾಗುತ್ತಿದೆ. ಸಮೀರ್ ಹೊಸದಾಗಿ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ' ಎಂದು ತಿಳಿಸಿದರು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
'ಬೀಜ ಭವನ', ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು–560 024.
ದೂರವಾಣಿ: 080–23415652, 23415656.
e-mail: seclksscltd@gmail.com Website: https://ksscl.karnataka.gov.in
ಸಂ: ಕರಾಬೀನಿನಿ/ಕಾರ್ಯಕಾರಿ/3530/2025–26 ದಿನಾಂಕ: 10.11.2025

52ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯ ಪ್ರಕಟಣೆ

ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ 52ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯು ಡಿಸೆಂಬರ್ 06, 2025 ರ ಶನಿವಾರ ಬೆಳಿಗ್ಗೆ 11.00 ಘಂಟೆಗೆ ಕರ್ನಾಟಕ ಪಶುವೈದ್ಯಕೀಯ ಪದವಿ, ಪಶುವೈದ್ಯಕೀಯ ಕಾಲೇಜು ಆವರಣ, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು–560 024 ರಲ್ಲಿ ನಡೆಯಲಿದೆ. ಸದಸ್ಯರುಗಳಿಗೆ ಪ್ರತ್ಯೇಕವಾಗಿ ಅಂಚೆಯ ಮೂಲಕ ಸೂಚನಾಪತ್ರ ಮತ್ತು ವಾರ್ಷಿಕ ವರದಿಯನ್ನು ಕಳುಹಿಸಲಾಗುತ್ತದೆ. ನಿಗಮದ ಸದಸ್ಯರುಗಳು ಸಭೆಯಲ್ಲಿ ಖುದ್ದಾಗಿ ಭಾಗವಹಿಸಿ ಸಭೆಯು ಸುಸೂತ್ರವಾಗಿ ನಡೆಯಲು ಸಹಕಾರ ನೀಡಲು ಕೋರಲಾಗಿದೆ.

ನಿರ್ದೇಶಕರ ಮಂಡಳಿಯ ಪರವಾಗಿ,
ಸಹಿ/–
(ಅನುಪ್.ಕೆ.ಜಿ.) ವ್ಯವಸ್ಥಾಪಕ ನಿರ್ದೇಶಕರು.

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಪರಿಮಾಣಕ್ರಮಿ ಪರಿಶೋಧನಾ ಪ್ರಯೋಗ ಶಾಲೆ,
ಬಿಹೆಚ್ ರಸ್ತೆ, ಸ್ಟೇಟ್ ಭವನದ ಎದುರು, ಶಿವಮೊಗ್ಗ
ದೂರವಾಣಿ: 08182–222050 ಇ-ಮೇಲ್: ddvdlsmg@gmail.com
No :-VDL/NHM/TENDER/3/25-26 Dated: 10/11/2025
TENDER REFERENCE NO- DHFWS/2025-26/IND1815/CALL-2 DATED: 10/11/2025

SHORT TERM E-TENDER CALL-2 FOR THE SUPPLY OF KFD RT-PCR REAGENTS

ಕೆ.ಎಫ್.ಡಿ ಆರ್.ಟಿ.-ಪಿ.ಸಿ.ಆರ್ ಪರೀಕ್ಷೆಗೆ ಬೇಕಾಗುವ ರಾಸಾಯನಿಕ ಕಿಟ್ ಸರಬರಾಜು ಮಾಡಲು ಅಲ್ಪಾವಧಿ ಕಾಲ್-2 ಟೆಂಡರ್ ಪ್ರಕಟಿಸಿರುವ ಬಗ್ಗೆ

Short Term Tender documents with complete details may be downloaded from KPPP PORTAL https://kppp.karnataka.gov.in/ Last date for submission of tender through Portal is DATE:22/11/2025 @ 17:30 PM

ಸಹಿ/– ಉಪ ಮುಖ್ಯ ವೈದ್ಯಾಧಿಕಾರಿ,
ಪರಿಮಾಣಕ್ರಮಿ ಪರಿಶೋಧನ ಪ್ರಯೋಗ ಶಾಲೆ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿವ/ಎಂ.ಸಿ.ಎ/25–26/37/11/1213

NATIONAL INSTITUTE OF MENTAL HEALTH & NEURO SCIENCES
INSTITUTE OF NATIONAL IMPORTANCE
Post Box No. 2900, Hosur Road, Bengaluru - 560 029. INDIA
No.: NIMH/RECT/DIR/2025-26 Date: 10.11.2025

NOTIFICATION

Applications are invited for the post of Director at NIMHANS, Bengaluru from qualified Medical professionals fulfilling the following criteria:

(i)	Educational Qualifications and Experience	(a) A high Post Graduate qualification in Medicine or Surgery or Public Health and their branches; (b) 25 years experience in the profession including ten years of teaching and / or research experience in mental health and neuro sciences and / or allied specialities; (c) Extensive practical and administrative experience in the field of medical relief, medical education; and (d) Adequate experience of running an important scientific educational institution either as its Head or Head of a Department.
(ii)	Age Limit	Not exceeding sixty years. (Relaxable for Government servants or retired Government servants or serving or retired persons from autonomous or statutory institutions of State or Central Government or exceptionally qualified candidates).
(iii)	Pay Scale	Rs. 2,25,000/- fixed plus NPA (As per 7th CPC)
(iv)	Tenure of Service	The appointment of Director shall be on single tenure basis for a period of five years from the date on which he/she enters upon his/her office or till he/she attains the age of sixty-five years, whichever is earlier. The person cannot be reappointed in the post.
(v)	Last date of application	10.12.2025

Candidates working in Central Government, State Government, Autonomous Bodies or Statutory Bodies would need to apply through proper channel. The duly filled in application along with its enclosures should reach the Director, NIMHANS, P.B.No.2900, Hosur Road, Bengaluru – 560 029, India, on or before **10.12.2025.** Cut-off date for calculation of age, experience is **10.12.2025.**
The prescribed application form may be downloaded from NIMHANS website **www.nimhans.ac.in** or from the Ministry's website **www.mohfw.gov.in**
Sd/- **DIRECTOR**

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಘಟಪ್ರಭಾ ಎಡದಂಡೆ ಕಾಲುವೆ ವಿಭಾಗ ನಂ–2 ಜಮಖಂಡಿ.
ಸಂ: ಘ.ಎ.ದಂ.ಕಾ/ವಿ–2/ಪಿಬಿ/2025–26/972 ದಿನಾಂಕ: 07.11.2025

ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕರ್ನಾಟಕ ಸರಕಾರ / ಕೇಂದ್ರ ಸರ್ಕಾರದ ಲೋಕೋಪಯೋಗಿ ಇಲಾಖೆಯಿಂದ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕಾರ್ಯನಿರ್ವಾಹಕ ಅಭಿಯಂತರರು, ಜಿಎಲ್‌ಬಿಸಿ ವಿಭಾಗ ನಂ. 2 ಜಮಖಂಡಿ ಕಚೇರಿ ವ್ಯಾಪ್ತಿಯಲ್ಲಿ Lumpsum Turnkey / ದ್ವೀ ಲಕೋಟೆ ಪದ್ಧತಿಯಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರನ್ನು ಈ ಕೆಳಗಿನಂತೆ ಅಹ್ವಾನಿಸಲಾಗಿದೆ.
ಜಿ.ಎಸ್.ಟಿ ಹೊರತುಪಡಿಸಿ

ಕ್ರ. ಸಂ	ಕಾಮಗಾರಿ ಇಂಡೆಂಟ್ ಸಂಖ್ಯೆ	ಟೆಂಡರಿಗಿಟ್ಟ ಮೊತ್ತ ರೂ. ಕೋಟಿಗಳಲ್ಲಿ.
1	KNNL/2024-25/LI/ WORK_INDENT 2875/Call-2	102.24

1)ಬಿಡ್ ಪೂರ್ವ ಭಾವಿ ಸಭೆ ವ್ಯವಸ್ಥಾಪಕ ನಿರ್ದೇಶಕರ, ಕಛೇರಿ ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾಫಿ ಬೋರ್ಡ ಕಟ್ಟಡ, ಬೆಂಗಳೂರು ದಿನಾಂಕ: 21.11.2025 ರಂದು ಬೆಳಿಗ್ಗೆ 11.00 ಘಂಟೆಗೆ. 2)ಗುತ್ತಿಗೆದಾರರ ಸ್ಪಷ್ಟೀಕರಣ ಕೇಳಲು ಕೊನೆ ದಿನಾಂಕ KPP Portal ನಲ್ಲಿಇರುವಂತೆ. 3)ಟೆಂಡರ್‌ಗೆ ಅರ್ಜಿ ಮತ್ತು ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 11.12.2025 [17.30 ಗಂಟೆಯ ವರೆಗೆ]. 4)KPP Portal ಮುಖಾಂತರ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:15.12.2025 [11.00 ಗಂಟೆಗೆ]. 5)ತಾಂತ್ರಿಕ ಬಿಡ್ ಅನುಮೋದನೆ ಯಾದ ನಂತರ ಆರ್ಥಿಕ ಬಿಡ್‌ನ್ನು ತೆರೆಯುವುದು.
ಸೂಚನೆ: ಸದರಿ ಟೆಂಡರಿಗೆ ಸಂಬಂಧಿಸಿದ ಮಾಹಿತಿಗಾಗಿ ಅಧಿಕೃತ ಜಾಲತಾಣ https://kppp.karnataka.gov.in ಯಲ್ಲಿ ವೀಕ್ಷಿಸಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು
DIPR/BGK/RO-NO-380/KSMCA/2025-26 ಘ.ಎ.ದಂ ಕಾಲುವೆ ವಿಭಾಗ ನಂ–2, ಜಮಖಂಡಿ

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)
KSIIDC
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
"ಖನಿಜ ಭವನ", 4ನೇ ಮಹಡಿ, ಪೂರ್ವ ಭಾಗ, ನಂ. 49,
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001. ದೂ: 080–2258131–32–33,
ಇ–ಮೇಲ್: info@ksiidc.com ವೆಬ್‌ಸೈಟ್: www.ksiidc.karnataka.gov.in

ವ್ಯವಸ್ಥಾಪಕರ ವೃಂದದಲ್ಲಿ ಕಂಪನಿ ಕಾರ್ಯದರ್ಶಿ ಹುದ್ದೆಗೆ ನೇಮಕಾತಿ ಅಧಿಸೂಚನೆ

ಕರ್ನಾಟಕ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)ವು, ರಾಜ್ಯದ ಪ್ರಮುಖ ಮೂಲಸೌಕರ್ಯ ಅಭಿವೃದ್ಧಿ ಸಂಸ್ಥೆಯಾಗಿದ್ದು, ಪ್ರಸ್ತುತ ಬೃಹತ್ ಮೂಲಸೌಕರ್ಯ ಮತ್ತು ವಿಮಾನ ನಿಲ್ದಾಣ ಯೋಜನೆಗಳ ಅನುಷ್ಠಾನಗಳ ಮೇಲ್ವಿಚಾರಣೆ ಮಾಡಲು ಸರ್ಕಾರದ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದೆ. ಅರ್ಹ ಅಭ್ಯರ್ಥಿಗಳಿಂದ ಈ ಕೆಳಗಿನ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ವ್ಯವಸ್ಥಾಪಕರ ವೃಂದದಲ್ಲಿ ಕಂಪನಿ ಕಾರ್ಯದರ್ಶಿ – 1 ಹುದ್ದೆ	
ಶೈಕ್ಷಣಿಕ ಅರ್ಹತೆ ಮತ್ತು ಅನುಭವ	ಮಾನ್ಯತೆ ಪಡೆದ ವಿಶ್ವವಿದ್ಯಾಲಯ/ ಸಂಸ್ಥೆಯಿಂದ ಪದವಿ ಪಡೆದಿರಬೇಕು, ಕಂಪನಿ ಸೆಕ್ರೆಟರಿಶಿಪ್ ಕೋರ್ಸ್ ಪೂರ್ಣಗೊಳಿಸಿದ್ದಕ್ಕಾಗಿ ಮತ್ತು ICSI ಸದಸ್ಯರಾಗಲು ಇತರ ಅರ್ಹತೆಗಳಿಗಾಗಿ ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ (ICSI) ಯಿಂದ ಅಸೋಸಿಯೇಟ್ ಸದಸ್ಯತ್ವ ಪ್ರಮಾಣ ಪತ್ರವನ್ನು ಹೊಂದಿರಬೇಕು. ಅಧಿಕಾರಿ ಮಟ್ಟದಲ್ಲಿ ಕನಿಷ್ಠ 8 ವರ್ಷಗಳ ಕೆಲಸದ ಅನುಭವವನ್ನು ಹೊಂದಿರಬೇಕು.
ವಯೋಮಿತಿ	ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಯಾವುದೇ ಪ.ಜಾ/ಪ.ಪಂ.ಗಳ ವರ್ಗ ಅಥವಾ ಪ್ರವರ್ಗ–1ಕ್ಕೆ ಸೇರಿದ ವ್ಯಕ್ತಿಯಾಗಿದ್ದರೆ **42 ವರ್ಷ** ವಯೋಮಿತಿಯನ್ನು ಮೀರಿರಬಾರದು; ಯಾವುದೇ ಓಬಿಸಿಗೆ ಸೇರಿದ ವ್ಯಕ್ತಿಯಾಗಿದ್ದರೆ **40 ವರ್ಷಗಳು;** ಇತರರಾಗಿದ್ದರೆ **37 ವರ್ಷಗಳು;** ಒಂದು ವೇಳೆ ನಿಗಮದಲ್ಲೇ ಕೆಲಸ ನಿರ್ವಹಿಸುತ್ತಿರುವ ಅಭ್ಯರ್ಥಿಯಾಗಿದ್ದಲ್ಲಿ ಮತ್ತು ನೇರನೇಮಕಾತಿಗೆ ಅರ್ಹ ಅಭ್ಯರ್ಥಿಯಾಗಿದ್ದಲ್ಲಿ ಅವರಿಗೆ ಯಾವುದೇ ವಯೋಮಿತಿ ಇರುವುದಿಲ್ಲ.
ವೇತನ ಶ್ರೇಣಿ	ರೂ.107500–2700–115600–3100–134200–3500–155200–4000–167200

ಮೂಲ ವೇತನದ ಜೊತೆಗೆ, ಡಿಎ, ಹೆಚ್‌ಆರ್‌ಎ, ಸಿಸಿಎ ಮತ್ತು ಪಿಎಫ್/ಗ್ರಾಚ್ಯುಟಿ ಸೌಲಭ್ಯ, ವೈದ್ಯಕೀಯ ಸೌಲಭ್ಯ, ಜಿಎಸ್‌ಎಲ್‌ಐ, ಮನೆ/ವಾಹನ/ಕಂಪ್ಯೂಟರ್ ಇತ್ಯಾದಿಗಳಿಗೆ ಮುಂಗಡಗಳು ಮುಂತಾದ ಭತ್ಯೆಗಳನ್ನು ನಿಗಮದ ಸಂಬಂಧಿತ ನಿಯಮಗಳ ಅನುಸಾರ ನೀಡಲಾಗುವುದು. ಕನ್ನಡ ಮಾತನಾಡುವ, ಓದುವ ಮತ್ತು ಬರೆಯುವ ಜ್ಞಾನ ಅತ್ಯಗತ್ಯ.
ಆಯ್ಕೆ ವಿಧಾನ: ಶೈಕ್ಷಣಿಕ ಅರ್ಹತೆ, ಅನುಭವ ಮತ್ತು ಸಂದರ್ಶನದ ಆಧಾರದ ಮೇಲೆ. ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾದ ನಿಗದಿತ ಅರ್ಜಿ ನಮೂನೆಗಳನ್ನು ಭರ್ತಿ ಮಾಡಿ ಅಗತ್ಯ ಪ್ರಮಾಣಪತ್ರಗಳ ಪ್ರತಿಗಳೊಂದಿಗೆ ಮೇಲೆ ತಿಳಿಸಿದ ವಿಳಾಸದಲ್ಲಿ ಉಪ ಪ್ರಧಾನ ವ್ಯವಸ್ಥಾಪಕರು (ಪಿ & ಎ), ಕೆಎಸ್‌ಐಐಡಿಸಿ, ಮೊಬೈಲ್: 9845833566 ಅವರಿಗೆ ಈ ಪ್ರಕಟಣೆ ಪ್ರಕಟವಾದ **10 ದಿನಗಳೊಳಗೆ** ಸಲ್ಲಿಸುವುದು. ನೇಮಕಾತಿಯ ಸಾಮಾನ್ಯ ನಿಯಮಗಳು ಮತ್ತು ಇತರ ಮಾಹಿತಿಯನ್ನು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅಪೂರ್ಣವಾದ ಯಾವುದೇ ಅಥವಾ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು

ಕರ್ನಾಟಕ ಸರ್ಕಾರ
ಜಿಲ್ಲಾ ಪೊಲೀಸ್ ಅಧೀಕ್ಷಕರ ಕಛೇರಿ, ಗದಗ.
ಹೊಸ ಬಸ್ಸ್ ನಿಲ್ದಾಣ ಹಿಂದುಗಡೆ, ಗದಗ–582101
ದೂರವಾಣಿ ಸಂಖ್ಯೆ: 08372–236260 ಮೊ: 94808 04401
ಸಂಖ್ಯೆ : ಸಂಗ್ರಹ/ಟೆಂಡರ್/04/2025–26 ದಿನಾಂಕ : 10–11–2025.

ಟೆಂಡರ್ ಪ್ರಕಟಣೆ

ಜಿಲ್ಲಾ ಪೋಲಿಸ್ ಅಧೀಕ್ಷಕರು ಗದಗ ಜಿಲ್ಲೆ ಗದಗ ಇವರು ಎರಡು ಲಕೋಟೆ ಪದ್ದತಿಯಲ್ಲಿ ಕೆ.ಜಿ ಟೆಂಡರ್ ದಸ್ತಾವೇಜಿನಲ್ಲಿ ಗದಗ ಜಿಲ್ಲೆಯಲ್ಲಿ "Implementation of CCTV based Surveillance Cameras at Gadag District at Various location" ಅಳವಡಿಸಲು ಅಂದಾಜು ಮೊತ್ತ ರೂ. **52,54,540** ಗಳಲ್ಲಿ E-Proc Indent No. KSP/2025-26/ IND0393 ರಲ್ಲಿ ಅರ್ಹ ಪೂರೈಕೆದಾರರ / ಏಜೆನ್ಸಿದಾರರಿಂದ ಕೆಟಿಪಿಪಿ ಅಧಿನಿಯಮ 1999 ನಿಯಮ 2000ರನ್ವಯ ಟೆಂಡರ್ ಆಹ್ವಾನಿಸಿದ್ದು ಅರ್ಹ ಬಿಡ್ಡದಾರರು / ತಯಾರಕರು ಟೆಂಡರ್ ವಿವರಗಳನ್ನು KPP portal at https://kppp.karnataka.gov.in. ರಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀ ಗಳನ್ನು electronic ಪದ್ದತಿಯಲ್ಲಿ ಭರಿಸಿ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳನ್ನು ಟೆಂಡರ್ https://kppp.karnataka.gov.in ಸಲ್ಲಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆ ದಿನಾಂಕ : **25–11–2025** 17.30 ಗಂಟೆ ಟೆಂಡರ್ ತೆರೆಯುವ (Technical Bids) ದಿನಾಂಕ : **27–11–2025** ಬೆಳಿಗ್ಗೆ 11.00 ಗಂಟೆಗೆ. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ KPP portal ರಲ್ಲಿ ಪ್ರಕಟಿಸಲಾಗುವುದು, ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಪೊಲೀಸ್ ಅಧೀಕ್ಷಕರು,
ಗದಗ, ಜಿಲ್ಲೆ, ಗದಗ
ವಾಸಾಸಂಇ/ಗದಗ/ಕೆ.ಎಸ್.ಎಂ.ಸಿ.ಎ/368/2025–26

ಬೆಂಗಳೂರು ಪೂರ್ವ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರ ಕಚೇರಿ, ವೈಟ್‌ಫೀಲ್ಡ್ ವಿಭಾಗ,
ಹಗದೂರು ಮುಖ್ಯ ರಸ್ತೆ, ಸರ್ಕಾರಿ ಪಾಲಿಟೆಕ್ನಿಕ್ ಹತ್ತಿರ, ಬೆಂಗಳೂರು – 560 066.
ಸಂ. ಬೆಂಪೂನಪಾ/ಕಾ.ಅ/ವೈಫಿ/ಟೆಂಡರ್/01/2025–26 ದಿನಾಂಕ : 11.11.2025

ಟೆಂಡರ್‌ಗಳಿಗಾಗಿ ಆಹ್ವಾನ (ಅಲ್ಪಾವಧಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ವೈಟ್‌ಫೀಲ್ಡ್ ವಿಭಾಗ ಇವರು ಐಟಂ ದರದ ಆಧಾರದ ಮೇಲೆ ನೋಂದಾಯಿತ ವರ್ಗ–1 ಗುತ್ತಿಗೆದಾರರಿಂದ ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೆಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ವಿವರ : (1) ಮಹದೇವಪುರ ಕ್ಷೇತ್ರದ ವೈಟ್‌ಫೀಲ್ಡ್ ಮತ್ತು ವರ್ತೂರು ವಾರ್ಡ್‌ನಲ್ಲಿ GOK ಅನುದಾನದಡಿಯಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಇತರ ಸಂಬಂಧಿತ ಕಾಮಗಾರಿಗಳು, **ಟೆಂಡರ್‌ಗಿಟ್ಟ ಮೊತ್ತ : ರೂ. 324.00 ಲಕ್ಷಗಳು, ಇಎಂಡಿ : 4,90,000/–**
ಕಾರ್ಯಕ್ರಮಗಳ ಕ್ಯಾಲೆಂಡರ್ : (1) ಪ್ರಶ್ನೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **18.11.2025 ಮಧ್ಯಾಹ್ನ 3.00 ರೊಳಗೆ** (2) ಬಿಡ್ ಪೂರ್ವ ಸಭೆಯ ದಿನಾಂಕ ಮತ್ತು ಸಮಯ: **18.11.2025 ರಂದು 3.00 ಗಂಟೆಗೆ** (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ : **27.11.2025 ಸಂಜೆ 4:00 ರವರೆಗೆ** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : **28.11.2025 ರಂದು ಸಂಜೆ 4.30 ರವರೆಗೆ** (5) ಹಣಕಾಸು ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **01.12.2025 ರಂದು ಸಂಜೆ 4.00 ರವರೆಗೆ.**
ಬಿಡ್ ದಾಖಲೆಯನ್ನು ಇತರ ನಿಯಮಗಳು ಮತ್ತು ಷರತ್ತುಗಳಿಗಾಗಿ ಉಲ್ಲೇಖಿಸಬಹುದು ಮತ್ತು ಯಾವುದೇ ತಿದ್ದುಪಡಿ / ಅನುಬಂಧವನ್ನು https://kppp.karnataka.gov.in ಮೂಲಕ ಅಥವಾ KPP ಪೋರ್ಟಲ್ ಅನ್ನು ಸಂಪರ್ಕಿಸಿ ಮಾತ್ರ ಪ್ರಕಟಿಸಲಾಗುತ್ತದೆ ಮತ್ತು ಸೂಚಿಸಲಾಗುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ವೈಟ್‌ಫೀಲ್ಡ್ ವಿಭಾಗ

ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಜಿಲ್ಲಾಡಳಿತ ಭವನ, ಚಪ್ಪರದಕಲ್ಲು (ಬೀರಸಂದ್ರ), ದೇವನಹಳ್ಳಿ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ. ದೂರವಾಣಿ : 080–2978 7463,
ಇ–ಮೇಲ್ : eerdwsd.bngr1@gmail.com
ಸಂಖ್ಯೆ : ಕಾ.ಪಾ.ಅ./ಗ್ರಾ.ಕು.ನೀ. & ನೈರ್ಮಲ್ಯ ವಿಭಾಗ/ಬೆಂ.ಗ್ರಾ./ತಾಂ.ಶಾ./ಟೆಂಡರ್/18/2025–26/753 ದಿನಾಂಕ : 10–11–2025

ಟೆಂಡರ್ ಪ್ರಕಟಣೆ
ಸಂಖ್ಯೆ : 18/2025-26 ದಿನಾಂಕ : 10-11-2025
(ಕೆ.ಪಿ.ಪಿ. ಪೋರ್ಟಲ್ ಮೂಲಕ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ ರವರು 2021–22 ನೇ ಸಾಲಿನ **2215** ಜೆ.ಜೆ.ಎಂ. ಲೆಕ್ಕ ಶೀರ್ಷಿಕೆಯಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕಾಮಗಾರಿಗಳಿಗೆ ಹಾಗೂ ದೇವನಗುಂದಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಸ್.ಎಲ್.ಡಬ್ಲ್ಯೂ.ಎಂ. ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿಯಾಗಿರುವ ಅರ್ಹ ಗುತ್ತಿಗೆದಾರರಿಂದ ಹಾಗೂ ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ನಿಯಮಾನುಸಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–2, ಕೆ.ಡಬ್ಲ್ಯೂ–3 & ಕೆ.ಡಬ್ಲ್ಯೂ–4 ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿ.ಯನ್ನು ಇ–ಪೇಮೆಂಟ್ ಮುಖಾಂತರ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಸಲ್ಲಿಸುವುದು.

1) ಟೆಂಡರ್ ದಾಸ್ತಾವೇಜುಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿ ಕೊಳ್ಳುವ ದಿನಾಂಕ : 12–11–2025 ರ ಸಂಜೆ 4.00 ಗಂಟೆಯ ನಂತರ, 2) ಟೆಂಡರ್ ಪೂರ್ವಬಾವಿ ಸಭೆಯ ದಿನಾಂಕ ಮತ್ತು ಸ್ಥಳ : 14–11–2025 ರ ಬೆಳಿಗ್ಗೆ 11.00 ಗಂಟೆಗೆ, ಕಾರ್ಯಪಾಲಕ ಅಭಿಯಂತರರ ಕಛೇರಿ, ಜಿಲ್ಲಾಡಳಿತ ಭವನ, ಚಪ್ಪರದಕಲ್ಲು (ಬೀರಸಂದ್ರ), ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ. 3) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 26–11–2025 ರ ಸಂಜೆ 4.00 ಗಂಟೆಯವರೆಗೆ, 4) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 27–11–2025 ರ ಸಂಜೆ 4.00 ಗಂಟೆಯ ನಂತರ. 5) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : 29–11–2025 ಸಂಜೆ 4.00 ಗಂಟೆಯ ನಂತರ.

ಸಾಮಾನ್ಯ ಸೂಚನೆಗಳು : 1) ಗುತ್ತಿಗೆದಾರರು ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು, 2) ಅರ್ಹತೆಗೆ ಬೇಕಾಗಿರುವ ಎಲ್ಲಾ ಪ್ರಮಾಣ ಪತ್ರ ಆನ್‌ಲೈನ್ ಮೂಲಕ ಸಲ್ಲಿಸಬೇಕು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ,
ಬೆಂಗಳೂರು ಗ್ರಾಮಾಂತರ.
ವಾಸಾಸಂಇ/ಬೆಂಗ್ರಾಜಿ/ಮಣಿಪಾಲ್/3719/2025–26

ಬೆಂಗಳೂರು ಪೂರ್ವ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಮಾರತಹಳ್ಳಿ ವಿಭಾಗ,
ಬೆಳ್ಳಂದೂರು ಮುಖ್ಯ ರಸ್ತೆ, ಬೆಳ್ಳಂದೂರು, ಬೆಂಗಳೂರು–560103.
ಸಂಖ್ಯೆ: ಬೆಂಪೂನಪಾ/ಕಾಪಾಅ/ಮಾಹ/ಟೆಂಡರ್/01/2025–26 ದಿನಾಂಕ: 11.11.2025

ಟೆಂಡರ್‌ಗಳಿಗಾಗಿ ಆಹ್ವಾನ (ಅಲ್ಪಾವಧಿ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಮಾರತಹಳ್ಳಿ ವಿಭಾಗ, ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ / ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೆಸ್ / ಎಂಇಎಸ್ ಅಥವಾ ಯಾವುದಾದರೂ ರಾಜ್ಯ ಅಥವಾ ಕೇಂದ್ರ ಸರ್ಕಾರದ ಸಂಸ್ಥೆಗಳಲ್ಲಿ ನೋಂದಣಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಳಿಗೆ ಐಟಂ ದರ ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in/eporta/index.seam under login for contractors ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಕ್ರ.ಸಂ.	ಕೆಲಸದ ಹೆಸರು
1	ಕರ್ನಾಟಕ ಸರ್ಕಾರದ ಅನುದಾನದಡಿಯಲ್ಲಿ ಮಹದೇವಪುರ ವಿಧಾನಸಭಾ ಕ್ಷೇತ್ರದ ಮಾರತಹಳ್ಳಿ ವಾರ್ಡ್, ಬೆಳ್ಳಂದೂರು ವಾರ್ಡ್ ಹಾಗೂ ಮುನ್ನೆಕೊಲ್ಲಾಲ್ ವಾರ್ಡ್‌ಗಳಲ್ಲಿ ರಸ್ತೆಗಳ ಹಾಗೂ ಒಳಚರಂಡಿಗಳ ಮತ್ತು ಇತರೆ ಸಂಬಂಧಿತ ಕಾಮಗಾರಿಗಳ ಸಮಗ್ರ ಅಭಿವೃದ್ಧಿ. **ಕೆಲಸದ ಅಂದಾಜು ಮೌಲ್ಯ:** ರೂ. 608.00 ಲಕ್ಷಗಳು ಜಿಎಸ್‌ಟಿ ಹೊರುತುಪಡಿಸಿ. **ಇಎಂಡಿ:** ರೂ. 912000/–.

ವೇಳಾ ಪಟ್ಟಿ : 1) ವಿಚಾರಣಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18–11–2025 ರಂದು ಬೆಳಿಗ್ಗೆ 11.00 ಗಂಟೆಗೆ ಮುಂಚಿತವಾಗಿ. 2) ಬಿಡ್ ಪೂರ್ವ–ಭಾವಿ ಸಭೆ ದಿನಾಂಕ & ಸಮಯ: 18–11–2025 ರಂದು ಮಧ್ಯಾಹ್ನ 3.00 ಗಂಟೆಗೆ. 3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ & ಸಮಯ: 27–11–2025 ರಂದು ಸಂಜೆ: 4.00 ಗಂಟೆಯವರೆಗೆ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: 28–11–2025 ರಂದು ಸಂಜೆ 4.30 ಗಂಟೆಗೆ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: 01–12–2025 ರಂದು ಸಂಜೆ 4.00 ಗಂಟೆಗೆ. 6) ಟೆಂಡರ್‌ಗಳ ಮಾನ್ಯತೆ: 180 ದಿನಗಳು.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಾರತಹಳ್ಳಿ ವಿಭಾಗ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಬೆಂಗಳೂರು ವಿಭಾಗ, 2ನೇ ಮಹಡಿ,
ಲೋಕೋಪಯೋಗಿ ಇಲಾಖೆ ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–01.
ದೂರವಾಣಿ ಸಂಖ್ಯೆ: 080–22133370 Email ID: eepwdbngdn@yahoo.com
E-Portal : https://kppp.karnataka.gov.in/#/portal/portal-home

ಟೆಂಡರ್ ಪ್ರಕಟಣೆ ಸಂಖ್ಯೆ: 34/2025–26 ದಿನಾಂಕ: 10.11.2025

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ನೆಲಮಂಗಲ ಉಪವಿಭಾಗಕ್ಕೆ ಸಂಬಂಧಿಸಿದಂತೆ 04 ಸಂಖ್ಯೆಯ (ರೂ. 6.00 to 10.00 ಲಕ್ಷಗಳ) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಗಳ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.
ಕಾಮಗಾರಿಯ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಕೆಪಿಪಿ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.
1. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: 19.11.2025 ಸಂಜೆ 4.00 ಗಂಟೆ ಯವರೆಗೆ.
2. ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ತೆರೆಯುವ ದಿನಾಂಕ: 20.11.2025 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.
ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು
ಲೋ.ಇ. ಬೆಂಗಳೂರು ವಿಭಾಗ, ಬೆಂಗಳೂರು.
DIPR/CP/3708/Zen/2025-26

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

ST. JOSEPH'S COLLEGE OF COMMERCE (AUTONOMOUS) 163, Brigade Road, Bengaluru- 560025. RESEARCH PROJECT VACANCIES. Applications are invited for Research Assistant (2 posts) and Field Investigator (4 posts) for sponsored projects. For details visit www.sjcc.edu.in

WANTED MALE candidates to teach English & Social Science for VIII and IX Std- 6 pm to 9 pm, Contact in person 10 am -6 pm- The Secretary, Deccan Educational Society®, Near Sampige Theater, Malleswaram, Mob: 9353382686

SOUNDARYA GROUP OF INSTITUTIONS

HIRING

A premier institution known for its commitment to academic excellence, innovation and holistic development is currently inviting applications for the positions of Principal / Director and Faculty Members.

SOUNDARYA INSTITUTE OF MANAGEMENT & SCIENCE
Principal / Director – UG & PG Programs

ELIGIBILITY CRITERIA
- Ph.D, in Management, Business Administration, or related disciplines from a recognized university with minimum 15 years of experience.
- Should meet the UGC and AICTE prescribed qualifications for the post of Principal
- Proven experience in handling NAAC / NBA accreditation.

RESPONSIBILITIES
- Provide academic leadership and strategic vision across departments.
- Foster industry-academic and government bodies' collaborations and global partnerships.
- Promote research excellence and innovation in curriculum design.
- Strong Decision Making and crisis management skills

SOUNDARYA COLLEGE OF LAW
Assistant /Associate Professor - Law and Allied Subjects (Sociology, English, and Economics).

ELIGIBILITY CRITERIA
- Master's degree in a relevant field Ph.D. in Law from a recognized University (or evidence of near completion)
- 2-5 years of teaching / research experience with NET / SET / SLET qualified

RESPONSIBILITIES
- Develop and deliver engaging and outcome-based lectures for law students.
- Prepare course materials, assignments, and examinations in alignment with university standards.
- Support curriculum development, accreditation, and quality assurance processes

APPLICATION PROCESS
Interested candidates may send their resume to careers@soundaryainstitutions.in or contact to +91 9902068883

KARNATAKA REDDYJANA SANGHA® (Estd-1925)
KRJS GROUP OF INSTITUTIONS
REQUIRES
Applications are invited from eligible candidates for the following posts in KRJS institutions
Vemana Institute of Technology
Professors: CSE:02, ISE:01, AI &ML:01, Civil:01, CSE-DSc:01, Cyber Security:01, Physics:01.
Associate Professors: CSE:02, ECE:01, Civil:02, Cyber Security:02, Physics:01.
Assistant Professor: CSE:05, ISE:01, ECE:01, ME:01, CSE-Dsc:02, Cyber Security:07, Physics:01, Chemistry:02, Biology:01.
Lab Instructor: CSE:01, ISE:01, D.Sc:01, Chemistry:01, AI& ML:01, Data Science:01.
System Analyst : 01 | PA to Principal : 01
Asst. Librarian : 02 | Library Asst. : 01
Apply within 10 days to the General Secretary, Karnataka Reddyjana Sangha, No.1, Mahayogi Vemana Road, 3rd Block, Koramangala, Bangalore-34 by Post / E-mail: krjsho25@gmail.com
For more detils visit
www.reddyjanasangha.org | Ph: 080-25534194

ADITYA BANGALORE INSTITUTE OF PHARMACY EDUCATION AND RESEARCH
Kogilu,Yelahanka, Bengaluru
Applications are invited from Qualified & Experienced candidates for the following posts;
1.Principal
Qualifications: Ph.D. in Pharmaceutical Sciences with minimum 15 years of teaching and administrative experience with industrial acumen including 5 years as Professor or Associate Professor/ Head as per PCI and RGUHS norms.
2.Professor/ Associate Professor/ Assistant Professor : Pharmaceutics, Pharmacology, Pharmaceutical Chemistry & Pharm. Analysis
Eligibility: M. Pharm with /without Ph D having requisite teaching experience as per PCI norms
Interested candidates may send their resumes with KYC & Photograph to:
hrdept.aditya@gmail.com

KNS INSTITUTE OF TECHNOLOGY
Approved by AICTE & Govt. of Karnataka.
Affiliated to VTU Belagavi, Accredited by NAAC with 'A' Grade
Hegde Nagar-Kogilu Road, Thirumenahalli, Yelahanka Hobli, Bangalore-560064
Applications are invited for the following Positions

Principal	• Qualification, Experience as per AICTE Norms with age less than 55 Years. • Must have served as Vice Principal /Principal for a minimum of 5 Years in a reputed engineering college. • Must be able to communicate in Kannada Language. • A Synopsis on the achievements while in experience as Principal/Professor/Research/ Industry in line with the vision and Mission of the Institution must be submitted along with the detailed resume.
Professors, Associate Professors, Assistant Professors	• In the Programmes - CSE, ISE, ECE, AIML, Data Science, IOT, Cyber Security • Qualification and Experience as per AICTE Norms
Placement Officer	• MBA, Preferably Specialization in HR, Minimum of 3 years experience in Placement related activities in leading engineering Institute.

Apply within 7 days with detailed CV and Testimonials To: Knsit.hr@gmail.com, career@knsit.com,www.knsit.com, 080-28567358.
Sd/- Chairman

WANTED QUALIFIED Female Graduates with B.Ed/ D.Ed and TEACHING experience to handle ALL SUBJECTS for Pre-Primary, Primary and High School classes. Also required: Experienced Lady RECEPTIONIST. Salary: Negotiable. Apply / Contact in person immediately PRINCIPAL HOLY CHILD CONVENT 1133/44, 9th Cross, Ashoknagar, Near Vidyapeeta Circle, Bangalore- 560050 Ph: 26608485/ 74833-97848 Email: hcchs1371@yahoo.com

WANTED ENGLISH MEDIUM LADY TRAINED/ UNTRAINED Computer Science Graduates to teach Primary classes. Salary with PF and ESI facilities. Contact in person 10 am- 3 pm-The Secretary, Deccan Educational Society®, Near Sampige Theater, Malleswaram, Mob: 9353382686

Engg/ Production Technical

LEADING CONSTRUCTION Co. Wants Jr & Sr Civil Engineers 2 to 5 year experienced to work at Yelahanka/ Hoskote. B.Com Graduates freshers and 2 yr experienced for Domlur. Contact: 080-42212228/ 9845047577. Email: jayemengineering@gmail.com

General

WANTED AUTOCAD DESIGNER- (Coreldraw, Solid Works)- Female, Experience 2 years, Industry in Peenya. Immediate Appointment. 9972410541, 9845915484 infusilindia@infusil.in

Part-Time Jobs

REQUIRED FINANCIAL Consultant/ Advisor for Reputed Organization. Part /Full time, upto 30,000 to 40,000 P.M. 9448533374

Manager

THE MYSORE EDUCATION SOCIETY
"Brahmi", KISHORA KENDRA, 10th MAIN, 15th CROSS, MALLESWARAM, BANGALORE – 560 003
Website: www.mesinstitutions.org.in
Invites application for the post of Manager (Estate and Maintenance)

Job Description
- To coordinate repairs and maintenance of civil, electrical works across all the institutions run by MES.
- Maintenance of all electrical equipment including Generators, ACs etc.
- Getting Power audit done on a regular basis to check the needs of the institutions and suggest measures to augment the same.
- To Coordinate with Housekeeping and Security Personal
- Maintenance of all AMC contracts.
- Liaison with statutory bodies like BBMP, Fire Department etc. to obtain approvals, sanctions and certificates.
- Making detailed plans and project report on major work sanctioned by the management etc

Educational Qualification: BE/ME in Civil Engineering.
Age Below 55 years
Experience At least 10 years with a proven track record of managing the Estate and Maintenance in a large organization. Experience in an educational Institution will be preferred
Remuneration for the post will be commensurate with qualification, experience and skill set.
Eligible candidates may apply with their CV and copies of certificates of their qualification and experience addressed to The Secretary, MES, at the above address on or before 22.11.2025 duly superscribing the envelope with "Application for the post of Manager, (E&M)"

Note:
1.Candidates with experience are preferred.
2.Decision of the Selection Committee is final.
3.Resorting to any sort of influence will be deemed as a disqualification to the candidature.
4.Download the application form from the MES website: https://mesinstitutions.in
Advt No:MES 44 ADM (2) 2025 dated 12.11.2025 — Chief Executive

Vishweshwariah Layout

SALE, 23000 sqft Commercial Land, North West Corner, 100 feet Ring Road. RUDRAPPA: 9035334418, 9141326819

CHANGE OF NAME
I, **FARUKDHIN BIN NAVABSAB** S/o. Late NAVAB SAB R/a #17, Anandnagar, 1st Cross, Vijayapura Town, Devanahalli Taluk, Bangalore Rural District- 562135. I have changed my Name from **FARUKDHIN BIN NAVABSAB** to **FARUKDHIN** vide affidavit dated 10.11.2025,SWORN before A. Narayanaswamy, Notary public, At Bangalore Rural District.

LEELAVATHAMMA BHASKAR #2456, 4th Main, 2nd Cross, BDA Layout, Bengaluru-17, have changed my name to LEELA BHASKAR vide affidavit dated- 10/11/2025

Marketing & Sales

WANTED MARKETING Executive fresher/ experienced/ PUC/ Graduate For a company at Koramangala with excellent communication skills in English and local languages. Interested candidates can send mail to: conts.blr@gmail.com

UNCLE'S WANTED Immediately BUSINESS EXECUTIVES. Smart Promotional SALES GIRLS/ BOYS. Best Salary. Walk-in Everyday 10am: 99000-54461/62

WE ARE seeking results-driven Field Sales Executive responsible Industrial plastic parts sales with 2 to 3 years of experience in Jigani Bangalore, apply to vj@advancedforming.com

WANTED MANAGERS, Sales Executives, Telecallers to work different parts of Bangalore earn 20,000-30,000: 8867627879

"WANTED STENO, CLERK for Advocate Office at J.P.Nagar 1st phase Bangalore. Call: 9845042360/ 9448094260"

HRD & Admin

WANTED FEMALE Office Assistant Any Degree Knowing Tally, Fluent in English, Kannada, Hindi Around Rajajinagar Contact: 9108458798/ 9845579620

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business Offers

Finance

MSME LOANS Available for any startups companies And Existing Running companies Available for Manufacturing Units, Shops, Establishments Etc Contact- 7204995189

REAL ESTATE SELLING

Farm House/ Land/ Resorts

Mysore Road

SALE 14 acres yellow zone Land near Big Banyan Tree, Tavarekere Hobli, Bangalore South Taluka. Valuable Mango,Teak,Butter-fruit, other fruit plants. Call/WhatsApp: 9743978646

Commercial Land

General

E KHATA east-facing 10.75 Gunta land for outright sale in Whitefield. NO JD. Rs.9000/SFT Cont: 9900181309

PERSONAL

Change of Name

CHANGE OF NAME
I, **Mugdha Bakhale,** D/o Hemanth Kumar R Bakhale, residing at A-1011, Sobha Indraprastha, Mysore deviation Road, Minerva Mills Compound, Rajajinagar, Magadi Road, Bengaluru 560023, have changed my name to **MUGDHA A KAMAT** Vide affidavit registered with Sl.No 1015,Page 89 dated 10/11/2025 before Notary T R Raghavendra Rao, Bengaluru.

CHANGE OF NAME
I, NARASIMHA SRIVATHSA @1/1 Kote Anjaneya Temple, K R Road, Bengaluru North, Bengaluru, hereby state that I have interchangeably used my full name, **NARASIMHA SRIVATHSA,** as only my First Name in some documents or as only my Last Name in some other documents. My full name used in either format belongs to me. To make it consistent with my visa / permanent residency documents in USA, I would like to update the last name in my passport with my full name, **NARASIMHA SRIVATHSA,** and with No Name (FNU) as First Name. Therefore, I have filed an affidavit before dated 11.11.2025 Notary and Lawyer M. Narendran, Bengaluru.

CHANGE OF NAME
I, **RAFEEQUE CHANDROTH,** residing at # 22, Patwegar Mansion, 19th C Cross, 7th Main, Near Innovative Mannor, BTM Layout 2nd Stage, Bengaluru- 560076 have changed my name to **C M RAFIQ** vide affidavit dated 10-11-2025 before notary P.P.Paul, Bengaluru. Henceforth I shall be called as **C M RAFIQ** only.

CHANGE OF NAME
I, **Venessa Thabitha,** residing at No. 321, 1st C Cross, HRBR Layout, 3rd Block, Kalyana Nagar, Bengaluru-560 043, have changed my name to **VANESSA CYRIL** vide affidavit dated 07.11.2025 before notary Y.R. Chandrasekar. Bengaluru. Henceforth I shall be called **VANESSA CYRIL** only

Lost

DOCUMENT LOST
I, **Gurappa G** S/o **Giriyappa,** R/at # 319, 3rd Cross, Suryanagar Bus Depo, Near Iggaluru Anekal Taluk, Bengaluru Dist, have lost the **Original Obtained Gift Settlement Deed, Document Identification No. 6920/2007, Registerd in Kelamangalam, Sub-register, Krishnagiri Dist, Tamilnadu,** while in transit. If found please **Contact No: 098801 33895**

DOCUMENT LOST
I, **N.S. Sudha** W/o **Late. S. Raju,** R/at 80 Feet Road, SBM Colony, Banashankari 1st Stage, Bangalore-50, have lost the **Original Sale Deed Register and Stamp Department, Document Identification No.: Site No.1784, Sir M V Layout, BDA Khata Certificate,** while in transit. If found please **Contact No: 9741326264.**

‘ದೈಹಿಕ ಸದೃಢತೆಗೆ ಕ್ರೀಡೆ ಸಹಕಾರಿ’

ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಕ್ರೀಡಾಕೂಟ: ಬಹುಮಾನ ವಿತರಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮುನೇಶ್ವರ ಸ್ವಾಮಿ ದೇವಸ್ಥಾನ ಅಭಿವೃದ್ಧಿ ಸಂಘ ಆಯೋಜನೆ
- ಬಡವರು, ಪ್ರತಿಭಾವಂತ ಮಕ್ಕಳಿಗೆ ಶೈಕ್ಷಣಿಕ ನೆರವು

ಬೆಂಗಳೂರು: ‘ಮಕ್ಕಳು ಓದುವುದರ ಜೊತೆಗೆ ಮಾನಸಿಕ, ದೈಹಿಕವಾಗಿ ಸದೃಢವಾಗಿರಲು ಕ್ರೀಡೆ ಸಹಕಾರಿ ಆಗಿದೆ’ ಎಂದು ಜಯನಗರ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿಯ ಅಧ್ಯಕ್ಷ ಬಿ.ಆರ್. ವಾಸುದೇವ್ ಹೇಳಿದರು.

ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಮುನೇಶ್ವರ ಸ್ವಾಮಿ ದೇವಸ್ಥಾನ ಅಭಿವೃದ್ಧಿ ಸಂಘ ಟ್ರಸ್ಟ್ ಆಯೋಜಿಸಿದ್ದ ಕ್ರೀಡಾಕೂಟದಲ್ಲಿ ವಿಜೇತರಿಗೆ ಬಹುಮಾನ ವಿತರಣೆ ಮಾಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಕೆ.ಎಂ. ನಾಗರಾಜ್ ಅವರು ತಮ್ಮೂರಿನ ಜನರಿಗಾಗಿ 20 ವರ್ಷಗಳಿಂದ ಕ್ರೀಡೆ, ಸಾಂಸ್ಕೃತಿಕ ಮತ್ತು ವಿವಿಧ ಕ್ರೀಡಾ ಚಟುವಟಿಕೆ ನಡೆಸಿ ಗ್ರಾಮೀಣ, ಜಾನಪದ ಕಲೆಗಳನ್ನು ಉಳಿಸಿ, ಬೆಳೆಸುವ ಕೆಲಸ ಮಾಡುತ್ತಿದ್ದಾರೆ’ ಎಂದು ತಿಳಿಸಿದರು.

ಟ್ರಸ್ಟ್‌ನ ಅಧ್ಯಕ್ಷ ಕೆ.ಎಂ.ನಾಗರಾಜ್ ಮಾತನಾಡಿ ‘ಗ್ರಾಮದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕೆಂಬ ಉದ್ದೇಶದಿಂದ ಶಿಕ್ಷಣ ಸಂಸ್ಥೆ ಪ್ರಾರಂಭಿಸಿದ್ದೇನೆ. ಹಲವು ಶಿಕ್ಷಣ ಸಂಸ್ಥೆಗಳ ಮಾಲೀಕರ ಮನವೊಲಿಸಿ ಬಡವರು, ಪ್ರತಿಭಾವಂತ, ಮಧ್ಯಮ ವರ್ಗದ ಮಕ್ಕಳಿಗೆ ಶಿಕ್ಷಣ ಸಿಗುವಂತೆ ಸಹಾಯ ಮಾಡುತ್ತಿದ್ದೇನೆ’ ಎಂದು ತಿಳಿಸಿದರು.

ಕಮ್ಯೂನಿಟಿ ಸೆಂಟರ್ ಸಮೂಹ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಚಿಕ್ಕಯ್ಯ, ಬೆಸ್ಕಾಂ ನಿರ್ದೇಶಕ ಲಕ್ಮೀಶ್, ರಾಜ್ಯ ಹಳ್ಳಿಕಾರ ಸಂಘದ ನಿರ್ದೇಶಕರಾದ ವರದಪ್ಪ, ಎ, ಶ್ರೀನಿವಾಸ್, ಶಿವಣ್ಣ, ನೀಲಕಂಠ, ಕಮ್ಯೂನಿಟಿ ಸೆಂಟರ್ ಸಮೂಹ ಸಂಸ್ಥೆಗಳ ಉಪಾಧ್ಯಕ್ಷ ಎನ್. ಹರೀಶ್, ಕೆ.ಎನ್. ರಾಘವೇಂದ್ರ, ಎನ್. ಸುರೇಶ್, ಲೋಕೇಶ್, ಕೇಶವಚಂದ್ರ, ಗಂಗಾಧರ್ ಉಪಸ್ಥಿತರಿದ್ದರು.

ಕ್ರೀಡಾಕೂಟದ ವಿಜೇತ ತಂಡಕ್ಕೆ ಕೆ.ಎಂ.ನಾಗರಾಜ್ ಅವರು ಪ್ರಶಸ್ತಿ ನೀಡಿ ಗೌರವಿಸಿದರು. ಚಿಕ್ಕಯ್ಯ, ಲಕ್ಮೀಶ್, ವರದಪ್ಪ, ಎ. ಶ್ರೀನಿವಾಸ್, ಶಿವಣ್ಣ, ನೀಲಕಂಠ, ಎನ್.ಹರೀಶ್ ಉಪಸ್ಥಿತರಿದ್ದರು

‘ಎಲಿವೇಟೆಡ್ ಕಾರಿಡಾರ್ ಶೀಘ್ರ ಆರಂಭ’

ಪ್ರಜಾವಾಣಿ ವಾರ್ತೆ

ಅಧಿಕಾರಿಗಳ ಭರವಸೆ
ಮಹದೇವಪುರ ಟಾಸ್ಕ್ ಫೋರ್ಸ್ ತಂಡ ಹಾಗೂ ಸ್ಥಳೀಯ ಮುಖಂಡರೊಂದಿಗೆ ಯೋಜನೆ ಸ್ಥಳ ಪರಿಶೀಲನೆ ನಡೆಸಲಾಗಿದೆ. ಜಮೀನು ಮಾಲೀಕರೊಂದಿಗಿನ ಸಂಧಾನ ಪ್ರಕ್ರಿಯೆ ಪೂರ್ಣಗೊಳಿಸಿ ಶೀಘ್ರ ಕಾಮಗಾರಿ ಆರಂಭಿಸುವುದಾಗಿ ಅಧಿಕಾರಿಗಳು ಭರವಸೆ ನೀಡಿದರು.

ಕೆ.ಆರ್.ಪುರ: ಭೂಸ್ವಾಧೀನ ಪ್ರಕ್ರಿಯೆಯಲ್ಲಿ ತೊಡಕುಂಟಾಗಿ ನನೆಗುದಿಗೆ ಬಿದ್ದಿದ್ದ ವರ್ತೂರು ಕೋಡಿಯಿಂದ ವರ್ತೂರುವರೆಗಿನ ಎಲಿವೇಟೆಡ್ ಕಾರಿಡಾರ್ ಕಾಮಗಾರಿ ಪುನರ್ ಆರಂಭಿಸಲು ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ (ಕೆಆರ್‌ಡಿಸಿಎಲ್) ಅಧಿಕಾರಿಗಳ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿತು.

‘ಮಹದೇವಪುರ ಟಾಸ್ಕ್ ಫೋರ್ಸ್’ ತಂಡದ ಉಪಾಧ್ಯಕ್ಷ ಎಲ್.ರಾಜೇಶ್ ಮಾತನಾಡಿ, ‘ಮಾಜಿ ಸಚಿವ ಅರವಿಂದ ಲಿಂಬಾವಳಿ ಹಾಗೂ ಶಾಸಕಿ ಮಂಜುಳಾ ಲಿಂಬಾವಳಿ ಅವರು ಭೂಮಾಲೀಕರೊಂದಿಗೆ ನಿರಂತರ ಸಂಧಾನ ಪ್ರಕ್ರಿಯೆ ನಡೆಸಿ ಸರ್ಕಾರದಿಂದ ದೊರೆಯಬೇಕಾದ ಪರಿಹಾರವನ್ನು ನೀಡಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ’ ಎಂದರು.

‘ಈಗ ಜಮೀನು ಮಾಲೀಕರು ಜಾಗ ಬಿಟ್ಟು ಕೊಡಲು ಒಪ್ಪಿದ್ದರಿಂದ ಅಧಿಕಾರಿಗಳ ತಂಡ ಪರಿಶೀಲನೆ ನಡೆಸಿ ಅತಿಶೀಘ್ರದಲ್ಲಿ ಎಲಿವೇಟೆಡ್ ಕಾರಿಡಾರ್ ರಸ್ತೆ ಮತ್ತು ಸರ್ವೀಸ್ ರಸ್ತೆಗಳನ್ನು ನಿರ್ಮಾಣ ಮಾಡುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದಾರೆ’ ಎಂದು ಮಾಹಿತಿ ನೀಡಿದರು.

ಕೆಆರ್‌ಡಿಸಿಎಲ್ ವ್ಯವಸ್ಥಾಪಕ ನಿರ್ದೇಶಕಿ ಎನ್.ಸುಶೀಲಮ್ಮ, ಮುಖ್ಯ ಎಂಜಿನಿಯರ್ ವಸಂತ್ ನಾಯಕ್, ಭೂ ಸ್ವಾಧೀನ ಅಧಿಕಾರಿಗಳು, ಬಿಬಿಎಂಪಿ ಅಧಿಕಾರಿಗಳು, ಮಹದೇವಪುರ ಟಾಸ್ಕ್ ಫೋರ್ಸ್ ಸದಸ್ಯರು ಉಪಸ್ಥಿತರಿದ್ದರು.

ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಚಿಕ್ಕಬಳ್ಳಾಪುರ

ನಂದಿನಿ

ಪತ್ರಿಕಾ ಪ್ರಕಟಣೆ

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಫೆಡರಲ್ ಸಹಕಾರ ಸಂಘಗಳ ಚುನಾವಣಾಧಿಕಾರಿಗಳು ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ. ಚಿಕ್ಕಬಳ್ಳಾಪುರ ಇದರ 2025–26 ನೇ ಸಾಲಿನಿಂದ ಮುಂದಿನ 05 ವರ್ಷಗಳ ಅವಧಿಗೆ ಪ್ರಥಮ ಆಡಳಿತ ಮಂಡಳಿ ಚುನಾವಣೆಯನ್ನು ದಿನಾಂಕ:–01.02.2026 ರಂದು ನಿಗಧಿಪಡಿಸಿ ಅಧಿಸೂಚನೆಯನ್ನು ಹೊರಡಿಸಿದ್ದು, ಸದರಿ ಅಧಿಸೂಚನೆಯನ್ನು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಫೆಡರಲ್ ಸಹಕಾರ ಸಂಘಗಳ ಚುನಾವಣಾಧಿಕಾರಿಗಳು ಚಿಕ್ಕಬಳ್ಳಾಪುರ ಜಿಲ್ಲೆ ರವರ ಕಚೇರಿ, ಒಕ್ಕೂಟದ ಆಡಳಿತ ಕಚೇರಿ, ಜಾಲತಾಣ ಮತ್ತು ಎಲ್ಲಾ ತಾಲ್ಲೂಕು ಶಿಬಿರ ಕಚೇರಿಗಳ ಪ್ರಕಟಣಾ ಫಲಕದಲ್ಲಿ ಪ್ರಕಟಿಸಲಾಗಿರುತ್ತದೆ.

ಸಹಿ/– ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಫೆಡರಲ್
ಸಹಕಾರ ಸಂಘಗಳ ಚುನಾವಣಾಧಿಕಾರಿಗಳು
ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
KPTCL
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ : ಅಇಂ(ವಿ)/ಪ್ರ(ಕಾ)ವೃ–ಉ/ ಕಾ.ನಿ.ಇಂ(ವಿ)/ಸ.ಇಂ(ವಿ)/ಕ–T6/25–26/1990 ದಿನಾಂಕ : 11.11.2025

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು, ಟೆಂಡರ್ ನಂ: KPTCL/2025-26/IND0238 ಅನ್ವಯ (1) 3560 ಮೀಟರ್‌ಗಳ 4C x 6 Sq mm, (2) 2770 ಮೀಟರ್‌ಗಳ 4C x 4 Sq mm, (3) 2465 ಮೀಟರ್‌ಗಳ 4C x 2.5 Sq mm, (4) 210 ಮೀಟರ್‌ಗಳ 4C x 10 Sq mm ತಾಮ್ರದ ನಿಯಂತ್ರಣ ಕೇಬಲನ್ನು (Control Cable) ಖರೀದಿಸಲು ಟೆಂಡರನ್ನು ಆಹ್ವಾನಿಸಿದೆ.

ಬಿಡ್‌ಗಳನ್ನು ಕೆಪಿಪಿಪಿ ಮೋಡ್ ಮೂಲಕ ಮಾತ್ರವೇ ಸ್ವೀಕರಿಸಲಾಗುತ್ತದೆ, ಮೇಲ್ಕಂಡ ಟೆಂಡರ್‌ನ ವಿವರವಾದ ಪ್ರಕಟಣೆಯನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ ಲಾಗಿನ್ ಮಾಡುವ ಮೂಲಕ ದಿನಾಂಕ: **12.11.2025** ಅಥವಾ ನಂತರ ಪಡೆಯಬಹುದು. ಇತರೆ ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.

ಸಹಿ/– ಅಧೀಕ್ಷಕ ಇಂಜಿನಿಯರ್(ವಿದ್ಯುತ್),
ಪ್ರಸರಣ(ಕಾರ್ಯಾಚರಣೆ) ವೃತ್ತ–ಉತ್ತರ, ಕ.ವಿ.ಪ್ರ.ನಿ.ನಿ.,
ಯು.ಎ.ಎಸ್. ಕ್ಯಾಂಪಸ್, ಹೆಬ್ಬಾಳ, ಬೆಂಗಳೂರು–560024.

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080–27934470/27935412
E-mail: hosakote.pa@gmail.com URL: www.hoskote.tpa.gov.in
ಸಂಖ್ಯೆ: ಹೊಯೋಪ್ರಾ/ಭೂಉಬ/41/2025–26 ದಿನಾಂಕ: 10–11–2025

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಶ್ರೀ ಗುರುಮೂರ್ತಿ ಬಿನ್ ರಾಮಕೃಷ್ಣ ನಾಯ್ಡು ಇವರು ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಪೆತ್ತನಹಳ್ಳಿ ಗ್ರಾಮದ ಸ.ನಂ. 76/1ಎ ರಲ್ಲಿನ 01 ಎಕರೆ 10 ಗುಂಟೆ ವಿಸ್ತೀರ್ಣದ ಜಮೀನನ್ನು **“ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ”** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಪ್ರಶ್ನಿತ ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆ / ವಸತಿ ಸಮುಚ್ಚಯ ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನ / ಮನೆಗಳನ್ನು ಒದಗಿಸಿಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುವುದು ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.
ವಾಸಾಸಂಇ/ವಾ.ಪ್ರ/3702/2025–26

ಲಕ್ಷದೀಪೋತ್ಸವಕ್ಕೆ ಶಾಸಕಎಸ್‌.ಆರ್‌. ವಿಶ್ವನಾಥ್ ಚಾಲನೆ ನೀಡಿದರು

ಗಂಗಮ್ಮ ದೇವಿಗೆ ಲಕ್ಷದೀಪೋತ್ಸವ

ಪ್ರಜಾವಾಣಿ ವಾರ್ತೆ

ಯಲಹಂಕ: ಜಲಸಿರಿ ಪ್ರತಿಷ್ಠಾನದ ಆಶ್ರಯದಲ್ಲಿ ಕಾರ್ತಿಕ ಮಾಸದ ಪ್ರಯುಕ್ತ ಯಲಹಂಕದ ಅಮಾನಿ ಕೆರೆಯಲ್ಲಿ ಗಂಗಮ್ಮದೇವಿಗೆ ಲಕ್ಷದೀಪೋತ್ಸವ ನಡೆಸಲಾಯಿತು.

ನಂತರ ಶಾಸಕ ಎಸ್.ಆರ್.ವಿಶ್ವನಾಥ್ ಕೆರೆಗೆ ಬಾಗಿನ ಸಮರ್ಪಿಸಿದರು. ಸಂಜೆ ಹಸಿಕರಗ ಮಂಟಪದ ಕಲ್ಯಾಣಿಯಲ್ಲಿ ಈಶ್ವರ ಮತ್ತು ಗಂಗಾದೇವಿಗೆ ಪೂಜೆ ನೆರವೇರಿಸಿ ಲಕ್ಷ ದೀಪೋತ್ಸವಕ್ಕೆ ಚಾಲನೆ ನೀಡಿದರು.

ಕಾರ್ತಿಕ ದೀಪೋತ್ಸವವು ಧಾರ್ಮಿಕ, ಆಧ್ಯಾತ್ಮಿಕ ಮತ್ತು ವೈಜ್ಞಾನಿಕ ಮಹತ್ವವನ್ನು ಹೊಂದಿದ್ದು, ದೀಪ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸಿ ಜ್ಞಾನದ ಬೆಳಕನ್ನು ನೀಡುತ್ತದೆ ಎಂಬ ನಂಬಿಕೆಯೂ ಇದೆ ಎಂದು ವಿಶ್ವನಾಥ್ ತಿಳಿಸಿದರು.

ನೂರಾರು ಮಹಿಳೆಯರು ಕಲ್ಯಾಣಿಯಲ್ಲಿ ಈಶ್ವರ ಮತ್ತು ಗಂಗಾದೇವಿಗೆ ದೀಪಗಳನ್ನು ಬೆಳಗಿ, ನೀರಿಗೆ ಬಿಡುವ ಮೂಲಕ ತಮ್ಮ ಹರಕೆ ತೀರಿಸಿದರು. ಕರಗ ಮಂಟಪವನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಿದ್ದ ದೃಶ್ಯ ಗಮನ ಸೆಳೆಯಿತು. ಜಲಸಿರಿ ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಮು. ಕೃಷ್ಣಮೂರ್ತಿ, ಬಿಜೆಪಿ ಮುಖಂಡರಾದ ಮುರಾರಿ ರಾಮು, ಎನ್.ಎನ್. ರಾಮಮೂರ್ತಿ, ವೈ.ಜಿ.ಮೂರ್ತಿ, ಸುರೇಂದ್ರಬಾಬು, ದಶರಥ, ಅನುಪಮಾ ಉಪಸ್ಥಿತರಿದ್ದರು.

‘ಕೊಂದವರು ಯಾರು’ ಆಂದೋಲನದ ಜ್ಯೋತಿ ಅನಂತ ಸುಬ್ಬರಾವ್, ಶಶಿಕಲಾ ಶೆಟ್ಟಿ, ಗೀತಾ ಸುರತ್ಕಲ್, ಮಮತಾ ಮತ್ತಿತರರು ಧರ್ಮಸ್ಥಳ ಗ್ರಾಮದ ಪಾಂಗಳದಲ್ಲಿ ದಿ.ಸೌಜನ್ಯಾ ತಾಯಿ ಕುಸುಮಾವತಿ ಅವರನ್ನು ಮಂಗಳವಾರ ಭೇಟಿಯಾದರು

‘ನೊಂದ ಮಹಿಳೆಯರಿಗೆ ನ್ಯಾಯ ಸಿಗಲಿ’

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ಈ ಹಿಂದೆ ನಡೆದಿವೆ ಎನ್ನಲಾದ ಕೊಲೆಗಳ ಹಾಗೂ ಅಸಹಜ ಸಾವು ಪ್ರಕರಣಗಳ ಸಮಗ್ರ ತನಿಖೆಗೆ ಒತ್ತಾಯಿಸಿ, ‘ಕೊಂದವರು ಯಾರು’ ಎಂಬ ಪ್ರಶ್ನೆ ಮುಂದಿಟ್ಟುಕೊಂಡು ಆಂದೋಲನ ನಡೆಸುತ್ತಿರುವ ಮಹಿಳಾ ಮುಖಂಡರು ಪಾಂಗಳದಲ್ಲಿ ದಿ.ಸೌಜನ್ಯಾ ತಾಯಿ ಕುಸುಮಾವತಿ ಅವರನ್ನು ಮಂಗಳವಾರ ಭೇಟಿ ಮಾಡಿದರು.

ಸುದ್ದಿಗಾರರ ಜೊತೆ ಮಾತನಾಡಿದ ಈ ಆಂದೋಲನದ ಮುಖಂಡರಾದ ಚಂಪಾ, ‘ನೊಂದ ಮಹಿಳೆಯರಿಗೆ ನ್ಯಾಯ ಸಿಗಬೇಕು ಎಂಬುದು ನಮ್ಮ ಆಂದೋಲನದ ಉದ್ದೇಶ’ ಎಂದರು.

‘ಎಸ್‌ಐಟಿಯನ್ನು ಮುಂದುವರಿಸಬೇಕು. ಈ ಬಗ್ಗೆ ಮುಖ್ಯಮಂತ್ರಿ ಅವರನ್ನು, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರನ್ನು ಭೇಟಿಯಾಗಿ ಮನವಿ ಸಲ್ಲಿಸಿದ್ದೇವೆ. ವೇದವಲ್ಲಿ, ಪದ್ಮಲತಾ, ಸೌಜನ್ಯಾ, ಆನೆ ಮಾವುತ ನಾರಾಯಣ ಮತ್ತು ಆತನ ಸಹೋದರಿ ಯಮುನಾ... ಮುಂತಾದವರ ಸಾವಿಗೆ ಕಾರಣರಾದವರು ಯಾರು ಎಂಬುದನ್ನು ಬೆಳಕಿಗೆ ತರಬೇಕು’ ಎಂದರು.

ಜ್ಯೋತಿ ಅನಂತ ಸುಬ್ಬರಾವ್, ಶಶಿಕಲಾ ಶೆಟ್ಟಿ, ಗೀತಾ ಸುರತ್ಕಲ್, ಮಮತಾ, ಸುರೇಖಾ, ಶೈಲಜಾ, ಮಲ್ಲಿಗೆ ಮತ್ತಿತರರು ತಂಡದಲ್ಲಿದ್ದರು.

ಸಂಕ್ಷಿಪ್ತ ಸುದ್ದಿ

ಪದಾಧಿಕಾರಿಗಳ ಆಯ್ಕೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೇಂದ್ರ ಕನ್ನಡ ಕ್ರಿಯಾ ಸಮಿತಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಗೌರವಾಧ್ಯಕ್ಷರಾಗಿ ವ.ಚ. ಚನ್ನೇಗೌಡ, ರಾಜ್ಯಾಧ್ಯಕ್ಷರಾಗಿ ಕೆ.ಎಸ್. ಪ್ರಭುಸ್ವಾಮಿ, ಕಾರ್ಯಾಧ್ಯಕ್ಷರಾಗಿ ಕೆ.ಎಸ್.ಎಂ. ಹುಸೇನ್, ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಎಚ್‌.ಕೆ. ಸುರೇಶ್, ಹಿರಿಯ ಉಪಾಧ್ಯಕ್ಷರಾಗಿ ಎಸ್.ಜೆ. ಮೇಟಿ, ಖಜಾಂಚಿಯಾಗಿ ಶಿವಕುಮಾರ್, ಜಂಟಿ ಕಾರ್ಯದರ್ಶಿಯಾಗಿ ವಿ. ರಮೇಶ್, ಎಸ್. ಮಂಜುನಾಥ್ ಹಾಗೂ ರೇಖಾ ಮಾದರ್ ಆಯ್ಕೆಯಾಗಿದ್ದಾರೆ.

30ಕ್ಕೆ ಉಚಿತ ಮಾರ್ಗದರ್ಶನ ಶಿಬಿರ

ಬೆಂಗಳೂರು: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯು ಕೆಎಎಸ್ ಮತ್ತು ಐಎಎಸ್, ಕಾಲೇಜು ಉಪನ್ಯಾಸಕರು, ಪ್ರಥಮ ಹಾಗೂ ದ್ವಿತೀಯ ದರ್ಜೆ ಸಹಾಯಕರು, ಗ್ರಾಮ ಲೆಕ್ಕಾಧಿಕಾರಿಗಳು ಮತ್ತು ಇತರೆ ಸರ್ಕಾರಿ ಹುದ್ದೆಗಳಿಗೆ ತಯಾರಿ ನಡೆಸುತ್ತಿರುವ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಗಳಿಗೆ ಇದೇ 30ರಂದು ಉಚಿತ ಮಾರ್ಗದರ್ಶನ ಶಿಬಿರ ಹಮ್ಮಿಕೊಂಡಿದೆ. ಬನಶಂಕರಿ 2ನೇ ಹಂತದ 9ನೇ ಮುಖ್ಯರಸ್ತೆಯಲ್ಲಿರುವ ಗಾಯಿತ್ರಿ ಭವನದಲ್ಲಿ ಈ ಶಿಬಿರ ನಡೆಯಲಿದೆ. ವಿಷಯ ತಜ್ಞರು ಈ ಶಿಬಿರದಲ್ಲಿ ಮಾರ್ಗದರ್ಶನ ಮಾಡಲಿದ್ದಾರೆ. ಆಸಕ್ತರು ಹೆಸರು ನೋಂದಾಯಿಸಿಕೊಳ್ಳಲು ಮೊ.ಸಂಖ್ಯೆ 99458 40620 ಅಥವಾ 90083 94666ಕ್ಕೆ ಸಂಪರ್ಕಿಸಬೇಕು ಎಂದು ಮಹಾಸಭೆ ಅಧ್ಯಕ್ಷ ಎಸ್. ರಘುನಾಥ್ ತಿಳಿಸಿದ್ದಾರೆ.

ಜಿಬಿಎ: ಲೋಕಾಯುಕ್ತ ಶೋಧ

ರಾಜರಾಜೇಶ್ವರಿನಗರ: ಕಾಮಗಾರಿ ನಡೆಸದೆ ಬಿಲ್ ಪಾವತಿಸಿದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ನಗರದ ವಿವಿಧ ವಾರ್ಡ್‌ಗಳಲ್ಲಿ ಕಾಮಗಾರಿ ನಡೆಸದೆಯೇ ₹250 ಕೋಟಿ ಬಿಲ್ ಪಾವತಿ ಮಾಡಿದ ಪ್ರಕರಣದ ಸಂಬಂಧ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಕಚೇರಿಯಲ್ಲಿ ಲೋಕಾಯುಕ್ತ ಪೊಲೀಸರು ಮಂಗಳವಾರ ಶೋಧ ನಡೆಸಿದ್ದಾರೆ.

'2019-20, 2020-21ರ ಅವಧಿಯಲ್ಲಿ ಕಾಮಗಾರಿಗಳನ್ನು ನಡೆಸದೆಯೇ ಬಿಲ್ ಪಾವತಿ ಮಾಡಲಾಗಿದೆ. ಈ ಬಗ್ಗೆ ತನಿಖೆ ನಡೆಸಿ' ಎಂದು 2021ರಲ್ಲಿ ಸಂಸದರಾಗಿದ್ದ ಡಿ.ಕೆ.ಸುರೇಶ್ ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಆ ದೂರಿನ ಅಡಿ ಪ್ರಕರಣ ದಾಖಲಿಸಿಕೊಂಡಿದ್ದ ಲೋಕಾಯುಕ್ತ ಪೊಲೀಸರು, ಒಟ್ಟು ₹148 ಕೋಟಿಯಷ್ಟು ಅಕ್ರಮ ನಡೆದಿರುವ ಬಗ್ಗೆ ಮಾಹಿತಿ ಕಲೆಹಾಕಿದ್ದರು.

ತನಿಖೆಯ ಮುಂದುವರೆದ ಭಾಗವಾಗಿ ಮಂಗಳವಾರ ಜಿಬಿಎ ಕೇಂದ್ರ ಕಚೇರಿಯಲ್ಲಿರುವ ಎಂಜಿನಿಯರಿಂಗ್ ವಿಭಾಗದ, ವಿವಿಧ ಎಂಜಿನಿಯರ್‌ಗಳ ಕಚೇರಿ ಮತ್ತು ನಿವೃತ್ತ ಎಂಜಿನಿಯರ್‌ಗಳ ಮನೆ ಸೇರಿ 13 ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ.

'ದೂರುದಾರರು ದೂರಿನ ಜತೆಯಲ್ಲಿಯೇ ಹಲವು ದಾಖಲೆ ಪತ್ರಗಳನ್ನು ನೀಡಿದ್ದರು. ಅವುಗಳನ್ನು ಮರು ಪರಿಶೀಲಿಸಲಾಗಿದೆ. 2019-21ರ ಎರಡು ಆರ್ಥಿಕ ವರ್ಷದಲ್ಲಿ, ರಾಜರಾಜೇಶ್ವರಿನಗರ ವ್ಯಾಪ್ತಿಯ ಆರು ವಾರ್ಡ್‌ಗಳಲ್ಲಿ ನಡೆದಿರುವ ಕಾಮಗಾರಿಗಳ ಮೂಲ ದಾಖಲೆ ಕಲೆ ಹಾಕಲಾಗುತ್ತಿದೆ' ಎಂದು ಲೋಕಾಯಕ್ತ ಎಸ್‌ಪಿ ಶಿವಪ್ರಕಾಶ್ ದೇವರಾಜು ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

'ಆ ಅವಧಿಯಲ್ಲಿ ನಡೆಸಲಾಗಿದೆ ಎನ್ನಲಾದ ರಸ್ತೆ ನಿರ್ಮಾಣ ಮತ್ತು ರಿಪೇರಿ, ಪಾದಚಾರಿ ಮಾರ್ಗ, ಚರಂಡಿ ನಿರ್ಮಾಣ ಹಾಗೂ ಚರಂಡಿಯ ಹೂಳೆತ್ತುವ ಕಾಮಗಾರಿಗಳ ಟೆಂಡರ್ ದಾಖಲೆ, ಸಲ್ಲಿಕೆಯಾದ ಟೆಂಡರ್‌ಗಳು, ಗುತ್ತಿಗೆ ಅವಾರ್ಡ್ ಪತ್ರಗಳು, ಕಾಮಗಾರಿ ಪ್ರಗತಿ ವರದಿಗಳು ಮತ್ತು ಬಿಲ್ ಪಾವತಿ ವಿವರಗಳಿಗೆ ಸಂಬಂಧಿಸಿದ ಮೂಲ ದಾಖಲೆ ಸಂಗ್ರಹಿಸಲಾಗಿದೆ' ಎಂದರು.

'ಈ ಪ್ರಕರಣದಲ್ಲಿ ಒಂಬತ್ತು ನೌಕರರು ಮತ್ತು ಅಧಿಕಾರಿಗಳ ವಿರುದ್ಧ ಆರೋಪವಿದೆ. ಕೆಲವರು ನಿವೃತ್ತರಾಗಿದ್ದು, ಅವರ ಮನೆಗಳಲ್ಲೂ ಶೋಧಕಾರ್ಯ ನಡೆಸಲಾಗಿದೆ. ಅಗತ್ಯ ಎನಿಸಿದರೆ ಅಧಿಕಾರಿಗಳನ್ನು ವಿಚಾರಣೆಗೆ ಕರೆಯಲಾಗುತ್ತದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಯಾರೆಲ್ಲರ ವಿರುದ್ಧ ಪ್ರಕರಣ, ಶೋಧ?

ದೊಡ್ಡಯ್ಯ, ಮುಖ್ಯ ಎಂಜಿನಿಯರ್, ಟಿವಿಸಿಸಿ, ಕೇಂದ್ರ ಕಚೇರಿ. ಸತೀಶ್, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್, ಕೇಂದ್ರ ಕಚೇರಿ. ಆರ್.ಆರ್.ನಗರ ವಲಯ ಕಚೇರಿ: ವಿಜಯ್ ಕುಮಾರ್, ಮುಖ್ಯ ಎಂಜಿನಿಯರ್. ಶಿಲ್ಪಾ, ಸಹಾಯಕ ಎಂಜಿನಿಯರ್. ಭಾರತಿ, ಹೆಚ್ಚುವರಿ ಕಾರ್ಯನಿರ್ವಾಹಕ ಎಂಜಿನಿಯರ್. ಬಸವರಾಜ್, ಕಾರ್ಯನಿರ್ವಾಹಕ ಎಂಜಿನಿಯರ್ ಮತ್ತು ಹೆಚ್ಚುವರಿ ಕಾರ್ಯ ನಿರ್ವಾಹಕ ಎಂಜಿನಿಯರ್. ಸಿದ್ದರಾಮಯ್ಯ, ಸಹಾಯಕ ಎಂಜಿನಿಯರ್. ಲಗ್ಗೆರೆ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಉಮೇಶ್.

ಶೋಧದ ವಿವರ

- ಲೋಕಾಯುಕ್ತ ಎಸ್‌ಪಿ ಶಿವಪ್ರಕಾಶ್ ದೇವರಾಜು ಮಾರ್ಗದರ್ಶನದಲ್ಲಿ ಐದು ತಂಡಗಳಿಂದ ಶೋಧ
- ಜಿಬಿಎಯ ತಾಂತ್ರಿಕ ಮತ್ತು ಜಾಗೃತಿ ಕೋಶದ (ಟಿವಿಸಿಸಿ) ಕಚೇರಿಯಲ್ಲಿ ಶೋಧ, 126 ಕಾಮಗಾರಿಗಳಿಗೆ ಸಂಬಂಧಿಸಿದ ಎಲ್ಲ ದಾಖಲೆ ಪತ್ರಗಳ ಪರಿಶೀಲನೆ
- ರಸ್ತೆ, ಪಾದಚಾರಿ ಮಾರ್ಗ, ಚರಂಡಿ ನಿರ್ಮಾಣ ಮತ್ತು ದುರಸ್ತಿ–ಹೂಳೆತ್ತುವ ಕಾಮಗಾರಿಗಳ ದಾಖಲೆ ಪರಿಶೀಲನೆ

ವಂಚನೆ: ₹1.60 ಕೋಟಿ ಮೌಲ್ಯದ ಚಿನ್ನದ ಗಟ್ಟಿ ವಶ

ತಂದೆ, ಮಗನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣ ವ್ಯಾಪಾರಿಯಿಂದ ಕೋಟ್ಯಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಪಡೆದು ವಂಚಿಸಿದ ಆರೋಪದ ಮೇಲೆ ತಂದೆ ಮತ್ತು ಮಗನನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿ, ಸುಮಾರು ₹1.60 ಕೋಟಿ ಮೌಲ್ಯದ ಚಿನ್ನದ ಗಟ್ಟಿ ವಶಪಡಿಸಿಕೊಂಡಿದ್ದಾರೆ.

ಶೇಷಾದ್ರಿಪುರದ ಬಳಿಯ ನೆಹರೂ ನಗರ ನಿವಾಸಿಗಳಾದ ರಾಜೇಂದ್ರ ಕುಮಾರ್ (63) ಮತ್ತು ಅವರ ಮಗ ಜೀವನ್ ಸಕಾರಿಯಾ (33) ಬಂಧಿತರು. ಆರೋಪಿಗಳು ಚಿನ್ನಾಭರಣ ವ್ಯಾಪಾರಿ ಹರ್ಷಿತ್ ಎಂಬವರಿಂದ ಹಂತ ಹಂತವಾಗಿ ಚಿನ್ನದ ಆಭರಣ ಪಡೆದು ಮಾರಾಟ ಮಾಡಿಕೊಡುವುದಾಗಿ ನಂಬಿಸಿ ಮೋಸ ಮಾಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ನಗರ್ತಪೇಟೆಯಲ್ಲಿ ಚಿನ್ನಾಭರಣ ಮಳಿಗೆ ಇಟ್ಟುಕೊಂಡಿರುವ ಹರ್ಷಿತ್ ಅವರಿಗೆ ಆರೋಪಿಗಳು ಹಲವು ವರ್ಷಗಳಿಂದ ಪರಿಚಿತರಾಗಿದ್ದರು. ಹೀಗಾಗಿ, ಹರ್ಷಿತ್ ಯಾವುದೇ ದಾಖಲೆ ಪತ್ರಗಳಿಲ್ಲದೆ ಆರೋಪಿಗಳಿಗೆ ಆಭರಣಗಳನ್ನು ಕೊಟ್ಟಿದ್ದರು. ಚಿನ್ನದ ದರ ದುಬಾರಿಯಾದ ಕಾರಣಕ್ಕೆ ನಂತರ ಆರೋಪಿಗಳು ಹಣ ಕೊಡದೆ ಹಾಗೂ ಆಭರಣಗಳನ್ನೂ ಹಿಂದಿರುಗಿಸದೆ ಮೋಸ ಮಾಡಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ರಾಜೇಂದ್ರ

ಜೀವನ್

ಆರೋಪಿಗಳು ಹರ್ಷಿತ್ ಅವರಿಂದ ಪಡೆದಿದ್ದ ಆಭರಣಗಳನ್ನು ಕರಗಿಸಿ ಚಿನ್ನದ ಗಟ್ಟಿ ಮಾಡಿದ್ದರು. ನೆಹರೂ ನಗರದ ಮನೆಯಲ್ಲಿ ಬಚ್ಚಿಟ್ಟಿದ್ದ 1 ಕೆ.ಜಿ. 300 ಗ್ರಾಂ ತೂಕದ ಚಿನ್ನದ ಗಟ್ಟಿಯನ್ನು ವಶಪಡಿಸಿಕೊಳ್ಳಲಾಗಿದೆ. ಬಂಧಿತರು ಇದೇ ರೀತಿ ಹಲವರಿಗೆ ವಂಚಿಸಿರುವುದು ವಿಚಾರಣೆಯಲ್ಲಿ ಗೊತ್ತಾಗಿದ್ದು, ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ. ವಂಚನೆಗೆ ಒಳಗಾದವರು ಈ ಬಗ್ಗೆ ದೂರು ನೀಡಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

₹1.07 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿ

ನಗರದಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡಿ, ಹಣ ಸಂಪಾದಿಸುತ್ತಿದ್ದ ವಿದೇಶಿ ಪ್ರಜೆಯನ್ನು ಆವಲಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಲೈಬೀರಿಯಾದ ಕೌಂದೆ ಪ್ರಿನ್ಸ್ (30) ಎಂಬವರನ್ನು ಬಂಧಿಸಿ, ₹1.07 ಕೋಟಿ ಮೌಲ್ಯದ 537 ಗ್ರಾಂ ಎಂಡಿಎಂಎ ಕ್ರಿಸ್ಟಲ್ ವಶಪಡಿಸಿಕೊಳ್ಳಲಾಗಿದೆ.

ಎಂಜಿನಿಯರಿಂಗ್ ಪದವೀಧರನಾಗಿರುವ ಆರೋಪಿ, ವ್ಯಾವಹಾರಿಕ ವೀಸಾದ ಅಡಿ ಭಾರತಕ್ಕೆ ಬಂದಿದ್ದು, ಸದ್ಯ ವೀಸಾ ಅವಧಿ ಮುಕ್ತಾಯಗೊಂಡಿದೆ. ಖಚಿತ ಮಾಹಿತಿ ಮೇರೆಗೆ ಪೊಲೀಸರು ಆರೋಪಿ ವಾಸವಿದ್ದ ಕಮ್ಮಸಂದ್ರ ವೃತ್ತದಲ್ಲಿರುವ ಸ್ಪ್ರಿಂಗ್‌ಫೀಲ್ಡ್ ಬಡಾವಣೆಯ ಆನಂದ ಕುಮಾರ್ ಅವರ ಬಾಡಿಗೆ ಮನೆ ಮೇಲೆ ದಾಳಿ ನಡೆಸಿದರು.

ದಾಳಿ ವೇಳೆ ವಿವಿಧ ಬಣ್ಣದ ಎಂಡಿಎಂಎ ಕ್ರಿಸ್ಟಲ್ ವಶಪಡಿಸಿಕೊಂಡು, ಆರೋಪಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಈತನ ವಿರುದ್ಧ ಹಿಂದೆ ಯಾವುದೇ ಪ್ರಕರಣ ದಾಖಲಾಗಿಲ್ಲ.

58 ಗ್ರಾಂ ಚಿನ್ನಾಭರಣ ದೋಚಿ ಯುವತಿ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೇಟಿಂಗ್ ಆ್ಯಪ್ ಮೂಲಕ ಪರಿಚಯವಾದ ಯುವಕನನ್ನು ಲಾಡ್ಜ್‌ಗೆ ಕರೆದೊಯ್ದ ಯುವತಿ, ಆತನ ಪ್ರಜ್ಞೆ ತಪ್ಪಿಸಿ 58 ಗ್ರಾಂ ಚಿನ್ನಾಭರಣ ದೋಚಿರುವ ಘಟನೆ ಇಂದಿರಾನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ತಮಿಳುನಾಡಿನ ಅವಿನಾಶ್ ಕುಮಾರ್ ಅವರ ದೂರಿನ ಮೇರೆಗೆ ಕವಿಪ್ರಿಯಾ ಎಂಬಾಕೆ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಬಂಧನಕ್ಕಾಗಿ ಶೋಧ ಕಾರ್ಯ ನಡೆಸುತ್ತಿದ್ದಾರೆ.

ಪೀಣ್ಯದ ನಾಗಸಂದ್ರದ ಪೇಯಿಂಗ್ ಗೆಸ್ಟ್ (ಪಿ.ಜಿ)ನಲ್ಲಿ ವಾಸವಾಗಿದ್ದ ಅವಿನಾಶ್, ನಗರದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಎರಡು ತಿಂಗಳ ಹಿಂದೆ 'ಹ್ಯಾಪನ್ ಆ್ಯಪ್' ಹೆಸರಿನ ಡೇಟಿಂಗ್ ಆ್ಯಪ್‌ನಲ್ಲಿ ಯುವತಿಯನ್ನು ಪರಿಚಯಿಸಿಕೊಂಡಿದ್ದರು. ಇಬ್ಬರೂ ಮೊಬೈಲ್ ಸಂಖ್ಯೆ ವಿನಿಮಯ ಮಾಡಿಕೊಂಡು ಮಾತನಾಡುತ್ತಿದ್ದರು. ನವೆಂಬರ್ 1ರಂದು ಇಂದಿರಾನಗರದ ರೆಸ್ಟೋರೆಂಟ್‌ವೊಂದರಲ್ಲಿ ಇಬ್ಬರು ಭೇಟಿಯಾಗಿ ಮದ್ಯದ ಪಾರ್ಟಿ ಮಾಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

'ಮದ್ಯ ಸೇವನೆ ಬಳಿಕ ಪಿಜಿಗೆ ಹೋಗಲು ಸಾಧ್ಯವಿಲ್ಲ ಎಂದು ಹೇಳಿದ್ದ ಯುವತಿ, ಲಾಡ್ಜ್ ಒಂದರಲ್ಲಿ ಕೊಠಡಿ ಬುಕ್ ಮಾಡಿದ್ದಳು. ಆನ್‌ಲೈನ್ ಮೂಲಕ ಊಟ ತರಿಸಿಕೊಂಡು ಇಬ್ಬರೂ ಸೇವಿಸಿದ್ದರು. ನಂತರ ಯುವತಿಯು ಕೊಟ್ಟ ನೀರು ಕುಡಿದ ಬಳಿಕ ದೂರುದಾರರಿಗೆ ಪ್ರಜ್ಞೆ ತಪ್ಪಿತ್ತು. ಬೆಳಗ್ಗೆ ಎದ್ದು ನೋಡಿದಾಗ ಚಿನ್ನದ ಸರ, ಚಿನ್ನದ ಕೈಬಳೆ ಸೇರಿದಂತೆ 58 ಗ್ರಾಂ ಚಿನ್ನಾಭರಣ, ₹10 ಸಾವಿರ ನಗದನ್ನು ದೋಚಿ ಪರಾರಿಯಾಗಿದ್ದಾಳೆ ಎಂದು ಅವಿನಾಶ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ' ಎಂದು ಪೊಲೀಸರು ಹೇಳಿದರು.

ಸಹೋದರನ ಆರೋಗ್ಯ ವಿಚಾರಿಸಿದ ರಜನಿಕಾಂತ್

ಪ್ರಜಾವಾಣಿ ವಾರ್ತೆ

ಆನೇಕಲ್: ಹೃದಯಾಘಾತದಿಂದ ಬೊಮ್ಮಸಂದ್ರದ ನಾರಾಯಣ ಹೃದಯಾಲಯದಲ್ಲಿ ಚಿಕಿತ್ಸೆ ಪಡೆಯುತ್ತಿರುವ ತಮ್ಮ ಸಹೋದರ ಸತ್ಯನಾರಾಯಣ ರಾವ್ ಯೋಗಕ್ಷೇಮ ವಿಚಾರಿಸಲು ನಟ ರಜನಿಕಾಂತ್ ಮಂಗಳವಾರ ಆಸ್ಪತ್ರೆಗೆ ಭೇಟಿ ನೀಡಿದ್ದರು.

ಪತ್ನಿ ಲತಾ, ಪುತ್ರಿಯರಾದ ಸೌಂದರ್ಯ ಮತ್ತು ಐಶ್ವರ್ಯ ಅವರು ರಜನಿಕಾಂತ್ ಜೊತೆಗಿದ್ದರು. ಚೆನ್ನೈನಿಂದ ನೇರವಾಗಿ ಆಸ್ಪತ್ರೆಗೆ ಬಂದ ಅವರು ಸಹೋದರನ ಆರೋಗ್ಯ, ಯೋಗಕ್ಷೇಮ ವಿಚಾರಿಸಿದ ನಂತರ ವೈದ್ಯರಿಂದ ಮಾಹಿತಿ ಪಡೆದರು.

ರಜನಿಕಾಂತ್ ಆಸ್ಪತ್ರೆಗೆ ಬಂದಿರುವ ವಿಷಯ ತಿಳಿಯುತ್ತಲೇ ನೂರಾರು ಅಭಿಮಾನಿಗಳು ತಮ್ಮ ಮೆಚ್ಚಿನ ನಟನನ್ನು ಕಣ್ತುಂಬಿಕೊಳ್ಳಲು ಆಸ್ಪತ್ರೆ ಎದುರು ಜಮಾಯಿಸಿದರು. ಫೋಟೊ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು.

ನಗರದ ರೈಲು ನಿಲ್ದಾಣದಲ್ಲಿ ಶ್ವಾನದಳದೊಂದಿಗೆ ಪೊಲೀಸ್ ಸಿಬ್ಬಂದಿ ತಪಾಸಣೆ ಮಾಡಿದರು ಪ್ರಜಾವಾಣಿ ಚಿತ್ರ

ನಗರದಾದ್ಯಂತ ಕಟ್ಟೆಚ್ಚರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೆಹಲಿಯಲ್ಲಿ ಕಾರು ಸ್ಫೋಟ ಸಂಭವಿಸಿದ್ದರಿಂದ ನಗರದಾದ್ಯಂತ ಕಟ್ಟೆಚ್ಚರ ವಹಿಸಲಾಗಿದ್ದು, ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ತಿಳಿಸಿದರು.

ಸೋಮವಾರ ಸಂಜೆಯಿಂದಲೇ ನಗರದಾದ್ಯಂತ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ತಪಾಸಣೆ ಕೈಗೊಂಡಿದ್ದಾರೆ. ನಗರದ ಮಾಲ್‌ಗಳು, ಲಾಡ್ಜ್, ಮೆಟ್ರೊ ನಿಲ್ದಾಣ, ರೈಲು ನಿಲ್ದಾಣ ಸೇರಿ ಪ್ರಮುಖ ಸ್ಥಳಗಳಲ್ಲಿ ಶೋಧ ನಡೆಸುತ್ತಿದ್ದು, ಯಾವುದೇ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಿಲ್ಲ. ಅಹಿತಕರ ಘಟನೆ ನಡೆಯದಂತೆ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಭಾರತೀಯ ವಿಜ್ಞಾನ ಸಂಸ್ಥೆ, ಇಸ್ರೊ, ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸೇರಿದಂತೆ ಸೂಕ್ಷ್ಮ ಪ್ರದೇಶಗಳಲ್ಲಿ ಭದ್ರತೆ ಹೆಚ್ಚಿಸಲಾಗಿದೆ. ಟೋಲ್‌ಗಳಲ್ಲಿ ಹಾಗೂ ಇತರೆಡೆ ನಗರ ಪ್ರವೇಶಿಸುವ ಎಲ್ಲ ವಾಹನಗಳನ್ನು ತಪಾಸಣೆ ಮಾಡಲಾಗುತ್ತಿದೆ.

ನಗರ ಕಮಿಷನರೇಟ್ ವ್ಯಾಪ್ತಿಯ 11 ವಿಭಾಗಗಳಲ್ಲೂ ನಿಗಾ ವಹಿಸಲು ಆಯಾ ವಿಭಾಗದ ಡಿಸಿಪಿಗಳಿಗೆ ನಿರ್ದೇಶನ ನೀಡಲಾಗಿದೆ. ಅನುಮಾನಾಸ್ಪದವಾಗಿ ಓಡಾಟ ನಡೆಸುವ ವ್ಯಕ್ತಿಗಳನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಲು ಸೂಚಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಉಪ ನೋಂದಣಾಧಿಕಾರಿ ಸೇರಿ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ದಾಖಲೆಗಳನ್ನು ಸೃಷ್ಟಿಸಿ ಅಕ್ರಮವಾಗಿ ನೋಂದಣಿ ಮಾಡಿಸಿ ನೂರಾರು ಗ್ರಾಹಕರಿಗೆ ವಂಚಿಸಿದ ಆರೋಪದಡಿ ಬಿಟಿಎಂ ಲೇಔಟ್‌ನ ಹಿಂದಿನ ಉಪ ನೋಂದಣಾಧಿಕಾರಿ ಸೇರಿ ಇಬ್ಬರು ಆರೋಪಿಗಳನ್ನು ಕೇಂದ್ರ ಅಪರಾಧ ವಿಭಾಗ(ಸಿಸಿಬಿ) ಪೊಲೀಸರು ಬಂಧಿಸಿದ್ದಾರೆ.

ಬಿಟಿಎಂ ಲೇಔಟ್‌ನ ಹಿಂದಿನ ಉಪ ನೋಂದಣಾಧಿಕಾರಿ ರೂಪಾ(40) ಮತ್ತು ಚಂದಾಪುರ ನಿವಾಸಿ, ನವಯುಗ ಪ್ರಾಪರ್ಟಿಸ್ ಪಾಲುದಾರ ನವೀನ್ ಕುಮಾರ್(36) ಎಂಬುವರನ್ನು ಬಂಧಿಸಲಾಗಿದೆ.

ಆರೋಪಿಗಳು, ಇತರೆ 38 ಮಂದಿ ಜತೆ ಸೇರಿಕೊಂಡು ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿ ಬೆರೆಟೇನ ಅಗ್ರಹಾರ ಗ್ರಾಮದ ಸರ್ವೆ ನಂಬರ್ 5/2ರಲ್ಲಿರುವ 40ಕ್ಕೂ ಹೆಚ್ಚು ನಿವೇಶನಗಳನ್ನು ಉಪ ನೋಂದಣಿ ಕಚೇರಿಯಲ್ಲಿ ನೋಂದಣಿ ಮಾಡಿಸಿದ್ದರು. ಈ ಪೈಕಿ ಎರಡು ನಿವೇಶನಗಳ ಮಾಲೀಕರು ಇಲ್ಲದಿದ್ದರೂ ನಕಲಿ ನೋಂದಣಿ ಆಗಿತ್ತು. ಈ ಸಂಬಂಧ 2022ರಲ್ಲಿ ದಾಖಲಾದ ದೂರಿನ ಮೇರೆಗೆ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಸಿಸಿಬಿ ಪೊಲೀಸರು ಮಾಹಿತಿ ನೀಡಿದರು.

ಆರೋಪಿಗಳಾದ ನವೀನ್, ವೆಂಕಟೇಶ್ ನಾಯ್ಡು ಮತ್ತು ಇತರರು ನವಯುಗ ಪ್ರಾಪರ್ಟಿಸ್ ಎಂಬ ಸಂಸ್ಥೆ ತೆರೆದು ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದಾರೆ. ಈ ಮಧ್ಯೆ ದೂರುದಾರ ಮುಕುಂದ ಎಂಬುವರಿಗೆ ಸೇರಿದ್ದ ಜಮೀನಿಗೆ ಸಂಬಂಧಿಸಿದಂತೆ ಆರೋಪಿಗಳು ನಕಲಿ ದಾಖಲೆಗಳನ್ನು ಸೃಷ್ಟಿಸಿ ಕ್ರಯ ಪತ್ರ ಮಾಡಿದ್ದರು. ಮುಕುಂದ ಅವರ ತಂದೆ ನಾಗರಾಜ್ ಶೆಟ್ಟಿ ಹೆಸರಿನಲ್ಲಿದ್ದ ಈ ಜಮೀನನ್ನು, ಗಣೇಶ್ ಎಂಬಾತ ತಾನೇ ನಾಗರಾಜ್ ಶೆಟ್ಟಿ ಪುತ್ರ ಎಂದು ಬಿಂಬಿಸಿ ಅಕ್ರಮವಾಗಿ ಕ್ರಯ ಪತ್ರ ಮಾಡಿಸಿದ್ದ. ಆದರೆ, ಅಸಲಿಗೆ ನಾಗರಾಜ್ ಶೆಟ್ಟಿ ಅವರಿಗೆ ಗಣೇಶ್ ಎಂಬ ಮಗ ಇರಲಿಲ್ಲ ಎಂಬುದು ತನಿಖೆ ವೇಳೆ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ತನ್ನ ಹೆಸರಿಗೆ ಕ್ರಯಪತ್ರ ಮಾಡಿಸಿಕೊಂಡಿದ್ದ ಜಮೀನನ್ನು ಗಣೇಶ್, ಬೇರೊಬ್ಬ ವ್ಯಕ್ತಿಗೆ ಮಾರಾಟ ಮಾಡಿದ್ದರು. ಆ ವ್ಯಕ್ತಿ ಜಮೀನಿನ ಸುತ್ತ ಕಾಂಪೌಂಡ್ ನಿರ್ಮಾಣಕ್ಕೆ ಮುಂದಾಗಿದ್ದರು. ಈ ವಿಚಾರ ತಿಳಿದ ಮುಕುಂದ, ಸ್ಥಳಕ್ಕೆ ತೆರಳಿ ಆ ವ್ಯಕ್ತಿಯನ್ನು ಪ್ರಶ್ನಿಸಿದ್ದಾರೆ. ಈ ವೇಳೆ, ಗಣೇಶ್ ಎಂಬುವರಿಂದ ಜಮೀನು ಖರೀದಿಸಿದ್ದಾಗಿ ಹೇಳಿದ್ದಾರೆ. ಮೋಸ ಹೋಗಿರುವುದನ್ನು ಅರಿತ ಮುಕುಂದ, 2022ರಲ್ಲಿ ನೀಡಿದ ದೂರಿನ ಮೇರೆಗೆ ಪರಪ್ಪನ ಅಗ್ರಹಾರ ಠಾಣೆಯಲ್ಲಿ 40 ಜನರ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಸುಮಾರು ಎರಡು ವರ್ಷಗಳ ನಂತರ ಈ ಪ್ರಕರಣ ಸಿಸಿಬಿಗೆ ವರ್ಗಾವಣೆಯಾಗಿದ್ದು, ತನಿಖೆ ಕೈಗೊಂಡ ಸಿಸಿಬಿ ಪೊಲೀಸರು ಇದೀಗ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಪ್ರಮುಖ ಆರೋಪಿಗಳನ್ನು ಬಂಧಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020

ಸಂ.: ಬೆಂಅಪ್ರಾ/ನಯೋಸ/CLU–280/3027/2025–26 ದಿನಾಂಕ: 11.11.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ** ವಲಯದಿಂದ **ವಾಣಿಜ್ಯ** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀ ವೆಂಕಟಸ್ವಾಮಿ ರೆಡ್ಡಿ #176, 3ನೇ ವಾರ್ಡ್ ಹಳೆ ಅಂಚೆ ಕಚೇರಿ ರಸ್ತೆ ದೊಮ್ಮಸಂದ್ರ ಬೆಂಗಳೂರು–562 125	ಆನೇಕಲ್	ಸರ್ಜಾಪುರ	ದೊಮ್ಮಸಂದ್ರ	255/2	3–20	ವ್ಯವಸಾಯ ವಲಯ	ವಾಣಿಜ್ಯ

ಷರಾ: ಪ್ರಶ್ನಿತ ಜಮೀನುಗಳಲ್ಲಿ ವಾಣಿಜ್ಯ ಚಟುವಟಿಕೆಯಿಂದಾಗಿ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ, ಸರ್ಕಾರಕ್ಕೆ ತೆರಿಗೆಗಳು ಸಂದಾಯವಾಗುತ್ತವೆ ಹಾಗೂ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತ, ಪ್ರಶ್ನಿತ ಜಮೀನುಗಳನ್ನು **'ವ್ಯವಸಾಯ ವಲಯ'** ದಿಂದ **'ವಾಣಿಜ್ಯ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಪುರಸಭಾ ಕಾರ್ಯಾಲಯ, ಬಿಡದಿ

ಬಿಡದಿ ಮುಖ್ಯ ರಸ್ತೆ, ಬಿಡದಿ, ರಾಮನಗರ– 562109
ಬೆಂಗಳೂರು ದಕ್ಷಿಣ ಜಿಲ್ಲೆ. ದೂರವಾಣಿ : 080–27282572
e-mail: itstaff_ulb_bidadi@yahoo.co.in / tmcbidadi@gmail.com
website: http://www.bidaditown.mrc.gov.in

ಸಂ: ಪುಕಾಬಿ/ತಾ.ವಿ/ಇ–ಟೆಂಡರ್/ಸಿಆರ್/18/2025–26 ದಿನಾಂಕ: 02.11.2025

ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ **ಪುರಸಭಾ ನಿಧಿ ಅನುದಾನದಡಿ** ಟೆಂಡರ್‌ನ್ನು ಆಹ್ವಾನಿಸಿದ್ದು, ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿರುವ ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟಲ್ **https://kppp.karnataka.gov.in** ಮುಖಾಂತರ ಕರೆದಿರುವ ಕಾಮಗಾರಿ ಟೆಂಡರ್‌ನಲ್ಲಿ ಭಾಗವಹಿಸಬಹುದು. ಮುಂದುವರೆದಂತೆ ಇಂಡೆಂಟ್ ನಂ ಹಾಗೂ ಅಂದಾಜು ಮೊತ್ತಗಳಂತೆ (1) DMA/2025-26/IND5098 (Other, **10.00 Lakhs** EMD- **25,000/-** ಗಳಿದ್ದು, ಕೆ.ಪಿ.ಪಿ.ಪಿ. ಪೋರ್ಟಲ್ **https://kppp.karnataka.gov.in** ಮುಖಾಂತರ ಡೌನ್‌ಲೋಡ್ ಮಾಡಿಕೊಂಡು **ದಿನಾಂಕ: 20.11.2025ರ ಸಂಜೆ 5:00 ಗಂಟೆ ಒಳಗಾಗಿ ಅಪ್‌ಲೋಡ್** ಮಾಡಬಹುದಾಗಿರುತ್ತದೆ. ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳನ್ನು ಈ ಕಛೇರಿಯ ತಾಂತ್ರಿಕ ಶಾಖೆಯಿಂದ ಪಡೆಯಬಹುದು.

ಸಹಿ/– **ಅಧ್ಯಕ್ಷರು** ಪುರಸಭೆ, ಬಿಡದಿ
DIPR/BSD/435/SA/2025-26
ಸಹಿ/– **ಮುಖ್ಯಾಧಿಕಾರಿ** ಪುರಸಭೆ, ಬಿಡದಿ

PUBLIC NOTICE

Publics are hereby informed that my client **M/s DS-Max Properties Pvt.Ltd.**, Rep; by its Authorized Signatory **Mr Shivashankar Chikkeri**, Having its Office at No. 1854, 17th Main, 30th 'B' Cross, HBR Layout, 1st Stage, 5th Block, Bengaluru- 43 and intend to enter into Absolute Sale Deed with Owner **Sri B.L.Keshav Kumar** s/o Sri B.V.Lakshminarayan is the absolute owner of converted land property bearing old Sy.No. **76**, New Sy. No. **76/2**, which measuring **3 acre 15.08 guntas**, situated at **Guvalakanahalli Village**, Kasaba Hobli, Chikkaballapura Taluk, Chikkaballapura District, in vide; Conversion Order dated **09/01/2024**, in Order No. **579155**, for residential use, issued by Deputy Commissioner, Chikkaballapura District and bounded on **East by:** Land of Sy.No. 77/1, **West by:** Land of Sy.No. 76/3, **North by:** Land of Sy.No. 76/1, **South by:** Land of Sy.No. 76/2 and Road and referred to as schedule property of **Item.No.I**.

WHEREAS Sri C.Narayanaswamy s/o Sri C.Chinnappa is the absolute owner of converted land property bearing old Sy.No. **76**, New Sy. No. **76/3**, which measuring **4 acres**, situated at **Guvalakanahalli Village**, Kasaba Hobli, Chikkaballapura Taluk, Chikkaballapura District, in vide; Conversion Order dated **09/01/2024**, in Order No. **579154**, for residential use, issued by Deputy Commissioner, Chikkaballapura District and bounded on **East by:** Land of Sy.No. 76/2, **West by:** Land of Sy.No. 75 & 144, **North by:** Land of Sy.No. 76/1, **South by:** Land of Sy.No. 76/2 and Road and referred to as schedule property of **Item.No.II**.

WHEREAS Sri G.N.Sreenivas s/o Sri G.Nanjundappa is the absolute owner of converted land property bearing Sy.No. **77/2**, which measuring **3 acres 27 guntas**, situated at **Guvalakanahalli Village**, Kasaba Hobli, Chikkaballapura Taluk, Chikkaballapura District, in vide; Conversion Order dated **06/05/2016**, in Order No. **ALN(CHI)SR:SAKALA450/2014-15**, for residential use, issued by Deputy Commissioner, Chikkaballapura District and bounded on **East by:** Land of Sy.No. 78, **West by:** Land of Sy.No. 77/1, **North by:** Land of Sy.No. 78, **South by:** Land of Sy.No. 74 and referred to as schedule property of **Item.No.III**.

WHEREAS **Sri B.V.Abhinandan** s/o Sri B.S.Venkatarathnam, **Sri Y.M.Manjunatha** s/o Sri Y.Muniyappa and **Sri H.Chikkasonnappa** s/o Thammanna are the absolute owner/s of converted land property bearing old Sy.No. **77/1**, New Sy.No. **77/4**, which measuring **3 acres 34 guntas** and exclusive of **03 guntas 'A'** kharab land, situated at **Guvalakanahalli Village**, Kasaba Hobli, Chikkaballapura Taluk, Chikkaballapura District, in vide; Conversion Order dated **06/05/2016**, in Order No. **ALN(CHI)SR:SAKALA465/2014-15**, for residential use, issued by Deputy Commissioner, Chikkaballapura District and bounded on **East by:** Land of Sy.No. 77/2, **West by:** Land of Sy.No. 76, **North by:** Land of Sy.No. 78, **South by:** Land of Sy.No. 74 and referred to as schedule property of **Item.No.IV**,

which total measuring of **Item.No.I to IV = 3 acre 15.08 guntas + 4 acres + 3 acre 27 guntas + 3 acre 34 guntas = 14 Acres 36.08 guntas** and exclusive of **03 guntas 'A'** kharab land in old Sy.No. **77/1**, New Sy.No. **77/4** and referred to as **"schedule property of Item.No.I to IV"**.

Any Person or Any Authorities or Any Promoters having any asserting right, title, interest and claims to oppose for Absolute Sale Deed of property and further having any manner of right, title, claims etc., and may lodge their objections, claims over the property along with relevant papers in support of their claims, right to the below address within **10** days from the date of this notice, if any objections fails to comply, my client shall take further steps and shall deemed for entering into Absolute Sale Deed of property.

LINGARAJ. S. NADAGOUDA., ADVOCATE
No.1854, 17th Main, 30th 'B' Cross, HBR Layout, 1st Stage, 5th Block, Bangalore - 560 043.
Mob : 96204 74780 , 94481 35970

KIRLOSKAR ELECTRIC COMPANY LIMITED

REGD OFFICE: No.19, 2nd Main Road, Peenya 1st Stage, Phase-1, Peenya, Bengaluru - 560 058.
Phone no: 080-28397256; **Fax:** 080-28396727;
Website: www.kirloskarelectric.com;
Email: investors@kirloskarelectric.com;
CIN: L31100KA1946PLC000415

EXTRACT OF STATEMENT OF UNAUDITED FINANCIAL RESULTS FOR THE QUARTER AND SIX MONTHS ENDED SEPTEMBER 30, 2025

(₹. in Lakhs)

Sr. No.	Particulars	Standalone					Consolidated				
		Quarter ended			Six Months ended	Year ended	Quarter ended			Six Months ended	Year ended
		Sept 30 2025	June 30 2025	Sept 30 2024	Sept 30 2025	March 31 2025	Sept 30 2025	June 30 2025	Sept 30 2024	Sept 30 2025	March 31 2025
		Unaudited	Unaudited	Unaudited	Unaudited	Audited	Unaudited	Unaudited	Unaudited	Unaudited	Audited
1	Total income from operations	14,920	13,320	16,351	28,240	55,075	15,320	13,320	16,351	28,640	55,157
2	Net Profit / (Loss) for the period (before Tax, Exceptional and/or Extraordinary items)	630	69	(472)	699	748	998	42	(486)	1,040	(596)
3	Net Profit / (Loss) for the period before tax (after Exceptional and/or Extraordinary Items)	630	69	523	699	1,743	998	42	509	1,040	399
4	Net Profit / (Loss) for the period after tax (after Exceptional and/or Extraordinary Items)	630	69	523	699	1,725	998	42	509	1,040	374
5	Total Comprehensive Income for the period [Comprising Profit / (Loss) for the period (after tax) and Other Comprehensive Income (after tax)]	625	74	3,351	699	4,592	993	47	3,337	1,040	3,241
6	Equity Share Capital	6,641	6,641	6,641	6,641	6,641	6,641	6,641	6,641	6,641	6,641
7	Reserves (excluding revaluation reserves as shown in the Balance Sheet of previous year)	NA	NA	NA	NA	NA	NA	NA	NA	NA	NA
8	Earnings Per Share (EPS) (Rs.)										
	(a) Basic EPS before extra ordinary items (not annualised)	0.95	0.10	0.79	1.05	2.60	1.50	0.06	0.77	1.57	0.56
	(b) Diluted EPS before extra ordinary items (not annualised)	0.95	0.10	0.79	1.05	2.60	1.50	0.06	0.77	1.57	0.56
	(c) Basic EPS after extra ordinary items (not annualised)	0.95	0.10	0.79	1.05	2.60	1.50	0.06	0.77	1.57	0.56
	(d) Diluted EPS after extra ordinary items (not annualised)	0.95	0.10	0.79	1.05	2.60	1.50	0.06	0.77	1.57	0.56

NOTE:

1. The above unaudited standalone and consolidated financial results have been reviewed by the Audit Committee and approved by the Board of Directors in their meeting held on November 11, 2025.
2. The standalone and consolidated financial results of the Company for the quarter and six months ended September 30, 2025 have been subject to limited review by its Statutory auditors.
3. The above is an extract of the detailed format of the unaudited financial results for the quarter and six months ended September 30, 2025 filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015 as amended. The full format of the unaudited financial results are available on the stock exchange websites (www.bseindia.com, www.nseindia.com) and also on the company's website (**http://www.kirloskarelectric.com/investors/investors-information/financial.html**) and can also be accessed by scanning the below quick response code.

Place : Bengaluru
Date : November 11, 2025

Vijay R Kirloskar
Executive Chairman



ಹೃದಯದ ರಿಪೇರಿ!

• ಅಮೃತೇಶ್ವರಿ ಬಿ.

ಶಸ್ತ್ರಚಿಕಿತ್ಸೆಯನ್ನು ಮಾಡಿ ಬೇಡವಾದ ಅಂಗಾಂಶಗಳನ್ನು ಕತ್ತರಿಸಿ, ಯಾವುದೇ ಅಂಗವನ್ನು ದುರಸ್ತಿ ಮಾಡಿ ಪುನಃ ಕಾರ್ಯಪ್ರವೃತ್ತಿಗೊಳಿಸುವುದು ಈಗ ಸರ್ವೇ ಸಾಮಾನ್ಯವಾದ ವೈದ್ಯಕೀಯ ವಿಧಾನ. ಅಂತೆಯೇ ಹೃದಯವೂ ಹುಷಾರು ತಪ್ಪಿದಾಗ, ಶಸ್ತ್ರಚಿಕಿತ್ಸೆಯಿಂದ ಸರಿ ಮಾಡುವುದು, ಆಂಜಿಯೋಪ್ಲಾಸ್ಟಿ, ಸ್ಟೆಂಟನ್ನು ತೂರಿಸುವುದು, ಪೇಸ್ ಮೇಕರನ್ನು ಹಾಕಿಸುವುದು, ಸ್ಟೆಮ್ ಸೆಲ್ ಥೆರಪಿ, ಜೀನ್ ಥೆರಪಿ ಮೊದಲಾದ ವಿಧಾನಗಳಿಂದ ಹೃದಯವನ್ನು ರಿಪೇರಿ ಮಾಡುವುದರ ಬಗ್ಗೆ ನಾವು ತಿಳಿದಿದ್ದೇವೆ. ಇವು ಯಾವುವೂ ಉಪಯೋಗಕ್ಕೆ ಬಾರದಾದಾಗ ಕೊನೆಯಲ್ಲಿ ಹೃದಯದ ದಾನಿಗಳಿದ್ದರೆ ಹೃದಯವನ್ನೇ ಬದಲಾಯಿಸಬಹುದು! ಇದು ತೀರಾ ಅಪರೂಪವಾಗಿ ಜರುಗುವಂತಹ ಉದಾಹರಣೆ. ಇವೆಲ್ಲಕ್ಕಿಂತಲೂ ಸುಲಭ ಹಾಗೂ ನವೀನವೆನಿಸುವ ತಂತ್ರವೊಂದನ್ನು ಪತ್ತೆ ಮಾಡಿದ್ದಾರೆ, ಅಮೆರಿಕದ ಮೌಂಟ್ ಸಿನಾಯ್ ಸ್ಕೂಲ್ ಆಫ್ ಮೆಡಿಸಿನ್ ಸಂಸ್ಥೆಯ ಸಂಶೋಧಕರಾದ ಡಾ. ಹೀನಾ ಚೌದ್ರಿ ಮತ್ತು ಸಂಗಡಿಗರು. ಅದುವೇ ಹೃದಯದ ಸ್ನಾಯುಗಳಲ್ಲಿರುವ ಕೋಶಗಳಿಗೆ ಮರುಜೀವ ಕೊಡುವುದು, ತನ್ಮೂಲಕ ಹೃದಯವನ್ನು ಪುನಶ್ಚೇತನಗೊಳಿಸುವುದು!

ಹೌದು. ಗರ್ಭಾವಸ್ಥೆಯಲ್ಲಿದ್ದಾಗ ಭ್ರೂಣವು ರೂಪುಗೊಳ್ಳುವ ಕಾರ್ಯವೈಖರಿಯೇ ವಿಭಿನ್ನ. ಇದು ಕೋಶಗಳ ವಿಭಜನೆಯ (ಸೆಲ್ ಡಿವಿಶನ್) ಮೂಲಕ ನಡೆಯುತ್ತದೆ. ಗರ್ಭಾವಸ್ಥೆಯಲ್ಲಿ ಕೋಶವಿಭಜನೆ ಅತ್ಯಂತ ಪ್ರಮುಖ ಹಾಗೂ ವಿಶಿಷ್ಟ ಪ್ರಕ್ರಿಯೆ. ಇಲ್ಲಿ ಪ್ರತಿಯೊಂದು ಅಂಗವೂ ಮೊದಲಿಗೆ ರೂಪುಗೊಂಡು ನಂತರ ಅದರ ಗಾತ್ರದಲ್ಲಿ ಬೆಳವಣಿಗೆಯಾಗುತ್ತದೆ. ಆಗ ಸಕ್ರಿಯವಾಗಿರುವ ಒಂದಿಷ್ಟು ಜೀನುಗಳು ಮಗು ಜನಿಸಿದ ನಂತರ ಸುಪ್ತಸ್ಥಿತಿಗೆ ತಲುಪಿಬಿಡುತ್ತವೆ. ಏಕೆಂದರೆ ನಂತರ ಬೇಕಿರುವುದು ಕೇವಲ ಗಾತ್ರದಲ್ಲಿ ದೊಡ್ಡದಾಗುವುದು ಮಾತ್ರ, ಅರ್ಥಾತ್ ಅಂಗಾಂಗಗಳ ಬೆಳವಣಿಗೆ ಮಾತ್ರ; ಇಲ್ಲಿ ಕೋಶವಿಭಜನೆಯ ಅವಶ್ಯಕತೆಯಿರುವುದಿಲ್ಲ. ಹಾಗಾಗಿ ಕೋಶವಿಭಜನೆಯಲ್ಲಿ ಪಾಲ್ಗೊಂಡಿದ್ದ ಜೀನುಗಳು ತಮ್ಮ ಕಾರ್ಯವನ್ನು ನಿಲ್ಲಿಸುತ್ತವೆ. ಅಂದರೆ ಕೋಶವಿಭಜನೆಯಾಗುವುದೂ ನಿಲ್ಲುತ್ತದೆ. ಈ ಜೀನನ್ನೇ ಮತ್ತೆ ಸಕ್ರಿಯಗೊಳಿಸಿಬಿಟ್ಟರೆ ಹೇಗೆ ? ಆಗ ಹೃದಯ ತನ್ನಷ್ಟಕ್ಕೆ ತಾನೇ ಪುನಶ್ಚೇತನಗೊಳ್ಳುತ್ತದೆ ಅಲ್ಲವೇ? ಇದು ಡಾ. ಚೌದ್ರಿ ಮತ್ತು ಸಂಗಡಿಗರ ಉಪಾಯ!

ಮನುಷ್ಯರಲ್ಲಿ, ಸ್ವಾಭಾವಿಕವಾಗಿರುವ 'ಸೈಕ್ಲಿನ್ ಎ2' (ಸಿಸಿಎನ್‌ಎ2) ಎನ್ನುವ ಜೀನ್, ಭ್ರೂಣದ ಜನನದ ನಂತರ ಕೆಲಸ ಮಾಡುವುದನ್ನು ನಿಲ್ಲಿಸುತ್ತದೆ. ವಾಸ್ತವವಾಗಿ ಈ ಜೀನ್ ಹೊಸ ಕೋಶಗಳನ್ನು ರೂಪಿಸಬಲ್ಲದು ಮತ್ತು ಕೋಶಗಳ ಸ್ಥಿರತೆಯನ್ನೂ ಕಾಪಾಡಿ ಅಂಗಾಂಗಗಳ ರೀಜನರೇಷನ್‌ನಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಕೋಶಗಳ ಚಕ್ರವನ್ನು ನಿಯಂತ್ರಿಸುತ್ತದೆ. ಡಿಎನ್‌ಎ ರೆಪ್ಲಿಕೇಷನ್- ಡಿಎನ್‌ಎ ಪ್ರತಿಕೃತಿಯನ್ನು ನಿಯಂತ್ರಿಸಿ, ಅದರ ರಚನೆಯಲ್ಲಿ ದೋಷವುಂಟಾದಾಗ ಅದನ್ನು ದುರಸ್ತಿಗೊಳಿಸಬಲ್ಲದಂತೆ. ಹಾಗಾಗಿ ಈ ಜೀನನ್ನು ಮರಳಿ ಕಾರ್ಯಪ್ರವೃತ್ತಿಗೊಳಿಸಿದರೆ ಹೃದಯದ ಕೋಶಗಳನ್ನೂ (ಕಾರ್ಡಿಯೋಮಯೋಸೈಟುಗಳು) ರೂಪಿಸುತ್ತದೆ. ಆಗ ಹೃದಯಾಘಾತದ ನಂತರವೂ ಹೃದಯ ಸ್ವತಃ ತಾನೇ ರಿಪೇರಿ ಮಾಡಿಕೊಳ್ಳುವಂತೆ ಮಾಡಬಹುದಂತೆ!

> ಶಸ್ತ್ರಚಿಕಿತ್ಸೆಯನ್ನು ಮಾಡಿಯೋ, ಬಾಹ್ಯ ಸಾಧನಗಳ ಸಹಾಯದಿಂದಲೋ ಹೃದಯವನ್ನು ಕೆಲ ದಿನಗಳವರೆಗೆ ಕಾರ್ಯನಿರ್ವಹಿಸುವಂತೆ ಮಾಡಬಹುದು. ಈಗ ಹೃದಯದಲ್ಲಿ ಕೋಶಗಳ ವಿಭಜನೆಯನ್ನೇ ಮರಳಿಸಬಹುದಾಗಿದೆ. ಇದರಿಂದ ರೋಗಲಕ್ಷಣಗಳನ್ನು ನಿಯಂತ್ರಿಸುವುದರ ಜತೆಗೆ ಹೃದಯವನ್ನೇ 'ರಿಪೇರಿ' ಮಾಡಬಹುದು!

ಇದನ್ನು ಅನ್ವೇಷಣೆ ಮಾಡಲು ಮಾನವ ಹೃದಯವನ್ನೇ ಹೋಲುವ ಹಂದಿಯ ಹೃದಯದಲ್ಲಿ ಹೃದಯಾಘಾತದ ನಂತರ ಸಿಸಿಎನ್‌ಎ2 ಜೀನುಗಳನ್ನು ಸಕ್ರಿಯಗೊಳಿಸಿದ್ದಾರೆ. ಆಗ ಹೃದಯದ ಕೋಶಗಳು ಮತ್ತೆ ರೂಪುಗೊಂಡು ಪುನಶ್ಚೇತನಗೊಂಡಿರುವುದನ್ನು ಖಾತರಿಪಡಿಸಿಕೊಂಡಿದ್ದಾರೆ! ನಂತರ ಮನುಷ್ಯನ ದೇಹಕ್ಕೆ ಸಮಂಜಸವಾದ ವಾಹಕ ವೈರಸ್ಸು (ಮಾರ್ಪಡಿಸಿದಂತಹ ಸೂಕ್ತ ವೈರಸ್ಸು) ಸುರಕ್ಷಿತವಾಗಿ ಹಾಗೂ ಪರಿಣಾಮಕಾರಿಯಾಗಿ ಮನುಷ್ಯನ ಹೃದಯದ ಕೋಶಗಳಲ್ಲಿ ಕೋಶವಿಭಜನೆಯನ್ನು ಪ್ರಚೋದಿಸಬಲ್ಲದು ಎನ್ನುವುದನ್ನು ಪತ್ತೆ ಮಾಡಿದ್ದಾರೆ. ಹೃದಯಸಂಬಂಧಿ ಕಾಯಿಲೆಗಳು ಮನುಷ್ಯನ ಸಾವಿಗೆ ಅತಿ ಮುಖ್ಯ ಕಾರಣವಾಗಿದೆ. ಒಮ್ಮೆ ಹೃದಯಾಘಾತವಾದರೆ ಹೃದಯಕೋಶಗಳು ದುರ್ಬಲವಾಗಿಬಿಡುತ್ತವೆ. ಈಗಾಗಲೇ ಇರುವ ವೈದ್ಯಕೀಯ ತಂತ್ರಗಳಿಂದ ಶಸ್ತ್ರಚಿಕಿತ್ಸೆಯನ್ನು ಮಾಡಿಯೋ, ಬಾಹ್ಯ ಸಾಧನಗಳ ಸಹಾಯದಿಂದಲೋ ಹೃದಯವನ್ನು ಸ್ವಲ್ಪ ಮಟ್ಟಿಗೆ ಕೆಲವು ದಿನಗಳವರೆಗೆ ಕಾರ್ಯನಿರ್ವಹಿಸುವಂತೆ ಮಾಡಬಹುದೇ ಹೊರತು ಹೊಸ ಕೋಶಗಳನ್ನು ಬೆಳೆಯುವಂತೆ ಮಾಡುವ ಯಾವುದೇ ತಂತ್ರಗಳು ಇರಲಿಲ್ಲ. ಹಾಗಾಗಿ, ಕಾರ್ಯ ನಿಲ್ಲಿಸಿ ಸುಪ್ತಸ್ಥಿತಿಯಲ್ಲಿರುವ ಹೃದಯದ ಕೋಶದಲ್ಲಿರುವ ಸಿಸಿಎನ್‌ಎ2 ಜೀನುಗಳನ್ನು ಎಚ್ಚರಿಸಿದರೆ ಬೆಳೆದ ಹೃದಯದಲ್ಲಿ ಕೋಶಗಳ ವಿಭಜನೆಯನ್ನು ಮರಳಿಸಬಹುದು. ಆ ಮೂಲಕ ರೋಗಲಕ್ಷಣಗಳನ್ನು ನಿಯಂತ್ರಿಸುವುದು ಮಾತ್ರವಲ್ಲದೆ, ಹೃದಯವನ್ನೇ ರಿಪೇರಿ ಮಾಡಬಹುದು ಎನ್ನುವುದು ಸಂಶೋಧಕರ ಆಶಯ.

ಇದಕ್ಕಾಗಿ ಸಂಶೋಧಕರು ಒಂದು ವಾಹಕ ವೈರಸ್ಸನ್ನು ಸಿದ್ಧಪಡಿಸಿ ಅದರೊಳಗೆ ಸಿಸಿಎನ್‌ಎ2 ಜೀನನ್ನು ಇರಿಸಿ ಒಂದು ಆರೋಗ್ಯವಾಗಿರುವ ವಯಸ್ಕ ದಾನಿ ಹೃದಯಕ್ಕೆ ಸೇರಿಸಿದ್ದಾರೆ. ನಂತರ ಹೃದಯಕೋಶಗಳು ಯಶಸ್ವಿಯಾಗಿ ವಿಭಜನೆಯಾಗುತ್ತಿರುವುದನ್ನು ನೋಡಿದ್ದಾರೆ. ಈ ಸಮಯದಲ್ಲಿ ಅವುಗಳ ಕಾರ್ಯ ಹಾಗೂ ರಚನೆಯಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಆಗದಿರುವುದನ್ನೂ ಗಮನಿಸಿದ್ದಾರೆ! ಮುಂದುವರಿದು ಈ ಪರೀಕ್ಷೆಗೆ 21, 41 ಹಾಗೂ 55 ವರ್ಷ ವಯಸ್ಸಿನ ದಾನಿ ಹೃದಯಗಳನ್ನು ಅಧ್ಯಯನ ಮಾಡಿದ್ದಾರೆ. 'ಸೈಕ್ಲಿನ್ ಎ2' ಚಿಕಿತ್ಸೆಯು ಹಾಗೂ 55 ವಯಸ್ಸಿನ ಹೃದಯಗಳಲ್ಲಿ ಸುಲಭವಾಗಿ ಹೃದಯಕೋಶಗಳ ವಿಭಜನೆಯನ್ನು ಪ್ರಚೋದಿಸಿತ್ತಂತೆ. ಆದರೆ 21 ವರ್ಷದ ಹೃದಯದಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಿಲ್ಲವಂತೆ. ಅರ್ಥಾತ್, ಎಳೆವಯಸ್ಸಿನಲ್ಲಿ ಹೃದಯದಲ್ಲಿ ಸಿಸಿಎನ್‌ಎ2 ಜೀನುಗಳನ್ನು ಎಚ್ಚರಿಸಲು ಯಾವುದೇ ಬಾಹ್ಯ ಪ್ರಚೋದನೆಯ ಸಹಾಯ ಬೇಕಿರದೆ ಹೃದಯಕ್ಕೆ ತನ್ನಷ್ಟಕ್ಕೆ ತಾನೇ ಪುನಶ್ಚೇತನಗೊಳ್ಳಬಲ್ಲಂತಹ ಸಾಮರ್ಥ್ಯ ಇರುತ್ತದೆ. ಅಂತೂ ವಯಸ್ಸಾದರೂ ಹೃದಯವನ್ನು ಮಾತ್ರ ಎಳೆಯದಾಗಿರಿಸಿಕೊಳ್ಳುವುದು ಸಾಧ್ಯವಾಯಿತು!

ಇನ್ನು, ಪುನಶ್ಚೇತನಗೊಂಡು ಹೊಸದಾಗಿ ಹುಟ್ಟಿರುವ ಕೋಶ(ಡಾಟರ್ ಸೆಲ್)ಗಳಲ್ಲಿಯೂ ಅವುಗಳ ಕಾರ್ಯಶಕ್ತಿಯನ್ನು ಸೂಚಿಸುವ ಪ್ರೋಟೀನ್‌ನ ರಚನೆ ಹಾಗೂ ಕ್ಯಾಲ್ಸಿಯಂ ಆಕ್ಟಿವಿಟಿಯು (ಸ್ನಾಯು ಸಂಕೋಚನ ಹಾಗೂ ಒಂದು ಕೋಶದಿಂದ ಮತ್ತೊಂದು ಕೋಶಕ್ಕೆ ಕ್ಯಾಲ್ಸಿಯಂ ಅಯಾನುಗಳ ಚಲನೆ, ಇನ್ನೂ ಮುಂತಾದ ಕಾರ್ಯಗಳನ್ನು ನಿರ್ವಹಿಸುವ ಒಂದು ಪ್ರಮುಖ ಪ್ರಕ್ರಿಯೆ) ಸಹಜವಾಗಿಯೇ ಇದ್ದುವಂತೆ. ಹಾಗಾಗಿ ಎಲ್ಲ ಪರೀಕ್ಷೆಗಳೂ ಸಿಸಿಎನ್‌ಎ2 ಜೀನ್ ಹೃದಯದ ದುರಸ್ತಿ ಮಾಡಬಲ್ಲದು ಎಂಬುದನ್ನು ಸಾಬೀತುಪಡಿಸಿವೆ. ಇನ್ನೂ ಮುಖ್ಯವಾಗಿ ಈ ವಿಧಾನವು, ಹೊಸದಾಗಿ ರೂಪುಗೊಂಡ ಕೋಶಗಳನ್ನು ಅಪಕ್ವಗೊಳಿಸುವುದಿಲ್ಲ ಹಾಗೂ ಕಾಯಿಲೆಗಳಿಂದಾಗುವಂತೆ ಅಸಹಜವಾಗಿ ಹೃದಯದ ಅಂಗಾಂಶಗಳು ದಪ್ಪವಾಗುವಂತೆ ಮಾಡುವುದೂ ಇಲ್ಲವಂತೆ!

ಹೃದಯಸ್ತಂಭನದ ನಂತರವೂ ಮತ್ತೆ ಹೊಸ ಹೃದಯವನ್ನು ಪಡೆದುಕೊಳ್ಳುವ ಶಕ್ತಿಯನ್ನು ನೀಡುವ ಭರವಸೆಗೆ ಕಾರಣವಾಗಿರುವ ಈ ಸಂಶೋಧನೆ ನಿಜಕ್ಕೂ ಸಂತಸದ ಸಂಗತಿ. ❖

ಕ್ವಾಂಟಮ್ ಕಂಪ್ಯೂಟಿಂಗ್‌ಗೆ ಹೊಸ ದಾರಿ ತೋರಿದ ವಿಜ್ಞಾನಿ

• ಸುಧೀರ ಎಚ್.ಎಸ್.

ನೊಬೆಲ್ ವಿಜ್ಞಾನಿಗಳು 5

ಭೌತಶಾಸ್ತ್ರದ ಜಗತ್ತಿನಲ್ಲಿ ಹೊಸ ಅಧ್ಯಾಯವನ್ನು ಬರೆದ ಮೂವರು ಅಸಾಮಾನ್ಯ ವಿಜ್ಞಾನಿಗಳಿಗೆ 2025ರ ನೊಬೆಲ್ ಪ್ರಶಸ್ತಿ ಲಭಿಸಿದೆ. ಅವರಲ್ಲಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ ಸಾಂಟಾ ಬಾರ್ಬರಾದ ಅಧ್ಯಾಪಕರೂ ಹಾಗೂ ಯೇಲ್ ವಿಶ್ವವಿದ್ಯಾಲಯದ ಫ್ರೆಡೆರಿಕ್ ಡಬ್ಲ್ಯೂ. ಬೈನೆಕೆ ಅಪ್ಲೈಡ್ ಫಿಸಿಕ್ಸ್ ಪ್ರಾಧ್ಯಾಪಕ ಎಮೆರಿಟಸ್ ಪ್ರೊ. ಮೈಕೆಲ್ ಎಚ್. ಡೆವೊರೆಟ್ ಕೂಡ ಒಬ್ಬರು. ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಜಾನ್ ಕ್ಲಾರ್ಕ್ ಮತ್ತು ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ಜಾನ್ ಎಂ. ಮಾರ್ಟಿನಿಸ್ ಅವರೊಂದಿಗೆ ಪ್ರೊ. ಡೆವೊರೆಟ್ ಅವರು 'ವಿದ್ಯುತ್ ಸರ್ಕ್ಯೂಟ್‌ನಲ್ಲಿ ಮ್ಯಾಕ್ರೋಸ್ಕೋಪಿಕ್ ಕ್ವಾಂಟಮ್ ಮೆಕ್ಯಾನಿಕಲ್ ಟನೆಲಿಂಗ್ ಮತ್ತು ಶಕ್ತಿಯ ಕ್ವಾಂಟೈಸೇಶನ್ ವಿದ್ಯಮಾನಗಳನ್ನು ಪ್ರದರ್ಶಿಸಿದ್ದಕ್ಕಾಗಿ' ಈ ಪ್ರತಿಷ್ಠಿತ ಗೌರವಕ್ಕೆ ಪಾತ್ರರಾಗಿದ್ದಾರೆ. ಅವರ ಸಂಶೋಧನೆಯು ಕ್ವಾಂಟಮ್ ಭೌತಶಾಸ್ತ್ರದ ಅತಿ ಕ್ಲಿಷ್ಟಕರ ತತ್ವಗಳನ್ನು ಪ್ರಾಯೋಗಿಕವಾಗಿ ನಿರೂಪಿಸಿ, ಕ್ವಾಂಟಮ್ ಕಂಪ್ಯೂಟಿಂಗ್‌ನ ಭವಿಷ್ಯಕ್ಕೆ ಭದ್ರ ಬುನಾದಿಯನ್ನು ಹಾಕಿದೆ.



ಚಿತ್ರಕೃಪೆ: ನೊಬೆಲ್ ಅಧಿಕೃತ ವೆಬ್‌ಸೈಟ್

ಪ್ರೊ. ಮೈಕೆಲ್ ಡೆವೊರೆಟ್

ಫ್ರಾನ್ಸ್‌ನಿಂದ ಅಮೆರಿಕದವರೆಗೆ

1953ರಲ್ಲಿ ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ಜನಿಸಿದ ಮೈಕೆಲ್ ಡೆವೊರೆಟ್, ತಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಅಲ್ಲಿಯ ಸಾರ್ವಜನಿಕ ಶಾಲೆಗಳಲ್ಲಿ ಪೂರ್ಣಗೊಳಿಸಿದರು. ಫ್ರೆಂಚ್ ಶಿಕ್ಷಣ ವ್ಯವಸ್ಥೆಯಲ್ಲಿ 'ಗ್ರ್ಯಾಂಡ್ಸ್ ಎಕೋಲ್ಸ್' ಮಾರ್ಗವನ್ನು ಅನುಸರಿಸಿ, ಎಂಜಿನಿಯರಿಂಗ್ ಅಧ್ಯಯನದಲ್ಲಿ ತೊಡಗಿದರು. ಓರ್ಸೆ ವಿಶ್ವವಿದ್ಯಾಲಯದಲ್ಲಿ ಆಣ್ವಿಕ ಭೌತಶಾಸ್ತ್ರದ ಪ್ರಯೋಗಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ನಂತರ, ಫ್ರಾನ್ಸ್‌ನ ಪರಮಾಣು ಶಕ್ತಿ ಆಯೋಗ(CEA)ದಲ್ಲಿ ಹೆಸರಾಂತ ಅನಾಟೋಲ್ ಅಬ್ರಹಾಂ ಅವರ ಮಾರ್ಗದರ್ಶನದಲ್ಲಿ ಘನ ಹೈಡ್ರೋಜನ್‌ನಲ್ಲಿ ನ್ಯೂಕ್ಲಿಯರ್ ಮ್ಯಾಗ್ನೆಟಿಕ್ ರೆಸೋನೆನ್ಸ್ ಕುರಿತು ಪಿಎಚ್.ಡಿ. ಮಾಡಿದರು.

ಪಿಎಚ್.ಡಿ. ನಂತರ ಅವರ ವೃತ್ತಿಜೀವನ ನಿರ್ಣಾಯಕ ತಿರುವನ್ನು ಪಡೆಯಿತು. 1982ರಿಂದ 1984ರವರೆಗೆ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಬರ್ಕ್ಲಿಯಲ್ಲಿ ಪ್ರೊ. ಜಾನ್ ಕ್ಲಾರ್ಕ್ ಅವರ ಪ್ರಯೋಗಾಲಯದಲ್ಲಿ ಸ್ನಾತಕೋತ್ತರ ಸಂಶೋಧಕರಾಗಿ ಕೆಲಸ ಮಾಡಿದರು. ಈ ಸಹಯೋಗವು 'ಮ್ಯಾಕ್ರೋಸ್ಕೋಪಿಕ್ ಕ್ವಾಂಟಮ್ ಮೆಕ್ಯಾನಿಕಲ್ ಟನೆಲಿಂಗ್' ಎಂಬ ಪ್ರವರ್ತಕ ಆವಿಷ್ಕಾರಕ್ಕೆ ಕಾರಣವಾಯಿತು. ಈ ಆವಿಷ್ಕಾರವು ಕ್ವಾಂಟಮ್ ಪರಿಣಾಮಗಳು ಅತಿಸೂಕ್ಷ್ಮ ಕಣಗಳಿಗೆ ಮಾತ್ರವಲ್ಲದೆ, ಕಣ್ಣಿಗೆ ಕಾಣುವಂತಹ ದೊಡ್ಡ ವಿದ್ಯುತ್ ಸರ್ಕ್ಯೂಟ್‌ಗಳಲ್ಲೂ ಅಸ್ತಿತ್ವದಲ್ಲಿವೆ ಎಂಬುದನ್ನೂ ದೃಢಪಡಿಸಿತು.

ಕ್ವಾಂಟ್ರಾನಿಕ್ಸ್–ಕ್ಯೂಬಿಟ್‌ಗಳು

ಬರ್ಕ್ಲಿಯಿಂದ ಫ್ರಾನ್ಸ್‌ಗೆ ಹಿಂದಿರುಗಿದ ನಂತರ, ಪ್ರೊ. ಡೆವೊರೆಟ್ ಅವರು ಡೇನಿಯಲ್ ಎಸ್ಟೀವ್ ಮತ್ತು ಕ್ರಿಶ್ಚಿಯನ್ ಉರ್ಬಿನಾ ಅವರೊಂದಿಗೆ 'ಕ್ವಾಂಟ್ರಾನಿಕ್ಸ್ ಲ್ಯಾಬ್' ಅನ್ನು ಸ್ಥಾಪಿಸಿದರು. ಇದು ಕ್ವಾಂಟಮ್ ಮೆಕ್ಯಾನಿಕ್ಸ್ ಮತ್ತು ಎಲೆಕ್ಟ್ರಾನಿಕ್ಸ್‌ನ ಸಮ್ಮಿಲನವಾಗಿತ್ತು. ಅವರು 1995ರಿಂದ 2002ರ ವರೆಗೆ ಫ್ರಾನ್ಸ್‌ನ ಸಿಇಎ-ಸಾಕ್ಲೆ(CEA-Saclay)ನಲ್ಲಿ ಸಂಶೋಧನಾ ನಿರ್ದೇಶಕರಾಗಿ, ಕ್ವಾಂಟ್ರಾನಿಕ್ಸ್ ಗುಂಪಿನ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ, ಅವರು ಸೂಪರ್‌ಕಂಡಕ್ಟಿಂಗ್ ಸರ್ಕ್ಯೂಟ್‌ಗಳನ್ನು 'ಕೃತಕ ಪರಮಾಣು'ಗಳಾಗಿ (artificial atoms) ಬಳಸುವ ಪರಿಕಲ್ಪನೆಯನ್ನು ಮತ್ತಷ್ಟು ಅಭಿವೃದ್ಧಿಪಡಿಸಿದರು. ಈ ಕೃತಕ ಪರಮಾಣುಗಳೇ ಇಂದು ಕ್ವಾಂಟಮ್ ಕಂಪ್ಯೂಟರ್‌ಗಳ ಮೂಲಭೂತ ಘಟಕಗಳಾದ 'ಸೂಪರ್‌ಕಂಡಕ್ಟಿಂಗ್ ಕ್ಯೂಬಿಟ್‌ಗಳಿಗೆ'' (superconducting qubits) ಅಡಿಪಾಯ. ಅವರ ತಂಡವು ಅಭಿವೃದ್ಧಿಪಡಿಸಿದ 'ಕ್ವಾಂಟ್ರೋನಿಯಂ' (quantronium) ಎಂಬ ಕ್ಯೂಬಿಟ್, ಕ್ವಾಂಟಮ್ ಕಂಪ್ಯೂಟಿಂಗ್ ಕ್ಷೇತ್ರದಲ್ಲಿ ಒಂದು ಮಹತ್ವದ ಮೈಲಿಗಲ್ಲು.

2002ರಿಂದ 2024ರ ವರೆಗೆ ಯೇಲ್ ವಿಶ್ವವಿದ್ಯಾಲಯದಲ್ಲಿ ಅನ್ವಯಿಕ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಪ್ರೊ. ಡೆವೊರೆಟ್, ನಂತರ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ ಸಾಂಟಾ ಬಾರ್ಬರಾದ ಅಧ್ಯಾಪಕರಾಗಿ ಸೇರಿಕೊಂಡರು. ಪ್ರಸ್ತುತ, ಅವರು ತಂತ್ರಜ್ಞಾನದ ಮುಂಚೂಣಿಯಲ್ಲಿರುವ ಗೂಗಲ್ ಕ್ವಾಂಟಮ್ ಎಐ Google Quantum AI)ನಲ್ಲಿ ಮುಖ್ಯ ವಿಜ್ಞಾನಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕೊಡುಗೆಗಳು: ಪ್ರೊ. ಡೆವೊರೆಟ್ ಅವರ ಸಂಶೋಧನೆಯು ಹಲವು ನವೀನ ತಂತ್ರಜ್ಞಾನಗಳಿಗೆ ಕಾರಣವಾಗಿದೆ. ಅವರ ಸಂಶೋಧನೆಯು ಕ್ಯೂಬಿಟ್‌ಗಳನ್ನು ನಿರ್ಮಿಸಲು ಮತ್ತು ನಿಯಂತ್ರಿಸಲು ಅಗತ್ಯವಾದ ಮೂಲಭೂತ ತತ್ವಗಳನ್ನು ಒದಗಿಸಿದೆ; ಇದು ಕ್ವಾಂಟಮ್ ಕಂಪ್ಯೂಟರ್‌ಗಳ ಕಾರ್ಯಸಾಧ್ಯತೆಗೆ ನಿರ್ಣಾಯಕವಾಗಿದೆ. ಅದಲ್ಲದೆ ಸೂಪರ್‌ಕಂಡಕ್ಟಿಂಗ್ ಕ್ವಾಂಟಮ್ ಇಂಟರ್‌ಫೆರೆನ್ಸ್ ಡಿವೈಸಸ್ (SQUIDs) ಎಂಬ ಅತಿ ಸೂಕ್ಷ್ಮ ಕಾಂತೀಯ ಸಂವೇದಕಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅವರ 'ಸಿಂಗಲ್-ಎಲೆಕ್ಟ್ರಾನ್ ಪಂಪ್' ಸಾಧನವು ವಿದ್ಯುತ್ ಪ್ರವಾಹದ ಮೂಲಭೂತ ಮಾನದಂಡವನ್ನು ಸ್ಥಾಪಿಸಲು ಸಹಾಯ ಮಾಡಿದ್ದು, 'ಮೆಟ್ರೋಲಾಜಿಕಲ್ ಟ್ರಯಾಂಗಲ್' ಅನ್ನು ಮುಚ್ಚುವಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗಿದೆ. ಸೂಪರ್‌ಕಂಡಕ್ಟಿಂಗ್ ಸರ್ಕ್ಯೂಟ್‌ಗಳನ್ನು ತಯಾರಿಸಲು ಅಗತ್ಯವಾದ ಇ-ಬೀಮ್ ನಾನೋಲಿಥೋಗ್ರಫಿ (e-beam nanolithography) ತಂತ್ರಗಳಲ್ಲಿ ಇವರ ಕೊಡುಗೆ ಇದೆ.

ಪ್ರಶಸ್ತಿಗಳು: ನೊಬೆಲ್ ಪ್ರಶಸ್ತಿಯ ಜೊತೆಗೆ ಪ್ರೊಫೆಸರ್ ಡೆವೊರೆಟ್ ಹಲವು ಪ್ರತಿಷ್ಠಿತ ಗೌರವಗಳನ್ನು ಪಡೆದಿದ್ದಾರೆ. 1991ರಲ್ಲಿ ಫ್ರಿಟ್ಜ್ ಲಂಡನ್ ಮೆಮೋರಿಯಲ್ ಪ್ರಶಸ್ತಿ (Fritz London Memorial Award)); 1999ರಲ್ಲಿ ಅಮೆರಿಕನ್ ಫಿಸಿಕಲ್ ಸೊಸೈಟಿಯ ಜೋಸೆಫ್ ಎಫ್. ಕೀತ್ಲಿ ಅವಾರ್ಡ್ ಫಾರ್ ಅಡ್ವಾನ್ಸಸ್ ಇನ್ ಮೆಷರ್‌ಮೆಂಟ್ ಸೈನ್ಸ್ (Joseph F. Keithley Award for Advances in Measurement Science); 2006ರಲ್ಲಿ IEEE ಡೇವಿಡ್ ಸಾರ್ನಾಫ್ ಪ್ರಶಸ್ತಿ (IEEE David Sarnoff Award); ಹಾಗು 2021ರಲ್ಲಿ ಮಿಸಿಯಸ್ ಕ್ವಾಂಟಮ್ ಪ್ರಶಸ್ತಿ (Micius Quantum Prize) – ಹೀಗೆ ಹಲವು ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಪ್ರೊ. ಮೈಕೆಲ್ ಡೆವೊರೆಟ್ ಅವರ ಸಂಶೋಧನೆಯು ಕ್ವಾಂಟಮ್ ಭೌತಶಾಸ್ತ್ರದ ಮೂಲಭೂತ ತಿಳಿವಳಿಕೆಯನ್ನು ಆಳಗೊಳಿಸಿದೆ ಮತ್ತು ಕ್ವಾಂಟಮ್ ಕಂಪ್ಯೂಟರ್‌ಗಳಂತಹ ಮುಂದಿನ ಪೀಳಿಗೆಯ ತಂತ್ರಜ್ಞಾನಗಳ ಅಭಿವೃದ್ಧಿಗೆ ನಿರ್ಣಾಯಕ ಕೊಡುಗೆ ನೀಡಿದೆ. ಅವರ ಈ ನೊಬೆಲ್ ಪ್ರಶಸ್ತಿ ವಿಜ್ಞಾನಜಗತ್ತಿಗೆ ಅಪ್ರತಿಮ ಸ್ಫೂರ್ತಿಯಾಗಿದೆ. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ವಿದ್ಯುಚ್ಛಕ್ತಿ

4) ವಿದ್ಯುತ್ ಮಂಡಲದಲ್ಲಿ ವಿಭವಾಂತರ, ವಿದ್ಯುತ್ಪ್ರವಾಹ ಮತ್ತು ರೋಧದ ನಡುವಿನ ಸಂಬಂಧವನ್ನು ತೋರಿಸುವ ಸರಿಯಾದ ಸೂತ್ರ

ಎ) $I = \frac{R}{V}$ ಬಿ) $I = VR$

ಸಿ) $V = \frac{I}{R}$ ಡಿ) $R = \frac{V}{I}$

ಉತ್ತರ:– (ಡಿ) $R = \frac{V}{I}$

5) ವಿದ್ಯುತ್ ವಿಭವಾಂತರದ SI ಏಕಮಾನ ಯಾವುದು?

ಎ) ವೋಲ್ಟ್ ಬಿ) ಆಂಪೀರ್

ಸಿ) ಓಮ್ ಡಿ) ಕೋಲಾಮ್

ಉತ್ತರ:– (ಎ) ವೋಲ್ಟ್

6) ವಿದ್ಯುತ್ ಮಂಡಲದಲ್ಲಿ ಸರಣಿ ಕ್ರಮದಲ್ಲಿ ಜೋಡಿಸಿರುವ ಸಾಧನ ....

ಎ) ವೋಲ್ಟ್ ಮೀಟರ್ ಬಿ) ದಂಡ ಕಾಂತ

ಸಿ) ಟರ್ಬೈನ್ ಡಿ) ಅಮ್ಮೀಟರ್

ಉತ್ತರ:– (ಡಿ) ಅಮ್ಮೀಟರ್

7) ಒಂದು ವಿದ್ಯುತ್ ಮಂಡಲದಲ್ಲಿ ವಿದ್ಯುತ್ ಪ್ರವಾಹದ ದಿಕ್ಕನ್ನು ಹಿಮ್ಮುಖಗೊಳಿಸುವ ಸಾಧನ

ಎ) ಅಮ್ಮೀಟರ್ ಬಿ) ದಿಕ್ಪರಿವರ್ತಕ

ಸಿ) ವೋಲ್ಟಮೀಟರ್ ಡಿ) ಗ್ಯಾಲ್ವನೋಮೀಟರ್

ಉತ್ತರ: (ಬಿ) ದಿಕ್ಪರಿವರ್ತಕ

8) ರೋಧಶೀಲತೆಯ SI ಏಕಮಾನ ಯಾವುದು?

ಎ) ಓಮ್ ಬಿ) ವೋಲ್ಟ್

ಸಿ) ವ್ಯಾಟ್ ಡಿ) ಓಮ್ ಮೀಟರ್

ಉತ್ತರ:–(ಡಿ) ಓಮ್ ಮೀಟರ್

9) ಈ ಕೆಳಗಿನ ಕೋಷ್ಟಕವನ್ನು ಗಮನಿಸಿ

ವಸ್ತು	ರೋಧಶೀಲತೆ
K	2.63×10^{-8}
L	5.20×10^{-8}
M	1.60×10^{-8}
N	2.63×10^{-8}

ಈ ವಸ್ತುಗಳಲ್ಲಿ ಅತ್ಯುತ್ತಮವಾದ ವಿದ್ಯುತ್ ವಾಹಕ ಯಾವುದು?

ಎ) N ಬಿ) M

ಸಿ) K ಡಿ) L

ಉತ್ತರ:– (ಬಿ) M

10) ವಿದ್ಯುನ್ಮಂಡಲದಲ್ಲಿ ಫ್ಯೂಸ್‌ನ ಕಾರ್ಯ..................

ಎ) ವಿದ್ಯುತ್ ಪ್ರವಾಹದ ದಿಕ್ಕನ್ನು ಹಿಮ್ಮುಖಗೊಳಿಸುತ್ತದೆ.

ಬಿ) ವಿದ್ಯುತ್ ಪ್ರವಾಹದ ಚಲನೆಯ ದಿಕ್ಕನ್ನು ತೋರಿಸುತ್ತದೆ.

ಸಿ) ವಿಭವಾಂತರವನ್ನು ಅಳೆಯುತ್ತದೆ.

ಡಿ) ವಿದ್ಯುತ್ ಉಪಕರಣವನ್ನು ರಕ್ಷಿಸುತ್ತದೆ.

ಉತ್ತರ:–(ಡಿ) ವಿದ್ಯುತ್ ಉಪಕರಣವನ್ನು ರಕ್ಷಿಸುತ್ತದೆ.

11) ವಿದ್ಯುತ್ ಮಂಡಲದಲ್ಲಿ ರೋಧವನ್ನು ಬದಲಾಯಿಸಲು ಬಳಸುವ ಸಾಧನ..................

ಎ) ವೋಲ್ಟ್ ಮೀಟರ್ ಬಿ) ಆಮ್ಮೀಟರ್

ಸಿ) ಗ್ಯಾಲ್ವನೋಮೀತರ್ ಡಿ) ರಿಯೋಸ್ಟಾಟ್

ಉತ್ತರ:– (ಡಿ) ರಿಯೋಸ್ಟಾಟ್

36) 20Ω ರೋಧ ಹೊಂದಿರುವ ಒಂದು ವಿದ್ಯುತ್ ದೀಪ ಮತ್ತು 4Ω ರೋಧವನ್ನು ಹೊಂದಿರುವ ವಾಹಕವನ್ನು 6Vನ ಶುಷ್ಕಕೋಶಕ್ಕೆ ಜೋಡಿಸಿದೆ. (ಚಿತ್ರದಲ್ಲಿರುವಂತೆ). (a) ಮಂಡಲದ ಒಟ್ಟು ರೋಧ (b) ಮಂಡಲದಲ್ಲಿ ಪ್ರವಹಿಸುತ್ತಿರುವ ವಿದ್ಯುತ್ ಪ್ರವಾಹ ಮತ್ತು (c) ವಿದ್ಯುತ್ ದೀಪ ಹಾಗೂ ವಾಹಕದ ತುದಿಗಳ ನಡುವಿನ ವಿಭವಾಂತರವನ್ನು ಕಂಡುಹಿಡಿಯಿರಿ.



ಉತ್ತರ:– ವಿದ್ಯುತ್ ದೀಪದ ರೋಧ, $R_1 = 20\Omega$

ಸರಣಿಯಲ್ಲಿ ಜೋಡಿಸಿದ ವಾಹಕದ ರೋಧ, $R_2 = 4\Omega$

ಮಂಡಲದಲ್ಲಿನ ಒಟ್ಟು ರೋಧ $Rs = R_1 + R_2$

$$Rs = 20\ \Omega + 4\ \Omega = 24\ \Omega.$$

ಶುಷ್ಕಕೋಶದ ಎರಡು ಧ್ರುವಗಳ ನಡುವಿನ ವಿಭವಾಂತರ

$$V = 6\ V$$

ಈಗ, ಓಮ್‌ನ ನಿಯಮದಂತೆ ಮಂಡಲದಲ್ಲಿ ಪ್ರವಹಿಸುತ್ತಿರುವ ಒಟ್ಟು ವಿದ್ಯುತ್ ಪ್ರವಾಹ,

$$I = \frac{V}{R_s} = \frac{6V}{24\Omega} = 0.25\ A.$$

ಓಮ್‌ನ ನಿಯಮವನ್ನು ಪ್ರತ್ಯೇಕವಾಗಿ ವಿದ್ಯುತ್ ದೀಪ ಮತ್ತು ವಾಹಕಗಳಿಗೆ ಪ್ರತ್ಯೇಕವಾಗಿ ಅನ್ವಯಿಸಿದಾಗ, ನಮಗೆ ವಿದ್ಯುತ್ ದೀಪದ ತುದಿಗಳ ನಡುವಿನ ವಿಭವಾಂತರ ದೊರೆಯುತ್ತದೆ.

$$V_1 = 20\ \Omega \times 0.25\ A$$
$$= 5\ V;$$

ಮತ್ತು ವಾಹಕದ ತುದಿಗಳ ನಡುವಿನ ವಿಭವಾಂತರ

$$V_2 = 4\ \Omega \times 0.25\ A$$
$$= 1\ V.$$

ಒಂದು ವೇಳೆ ನಾವು ಸರಣಿ ಜೋಡಣೆಯಲ್ಲಿರುವ ವಿದ್ಯುತ್ ದೀಪ ಮತ್ತು ವಾಹಕಗಳನ್ನು ಒಂದು ಸಮಾನ ರೋಧಕದಿಂದ ಬದಲಾಯಿಸಿದಾಗ ಅದರ ರೋಧವು ಎಷ್ಟೆಂದರೆ ಶುಷ್ಕಕೋಶಗಳ ತುದಿಗಳ ನಡುವಿನ ವಿಭವಾಂತರ 6V ಮಂಡಲದಲ್ಲಿ 0.25 A ವಿದ್ಯುತ್ ಪ್ರವಾಹವನ್ನು ಉಂಟುಮಾಡಬೇಕು. ಅಂತಹ ಸಮಾನ ರೋಧಕ R ನ ರೋಧವು

$$R = \frac{V}{I} = \frac{6V}{0.25A}$$
$$= 24\ \Omega.$$

ಇದು ಸರಣಿಕ್ರಮ ಮಂಡಲದ ಒಟ್ಟು ರೋಧ. ಇದು ಮಂಡಲದಲ್ಲಿರುವ ಎರಡು ರೋಧಕಗಳ ರೋಧದ ಒಟ್ಟು ಮೊತ್ತ.

37) ಚಿತ್ರದಲ್ಲಿ ನೀಡಲಾದ ಮಂಡಲ ರೇಖಾಚಿತ್ರದಲ್ಲಿ, ರೋಧಕಗಳಾದ R_1 , R_2 ಮತ್ತು R_3 ಗಳ ಬೆಲೆಗಳು ಕ್ರಮವಾಗಿ 5Ω, 10Ω, 30Ω ಗಳಾಗಿದ್ದು ಅವುಗಳನ್ನು 12V ವಿಭವಾಂತರವಿರುವ ಒಂದು ಶುಷ್ಕಕೋಶಕ್ಕೆ ಜೋಡಿಸಿದೆ. ಹಾಗಾದರೆ (a) ಪ್ರತಿಯೊಂದು ರೋಧಕದ ಮೂಲಕ ಪ್ರವಹಿಸುತ್ತಿರುವ ವಿದ್ಯುತ್ ಪ್ರವಾಹ (b) ಮಂಡಲದಲ್ಲಿನ ಒಟ್ಟು ವಿದ್ಯುತ್ ಪ್ರವಾಹ ಮತ್ತು (c) ಮಂಡಲದ ಒಟ್ಟು ರೋಧವನ್ನು ಲೆಕ್ಕಮಾಡಿರಿ.



(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

CHEMISTRY

Coordination Compound

25. Explain the violet colour of the complex $[Ti(H_2O)_6]^{3+}$ on the basis of crystal field theory

Ans: The stability of a coordination compound in a solution is the degree/level of association among the species involved in a state of equilibrium. Stability can also be written quantitatively in terms of formation constant or stability constant.

$M+3L \Leftrightarrow L_3$

Stability constant , β =

$$\frac{[ML_3]}{[M][L]^3}$$

The greater the value of β, the stronger the metal-ligand bond is

Factors responsible for the stability of a complex:

(1) Charge on the central metal ion – the bigger the charge, the more stable the complex is.

(2) Nature of ligand – chelating ligand produces a more stable complex.

(3) The basic strength of ligand – the more basic a ligand, the more stable its complex.

26. What is meant by the chelate effect? Give an example.

Ans: When a polydentate or a bidentate ligand fastens itself to a metal ion in such a way that it assumes the shape of a ring, the metal-ligand bond becomes more stable. These rings are called chelate rings.

From here, we can infer that complexes with chelate rings are more stable than complexes without the rings. This phenomenon is termed the chelate effect.

$Ni^{2+} (aq)+6NH_3 \leftrightarrow [Ni(NH_3)_6]^{2+} (aq)$

$\log\beta = 7.99$

$Ni^{2+} (aq) + 3en\ (aq) \leftrightarrow [Ni(en)_3]^{2+} (aq)$

$\log\beta = 18.1$ (more stable)



27. Discuss briefly giving an example in each case of the role of coordination compounds in: (i) biological systems, (ii) medicinal chemistry, (iii) analytical chemistry and (iv) extraction /metallurgy of metals.

Ans: (i) **Role in biological systems:** In the body of animals, there are several very important coordination compounds. For example, haemoglobin is a coordination compound of iron. In plants, chlorophyll pigment is a coordination compound of magnesium.

(ii) Role in medicinal chemistry: So many coordinate compounds are used for curing purposes. For example, a coordination compound of platinum, cis-platin, is used to check the growth of tumours.

(iii) Role in analytical chemistry: Determination of the hardness of the water.

(iv) Role in metallurgy or extraction: During metal extraction from ores, complexes are formed. For example, gold combines with cyanide ions in an aqueous solution. Gold is then extracted from this complex using zinc.

28. How many ions are produced from the complex $Co(NH_3)_6Cl_2$ in the solution?

(i) 6 **(ii) 4**

(iii) 3 **(iv) 2**

Ans: (iii) 3

Expln:-

The given complex $[Co(NH_3)_6]Cl_2$ ionises to give **three ions**, viz one $[Co(NH_3)_6]^+$ and two Cl^- ions.

29.Which of the following ions has the highest magnetic moment value?

(i) $[Cr(H_2O)_6]^{3+}$ **(ii) $[Fe(H_2O)_6]^{2+}$**

(iii) $[Zn(H_2O)_6]^{2+}$

Ans: (i) $[Cr(H_2O)_6]^{3+}$

number of unpaired electrons, n = 3

Magnetic moment, μ =

$$\sqrt{3(3+2)} = \sqrt{3(3+2)} = \sqrt{15} \approx 4BM$$

(ii) $[Fe(H_2O)_6]^{2+}$

number of unpaired electrons, n = 4

Magnetic moment, μ =

$$\sqrt{4(4+2)} = \sqrt{4(4+2)} = \sqrt{24} \approx 5\ BM$$

(iii) $[Zn(H_2O)_6]^2$

n = 0

Thus, $[Fe(H_2O)_6]^{2+}$ has the highest magnetic moment value.

30. What is the oxidation number of cobalt in $K[Co(CO)_4]$?

Ans: $K[Co(CO)_4] = K^+[Co(CO)_4]^-$

We know,

=> x + 0 = – 1 [Where x is the oxidation number.]

x = -1

31. Amongst the following, the most stable complex is (i) $[Fe(H_2O)_6]^{3+}$ (ii) $[Fe(NH_3)_6]^{3+}$ (iii) $[Fe(C_2O_4)_3]^{3-}$ (iv) $[FeCl_6]^{3-}$

Ans: In all the cases, Fe has an oxidation state of +3. $(C_2O_4)_3$ is a bidentate chelating ligand, and it forms chelating rings. Thus, (iii) is the most stable complex.

32. What will be the correct order for the wavelengths of absorption in the visible region for the following: $[Ni(NO_2)_6]^{4-}$, $[Ni(NH_3)_6]^{2+}$, $[Ni(H_2O)_6]^{2+}$?

Ans: All of the complexes have the same metal ion, so the energy absorption depends upon the CFSE values of the ligands. *(Contd)*

ಆಧಾರ ಕಳೆದುಕೊಂಡವರ ಅಳಲು

ಮೃತರಲ್ಲಿ ಅಂಗಡಿ ಮಾಲೀಕ, ಟ್ಯಾಕ್ಸಿ ಚಾಲಕ, ಕಂಡಕ್ಟರ್



ಸ್ಫೋಟ ಸಂಭವಿಸಿದ ಸ್ಥಳದಲ್ಲಿದ್ದ ವಾಹನಗಳ ಅವಶೇಷಗಳನ್ನು ಪೊಲೀಸರು ಸಂಗ್ರಹಿಸಿದರು — ಪಿಟಿಐ ಚಿತ್ರ

ನವದೆಹಲಿ/ ಮುಜಫ್ಫರನಗರ (ಪಿಟಿಐ): ದೆಹಲಿಯ ಕೆಂಪುಕೋಟೆ ಬಳಿ ಸೋಮವಾರ ನಡೆದ ಪ್ರಬಲ ಸ್ಫೋಟದಲ್ಲಿ ಮೃತಪಟ್ಟವರ ಪೈಕಿ ಯುವಕರು, ಟ್ಯಾಕ್ಸಿ ಚಾಲಕರು, ಕಂಡಕ್ಟರ್ ಸೇರಿದ್ದಾರೆ. ಕುಟುಂಬಕ್ಕೆ ಜೀವನಾಧಾರ ಆಗಿದ್ದವರನ್ನು ಕಳೆದುಕೊಂಡ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟುವಂತಿತ್ತು.

ದುರ್ಘಟನೆಯಲ್ಲಿ ಮೃತಪಟ್ಟವರ ಪೈಕಿ ಉತ್ತರ ಪ್ರದೇಶದ ಶಾಮ್ಲಿ ಜಿಲ್ಲೆಯ ಜಿಂಝಾನಾ ಪಟ್ಟಣದ 18 ವರ್ಷದ ಯುವಕ ನೌಮನ್ ಅನ್ಸಾರಿ ಸೇರಿದ್ದಾರೆ. ತನ್ನ ಅಂಗಡಿಗೆ ಸೌಂದರ್ಯವರ್ಧಕಗಳನ್ನು ಖರೀದಿಸಲು ಅವರು ತನ್ನ ಸೋದರ ಸಂಬಂಧಿ ಅಮನ್ ಜತೆ ದೆಹಲಿಗೆ ಬಂದಿದ್ದರು.

ಅನ್ಸಾರಿ ಕುಟುಂಬದ ಆಧಾರ ಸ್ತಂಭವಾಗಿದ್ದ ನೌಮನ್ ದುರ್ಘಟನೆಯ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಅಮನ್ ಗಾಯಗೊಂಡಿದ್ದು, ದೆಹಲಿಯ ಲೋಕನಾಯಕ್ ಜೈ ಪ್ರಕಾಶ್ ನಾರಾಯಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅವರ ಚಿಕ್ಕಪ್ಪ ಫರ್ಕನ್ ತಿಳಿಸಿದರು.

ಟ್ಯಾಕ್ಸಿ ಚಾಲಕ ಪಂಕಜ್ ಸಾಹ್ನಿ (22) ಅವರೂ ಸ್ಫೋಟದಲ್ಲಿ ಮೃತಪಟ್ಟಿದ್ದಾರೆ. 'ಪಂಕಜ್ ಮೂರು ವರ್ಷಗಳಿಂದ ಟ್ಯಾಕ್ಸಿ ಓಡಿಸುತ್ತಿದ್ದರು' ಎಂದು ಮಾಹಿತಿ ನೀಡಿದ ಅವರ ಸಂಬಂಧಿ ರಾಮದೇವ್ ಅವರು, 'ದುರ್ಘಟನೆಯಲ್ಲಿ ಆತನ ತಲೆಯ ಹಿಂಭಾಗ ಛಿದ್ರವಾಗಿದೆ ಮತ್ತು ಆತ ಓಡಿಸುತ್ತಿದ್ದ ವ್ಯಾಗನಾರ್ ಕಾರು ಪೂರ್ಣವಾಗಿ ಹಾನಿಗೊಂಡಿದೆ ಎಂದು ಪೊಲೀಸರು ತಿಳಿಸಿದ್ದಾರೆ' ಎಂದು ಕಣ್ಣೀರು ಹಾಕಿದರು.

ಉತ್ತರ ಪ್ರದೇಶದ ಅಮ್ರೋಹಾ ಜಿಲ್ಲೆಯವರಾದ, ದೆಹಲಿ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ (ಡಿಟಿಸಿ) ಕಂಡಕ್ಟರ್ ಅಶೋಕ್ ಕುಮಾರ್ (34) ಅವರೂ ಈ ಸ್ಫೋಟದಲ್ಲಿ ಮೃತಪಟ್ಟಿದ್ದಾರೆ.

ಮೃತರ ದೇಹಗಳನ್ನು ಪಡೆಯಲು ಅವರ ಸಂಬಂಧಿಕರು ಆಸ್ಪತ್ರೆಯ ಶವಾಗಾರದ ಬಳಿ ಕಾಯುತ್ತ, ರೋದಿಸುತ್ತಿದ್ದ ದೃಶ್ಯಗಳು ಮನ ಕಲಕುವಂತಿದ್ದವು.

ಮೃತರ ಸಂಬಂಧಿಯೊಬ್ಬರ ಆಕ್ರಂದನ

'ಸಾವನ್ನು ಹತ್ತಿರದಲ್ಲೇ ನೋಡಿದ್ದೇವೆ'

ನವದೆಹಲಿ (ಪಿಟಿಐ): ರಸ್ತೆಯಲ್ಲಿ ಎಲ್ಲೆಡೆ ರಕ್ತ ಚಲ್ಲಿತ್ತು, ಹಲವರು ಅಲ್ಲಿಯೇ ಬಿದ್ದಿದ್ದರು, ಕೆಲವರಿಗೆ ರಕ್ತಸ್ರಾವವಾಗುತ್ತಿತ್ತು, ಇನ್ನೂ ಕೆಲವರು ಏಳಲಾಗದ ಸ್ಥಿತಿಯಲ್ಲಿದ್ದರು...

ಕೆಂಪುಕೋಟೆ ಬಳಿ ಸೋಮವಾರ ಸಂಜೆ ಸಂಭವಿಸಿದ ಭಾರಿ ಸ್ಫೋಟದಲ್ಲಿ ಗಾಯಗೊಂಡು, ಲೋಕನಾಯಕ್ ಜೈ ಪ್ರಕಾಶ್ ನಾರಾಯಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರಾಮ್ ಪ್ರತಾಪ್ ಅವರು ಘಟನೆ ಮತ್ತು ಆನಂತರದ ದೃಶ್ಯಗಳನ್ನು ನೆನಪು ಮಾಡಿಕೊಂಡಿದ್ದು ಹೀಗೆ.

'ನಾವು ಸಾವನ್ನು ಹತ್ತಿರದಿಂದ ನೋಡಿದ್ದೇವೆ' ಎಂದು ಹೇಳುವಾಗ ಅವರು ಕಂಪಿಸುತ್ತಿದ್ದರು. ಅವರ ಬಲಗೈಗೆ ತೀವ್ರ ಗಾಯವಾಗಿದ್ದು, ಬಿಗಿಯಾಗಿ ಬ್ಯಾಂಡೇಜ್ ಸುತ್ತಲಾಗಿತ್ತು.

ದುರ್ಘಟನೆಯಲ್ಲಿ ಬದುಕುಳಿದಿರುವ ಪ್ರತಾಪ್ ಅವರು, ಬಿಹಾರ ಮೂಲದವರು. ಅವರು ರಸ್ತೆಬದಿಯ ತಿನಿಸು ಅಂಗಡಿಯೊಂದರ ಮಾಲೀಕರು. 'ಕೆಲ ಗ್ರಾಹಕರಿದ್ದರು, ನಾನು ಅಂಗಡಿ ಮುಚ್ಚಲು ತಯಾರಿ ನಡೆಸುತ್ತಿದ್ದೆ. ಅಷ್ಟರಲ್ಲಿ ಭಾರಿ ಶಬ್ದದೊಂದಿಗೆ ಸ್ಫೋಟ ಸಂಭವಿಸಿತು. ಇದರಿಂದ ದೊಡ್ಡ ಪ್ರಮಾಣದಲ್ಲಿ ಹೊಗೆ ಆವರಿಸಿತು. ಜನರ ಕಿರುಚಾಟ, ಚೀರಾಟ ಮುಗಿಲು ಮುಟ್ಟುವಂತಿತ್ತು' ಎಂದು ಅವರು ವಿವರಿಸಿದರು.

'ಕೆಲ ಕ್ಷಣ ಏನೂ ಕೇಳಿಸಲಿಲ್ಲ'

'ಸ್ಫೋಟದ ತೀವ್ರತೆ ಎಷ್ಟಿತ್ತು ಎಂದರೆ, ಕೆಲ ಕ್ಷಣ ನನಗೆ ಏನೂ ಕೇಳಿಸಲಿಲ್ಲ. ಗಾಜಿನ ಚೂರುಗಳು ಮೈಮೇಲೆಲ್ಲ ಬಿದ್ದಿದ್ದವು. ನನ್ನ ಕೈಯಿಂದಲೂ ತೀವ್ರವಾಗಿ ರಕ್ತಸ್ರಾವವಾಗುತ್ತಿತ್ತು. ಅದರ ಅರಿವು ನನಗೆ ಆಗ ಆಗಲಿಲ್ಲ. ಅಬ್ಬಾ... ಸಾವನ್ನು ಅಷ್ಟು ಹತ್ತಿರದಿಂದ ನೋಡಿದೆ' ಎಂದು ಅವರು ಕಣ್ಣೀರಾದರು.

ಸ್ಫೋಟ ಸಂಭವಿಸಿದಾಗ ಕೆಲ ಮೀಟರ್‌ಗಳಷ್ಟು ದೂರದಲ್ಲಿದ್ದ ಪ್ರತಾಪ್ ಅವರ ಸಂಬಂಧಿಕರೊಬ್ಬರು, 'ಸ್ಫೋಟ ಆದಾಗ ಬೆಂಕಿ, ದಟ್ಟವಾದ ಹೊಗೆ ಆವರಿಸಿತು. ಎಲ್ಲವೂ ಕತ್ತಲಾಯಿತು. ನನಗೆ ದಿಕ್ಕೇ ತೋಚದಂತಾಯಿತು. ಸಹೋದರನ ಪತ್ತೆಯೂ ಸಾಧ್ಯವಾಗಲಿಲ್ಲ' ಎಂದು ಹೇಳಿದರು.

'ಜನರು ಹೆಸರುಗಳನ್ನು ಕೂಗುತ್ತಿದ್ದರು, ಅಳುತ್ತಿದ್ದರು, ಚೀರುತ್ತಿದ್ದರು. ಸಂಬಂಧಿಕರು, ಸ್ನೇಹಿತರಿಗಾಗಿ ಹುಡುಕುತ್ತಿದ್ದರು. ಯಾರು ಜೀವಂತ ಇದ್ದಾರೆ ಎಂಬುದು ಯಾರಿಗೂ ತಿಳಿದಿರಲಿಲ್ಲ' ಎಂದು ಅವರು ಮೆಲುಕುಹಾಕಿದರು.

'ಬಟ್ಟೆಯೆಲ್ಲ ರಕ್ತಮಯ'

ದುರ್ಘಟನೆಯಲ್ಲಿ ತೀವ್ರ ಗಾಯಗೊಂಡಿರುವ ಟ್ಯಾಂಕರ್ ಮಾಲೀಕ ವಿಜೇಂದರ್ ಯಾದವ್ ಅವರು ಭಯಾನಕ ದೃಶ್ಯಗಳನ್ನು ವಿವರಿಸುವಾಗ ಭಯದಿಂದ ನಡುಗುತ್ತಿದ್ದರು. 'ಪ್ರತಾಪ್ ಅವರ ಅಂಗಡಿ ಸಮೀಪ ನೀರಿನ ಟ್ಯಾಂಕರ್ ಅನ್ನು ನಿಲ್ಲಿಸಿದೆ. ಅಷ್ಟರಲ್ಲಿಯೇ ಭಾರಿ ಸ್ಫೋಟ ಸಂಭವಿಸಿತು. ಅದು ನನ್ನನ್ನು ನೆಲಕ್ಕೆ ಅಪ್ಪಳಿಸುವಂತೆ ಮಾಡಿತು. ಮೇಲೆದ್ದಾಗ ಬಟ್ಟೆ ಪೂರ್ಣ ರಕ್ತಮಯವಾಗಿತ್ತು. ರಸ್ತೆಯಲ್ಲಿ ಗಾಜಿನ ಪುಡಿಗಳು ಮತ್ತು ಹಲವರ ದೇಹದ ತುಂಡುಗಳು ಬಿದ್ದಿದ್ದವು. ಕೆಲವರು ಚೀರುತ್ತಾ ಓಡುತ್ತಿದ್ದರು' ಎಂದು ನೆನಪು ಮಾಡಿಕೊಂಡರು.

'ಈ ದುರ್ಘಟನೆಯಲ್ಲಿ ನಾನು ಹೇಗೆ ಬದುಕುಳಿದಿರುವೆ ಎಂಬುದೇ ಆಶ್ಚರ್ಯವಾಗಿದೆ' ಎಂದರು ಅವರು. ಅವರ ಕೈ ಮತ್ತು ತಲೆಗೆ ತೀವ್ರ ಗಾಯವಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ.

ಬಿಹಾರದವರಾದ ಯಾದವ್ ಎರಡು ದಶಕಕ್ಕೂ ಹೆಚ್ಚು ಕಾಲದಿಂದ ಟ್ಯಾಂಕರ್ ಮೂಲಕ ನೀರು ಸರಬರಾಜು ವ್ಯವಹಾರ ನಡೆಸುತ್ತಿದ್ದಾರೆ. ಅವರಿಗೆ ಪತ್ನಿ ಮತ್ತು ನಾಲ್ವರು ಮಕ್ಕಳಿದ್ದಾರೆ.

ಮೃತಪಟ್ಟವರ ಕುಟುಂಬಸ್ಥರು ರೋದಿಸುತ್ತಿರುವ ದೃಶ್ಯ

ಶಿಕ್ಷಿತ ವೃತ್ತಿಪರರನ್ನು ಬಳಸಿ ಉಗ್ರ ಕೃತ್ಯಕ್ಕೆ ಪಿತೂರಿ

'ವೈಟ್‌ಕಾಲರ್ ಭಯೋತ್ಪಾದನೆ'

• ಜುಲ್ಫಿಕರ್ ಮಜೀದ್

ವಾಹನಗಳ ಅವಶೇಷಗಳನ್ನು ಪೊಲೀಸರು ಸಂಗ್ರಹಿಸಿದ ವಿಧಿವಿಜ್ಞಾನ ತಜ್ಞರ ತಂಡ — ಪಿಟಿಐ ಚಿತ್ರ

ಶ್ರೀನಗರ: ಕೆಂಪುಕೋಟೆ ಸಮೀಪ ಸಂಭವಿಸಿದ ಸ್ಫೋಟ ಮತ್ತು ಹರಿಯಾಣದ ಫರೀದಾಬಾದ್‌ನ ಎರಡು ಬಾಡಿಗೆ ಮನೆಗಳಲ್ಲಿ ಪತ್ತೆಯಾದ 2,900 ಕೆ.ಜಿ. ಬಾಂಬ್ ತಯಾರಿಕಾ ಸಾಮಗ್ರಿಗಳು, ಭಾರತದಲ್ಲಿ 'ವೈಟ್‌ಕಾಲರ್ ಭಯೋತ್ಪಾದನೆ' ಸಕ್ರಿಯವಾಗಿರುವುದರ ಸೂಚಕವಾಗಿದ್ದು, ಇದು ದೇಶದ ಭದ್ರತೆಗೆ ಹೊಸ ಸವಾಲೊಡ್ಡಿದೆ.

ಸಂಚಿನಲ್ಲಿ ಮೂವರು ಕಾಶ್ಮೀರಿ ವೈದ್ಯರು ಭಾಗಿಯಾಗಿರುವ ಶಂಕೆ ವ್ಯಕ್ತವಾಗಿದ್ದು, ಅವರ ನಿವಾಸದಲ್ಲಿ ಸಿಕ್ಕ ಸ್ಫೋಟಕಗಳನ್ನು ಕಂಡು ತನಿಖಾಧಿಕಾರಿಗಳು ಬೆಚ್ಚಿಬಿದ್ದಿದ್ದಾರೆ ಮತ್ತು ದೇಶದ ಭಯೋತ್ಪಾದನೆ ಮಾದರಿಯಲ್ಲಿ ಆಘಾತಕಾರಿ ಮಾರ್ಪಾಡಾಗಿರುವುದನ್ನು ಬಯಲಿಗೆಳೆದಿದ್ದಾರೆ.

ಕೆಂಪುಕೋಟೆ ಸಮೀಪ ಸಂಭವಿಸಿದ ಸ್ಫೋಟದಲ್ಲಿ ಪತ್ತೆಯಾದ ರಾಸಾಯನಿಕಗಳಿಗೂ, ಫರೀದಾಬಾದ್‌ನಲ್ಲಿ ಪತ್ತೆಯಾದ ಅಮೋನಿಯಂ ನೈಟ್ರೇಟ್‌ಗೂ ಹೋಲಿಕೆ ಇರುವುದು ವಿಧಿವಿಜ್ಞಾನ ಪರೀಕ್ಷೆಯಲ್ಲಿ ಕಂಡುಬಂದಿದೆ. ಎರಡೂ ಘಟನೆಗಳಿಗೆ ನೇರ ಸಂಬಂಧವಿರುವ ಸಾಧ್ಯತೆಯನ್ನು ಇದು ಸೂಚಿಸುತ್ತದೆ.

'ಇಸ್ಲಾಮಿಕ್ ಸ್ಟೇಟ್' ಕಾರ್ಯತಂತ್ರದಲ್ಲಿ ಪರಿವರ್ತನೆ: ಉಗ್ರರು, ಸಾಂಪ್ರದಾಯಿಕ ವಿಧಾನದ ಬದಲಾಗಿ ಕಠಿಣ ತರಬೇತಿಯಿಂದ ಕೂಡಿದ ಭಯೋತ್ಪಾದನಾ ಮಾದರಿಯನ್ನು ಅನುಸರಿಸುತ್ತಿರುವುದಕ್ಕೆ ಈ ಘಟನೆಯು ಕನ್ನಡಿ ಹಿಡಿಯುತ್ತದೆ. ಈ ವಿಧಾನದ ಮೂಲಕ ಪಾಕಿಸ್ತಾನ ಬೆಂಬಲಿತ ಜಾಲವು ಶಿಕ್ಷಿತ ವೃತ್ತಿಪರರನ್ನು ಬಳಸಿಕೊಂಡು ಭಾರತದ ನಗರಗಳಲ್ಲಿ ಉಗ್ರ ಕೃತ್ಯಕ್ಕೆ ಸಂಚು ರೂಪಿಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದರಿಂದಾಗಿ, 'ಇಸ್ಲಾಮಿಕ್ ಸ್ಟೇಟ್' (ಐ.ಎಸ್) 1990 ಮತ್ತು 2000ರಲ್ಲಿ ಬಳಸಿದ್ದ ಕಾರ್ಯತಂತ್ರವನ್ನು ಪರಿಷ್ಕರಿಸಿ ಭಾರತದ ಪ್ರಮುಖ ನಗರಗಳಲ್ಲಿ ದಾಳಿ ನಡೆಸಬಹುದೇ ಎಂಬ ಆತಂಕವೂ ಎದುರಾಗಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರ ಚಟುವಟಿಕೆ ಪ್ರಮಾಣವು ಸಾರ್ವಕಾಲಿಕ ಇಳಿಕೆ ಕಂಡಿದೆ. ಭಯೋತ್ಪಾದನಾ ಕೃತ್ಯಗಳಿಗೆ ಸ್ಥಳೀಯರನ್ನು ನೇಮಕ ಮಾಡುವ ಕಾರ್ಯವಿಧಾನ ಬಹುತೇಕ ತಗ್ಗಿದೆ. 1990 ಮತ್ತು 2000ನೇ ಇಸವಿಯಲ್ಲಿ ಐ.ಎಸ್ ಭಾರತದ ನಗರಗಳನ್ನೇ ಕೇಂದ್ರೀಕರಿಸಿ ಬಾಂಬ್ ದಾಳಿ ನಡೆಸಿತ್ತು. ಆಗ ದೆಹಲಿ, ಮುಂಬೈ ಮತ್ತು ಜೈಪುರವನ್ನು ಪದೇ ಪದೇ ಗುರಿಯಾಗಿಸಲಾಗಿತ್ತು. ಅದೇ ಕಾರ್ಯತಂತ್ರವನ್ನು ಪರಿಷ್ಕರಿಸಿ, ಶಿಕ್ಷಿತ ವೃತ್ತಿಪರರನ್ನು ಬಳಸಿಕೊಂಡು ಕೃತ್ಯ ಎಸಗುವ ದಿಸೆಯಲ್ಲಿ ಅದು ಕಾರ್ಯಪ್ರವೃತ್ತವಾಗಿದೆಯೇ ಎಂಬ ಶಂಕೆ ವ್ಯಕ್ತವಾಗಿದೆ ಎಂದು ಭದ್ರತಾ ಅಧಿಕಾರಿಗಳು ತಿಳಿಸಿದ್ದಾರೆ.

ನಿರಂತರ ಕಾರ್ಯಾಚರಣೆಗಳಿಂದ ಕಾಶ್ಮೀರದಲ್ಲಿ ಸಾಂಪ್ರದಾಯಿಕ ಭಯೋತ್ಪಾದನಾ ಜಾಲವು ದುರ್ಬಲಗೊಂಡಿದೆ. ಆದರೆ, ವೈಟ್ ಕಾಲರ್ ಭಯೋತ್ಪಾದನೆಯು ಅದಕ್ಕಿಂತ ಹೆಚ್ಚು ಅಪಾಯಕಾರಿ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಈ ಹಿಂದೆ ಉಗ್ರ ಸಂಘಟನೆಗಳಲ್ಲಿ ಟೆಕಿಗಳಿರುವ ಉದಾಹರಣೆಗಳಿವೆ. ಆದರೆ ನಗರಗಳ ಮೇಲೆ ಬಾಂಬ್ ದಾಳಿ ಎಸಗುವ ಕೃತ್ಯಗಳ ಹಿಂದೆ ವೈದ್ಯರು ಇರುವುದು ದೇಶದ ಭದ್ರತೆ ವಿಚಾರದಲ್ಲಿ ಎಚ್ಚರಿಕೆಯ ಗಂಟೆಯನ್ನು ಬಾರಿಸಿದೆ ಎಂದಿದ್ದಾರೆ.

ಮೂವರು ವೈದ್ಯರ ತೀವ್ರ ವಿಚಾರಣೆ

ಕೆಂಪುಕೋಟೆ ಸ್ಫೋಟಕ್ಕೆ ಸಂಬಂಧಿಸಿದಂತೆ ಬಂಧಿತ ಮೂವರು ವೈದ್ಯರಾದ ಆದಿಲ್ ಅಹ್ಮದ್ ರಾಠರ್, ಮುಜಮ್ಮಿಲ್ ಶಕೀಲ್ ಮತ್ತು ಉಮರ್ ಮೊಹಮ್ಮದ್ ಎಂಬುವವರನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಈ ಮೂವರ ನಿವಾಸದಲ್ಲಿ ಅಪಾರ ಪ್ರಮಾಣದ ಬಾಂಬ್ ತಯಾರಿಕಾ ಸಾಮಗ್ರಿಗಳು ಪತ್ತೆಯಾಗಿವೆ. ಈ ಮೂವರೂ ವೈದ್ಯರು ಮೊದಲಿಗೆ ವೈದ್ಯಕೀಯ ಕ್ಷೇತ್ರದಲ್ಲಿಯೇ ಪರಿಚಿತರಾಗಿದ್ದರು. ನಂತರ ಆನ್‌ಲೈನ್ ಮೂಲಕ ಮೂಲಭೂತವಾದಿ ಚಿಂತನೆಗಳನ್ನು ಬೆಳೆಸಿಕೊಂಡರು. ಬಳಿಕ ಮಾನವೀಯ ಮತ್ತು ಧಾರ್ಮಿಕ ಕಾರ್ಯಗಳ ಸೋಗಿನಲ್ಲಿ ಉಗ್ರ ಚಟುವಟಿಕೆಗಳನ್ನು ಬೆಂಬಲಿಸುತ್ತಿದ್ದರು ಎಂದು ತನಿಖೆಯಲ್ಲಿ ತಿಳಿದುಬಂದಿದೆ ಎಂದು ಮೂಲಗಳು ತಿಳಿಸಿವೆ.

ಡಾ.ಆದಿಲ್‌ಗೆ ₹4 ಲಕ್ಷ ವೇತನ!

ಬಂಧಿತ ವೈದ್ಯ ಆದಿಲ್ ರಾಠರ್ ವಸತಿ ಜೊತೆಗೆ ಪ್ರತಿ ತಿಂಗಳು ₹4 ಲಕ್ಷ ವೇತನ ಪಡೆಯುತ್ತಿದ್ದ ಎಂದು ತಿಳಿದುಬಂದಿದೆ. ದಕ್ಷಿಣ ಕಾಶ್ಮೀರದ ಅನಂತನಾಗ್‌ನ ಆದಿಲ್, ಉತ್ತರ ಪ್ರದೇಶದ ಸಹಾರನಪುರದ ವಿ ಬ್ರೋಸ್ ಆಸ್ಪತ್ರೆಯಲ್ಲಿ ವೈದ್ಯನಾಗಿ ಕಾರ್ಯನಿರ್ವಹಿಸುತ್ತಿದ್ದ. 2024ರ ನವೆಂಬರ್ 24ರಂದು ಸಹಿ ಮಾಡಿದ ಒಪ್ಪಂದ ಪತ್ರದ ಪ್ರಕಾರ, ಆದಿಲ್ ಪ್ರತಿ ತಿಂಗಳು ₹4 ಲಕ್ಷ ವೇತನ ಪಡೆಯುತ್ತಿದ್ದ.

ವಿವಿಧ ರಾಷ್ಟ್ರಗಳ ಕಳವಳ

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ನವದೆಹಲಿಯ ಕೆಂಪುಕೋಟೆ ಬಳಿ ನಡೆದ ಸ್ಫೋಟಕ್ಕೆ ಸಂಬಂಧಿಸಿದಂತೆ ಅಮೆರಿಕ, ಚೀನಾ, ನೇಪಾಳ, ಮಾಲ್ದೀವ್ಸ್ ಸೇರಿದಂತೆ ವಿವಿಧ ದೇಶಗಳು ಕಳವಳ ವ್ಯಕ್ತಪಡಿಸಿವೆ.

ಘಟನೆಯ ಸಂತ್ರಸ್ತರ ಕುಟುಂಬಗಳಿಗೆ ಸಾಂತ್ವನ ಹೇಳುವುದರ ಜತೆಗೆ ಭಾರತದಲ್ಲಿರುವ ತಮ್ಮ ದೇಶದ ಪ್ರಜೆಗಳಿಗೆ ಎಚ್ಚರಿಕೆಯಿಂದ ಇರುವಂತೆಯೂ ಸಲಹೆ ನೀಡಿವೆ.

'ಸ್ಫೋಟ ಪ್ರಕರಣವು ಆಘಾತವನ್ನುಂಟು ಮಾಡಿದ್ದು, ಪರಿಸ್ಥಿತಿಯನ್ನು ನಾವು ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದೇವೆ' ಎಂದು ಅಮೆರಿಕದ ವಿದೇಶಾಂಗ ಸಚಿವಾಲಯದ ವಕ್ತಾರರು ತಿಳಿಸಿದ್ದಾರೆ. 'ಭಾರತ ಸರ್ಕಾರವು ಈಗಾಗಲೇ ವಿವಿಧ ರಾಜ್ಯಗಳಲ್ಲಿ ಭದ್ರತಾ ಕಟ್ಟೆಚ್ಚರ ಘೋಷಿಸಿದೆ. ಯಾವುದೇ ರೀತಿಯ ರಾಜತಾಂತ್ರಿಕ ನೆರವು ಒದಗಿಸಲು ನಾವು ಸಿದ್ಧರಾಗಿದ್ದೇವೆ' ಎಂದೂ ಹೇಳಿದ್ದಾರೆ.

ಜತೆಗೆ ಭಾರತದಲ್ಲಿರುವ ಅಮೆರಿಕನ್ನರಿಗೂ ಸಲಹೆ ನೀಡಿರುವ ಅವರು, 'ಕೆಂಪುಕೋಟೆ, ಚಾಂದಿನಿ ಚೌಕ್ ಸುತ್ತಮುತ್ತಲಿನ ಪ್ರದೇಶಗಳು ಹಾಗೂ ಜನನಿಬಿಡ ಪ್ರದೇಶಗಳಿಗೆ ಅನವಶ್ಯಕ ಭೇಟಿ ನೀಡಬೇಡಿ. ಪ್ರವಾಸಿಗರು ಹೆಚ್ಚಾಗಿರುವ ಸ್ಥಳಗಳಲ್ಲಿ ಇದ್ದರೆ ಸದಾ ಎಚ್ಚರಿಕೆಯಿಂದಿರಿ, ಸ್ಥಳೀಯ ಮಾಧ್ಯಮಗಳ ವರದಿಯನ್ನು ವೀಕ್ಷಿಸಿ' ಎಂದು ಸಲಹೆ ನೀಡಿದ್ದಾರೆ.

ಬ್ರಿಟನ್ ಎಚ್ಚರಿಕೆ: ಬ್ರಿಟನ್ ಕೂಡ ಭಾರತಕ್ಕೆ ಪ್ರಯಾಣ ಬೆಳಸಿರುವ ತನ್ನ ಪ್ರಜೆಗಳಿಗಾಗಿ ಹಲವು ಸಲಹೆ, ಸೂಚನೆಗಳನ್ನು ಹೊರಡಿಸಿದೆ.

ದುರ್ಘಟನೆಯ ವಿಚಾರ ತಿಳಿದು ಆಘಾತವಾಗಿದೆ. ಸ್ಫೋಟದಲ್ಲಿ ಗಾಯಗೊಂಡವರು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸುತ್ತೇವೆ. ಪ್ರಸಕ್ತ ಲಭ್ಯವಿರುವ ಮಾಹಿತಿಗಳ ಪ್ರಕಾರ, ಘಟನೆಯಲ್ಲಿ ಚೀನಾದ ಯಾವುದೇ ಪ್ರಜೆಗೂ ಹಾನಿಯಾಗಿಲ್ಲ ಎಂಬುದು ತಿಳಿದುಬಂದಿದೆ

ಲಿನ್ ಜಿಯಾನ್, ಚೀನಾ ವಿದೇಶಾಂಗ ವಕ್ತಾರ

ದೆಹಲಿಯಲ್ಲಿ ನಡೆದ ಸ್ಫೋಟದ ಬಗ್ಗೆ ತಿಳಿದು ಬೇಸರವಾಗಿದೆ. ಶ್ರೀಲಂಕಾವು ಭಾರತೀಯರ ಪರವಾಗಿ ಇರಲಿದೆ

ಅನುರಾ ಕುಮಾರ ಡಿಸ್ಸನಾಯಕೆ, ಶ್ರೀಲಂಕಾ ಅಧ್ಯಕ್ಷ

ಸಂತ್ರಸ್ತರಿಗೆ ಸಾಂತ್ವನ ತಿಳಿಸಲು ಬಯಸುತ್ತೇವೆ, ಘಟನೆಯಲ್ಲಿ ಗಾಯಗೊಂಡವರು ಶೀಘ್ರವಾಗಿ ಗುಣಮುಖರಾಗಲಿ ಎಂದು ಪ್ರಾರ್ಥಿಸುತ್ತೇವೆ. ಈ ಸಂಕಷ್ಟದ ಪರಿಸ್ಥಿತಿಯಲ್ಲಿ ಭಾರತದ ಜನತೆ ಹಾಗೂ ಭಾರತ ಸರ್ಕಾರದ ಜತೆಗೆ ಮಾಲ್ದೀವ್ಸ್ ಇರಲಿದೆ

ಮೊಹಮದ್ ಮುಯಿಜ್ಜು, ಮಾಲ್ದೀವ್ಸ್ ಅಧ್ಯಕ್ಷ

ಈ ದುಃಖದ ಸಮಯದಲ್ಲಿ ನೇಪಾಳವು ಭಾರತದ ಜತೆಗಿರಲಿದೆ

ಸುಶೀಲಾ ಕಾರ್ಕಿ, ನೇಪಾಳ ಪ್ರಧಾನಿ

ಕಾರು ಸ್ಫೋಟ: ಎನ್‌ಐಎ ತನಿಖೆ

ಒಂದನೇ ಪುಟದಿಂದ...

ಮಾಸ್ಕ್ ಧರಿಸಿದ ವ್ಯಕ್ತಿ ಕಾರನ್ನು ಚಲಾಯಿಸುತ್ತಿರುವುದು ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳಲ್ಲಿ ಕಂಡುಬಂದಿದೆ. ಈ ಕಾರು ಸ್ಫೋಟಗೊಂಡಿದೆ. ಕಾರಿನಲ್ಲಿ ದೇಹದ ಭಾಗಗಳು ಕಂಡುಬಂದಿವೆ. ಆದರೂ, ಫರೀದಾಬಾದ್‌ನ ಅಲ್-ಫಲಾಹ್ ವೈದ್ಯಕೀಯ ಕಾಲೇಜಿನಲ್ಲಿ ಉದ್ಯೋಗಿಯಾಗಿದ್ದ ಉಮರ್ ನಬಿಯೇ ಕಾರು ಸ್ಫೋಟಿಸಿದ ವ್ಯಕ್ತಿ ಎಂಬುದನ್ನು ಖಚಿತಪಡಿಸಿಕೊಳ್ಳಲು ಡಿಎನ್‌ಎ ಪರೀಕ್ಷೆ ನಡೆಸಲಾಗಿದೆ. ಜಮ್ಮು ಮತ್ತು ಕಾಶ್ಮೀರ ಪೊಲೀಸರು ಪುಲ್ವಾಮಾದಲ್ಲಿರುವ ಡಾ. ನಬಿ ಅವರ ತಾಯಿಯಿಂದ ಡಿಎನ್‌ಎ ಮಾದರಿಗಳನ್ನು ಸಂಗ್ರಹಿಸಿದರು.

ಉಮರ್ ನಬಿ ಫರೀದಾಬಾದ್ ಭಯೋತ್ಪಾದನಾ ಜಾಲದ ಭಾಗವಾಗಿದ್ದಾನೆಂದು ಶಂಕಿಸಲಾಗಿದೆ. ಆತನಿಗೆ ಜೈಶ್-ಎ-ಮೊಹಮ್ಮದ್ ಜೊತೆ ನಂಟು ಇದೆ ಎಂದು ತನಿಖಾಧಿಕಾರಿಗಳು ಹೇಳಿಕೊಂಡಿದ್ದಾರೆ.

ಉಮರ್ ಜತೆಗೆ ಸಂಬಂಧ ಹೊಂದಿದ್ದ ಇನ್ನಿಬ್ಬರು ವೈದ್ಯರಾದ ಆದಿಲ್ ಅಹ್ಮದ್ ರಾಠರ್ ಮತ್ತು ಮುಜಮ್ಮಿಲ್ ಶಕೀಲ್ ಅವರನ್ನು ಕ್ರಮವಾಗಿ ಉತ್ತರ ಪ್ರದೇಶದ ಸಹರಾನ್‌ಪುರ ಮತ್ತು ಹರಿಯಾಣದ ಫರೀದಾಬಾದ್‌ನಲ್ಲಿ ಬಂಧಿಸಲಾಗಿತ್ತು. ಉನ್ನತ ಶಿಕ್ಷಣ ಪಡೆದು ಉತ್ತಮ ಹುದ್ದೆಯಲ್ಲಿರುವವರು ನಡೆಸುವ ಇಂತಹ ದುಷ್ಕೃತ್ಯಗಳನ್ನು 'ವೈಟ್ ಕಾಲರ್ ಭಯೋತ್ಪಾದನೆ ಮಾದರಿ' ಎಂದು ತನಿಖಾಧಿಕಾರಿಗಳು ವರ್ಗೀಕರಿಸಿದ್ದಾರೆ.

ಘಟನೆ ಸಂಬಂಧ ತಾರೀಕ್ ಎಂಬಾತನನ್ನು ಸೋಮವಾರ ತಡರಾತ್ರಿಯೇ ಬಂಧಿಸಲಾಗಿತ್ತು. ಉಮ್ಮರ್ ಮೊಹಮ್ಮದ್‌ಗೆ ತಾರೀಕ್ ಕಾರನ್ನು ನೀಡಿದ್ದ. ಭಯೋತ್ಪಾದನಾ ಚಟುವಟಿಕೆಯ ಸಂಚಿನ ಭಾಗವಾಗಿದ್ದ ಸಹ ವೈದ್ಯರನ್ನು ಬಂಧಿಸಿದ ನಂತರ ಉಮರ್ ಈ ದುಷ್ಕೃತ್ಯ ನಡೆಸಿರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಉಮರ್ ನಬಿ ಬದರ್‌ಪುರ ಮೂಲಕ ರಾಜಧಾನಿಯನ್ನು ಪ್ರವೇಶಿಸಿ, ಮಧ್ಯಾಹ್ನ 3.20ರ ಸುಮಾರಿಗೆ ಕೆಂಪುಕೋಟೆ ಬಳಿಯ ವಾಹನ ನಿಲುಗಡೆ ಸ್ಥಳ ತಲುಪಿದ್ದ. ಆತ ಸಂಜೆ 6.30ರವರೆಗೆ ಕಾರಿನೊಳಗೆ ಇದ್ದ ಎಂದು ಮೂಲಗಳು ತಿಳಿಸಿವೆ. ಸೋಮವಾರ ಸಂಜೆ 6.52ಕ್ಕೆ ನಿಧಾನವಾಗಿ ಚಲಿಸಿದ ವಾಹನದಲ್ಲಿ ಸ್ಫೋಟ ಸಂಭವಿಸಿದೆ ಎಂದು ದೆಹಲಿ ಪೊಲೀಸ್ ಕಮಿಷನರ್ ಸತೀಶ್ ಗೋಲ್ಚಾ ಹೇಳಿದ್ದಾರೆ.

ಹೆಚ್ಚಿನ ವಿವರಗಳನ್ನು ಪಡೆಯಲು ಸ್ಫೋಟ ನಡೆದ ಪ್ರದೇಶ ಮತ್ತು ಪಕ್ಕದ ಮಾರ್ಗಗಳ ಖಾಸಗಿ ಮತ್ತು ವಾಣಿಜ್ಯ ಕಟ್ಟಡಗಳಿಂದ ಸಂಗ್ರಹಿಸಲಾದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಹಲವಾರು ತಂಡಗಳು ಪರಿಶೀಲಿಸುತ್ತಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸುಮಾರು ಮೂರು ಗಂಟೆ ಕಾರು ಪಾರ್ಕಿಂಗ್ ಸ್ಥಳದಲ್ಲಿ ನಿಂತಿತ್ತು ಎಂಬ ಮಾಹಿತಿಯನ್ನು ತನಿಖಾಧಿಕಾರಿಗಳು ಸಂಗ್ರಹಿಸಿದ್ದಾರೆ.

ಎಫ್‌ಐಆರ್‌ನಲ್ಲಿ ಉಲ್ಲೇಖ

- ಯುಎಪಿಎ ಸೆಕ್ಷನ್ 16 (ಭಯೋತ್ಪಾದಕ ಕೃತ್ಯಗಳು), ಸೆಕ್ಷನ್ 18 (ಪಿತೂರಿ) ಸೇರಿದಂತೆ ಇತರ ಪ್ರಕರಣಗಳನ್ನು ದಾಖಲಿಸಲಾಗಿದೆ
- ಸ್ಫೋಟಕ ವಸ್ತುಗಳ ಕಾಯ್ದೆಯಡಿ ಪ್ರಕರಣ ದಾಖಲಿಸ ಲಾಗಿದೆ– ಜೀವಕ್ಕೆ ಅಪಾಯವನ್ನುಂಟುಮಾಡುವ ಸ್ಫೋಟ ಕಾರಣವಾದುದಕ್ಕೆ ಸೆಕ್ಷನ್ 3; ಸ್ಫೋಟಕ್ಕೆ ಕಾರಣವಾದ ಪ್ರಯತ್ನಕ್ಕೆ ಸೆಕ್ಷನ್ 4ರ ಅಡಿಯಲ್ಲಿ ಪ್ರಕರಣ ದಾಖಲು
- ಬಿಎನ್‌ಎಸ್ ಸೆಕ್ಷನ್‌ಗಳು: 103(1) ಕೊಲೆಗೆ, 109(1) ಕೊಲೆಗೆ ಯತ್ನಕ್ಕೆ, 161(2) ಉನ್ನತ ಅಧಿಕಾರಿಯ ಮೇಲೆ ಹಲ್ಲೆಗೆ ಪ್ರಚೋದನೆಗೆ. ಇದು ಬಾಂಬ್ ಸ್ಫೋಟ ಎಂದು ಎಫ್‌ಐಆರ್‌ನಲ್ಲಿದೆ.
- ಜೋರಾದ ಸ್ಫೋಟ ಸಂಭವಿಸಿತು. ಸ್ಫೋಟದ ಪರಿಣಾಮವಾಗಿ ಪೊಲೀಸ್ ಠಾಣೆಯ ಗೋಡೆ ಕುಸಿಯಿತು. ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಕಾರುಗಳು ಉರಿಯುತ್ತಿರುವುದನ್ನು ಮತ್ತು ಗಾಯಾಳುಗಳು ರಸ್ತೆಯಲ್ಲಿ ಹೊರಳಾಡುತ್ತಿರುವುದನ್ನು ನೋಡಿದರು. ಎಲ್ಲ ಗಾಯಾಳುಗಳನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು ಎಂದು ದೂರುದಾರರಾದ ಕೆಂಪು ಕೋಟೆ ಪೊಲೀಸ್ ಪೋಸ್ಟ್‌ನ ಉಸ್ತುವಾರಿ ವಿನೋದ್ ನೈನ್ ಹೇಳುತ್ತಾರೆ.

ಮನೆ ಮಾಲೀಕ ಪೊಲೀಸ್ ವಶಕ್ಕೆ

ಗುರುಗ್ರಾಮ (ಪಿಟಿಐ): ದೆಹಲಿ ಕೆಂಪುಕೋಟೆ ಬಳಿ ಸ್ಫೋಟಗೊಂಡ ಕಾರಿನ ಮೊದಲ ಮಾಲೀಕರಿಗೆ ಬಾಡಿಗೆ ಮನೆ ನೀಡಿದ್ದ ವ್ಯಕ್ತಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಅವರ ಕುಟುಂಬಸ್ಥರು ತಿಳಿಸಿದ್ದಾರೆ.

ಹರಿಯಾಣದಲ್ಲಿ ನೋಂದಣಿಯಾಗಿರುವ ಕಾರಿನ ಮೊದಲ ಮಾಲೀಕ ಮೊಹಮ್ಮದ್ ಸಲ್ಮಾನ್ ಅವರು 2016ರಿಂದ 2020ರವರೆಗೆ ಗುರುಗ್ರಾಮದ ಬಾಡಿಗೆ ಮನೆಯೊಂದರಲ್ಲಿದ್ದರು. ಆ ಮನೆಯ ಮಾಲೀಕ ದಿನೇಶ್ ಎಂಬವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎನ್ನಲಾಗುತ್ತಿದೆ.

'ನಮ್ಮ ಶಾಂತಿನಗರದ ಮನೆಯಲ್ಲಿ ಸಲ್ಮಾನ್, ಅವರ ತಾಯಿ, ಪತ್ನಿ ಮತ್ತು ಇಬ್ಬರು ಮಕ್ಕಳ ಜೊತೆ ನಾಲ್ಕು ವರ್ಷ ವಾಸಿಸಿದ್ದರು. ಬಳಿಕ ಗುರುಗ್ರಾಮದಲ್ಲಿನ ತಮ್ಮ ಸ್ವಂತ ಫ್ಲ್ಯಾಟ್‌ಗೆ ಸ್ಥಳಾಂತರಗೊಂಡಿದ್ದರು' ಎಂದು ದಿನೇಶ್ ಕುಟುಂಬಸ್ಥರು ತಿಳಿಸಿದ್ದಾರೆ.

ಸಲ್ಮಾನ್ ಅವರು ತಮ್ಮ ಕಾರನ್ನು ದೆಹಲಿಯ ಓಕ್ಲಾ ನಿವಾಸಿ ದೇವೇಂದ್ರ ಅವರಿಗೆ ಮಾರಾಟ ಮಾಡಿದ್ದರು. ದೇವೇಂದ್ರ ಅವರಿಂದ ಅದೇ ಕಾರನ್ನು ಖರೀದಿಸಿದ್ದ ಅಂಬಾಲದ ನಿವಾಸಿಯೊಬ್ಬರು ಪುಲ್ವಾಮದ ತಾರೀಕ್ ಎಂಬವರಿಗೆ ಮಾರಾಟ ಮಾಡಿದ್ದರು.

ಬಂಧಿತ ವೈದ್ಯೆಗೆ ಜೆಇಎಂ ನಂಟು

ನವದೆಹಲಿ (ಪಿಟಿಐ): ಅಂತರರಾಜ್ಯ ಭಯೋತ್ಪಾದಕರ ಜಾಲವನ್ನು ಭೇದಿಸಿದ ನಂತರ ಬಂಧಿಸಲಾದ ಎಂಟು ಮಂದಿಯಲ್ಲಿ ಒಬ್ಬಳಾದ ವೈದ್ಯೆಗೆ ಜಮಾತ್‌–ಉಲ್‌–ಮೊಮಿನಾತ್ ಸಂಘಟನೆಯ ನಂಟಿದೆ ಎಂಬುದು ತನಿಖೆಯಲ್ಲಿ ಗೊತ್ತಾಗಿದೆ.

ಫರೀದಾಬಾದ್‌ನ ಅಲ್–ಫಲಾಹ್ ವಿಶ್ವವಿದ್ಯಾಲಯದ ಡಾ. ಶಾಹೀನ್ ಸಯೀದ್‌ಳನ್ನು ಶ್ರೀನಗರಕ್ಕೆ ಕರೆದೊಯ್ದು ಸೋಮವಾರ ಬಂಧಿಸಲಾಗಿತ್ತು.

ನಿಷೇಧಿತ ಜೈಷ್‌–ಎ–ಮೊಹಮ್ಮದ್ (ಜೆಎಂಎಂ) ಸಂಘಟನೆಯು ಕಳೆದ ತಿಂಗಳಷ್ಟೇ ಜಮಾತ್‌–ಉಲ್‌–ಮೊಮಿನಾತ್ ಮಹಿಳಾ ಘಟಕ ಆರಂಭಿಸಿದೆ. ಶಾಹೀನ್, ಈ ಘಟಕದ ನೇಮಕಾತಿ ವಿಭಾಗದಲ್ಲಿದ್ದಳು.

'ಮಗಳು ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಬಗ್ಗೆ ನನಗೇನೂ ಗೊತ್ತಿಲ್ಲ. ಮಾಧ್ಯಮಗಳ ಮೂಲಕವಷ್ಟೇ ಆಕೆಯ ಬಂಧನದ ಬಗ್ಗೆ ಗೊತ್ತಾಗಿದೆ' ಎಂದು ಶಾಹೀನ್ ತಂದೆ ಲಖನೌನಲ್ಲಿ ಪ್ರತಿಕ್ರಿಯಿಸಿದ್ದಾರೆ.

'ಕಾರು ರಾಜಧಾನಿ ಪ್ರವೇಶಿಸಿದ್ದು ಹೇಗೆ?'

ಒಂದನೇ ಪುಟದಿಂದ...

ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಸೇರಿದಂತೆ ಸರ್ಕಾರದ ಪ್ರಮುಖರು ಇದನ್ನು ಭಯೋತ್ಪಾದನಾ ಚಟುವಟಿಕೆ ಎಂದು ಕರೆದಿಲ್ಲ. ಸುದ್ದಿಗಾರರ ಜತೆಗೆ ಸೋಮವಾರ ರಾತ್ರಿ ಮಾತನಾಡಿದ್ದ ಗೃಹ ಸಚಿವ ಅಮಿತ್ ಶಾ, 'ಸಂಪೂರ್ಣ ವಿಶ್ಲೇಷಣೆಯ ನಂತರವೇ ಸ್ಫೋಟದ ಸ್ವರೂಪದ ಬಗ್ಗೆ ಮಾತನಾಡಬಹುದು ಮತ್ತು ಎಲ್ಲಾ ಆಯಾಮಗಳಿಂದಲೂ ತನಿಖೆ ಮಾಡಲಾಗುವುದು' ಎಂದು ಹೇಳಿದ್ದರು. ಭೂತಾನ್‌ನಲ್ಲಿ ಮಾತನಾಡಿದ ಮೋದಿ, 'ಇದೊಂದು ಭಯಾನಕ ಸ್ಫೋಟ' ಎಂದೇ ಉಲ್ಲೇಖಿಸಿದರು. ಆದರೆ, ಎಫ್‌ಐಆರ್‌ನಲ್ಲಿ ಬಾಂಬ್ ಸ್ಫೋಟ ಎಂದು ಉಲ್ಲೇಖಿಸಲಾಗಿದೆ.

Basaveshwara Medical College and Hospital
BMCH MAKING DIFFERENCE TOGETHER
N.H.48, Bypass road, K.H.B Colony, Chitradurga- 577501
Date: 12.11.2025

TENDER NOTICE FOR PHARMACY OUTSOURCING SERVICES

The organization invites tender sealed in two covers from qualified and experienced service providers for **Pharmacy Outsourcing Services**. The selected vendor will be responsible for the complete management of pharmacy operations, including procurement, storage, dispensing, staffing, and regulatory compliance.

Location of Work: Basaveshwara Medical College and Hospital, N.H. 48, Bypass road, K.H.B Colony, Chitradurga- 577501.
Pre-Bid Meeting Date: 26.11.2025 at 11:30 AM.
Last Date for Submission of Bids: 29.11.2025
Opening of Bids: 04.12.2025 at 11:00AM. **Place: PRESIDENT ROOM,** Basaveshwara Medical College & Hospital, Near KHB Colony, NH 48 Bypass, Chitradurga- 577501.

Bid Submission Details: Bids must be submitted for the tender in two separate envelopes marked as follows. (1) **Technical bid** & (2) **Financial bid**. Both envelops to be placed in a separate envelops & marked as for "Tender for Pharmacy Outsourcing Services", with the bidder's details. All tenders should be addressed to: Medical Superintendent, Basaveshwara Medical College & Hospital, Chitradurga.

Terms & conditions:
(1) Bidder's should have experience of running pharmacies in at least 2 medical colleges as on date of notification.
(2) Annual turnover of S.J.M Pharmacy : approximately Rs.18 Crore.
(3) Exit clause is 6 months notice with no pending financial obligations at the time of exit from either side.
(4) All taxes to be paid in time and any pending payment received subsequently for the outsource period is to be fulfilled by successful bidder and same is not to be passed on to BMCH.
(5) Caution deposit is Rs. 2 Crore.
(6) Earnest money deposit (EMD): 7,50,000/- (Returned within 15 days for unsuccessful bidders).
(7) Bid is w.r.t. net profit and gross profit sharing with highest profit provider to hospital will be declared as successful bidder. Bidder must quote net profit & gross profit separately.
(8) Existing software is to be used to link for all financial transactions i.e for all purchases & sales.
(9) All medicines for government scheme patients and free patients to be billed at 1% profit margin.
(10) Details of GST registration working team, financial stability, work executed, IT returns for three years, Firm registration copy should be enclosed in the technical bid envelope.
(11) Supporting documents for claiming the eligibility criteria has to be furnished in a separate envelope marked as technical bid.
(12) Surgical items will be directly purchased by the hospital for internal consumption. Certain consumables to be bought by patients from pharmacy will be notified as when needed in consultant with hospital management.
(13) Management has the right to accept/reject the tender at any stage without assigning any reasons.

For more details **scan this QR Code**
https://hospital.sjmbmch.org or Email: ms@bmch.edu.in

ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹ

'ಸ್ಫೋಟದ ಬಗ್ಗೆ ತನಿಖೆಯಾಗಲಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ದೆಹಲಿಯ ಕೆಂಪುಕೋಟೆ ಬಳಿ ಬಾಂಬ್ ಸ್ಫೋಟದ ಬಗ್ಗೆ ಕೇಂದ್ರ ಸರ್ಕಾರವೇ ಸಮಗ್ರ ತನಿಖೆ ನಡೆಸಿ, ಉತ್ತರಿಸಲಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಇಲ್ಲಿ ಹೇಳಿದರು.

ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, 'ಬಾಂಬ್ ಸ್ಫೋಟಗಳು ಆಗಬಾರದು. ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಾರೆ. ಚುನಾವಣೆ ವೇಳೆಯಲ್ಲೇ ಏಕೆ ಸ್ಫೋಟಗಳು ಹೆಚ್ಚು ಎಂಬ ಬಗ್ಗೆ ಕೇಂದ್ರವೇ ಉತ್ತರಿಸಬೇಕು' ಎಂದು ಹೇಳಿದರು.

'ಭಾರತ ಹಿಂದೂ ರಾಷ್ಟ್ರ' ಎಂಬ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿಕೆಗೆ, 'ಭಾರತ ಬಹುತ್ವದ ಸಂಸ್ಕೃತಿಯುಳ್ಳ ದೇಶ. ಎಲ್ಲ ಧರ್ಮೀಯರು ನಮ್ಮಲ್ಲಿದ್ದಾರೆ. ಆರ್‌ಎಸ್‌ಎಸ್‌ನವರು ಮೊದಲು ದೇಶದಲ್ಲಿರುವ ಅಸಮಾನತೆ, ಅಸ್ಪೃಶ್ಯತೆ ಬಗ್ಗೆ ಮಾತನಾಡಲಿ' ಎಂದು ಸಲಹೆ ನೀಡಿದರು.

ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ ಕಾಂಗ್ರೆಸ್‌ನತ್ತ ವಾಲಿರುವ ಕುರಿತ ಪ್ರಶ್ನೆಗೆ, 'ಅವರು ನನ್ನ ಸ್ನೇಹಿತರು. ಯಾರನ್ನೂ ಪಕ್ಷಕ್ಕೆ ಆಹ್ವಾನಿಸುವುದಿಲ್ಲ. ಸಿದ್ಧಾಂತ ಒಪ್ಪಿ ಬರುವವರಿಗೆ ಬೇಡ ಎನ್ನುವುದಿಲ್ಲ' ಎಂದರು.

'ಎತ್ತಿನಹೊಳೆ ಯೋಜನೆಗೆ ಕೇಂದ್ರ ಸರ್ಕಾರ ಯಾವುದೇ ತಡೆ ನೀಡಿಲ್ಲ. ನೀಡುವುದೂ ಇಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ದೆಹಲಿ ಸ್ಫೋಟಕ್ಕೂ ಬೆಂಗಳೂರಿನ ಪರಪ್ಪನ ಅಗ್ರಹಾರದ ಜೈಲಿನಲ್ಲಿ ಮೊಬೈಲ್ ಬಳಸುತ್ತಿದ್ದ ಉಗ್ರಗಾಮಿಗೂ ನಂಟು ಇರಬಹುದು. ಈ ಬಗ್ಗೆ ಎನ್‌ಐಎಯಿಂದ ಆಳವಾದ ತನಿಖೆ ನಡೆಸಬೇಕು

ಆರ್.ಅಶೋಕ, ವಿಧಾನಸಭೆ ವಿಪಕ್ಷ ನಾಯಕ

ಜೈಲಿನಲ್ಲಿ ಕೈದಿಗಳಿಗೆ ರಾಜಾತಿಥ್ಯ ನೀಡಿರುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆ ಕೇಳುವ ಬಿಜೆಪಿಯವರು ದೆಹಲಿಯ ಸ್ಫೋಟ ಘಟನೆ ಸಂಬಂಧ ಪ್ರಧಾನಿ ನರೇಂದ್ರ ಮೋದಿಯವರ ರಾಜೀನಾಮೆ ಕೇಳುತ್ತಾರೆಯೇ?

ಸಂತೋಷ್ ಲಾಡ್, ಕಾರ್ಮಿಕ ಸಚಿವ

ಪ್ರಿಯಾಂಕ್ ಖರ್ಗೆಗೆ ಇರೋದೇ ದುರ್ಬುದ್ಧಿ. ಆತ ಮೂರ್ಖ ಬೇರೆ. ಮೂರ್ಖ ಮತ್ತು ದುರ್ಬುದ್ಧಿ ಇರುವವರಿಗೆ ಬುದ್ಧಿ ಹೇಳಿದರೆ ಉಪಯೋಗ ಆಗದು. ಇಂತಹವರಿಗೆ ಯಾರೂ ಬುದ್ಧಿ ಹೇಳಲು ಆಗದು

ಸಿ.ಟಿ.ರವಿ, ವಿಧಾನಪರಿಷತ್ ಸದಸ್ಯ

ಸ್ವತಂತ್ರ ಭಾರತದಲ್ಲಿ ಅತ್ಯಂತ ದುರ್ಬಲ ಗೃಹ ಸಚಿವರು ಇದ್ದರೆ, ಅದು ಅಮಿತ್ ಶಾ

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಸಚಿವ

ಬೆಂಕಿ ಬಿದ್ದಾಗಲೂ ಸಿದ್ದರಾಮಯ್ಯ ಅವರು ರಾಜಕೀಯ ಬೇಳೆ ಬೇಯಿಸಿಕೊಳ್ಳಬೇಕೆ?'

ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ

ದೆಹಲಿಯಲ್ಲಿ ಸಂಭವಿಸಿದ ಸ್ಫೋಟಕ್ಕೂ ಬಿಹಾರ ಚುನಾವಣೆಗೂ, ತಳುಕು ಹಾಕುವುದಿಲ್ಲ. ಇದು ಉಗ್ರರ ಕೃತ್ಯವೇ ಅಥವಾ ರಾಸಾಯನಿಕದಿಂದಾದ ಸ್ಫೋಟವೇ ಎಂಬುದು ತನಿಖೆಯಿಂದ ಮೊದಲು ದೃಢಪಡಬೇಕಿದೆ

ಎಂ.ಬಿ. ಪಾಟೀಲ, ಕೈಗಾರಿಕಾ ಸಚಿವ

ಕರ್ನಾಟಕದಲ್ಲಿ ಪ್ರತಿ ದಿನ ಒಂದಿಲ್ಲೊಂದು ರೀತಿ ಹಿಂಸಾಚಾರಗಳು ಆಗುತ್ತವೆ. ಅವುಗಳಲ್ಲಿ ಎಷ್ಟು ಕಾಂಗ್ರೆಸ್ ಸರ್ಕಾರದ ವೈಫಲ್ಯ ಆಗಿರಬಾರದು

ಬಸವರಾಜ ಬೊಮ್ಮಾಯಿ, ಸಂಸದ

ಶ್ರೀನಗರದಲ್ಲಿ ಭದ್ರತಾ ಸಿಬ್ಬಂದಿ ಮಂಗಳವಾರ ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆ ನಡೆಸಿದರು — ಪಿಟಿಐ ಚಿತ್ರ

1500 ಶಂಕಿತರು ವಶಕ್ಕೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ಭಯೋತ್ಪಾದನೆಗೆ ಬೆಂಬಲ ನೀಡುತ್ತಿರುವವರ ಜಾಲವನ್ನು ಭೇದಿಸಲು ಮುಂದಾಗಿರುವ ಜಮ್ಮು-ಕಾಶ್ಮೀರ ಪೊಲೀಸರು ಕಣಿವೆ ಪ್ರದೇಶದಲ್ಲಿ ಕಳೆದ ಮೂರು ದಿನಗಳಲ್ಲಿ 1500 ಜನರನ್ನು ವಶಕ್ಕೆ ಪಡೆದಿದ್ದಾರೆ.

'ಗಡಿಯಾಚೆಯಿಂದ ಭಯೋತ್ಪಾದನೆ ಕೃತ್ಯ ನಡೆಸುತ್ತಿರುವ ಶಂಕಿತ ಬಂಡುಕೋರರ ಕುಟುಂಬಸ್ಥರು, ಭೂಗತ ಚಟುವಟಿಕೆ ನಡೆಸುತ್ತಿರುವವರು ಸೇರಿದಂತೆ 1500 ಶಂಕಿತರನ್ನು ವಶಕ್ಕೆ ಪಡೆದಿದ್ದೇವೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆ ವ್ಯವಸ್ಥೆಗೆ ಬೆಂಬಲ ನೀಡುತ್ತಿರುವ ಶಂಕಿತ ವ್ಯಕ್ತಿಗಳನ್ನು ತಟಸ್ಥಗೊಳಿಸುವ ಪ್ರಕ್ರಿಯೆಯ ಭಾಗವಾಗಿ ಈ ಕಾರ್ಯಾಚರಣೆ ನಡೆಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

ಶಾಂತಿಭಂಗಗೊಳಿಸಲು ಭಯೋತ್ಪಾದಕರು ಯತ್ನಿಸುತ್ತಿದ್ದಾರೆ ಎಂದು ನಂಬಲರ್ಹ ಗುಪ್ತಚರ ಮೂಲಗಳು ನೀಡಿದ ಮಾಹಿತಿಯ ಆಧಾರದಲ್ಲಿ ಶ್ರೀನಗರ, ಪುಲ್ವಾಮ, ಶೋಫಿಯಾ, ಕುಲ್ಗಾಂ ಮತ್ತು ಬಾರಾಮುಲ್ಲಾ ಜಿಲ್ಲೆಗಳಲ್ಲಿ ಏಕಕಾಲದಲ್ಲಿ ಶೋಧ ನಡೆಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಪರಿಶೀಲನೆಯ ಬಳಿಕ ಹಲವರನ್ನು ಬಿಡುಗಡೆ ಮಾಡಲಾಗುವುದು, ಉಳಿದವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗುವುದು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಹೃದಯವನ್ನು ತಣಿಸುವುದಷ್ಟೇ ಅಲ್ಲ, ತಲ್ಲಣಿಸುವುದೂ ಸಾಹಿತ್ಯದ ಕೆಲಸ.

–ಕೆ.ಎಸ್. ನಿಸಾರ್ ಅಹಮದ್

ಸಂಪಾದಕೀಯ

ದೆಹಲಿಯಲ್ಲಿ ಸ್ಫೋಟ: ಹೇಯಕೃತ್ಯ ಸುರಕ್ಷತೆ ಸರ್ಕಾರದ ಆದ್ಯತೆಯಾಗಲಿ

ದೆಹಲಿಯ ಕೆಂಪು ಕೋಟೆಯ ಬಳಿ ಕಾರೊಂದರಲ್ಲಿ ಸಂಭವಿಸಿದ ಸ್ಫೋಟದಿಂದ 12 ಜನ ಸಾವನ್ನಪ್ಪಿ, 20ಕ್ಕೂ ಅಧಿಕ ಮಂದಿ ಗಾಯಗೊಂಡ ಘಟನೆಯು ಭಯೋತ್ಪಾದನೆಯ ಭೀತಿಯನ್ನು ಮತ್ತೆ ಮುನ್ನೆಲೆಗೆ ತಂದಿದೆ. ಈ ಹೇಯಕೃತ್ಯವು, ಆಂತರಿಕ ಭದ್ರತೆಯ ವಿಷಯವಾಗಿ ಕಳವಳ ಪಡುವಂತೆಯೂ ಮಾಡಿದೆ. ಇದೊಂದು ಆತ್ಮಹತ್ಯಾ ದಾಳಿಯಾಗಿತ್ತು ಎನ್ನುವುದು ಈಗ ನಿಚ್ಚಳವಾಗಿದ್ದು, ಸಂಚುಕೋರರಲ್ಲಿ ಒಬ್ಬನನ್ನು ಡಾ. ಉಮರ್ ನಬಿ ಎಂದು ಗುರ್ತಿಸಲಾಗಿದೆ. ರಾಷ್ಟ್ರ ರಾಜಧಾನಿಯ ಹೃದಯಭಾಗದಲ್ಲಿರುವ ಜನದಟ್ಟಣೆ ಪ್ರದೇಶದಲ್ಲಿ ಸಂಭವಿಸಿದ ಈ ಘಟನೆಯು ಒಂದು ಭಯೋತ್ಪಾದನೆಯ ದಾಳಿಯಾಗಿತ್ತು ಎನ್ನುವ ಸಂಕೇತಗಳು ಸ್ಪಷ್ಟವಾಗಿ ಗೋಚರಿಸಿವೆ. ಕೃತ್ಯ ನಡೆಸಲು ಆಯ್ಕೆ ಮಾಡಿಕೊಂಡ ಸ್ಥಳ ಮತ್ತು ಸಮಯವನ್ನು ಗಮನಿಸಿದಾಗ, ಜನರನ್ನು ಕೊಲ್ಲುವ, ಸಾಧ್ಯವಾದಷ್ಟು ಹಾನಿ ಉಂಟು ಮಾಡುವ ಮತ್ತು ಗರಿಷ್ಠ ಪ್ರಮಾಣದಲ್ಲಿ ಸಾರ್ವಜನಿಕ ಗಮನವನ್ನು ಸೆಳೆಯುವ ಉದ್ದೇಶ ಇದರ ಹಿಂದಿತ್ತು ಎನ್ನುವುದು ಸುಸ್ಪಷ್ಟ. ಯಾವುದೇ ಭಯೋತ್ಪಾದನಾ ಕೃತ್ಯದ ಮುಖ್ಯ ಉದ್ದೇಶವೂ ಇದೇ ಆಗಿರುತ್ತದೆ. ಕೆಂಪು ಕೋಟೆಯು ಭಾರತದ ಪರಂಪರೆಯ ಸಂಕೇತವಾಗಿದ್ದು, ಅದರ ಅಕ್ಕಪಕ್ಕದ ಪ್ರದೇಶಗಳು ಸದಾ ಜನದಟ್ಟಣೆಯಿಂದ ಕೂಡಿರುತ್ತವೆ. ಅಲ್ಲಿ ನಡೆಯುವ ಇಂತಹ ಕೃತ್ಯದ ಪರಿಣಾಮವು ಆ ಪ್ರದೇಶಗಳನ್ನಷ್ಟೇ ಅಲ್ಲದೆ ಅವುಗಳ ಆಚೆಗೂ ತುಂಬಾ ವ್ಯಾಪಕವಾಗಿ ಪ್ರಭಾವವನ್ನು ಉಂಟು ಮಾಡುವಂಥದ್ದಾಗಿರುತ್ತದೆ.

ದೆಹಲಿಯಲ್ಲಿ ನಡೆದಿರುವ ಕೃತ್ಯವು ಭಯೋತ್ಪಾದನೆಯ ಅಪಾಯ ಇನ್ನೂ ಇದೆ ಎನ್ನುವುದರ ಸಂಕೇತ. ಆಂತರಿಕ ಭದ್ರತೆ ಮತ್ತು ಗುಪ್ತಚರ ವೈಫಲ್ಯದ ಬಗ್ಗೆ ಅನುಮಾನ ಮೂಡಿಸಿದೆ.

ಸಂಚುಕೋರರು ಹೊಂದಿದ್ದ ಸಂಪರ್ಕ ಹಾಗೂ ಸಂಬಂಧಗಳನ್ನು ಗುರ್ತಿಸುವಲ್ಲಿ ತನಿಖಾ ತಂಡಗಳು ಈಗಾಗಲೇ ಯಶಸ್ವಿಯಾಗಿವೆ. ತನಿಖೆಯು ಪ್ರಗತಿ ಸಾಧಿಸಿದಂತೆ, ಈ ಕೃತ್ಯದ ಹಿಂದಿರುವ ಜಾಲ, ಅದರ ವ್ಯಾಪ್ತಿ ಮತ್ತು ಹಿಂದಿನ ಪಿತೂರಿ ಸಂಪೂರ್ಣ ಬಯಲಾಗಲಿದೆ. ದೆಹಲಿಗೆ ಹತ್ತಿರದಲ್ಲಿರುವ ಫರೀದಾಬಾದ್‌ನಲ್ಲಿ ಭಾನುವಾರ ಪೊಲೀಸರು ಅಪಾರ ಪ್ರಮಾಣದ ಸ್ಫೋಟಕ ಮತ್ತು ಶಸ್ತ್ರಾಸ್ತ್ರ ವಶಪಡಿಸಿಕೊಂಡ ಘಟನೆಗೂ ಕಾರಿನಲ್ಲಿ ಸಂಭವಿಸಿದ ಸ್ಫೋಟ ಕೃತ್ಯಕ್ಕೂ ಸಂಬಂಧ ಇರುವುದು ಮೇಲ್ನೋಟಕ್ಕೆ ಸ್ಪಷ್ಟ. ತನಿಖೆಯ ಜಾಡು ಈಗ ಜಮ್ಮು–ಕಾಶ್ಮೀರವನ್ನೂ ತಲುಪಿದೆ. ಏಕೆಂದರೆ, ಫರೀದಾಬಾದ್‌ನಲ್ಲಿ ಬಂಧನಕ್ಕೆ ಒಳಗಾಗಿರುವ ಶಂಕಿತರ ಸಂಪರ್ಕಗಳು ಕಾಶ್ಮೀರ ಕಣಿವೆಯೊಂದಿಗೆ ಬೆಸೆದಿವೆ. ದೆಹಲಿಯಲ್ಲಿ ಸ್ಫೋಟಗೊಂಡ ಕಾರಿನ ಮಾಲೀಕನೂ ಕಾಶ್ಮೀರದ ಪುಲ್ವಾಮಾ ಪ್ರದೇಶಕ್ಕೆ ಸೇರಿದವನು ಎಂಬ ಮಾಹಿತಿ ಕೂಡ ಬೆಳಕಿಗೆ ಬಂದಿದೆ. 2019ರ ಪುಲ್ವಾಮಾ ದಾಳಿಗೂ ಈ ಕೃತ್ಯಕ್ಕೂ ಸಂಬಂಧ ಇರುವಂತೆಯೂ ತೋರುತ್ತಿದೆ. ಸಂಚುಕೋರರು ಜೈಷ್‌–ಎ–ಮೊಹಮ್ಮದ್ ಸಂಘಟನೆಯೊಂದಿಗೆ ಸಂಪರ್ಕ ಹೊಂದಿದ ಕುರಿತೂ ಶಂಕೆ ಬಲವಾಗಿದೆ. ಫರಿದಾಬಾದ್‌ನಲ್ಲಿ ಶಂಕಿತರ ಜಾಲ ಭೇದಿಸಿದ ಹೊತ್ತಿನಲ್ಲೇ ಗುಜರಾತ್‌ನ ಭಯೋತ್ಪಾದನಾ ನಿಗ್ರಹ ಪಡೆಯು ಅಂತರರಾಷ್ಟ್ರೀಯ ಸಂಪರ್ಕ ಹೊಂದಿದ ಕೆಲವು ವ್ಯಕ್ತಿಗಳನ್ನು ಅಹಮದಾಬಾದ್‌ನಲ್ಲಿ ಬಂಧಿಸಿದೆ. ಈ ಎಲ್ಲ ಘಟನಾವಳಿಗಳ ಹಿನ್ನೆಲೆಯಲ್ಲಿ ಪೂರ್ಣಚಿತ್ರ ಒಡಮೂಡಲು ತನಿಖೆಯ ಫಲಶ್ರುತಿಗಾಗಿ ಕಾಯಬೇಕಿದೆ.

ದೆಹಲಿಯಲ್ಲಿ ಭಯೋತ್ಪಾದಕರ ದಾಳಿ ನಡೆದು ಹಲವು ವರ್ಷಗಳೇ ಗತಿಸಿದ್ದವು. ಜಮ್ಮು–ಕಾಶ್ಮೀರ ಹೊರತುಪಡಿಸಿದರೆ ದೇಶದ ಬೇರೆ ಭಾಗಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಯಾವ ದಾಳಿಯೂ ನಡೆದಿರಲಿಲ್ಲ. ಭಯೋತ್ಪಾದನೆಯಿಂದ ದೇಶವನ್ನು ಮುಕ್ತಗೊಳಿಸಲಾಗಿದೆ ಎಂದು ಕೇಂದ್ರ ಸರ್ಕಾರ ಪದೇ ಪದೇ ಹೆಮ್ಮೆಯಿಂದ ಹೇಳಿಕೊಂಡಿದ್ದುಂಟು. ದೆಹಲಿಯಲ್ಲಿ ನಡೆದಿರುವ ಕೃತ್ಯವು ಆಘಾತವನ್ನು ಉಂಟುಮಾಡಿದೆ ಮತ್ತು ಭಯೋತ್ಪಾದನೆಯ ಅಪಾಯ ಇನ್ನೂ ಇದೆ ಎಂಬುದನ್ನು ಮನದಟ್ಟುಮಾಡಿದೆ. ಪ್ರತಿಯೊಂದು ಭಯೋತ್ಪಾದನಾ ದಾಳಿಯೂ ಆಂತರಿಕ ಭದ್ರತೆ ಮತ್ತು ಗುಪ್ತಚರ ವೈಫಲ್ಯದ ಕುರಿತು ಪ್ರಶ್ನೆಗಳನ್ನು ಎತ್ತುವಂತೆ ಮಾಡುತ್ತದೆ. ಅದರಲ್ಲೂ ಅತ್ಯಂತ ಹೆಚ್ಚಿನ ಭದ್ರತೆ ಇರುವ ಪ್ರದೇಶದಲ್ಲಿಯೇ ಈಗಿನ ಕೃತ್ಯ ನಡೆದಿದೆ. 'ಇದೊಂದು ಹೃದಯಹೀನ ಭಯೋತ್ಪಾದಕರ ಕೃತ್ಯ' ಎಂದು ಹೇಳಿ ಸರ್ಕಾರ ಹಾಗೂ ಭದ್ರತಾ ಏಜೆನ್ಸಿಗಳು ತಮ್ಮ ಹೊಣೆಯಿಂದ ನುಣುಚಿಕೊಳ್ಳುವಂತಿಲ್ಲ. ಏಕೆಂದರೆ, ಈ ದುಷ್ಕೃತ್ಯದಿಂದ ಅಮೂಲ್ಯ ಜೀವಗಳು ಬಲಿಯಾಗಿವೆ ಮತ್ತು ಜನರಲ್ಲಿದ್ದ ಸುರಕ್ಷತೆಯ ಭಾವಕ್ಕೂ ಗಾಸಿಯಾಗಿದೆ. ದೇಶದ ಜನರು ನೆಮ್ಮದಿಯಿಂದ ಮತ್ತು ಸುರಕ್ಷತೆಯ ಭಾವದಿಂದ ಬದುಕು ಸಾಗಿಸುವ ಹಕ್ಕನ್ನು ಹೊಂದಿದ್ದಾರೆ ಮತ್ತು ಅವರ ಈ ಹಕ್ಕನ್ನು ಸಂರಕ್ಷಿಸುವುದು ಎಲ್ಲ ಸರ್ಕಾರಗಳ ಹೊಣೆಯಾಗಿದೆ.

ಚಾಟಿ

ಸಮಸ್ಯೆ ಮರೆಮಾಚುವ ಯತ್ನ

ನಾವು ಹಿಂದೂರಾಷ್ಟ್ರವಾಗಿಲ್ಲ. ಆಗಲೂ ಬಯಸುವುದಿಲ್ಲ. ನಿಜವಾದ ಸಮಸ್ಯೆಗಳ ಮೇಲೆ ಗಮನಹರಿಸುವುದರ ಬದಲು, ಜನರನ್ನು ಕೋಮುವಾದಿ ಪದಗಳ ಮೇಲೆ ವಿಭಜಿಸುವ ಮೋಹನ್ ಭಾಗವತ್ ಅವರಂತಹ ಜನಗಳ ಮಾತುಗಳನ್ನು ಕೇಳುತ್ತಾ ಹೋದರೆ, ನಾವು ಖಂಡಿತವಾಗಿಯೂ ಹಿಂದೂ ಅಲ್ಲ; ಕಾಯಂ ಹಿಂದುಳಿದ ರಾಷ್ಟ್ರವಾಗುತ್ತೇವೆ.

ಕಿಶೋರ್, ನಟ, 'ಫೇಸ್‌ಬುಕ್'ನಿಂದ

ಕಿಡಿನುಡಿ

ದೆಹಲಿ ಸ್ಫೋಟವು ಉಗ್ರಕೃತ್ಯವಾಗಿದ್ದರೆ, ಅದನ್ನು ಕೇಂದ್ರ ಗುಪ್ತಚರ ಇಲಾಖೆಯ ವೈಫಲ್ಯ ಎಂದೇ ಭಾವಿಸಬೇಕಾಗುತ್ತದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು, ಬಿಹಾರ ಚುನಾವಣೆಯ ಗುಂಗಿನಿಂದ ಹೊರಬಂದು ತನಿಖೆಯ ಮೇಲೆ ನಿಗಾ ವಹಿಸಬೇಕಿದೆ.

ದಿನೇಶ್ ಗುಂಡೂರಾವ್, ಆಹಾರ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 12-11-2000

• ರಾಣೆಬೆನ್ನೂರು ಉದ್ರಿಕ್ತ ಗಾಳಿಯಲ್ಲಿ ಗುಂಡು

ರಾಣೆಬೆನ್ನೂರು, ನ. 11– ರಾಣೆಬೆನ್ನೂರು ಪಟ್ಟಣದ ಸ್ಮಶಾನ ಭೂಮಿಯ ಬಗ್ಗೆ ಇಲ್ಲಿನ ಎರಡು ಸಮುದಾಯಗಳ ನಡುವೆ ಇರುವ ಹಳೆಯ ವಿವಾದ ಇಂದು ಘರ್ಷಣೆಗೆ ದಾರಿ ಮಾಡಿಕೊಟ್ಟಿದ್ದು, ಸಾರ್ವಜನಿಕ ಆಸ್ತಿಪಾಸ್ತಿ ನಾಶಗೊಳಿಸಿ ಕಲ್ಲೆಸೆತದಲ್ಲಿ ತೊಡಗಿದ್ದ ಗುಂಪುಗಳನ್ನು ಚದುರಿಸಲು ಪೊಲೀಸರು, ನಾಲ್ಕು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿದರು.

ರಾತ್ರಿ 10 ಗಂಟೆಯಲ್ಲೂ ಉದ್ರಿಕ್ತ ಜನರು ಅಲ್ಲಲ್ಲಿ ವಾಹನಗಳು ಹಾಗೂ ಅಂಗಡಿಗಳಿಗೆ ಕಲ್ಲೆಸೆಯುತ್ತಿದ್ದರು. ಪಟ್ಟಣದಲ್ಲಿ ಪೊಲೀಸರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದು, ಹಿಂಸಾಚಾರದಲ್ಲಿ ತೊಡಗಿರುವ ಜನರನ್ನು ಚದುರಿಸಿದರು.

• ಆಪಾದಿತ ಕೇಂದ್ರ ಸಚಿವ ರಾಜೀನಾಮೆ

ನವದೆಹಲಿ, ನ. 11 (ಯುಎನ್‌ಐ)– ಕೊಲೆ ಆರೋಪ ಎದುರಿಸುತ್ತಿರುವ ಕೇಂದ್ರ ರಕ್ಷಣಾ ಖಾತೆಯ ರಾಜ್ಯ ಸಚಿವ ಹಿರೇನ್ ಪಾಠಕ್ ಇಂದು ರಾತ್ರಿ ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದರು.

1985ರ ಮೀಸಲಾತಿ ವಿರೋಧಿ ಗಲಭೆ ಸಂದರ್ಭದಲ್ಲಿ ಹೆಡ್ ಕಾನ್‌ಸ್ಟೆಬಲ್ ಒಬ್ಬರನ್ನು ಹತ್ಯೆ ಮಾಡಿರುವ ಸಂಬಂಧ ಅಹಮದಾಬಾದ್‌ನ ಕೋರ್ಟಿನಲ್ಲಿ ಪಾಠಕ್ ವಿರುದ್ಧ ಆರೋಪಪಟ್ಟಿ ಸಲ್ಲಿಸಲಾಗಿದೆ. ಈ ಹಿನ್ನೆಲೆಯಲ್ಲಿ ಅವರು ರಾಜೀನಾಮೆ ನೀಡಿದ್ದಾರೆ.

75 ವರ್ಷಗಳ ಹಿಂದೆ

ಭಾನುವಾರ, 12-11-1950

• ವಿಶ್ವಸಂಸ್ಥೆಯ ಸಹಾಯ ಕೋರಿ ಟಿಬೆಟ್ ಮೊರೆ

ದೆಹಲಿ, ನ. 11 – ಚೀನಾ ವಿಮೋಚನಾ ಪಡೆಗಳು ಟಿಬೆಟ್ ರಾಷ್ಟ್ರವನ್ನು ಆಕ್ರಮಣ ಮಾಡಿರುವುದರಿಂದ ಉಂಟಾಗಿರುವ ಇಂದಿನ ಪರಿಸ್ಥಿತಿಯಲ್ಲಿ ಮಧ್ಯೆ ಪ್ರವೇಶಿಸಬೇಕೆಂದೂ ಹಾಗೂ ಸಹಾಯ ಒದಗಿಸಬೇಕೆಂದೂ ವಿಶ್ವಸಂಸ್ಥೆಗೆ ದಲಾಯಿ ಲಾಮಾ ಅವರ ಟಿಬೆಟ್ ಸರ್ಕಾರ ಮನವಿ ಕಳುಹಿಸಿದೆ ಎಂಬುದಾಗಿ ಅಧಿಕೃತವಾಗಿ ತಿಳಿದುಬಂದಿದೆ.

ನವೆಂಬರ್ 8ರಂದು ಟಿಬೆಟ್ ಸರ್ಕಾರ ವಿಶ್ವಸಂಸ್ಥೆಗೆ ನೇರವಾಗಿ ಮನವಿ ಕಳುಹಿಸಿದೆ. ಟಿಬೆಟ್ಟಿನ ಈ ಆಪಾದನೆಯನ್ನು ವಿಶ್ವಸಂಸ್ಥೆಯ ಘೋಷಣೆ ರೀತ್ಯ ಭದ್ರತಾ ಸಮಿತಿ ಗಣನೆಗೆ ತೆಗೆದುಕೊಳ್ಳಲೇಬೇಕಾಗುತ್ತದೆ.

ಪಿಎಂಶ್ರೀ: ಸ್ವಾಯತ್ತತೆಗೆ ಇತಿಶ್ರೀ!

ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

ಮಾದರಿ ಶಾಲೆಗಳ ನಿರ್ಮಾಣದ ಹೆಸರಿನ 'ಪಿಎಂಶ್ರೀ' ಯೋಜನೆಯ ಆಳದಲ್ಲಿ ಕೇಂದ್ರ ಸರ್ಕಾರದ ರಾಜಕೀಯ ಹಿತಾಸಕ್ತಿ ಅಡಗಿದೆ. ಈ ಯೋಜನೆ ಸಂಸ್ಕೃತಿಯ ಏಕರೂಪೀಕರಣದ ಪ್ರಯೋಗದಂತಿದೆ ಹಾಗೂ ರಾಜ್ಯ ಸರ್ಕಾರಗಳ ಸ್ವಾಯತ್ತತೆ ಕಸಿಯುವ ಉದ್ದೇಶ ಹೊಂದಿದೆ.

ಪ್ರಧಾನ ಮಂತ್ರಿ ಶಾಲೆಗಳ (ಪಿಎಂಶ್ರೀ) ಒಪ್ಪಂದವನ್ನು ಬಲವಾಗಿ ವಿರೋಧಿಸುತ್ತಿದ್ದ ರಾಜ್ಯಗಳಲ್ಲಿ ಒಂದಾದ ಕೇರಳ, ತನ್ನ ನಿಲುವು ಬದಲಾಯಿಸಿ ಸಹಿ ಮಾಡಲು ಮುಂದಾದ ನಂತರ, ಯೋಜನೆಯ ಬಗ್ಗೆ ಮತ್ತೊಮ್ಮೆ ದೇಶದಾದ್ಯಂತ ಚರ್ಚೆ ನಡೆಯುತ್ತಿದೆ. ಈ ಮೊದಲು ತಮಿಳುನಾಡು, ಪಶ್ಚಿಮ ಬಂಗಾಳ, ಕೇರಳ, ನವದೆಹಲಿ ಮತ್ತು ಪಂಜಾಬ್, ಶಿಕ್ಷಣ ಹಕ್ಕು ಕಾಯ್ದೆಯ ಜಾರಿಗಾಗಿ ಸಮಗ್ರ ಶಿಕ್ಷಣ ಅಭಿಯಾನದ ಅಡಿಯಲ್ಲಿ ಅನುದಾನ ಪಡೆಯಲು, ಪಿಎಂಶ್ರೀ ಯೋಜನೆ ಅಡಿ ರಾಜ್ಯಗಳು ಒಪ್ಪಂದಕ್ಕೆ ಸಹಿ ಮಾಡಬೇಕೆಂಬ ಕೇಂದ್ರದ ನಿಲುವನ್ನು ಬಲವಾಗಿ ಪ್ರತಿಭಟಿಸಿದ್ದವು. ಕೇಂದ್ರದ ಯೋಜನೆ, ರಾಜ್ಯಗಳ ಸ್ವಾಯತ್ತತೆಗೆ ಧಕ್ಕೆ ತರುತ್ತದೆ ಎಂದು ಹೇಳಿದ್ದವು.

ದೇಶದ ಎಲ್ಲಾ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಒದಗಿಸಲು ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರ ಅಗತ್ಯ ಅನುದಾನ ಹಾಗೂ ಹೆಚ್ಚಿನ ಹಣಕಾಸು ಸಹಾಯ ಒದಗಿಸುವ ಹೊಣೆಗಾರಿಕೆಯನ್ನು ಹೊಂದಿದೆ. ಅಂದರೆ ಶೈಕ್ಷಣಿಕ ನೀತಿ, ಕಾನೂನು ನಿರೂಪಣೆ ಹಾಗೂ ಅನುಷ್ಠಾನದ ಜವಾಬ್ದಾರಿಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮಾನವಾಗಿ ಹಂಚಿಕೊಂಡಿವೆ.

ರಾಜ್ಯಗಳಿಂದ ಕೇಂದ್ರ ಸಂಗ್ರಹಿಸುವ ತೆರಿಗೆ ಹಣವನ್ನು, ರಾಜ್ಯಗಳು ಸಂವಿಧಾನದ ರಾಜ್ಯ ನಿರ್ದೇಶಕ ತತ್ವಗಳ ಆಶಯದಂತೆ ಕಲ್ಯಾಣ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಲು ಅನುವಾಗುವಂತೆ ಮರು ಹಂಚಿಕೆ ಮಾಡುವ ಗುರುತರ ಜವಾಬ್ದಾರಿ ಕೇಂದ್ರದ ಮೇಲಿದೆ. ಇದರ ಭಾಗವಾಗಿಯೇ ಕೇಂದ್ರ ಸರ್ಕಾರ ಪ್ರಾರಂಭದಿಂದಲೂ ಹಲವು ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುತ್ತಾ ಬಂದಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ: ಸಮಗ್ರ ಶಿಶು ಅಭಿವೃದ್ಧಿ ಯೋಜನೆ (1975), ಕಪ್ಪು ಹಲಗೆ ಕಾರ್ಯಾಚರಣೆ ಯೋಜನೆ (1986), ಶಿಕ್ಷಾಕರ್ಮಿ ಯೋಜನೆ (1987), ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ (1994), ಮಧ್ಯಾಹ್ನದ ಉಪಾಹಾರ ಯೋಜನೆ (1995), ಸರ್ವ ಶಿಕ್ಷಣ ಅಭಿಯಾನ (2000), ಸಮಗ್ರ ಶಿಕ್ಷಣ ಯೋಜನೆ (2013), ಮುಂತಾದವುಗಳು. ಈ ಹಿಂದೆ ಕೇಂದ್ರದಲ್ಲಿ ಆಡಳಿತ ನಡೆಸಿದ ಸರ್ಕಾರಗಳು ಕೇಂದ್ರ ಪ್ರಾಯೋಜಿತ ಯೋಜನೆಗಳನ್ನು ರಾಜ್ಯಗಳ ಸಹಯೋಗದಲ್ಲಿ ಯಶಸ್ವಿಯಾಗಿ ಜಾರಿಗೊಳಿಸುತ್ತಾ ಬಂದಿದ್ದವು. ಕೇಂದ್ರ ಹಾಗೂ ರಾಜ್ಯ ಸಂಬಂಧಗಳ ನಡುವಿನ ಸಣ್ಣಪುಟ್ಟ ಗೊಂದಲ ಅಥವಾ ತಿಕ್ಕಾಟ ಬಿಟ್ಟರೆ, ಸಂಘರ್ಷ ಅಥವಾ ಬಲವಂತದ ಸರ್ವಾಧಿಕಾರ ಹೇರಿಕೆಗಳಿರಲಿಲ್ಲ.

2014ರ ನಂತರ ಅಧಿಕಾರಕ್ಕೆ ಬಂದ ಸರ್ಕಾರ, ಒಕ್ಕೂಟ ವ್ಯವಸ್ಥೆಯ ಮೂಲ ಗುಣಧರ್ಮವಾದ ಸಹಯೋಗ, ಸಹಕಾರ ಮತ್ತು ಸಮಾನ ಜವಾಬ್ದಾರಿಯ ಮೌಲ್ಯಗಳನ್ನು ಬದಿಗೊತ್ತಿ ಅತೀ ಕೇಂದ್ರೀಕರಣ, ಸಂಘರ್ಷ ಹಾಗೂ ಹೇರಿಕೆಯ ಮೂಲಕ ರಾಜ್ಯ ಸರ್ಕಾರಗಳ ಮೇಲೆ ಸವಾರಿ ಪ್ರಾರಂಭಿಸಿದ್ದು, ನೇರ ಸಂಘರ್ಷಕ್ಕೆ ಕಾರಣವಾಗಿದೆ. ಈ ರಾಜಕೀಯ ಪ್ರೇರಿತ ಸಂಘರ್ಷ ಮಕ್ಕಳ ಗುಣಾತ್ಮಕ ಶಿಕ್ಷಣದ ಮೇಲೆ ನಕಾರಾತ್ಮಕ ಪ್ರಭಾವ ಬೀರುತ್ತಿದೆ. ಉದಾಹರಣೆಗೆ, ಪ್ರೌಢ ಶಿಕ್ಷಣದ ಸಾರ್ವತ್ರೀಕರಣ ಇನ್ನೂ ಕನಸಾಗಿಯೇ ಉಳಿದಿದೆ. ರಾಷ್ಟ್ರಮಟ್ಟದಲ್ಲಿ ಪ್ರೌಢ ಶಿಕ್ಷಣ ಮುಗಿಯುವ ಮುನ್ನವೇ ಶಾಲೆ ತೊರೆಯುವ ಮಕ್ಕಳ ಸಂಖ್ಯೆ ಶೇ 14.1ರಷ್ಟಿದೆ. ನಮ್ಮ ರಾಜ್ಯವೂ ಸೇರಿದಂತೆ ಹಲವು ರಾಜ್ಯಗಳಲ್ಲಿ ಇದು ಶೇ 22ರಷ್ಟಿದೆ. ರಾಜ್ಯ ಸರ್ಕಾರಗಳು ಶೈಕ್ಷಣಿಕ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿ ಮಾಡಲು, ಕೇಂದ್ರದಿಂದ ಕಾನೂನುಬದ್ಧವಾಗಿ ಬರಬೇಕಾದ ಅನುದಾನಗಳಿಗೆ ಗೋಗರೆಯುವಂತಾಗಿದೆ.

ವಾಸ್ತವದಲ್ಲಿ, ದೇಶದ ಎಲ್ಲಾ ಮಕ್ಕಳಿಗೆ ಸಂವಿಧಾನದ ಮೂಲಭೂತ ಹಕ್ಕನ್ನು ಜಾರಿಗೊಳಿಸಲು ರೂಪಿಸಿರುವ ಶಿಕ್ಷಣ ಹಕ್ಕು ಕಾಯ್ದೆಯ ಪ್ರಕರಣ 7ರ ಅಡಿಯಲ್ಲಿ, ಶಿಕ್ಷಣದ ಹಕ್ಕನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ರಾಜ್ಯ ಸರ್ಕಾರಗಳಿಗೆ ಕೇಂದ್ರ ಯಾವ ಬಗೆಯ ಹಣಕಾಸು ಒದಗಿಸಬೇಕೆಂಬುದನ್ನು ಸ್ಪಷ್ಟವಾಗಿ ಬರೆಯಲಾಗಿದೆ. ಅದರಂತೆ, ಕೇಂದ್ರ ಸರ್ಕಾರ ಆರ್‌ಟಿಇ ಅನುಷ್ಠಾನಕ್ಕಾಗಿ ಬಂಡವಾಳ ಮತ್ತು ಆವರ್ತಕ ವೆಚ್ಚದ ಅಂದಾಜುಗಳನ್ನು ಮುಂಗಡವಾಗಿ ತಯಾರಿಸಬೇಕು. ಕಾಲಕಾಲಕ್ಕೆ ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚಿಸಿ ನಿರ್ಧರಿಸಬಹುದಾದಂಥ ಶೇಕಡಾವಾರು ಪಾಲನ್ನು ರಾಜಸ್ವಗಳ ಅನುದಾನ ರೂಪದಲ್ಲಿ ರಾಜ್ಯ ಸರ್ಕಾರಗಳಿಗೆ ಒದಗಿಸಬೇಕು. ಕೇಂದ್ರ ಸರ್ಕಾರ ಯಾವುದೇ ರಾಜ್ಯ ಸರ್ಕಾರಕ್ಕೆ ಒದಗಿಸಬೇಕಾದ ಹೆಚ್ಚುವರಿ ಸಂಪನ್ಮೂಲಗಳ ಅಗತ್ಯಗಳನ್ನು ಪರಿಶೀಲಿಸಲು ಸಂವಿಧಾನದ 280ನೇ ಅನುಚ್ಛೇದದ 3ನೇ ಖಂಡದ 'ಡಿ' ಉಪಖಂಡದ ಅಡಿಯಲ್ಲಿ ಹಣಕಾಸು ಆಯೋಗಕ್ಕೆ ಕೋರಿಕೆ ಸಲ್ಲಿಸುವ ಸಂಬಂಧ ರಾಷ್ಟ್ರಪತಿ ಅವರಿಗೆ ಮನವಿ ಸಲ್ಲಿಸಬಹುದು.

ಈಗಿನ ಕೇಂದ್ರ ಸರ್ಕಾರ, ರಾಜ್ಯಗಳಿಗೆ ನ್ಯಾಯಸಮ್ಮತ ಅನುದಾನ ನೀಡದೆ, ಶಿಕ್ಷಣ ಕ್ಷೇತ್ರದಲ್ಲಿ ತನ್ನ ಪ್ರಾಬಲ್ಯವನ್ನು ಸ್ಥಾಪಿಸಲು ಹೊರಟಿದೆ. ದಿನದಿಂದ ದಿನಕ್ಕೆ ಶಿಕ್ಷಣದ ಕೇಂದ್ರೀಕರಣ ಹೆಚ್ಚುತ್ತಿದ್ದು, ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳ ಸ್ವಾಯತ್ತತೆಗೆ ಧಕ್ಕೆಯಾಗುತ್ತಿದೆ. ಶಿಕ್ಷಣವನ್ನು ವಿಕೇಂದ್ರೀಕರಣಗೊಳಿಸಿ ಸಮನ್ವಯ, ಸಹಕಾರ ಮತ್ತು ಆರ್ಥಿಕ ಬೆಂಬಲದೊಂದಿಗೆ ರಾಜ್ಯಗಳು ಬಲಿಷ್ಠ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಿಕೊಳ್ಳಲು ನೆರವಾಗುವ ಮೂಲಕ ದೇಶದಲ್ಲಿ ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಲು ನೆರವಾಗಬೇಕಿದ್ದ ಕೇಂದ್ರ ಸರ್ಕಾರ– ಸಂಘರ್ಷ, ಷರತ್ತು ಹಾಗೂ ದಬ್ಬಾಳಿಕೆಯ ಮೂಲಕ ರಾಜ್ಯಗಳ ಸ್ವಾಯತ್ತತೆಯ ಮೇಲೆ ಸವಾರಿ ಮಾಡಲು ಮುಂದಾಗಿದೆ.

ತನ್ನ ಗೋಪ್ಯ ರಾಜಕೀಯ ಗುರಿಯನ್ನು ಸಾಧಿಸಲು ಕೇಂದ್ರ ಸರ್ಕಾರ ಚಾಣಾಕ್ಷತನದಿಂದ 'ಪಿಎಂಶ್ರೀ' ಶಾಲಾ ಯೋಜನೆ ರೂಪಿಸಿ, ಅದನ್ನು ಒಂದು ದಾಳವಾಗಿ ಬಳಸುತ್ತಿದೆ. ಮಾದರಿ ಶಾಲೆಗಳ ನಿರ್ಮಾಣದ ಮೂಲಕ ಗುಣಮಟ್ಟದ ಶಿಕ್ಷಣ ಒದಗಿಸುವ ಉದ್ದೇಶ ಹೊಂದಿದೆ ಎಂದು ಯೋಜನೆ ಹೇಳುತ್ತದೆ. ಅದರ ಉದ್ದೇಶ, ಸ್ವರೂಪ, ಷರತ್ತು ಮತ್ತು ಅನುಷ್ಠಾನದ ವಿಧಾನವನ್ನು ಸೂಕ್ಷ್ಮವಾಗಿ ಅವಲೋಕಿಸಿ ನೋಡಿದಾಗ, ಅದು ಶಿಕ್ಷಣ ಸುಧಾರಣೆ ಯೋಜನೆಗಿಂತ ಶಿಕ್ಷಣವನ್ನು ಕೇಂದ್ರದ ನಿಯಂತ್ರಣಕ್ಕೆ ಒಳಪಡಿಸುವ ಮತ್ತು ರಾಜ್ಯಗಳ ಸ್ವಾಯತ್ತತೆಯನ್ನು ಕಸಿದು ಹಿಂಬಾಗಿಲಿನಿಂದ ತನ್ನ ರಾಜಕೀಯಪ್ರೇರಿತ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸುವ ಹೊಸ ಕಾರ್ಯತಂತ್ರವಾಗಿದೆ.

'ಪಿಎಂಶ್ರೀ' ಯೋಜನೆಯಡಿ ರಾಜ್ಯಗಳಲ್ಲಿ ಬೆರಳೆಣಿಕೆಯಷ್ಟು ರಾಜ್ಯ ಸ್ಥಾಪಿತ ಶಾಲೆಗಳಿಗೆ, 60:40 ಅನುಪಾತದಲ್ಲಿ (ಕೇಂದ್ರದಿಂದ ಶೇ 60 ಮತ್ತು ರಾಜ್ಯದಿಂದ ಶೇ 40) ಹಣಕಾಸಿನ ನೆರವು ದೊರೆಯುತ್ತದೆ. ಯೋಜನೆಯ ಉಸ್ತುವಾರಿ ಮತ್ತು ವರದಿ ವಿಧಿ-ವಿಧಾನಗಳು ಕೇಂದ್ರದಿಂದಲೇ ನಿರ್ಧಾರವಾಗುತ್ತವೆ. ಇದು ಎಷ್ಟು ಹಾಸ್ಯಾಸ್ಪದವೆಂದರೆ, ಸಂವಿಧಾನದ ಅನ್ವಯ ತಾಂತ್ರಿಕ ಶಿಕ್ಷಣ ಹಾಗೂ ವೈದ್ಯಕೀಯ ಶಿಕ್ಷಣವೂ ಸೇರಿದಂತೆ ಶಾಲಾ ಶಿಕ್ಷಣದ ಹಂತದಿಂದ ವಿಶ್ವವಿದ್ಯಾಲಯ ಶಿಕ್ಷಣದವರೆಗೆ ಶಿಕ್ಷಣ ವ್ಯವಸ್ಥೆಯನ್ನು ನಿರ್ವಹಿಸಲು ತಮ್ಮ ಆಯವ್ಯಯದ ಶೇ 10ರಿಂದ ಶೇ 20ರಷ್ಟು ದೊಡ್ಡ ಮೊತ್ತದ ಹಣವನ್ನು ವ್ಯಯಿಸುವ ರಾಜ್ಯ ಸರ್ಕಾರಗಳು, ಒಂದು ಸಣ್ಣ ಅನುದಾನಕ್ಕೆ ಕೇಂದ್ರದ ಮುಂದೆ ಮಂಡಿಯೂರುವ ಅಗತ್ಯವಾದರೂ ಏನು? ಇದು ಒಕ್ಕೂಟ ವ್ಯವಸ್ಥೆಯ ಮೂಲಧರ್ಮಕ್ಕೆ ಅಪಚಾರವಲ್ಲವೇ? ಆರ್‌ಟಿಇ ಉಲ್ಲಂಘನೆಯಲ್ಲವೇ?

ಶಿಕ್ಷಣವೆಂದರೆ ಬೆಂಚು, ಕುರ್ಚಿ, ಸೋಲಾರ್ ಪ್ಯಾನಲ್ ಮಾತ್ರವಲ್ಲ. ಅದು ಅಲ್ಲಿನ ಜನರ ಭಾಷೆ, ಸಂಸ್ಕೃತಿ, ಸಾಮಾಜಿಕ ವಾತಾವರಣ ಮತ್ತು ಸ್ಥಳೀಯ ಅಗತ್ಯಗಳನ್ನು ಆಧರಿಸಿ ರೂಪಿಸುವ ಯೋಜನೆ. ಅದರಲ್ಲಿ ರಾಜ್ಯದ ಅಸ್ಮಿತೆ ಅಡಗಿದೆ. ಇದೆಲ್ಲವನ್ನೂ ಧಿಕ್ಕರಿಸುವ ಪಿಎಂಶ್ರೀ ಯೋಜನೆ, 'ನಾನು ಹೇಳಿದ್ದನ್ನು ಮಾಡು' ಎಂಬ ಸರ್ವಾಧಿಕಾರದ ನೆಲೆಯಲ್ಲಿ ಶಿಕ್ಷಣವನ್ನು ರಾಜಕೀಯ ಪ್ರಚಾರದ ಯಂತ್ರವಾಗಿ ಬಳಸಲು ಪ್ರಯತ್ನಿಸುತ್ತಿದೆ. ಈ ಯೋಜನೆ ಮೇಲ್ನೋಟಕ್ಕೆ 'ಮಾದರಿ ಶಾಲೆಗಳ ನಿರ್ಮಾಣ'ದ ಮುಖವಾಡ ಧರಿಸಿದೆ. ಆದರೆ, ರಾಜ್ಯಗಳ ಸ್ವಾಯತ್ತೆಯನ್ನು ಕಸಿದು ಸಂವಿಧಾನವನ್ನು ದುರ್ಬಲಗೊಳಿಸುವ ವಿನ್ಯಾಸ ಇದಾಗಿದೆ; 'ಒಂದು ರಾಷ್ಟ್ರ, ಒಂದು ಭಾಷೆ, ಒಂದು ಪಠ್ಯಕ್ರಮ, ಒಂದು ದೃಷ್ಟಿಕೋನ, ಒಂದು ಪಿಎಂ ಯೋಜನೆ' ಹೇರುವ ಯೋಜಿತ ದುರುದ್ದೇಶದ ರಾಜಕೀಯ ಯೋಜನೆಯಾಗಿದೆ. ಸರಳವಾಗಿ ಹೇಳಬೇಕೆಂದರೆ, ಇದು ಸಂಸ್ಕೃತಿಯ ಏಕರೂಪೀಕರಣದ ರಾಜಕೀಯ ಪ್ರಯೋಗ.

ಯೋಜನೆಯ ಹೆಸರಿನಲ್ಲಿ 'ಪ್ರಧಾನ ಮಂತ್ರಿ ಶಾಲೆ' ಎಂಬ ರಾಜಕೀಯ ಹೆಗ್ಗುರುತು ಅಂಟಿದೆ. ಆಯ್ಕೆಯಾಗುವ ಪ್ರತಿ ಶಾಲೆಯ ಫಲಕ, ಶಿಕ್ಷಕರು, ಮಕ್ಕಳು, ಪಾಲಕರು, ಪಂಚಾಯಿತಿ ಮತ್ತು ಆಯಾ ಊರಿನ ಸಮುದಾಯ ದಿನನಿತ್ಯ 'ಪ್ರಧಾನ ಮಂತ್ರಿ' ಹೆಸರನ್ನು ಜಪಿಸುವ ಯೋಜನೆಯಾಗಿದೆ. ಖರೀದಿಸುವ ಪ್ರತಿಯೊಂದು ವಸ್ತು, ಬರೆಯುವ ಲೆಕ್ಕ, ಮೌಲ್ಯಮಾಪನ ವರದಿ, ಎಲ್ಲವೂ ಕೇಂದ್ರದ 'ಪ್ರಧಾನ ಮಂತ್ರಿ' ಬ್ರ್ಯಾಂಡ್‌ನ ಭಾಗವಾಗಿದೆ; ಶಿಕ್ಷಣದ ಹೆಸರಿನಲ್ಲಿ ರಾಜಕೀಯ ಪ್ರಚಾರಕ್ಕಾಗಿ ರೂಪಿಸಿದ ವಿಶೇಷ ಅಭಿಯಾನವಾಗಿದೆ. ಇದಕ್ಕೆ ಸಾಕ್ಷಿಯೆಂಬಂತೆ, 2015ರಲ್ಲಿ ರೂಪಿಸಲಾಗಿದ್ದ 'ಬೇಟಿ ಬಚಾವೋ ಬೇಟಿ ಪಢಾವೋ' ಯೋಜನೆ ಅಡಿಯಲ್ಲಿ 2016–2019ರ ಅವಧಿಯಲ್ಲಿ ಬಿಡುಗಡೆಯಾದ ಒಟ್ಟು ಮೊತ್ತ ₹446.72 ಕೋಟಿಯಲ್ಲಿ ಶೇ 78.91ರಷ್ಟು ಹಣವನ್ನು ಮಾಧ್ಯಮ ಪ್ರಚಾರ ಹಾಗೂ ವಕಾಲತ್ತಿಗಾಗಿ ಖರ್ಚು ಮಾಡಲಾಗಿತ್ತು ಎಂಬ ಮಹಿಳಾ ಸಬಲೀಕರಣ ಕುರಿತಾದ ಸಂಸದೀಯ ಸಮಿತಿಯ ವರದಿಯನ್ನು ಇದನ್ನು ಪುಷ್ಟೀಕರಿಸುತ್ತದೆ.

ವಾಚಕರ ವಾಣಿ

ಮೂಲಭೂತವಾದಕ್ಕೆ ವಿದ್ಯಾವಂತರೇ ಬಲಿ

ಧಾರ್ಮಿಕ ಮೂಲಭೂತವಾದಕ್ಕೆ ಉನ್ನತ ವ್ಯಾಸಂಗ ಮಾಡಿದ ವೈದ್ಯರು, ಎಂಜಿನಿಯರ್‌ಗಳೇ ಹೆಚ್ಚಾಗಿ ಬಲಿಯಾಗುತ್ತಿರುವುದು ವಿಪರ್ಯಾಸ. ದೇವರಲ್ಲಿ ಅಚಲ ನಂಬಿಕೆ ಇಟ್ಟವರು, ಧರ್ಮ ರಕ್ಷಣೆಯನ್ನು ತಮ್ಮ ದೇವರಿಗೆ ಏಕೆ ಬಿಡುವುದಿಲ್ಲ? ಇದಕ್ಕೆ ಮಾನವರನ್ನು ಬಳಸಿಕೊಳುವುದು ಏಕೆ? ದೇವರ ಅಸ್ತಿತ್ವದಲ್ಲಿ ನಂಬಿಕೆ; ಆದರೆ, ದೇವರ ಸಾಮರ್ಥ್ಯದಲ್ಲಿ ಅಪನಂಬಿಕೆ ಸರಿಯೆ? ಮೂಲಭೂತವಾದಿಗಳ ಈ ವಿರೋಧಾಭಾಸವನ್ನು ಅರ್ಥ ಮಾಡಿಕೊಳ್ಳಲು ಆಗದವರು ಅದು ಹೇಗೆ ಉನ್ನತ ಶಿಕ್ಷಣ ಪೂರೈಸುತ್ತಾರೆ ಎಂಬುದು ಬಿಡಿಸಲಾಗದ ಕಗ್ಗಂಟು.

ರಾಜೇಂದ್ರ, ಬೆಂಗಳೂರು

ಪೋಕ್ಸೊ ದುರ್ಬಳಕೆ: ಜಾಗೃತಿಯೇ ಮದ್ದು

ಪೋಕ್ಸೊ ಕಾಯ್ದೆ ಜಾರಿಗೊಂಡಾಗ, ಮಕ್ಕಳ ನಗು ಉಳಿಸುವ ಭರವಸೆ ಆಗಿತ್ತು. ಇದೀಗ ಕೆಲವರ ಸ್ವಾರ್ಥದ ಕೈಯಲ್ಲಿ ಶಸ್ತ್ರವಾಗಿ ಮಾರ್ಪಟ್ಟಿದೆ. ಈ ಕುರಿತಂತೆ ಸುಪ್ರೀಂ ಕೋರ್ಟ್‌ನ ಕಳವಳವು ಕೇವಲ ಕಾನೂನಿನ ಮಾತಲ್ಲ; ಅದು ನ್ಯಾಯದ ಅಳಲು ಕೂಡ ಆಗಿದೆ. ಕಾಯ್ದೆಯನ್ನು ದುರ್ಬಳಕೆ ಮಾಡಿಕೊಳ್ಳುವವರು ನೆರಳಿನಲ್ಲಿ ನಿಂತು ನಗುವಾಗ ನಿರಪರಾಧಿ ಯುವಕರು ಕಾನೂನಿನ ಸಂಕೋಲೆಗೆ ಸಿಲುಕುತ್ತಾರೆ. ಮಕ್ಕಳ ಭದ್ರತೆ ಕಾಪಾಡುವುದು ನಮ್ಮ ಕರ್ತವ್ಯ. ಆದರೆ, ಮಾನವೀಯತೆಯ ಮಿತಿ ದಾಟಿ ಕಾನೂನು ದುರ್ಬಳಕೆ ಆಗಬಾರದು. ಇದು ಸುಪ್ರೀಂ ಕೋರ್ಟ್‌ನ ಆಶಯವೂ ಹೌದು. ಕಾಯ್ದೆ ಬಗ್ಗೆ ಮಕ್ಕಳು ಮತ್ತು ಪೋಷಕರಲ್ಲಿ ಜಾಗೃತಿ ಮೂಡಿಸಬೇಕಿದೆ.

ಬಸವಚೇತನ ಹೂಗಾರ್, ಬೀದರ್

ಚುನಾವಣಾ ಆಯೋಗಕ್ಕೆ ಸತ್ವ ಪರೀಕ್ಷೆ

ಇತ್ತೀಚೆಗೆ ಚುನಾವಣಾ ಆಯೋಗದ ಮೇಲೆ ಜನರು ಅನುಮಾನಪಡುವಂತಹ ಬೆಳವಣಿಗೆಗಳು ನಡೆಯುತ್ತಿವೆ. ಆಡಳಿತ ಪಕ್ಷಕ್ಕೆ ಅನುಕೂಲ ಆಗುವಂತೆ ಆಯೋಗ ನಡೆದುಕೊಳ್ಳುತ್ತಿದೆ ಎಂದು ವಿರೋಧ ಪಕ್ಷದ ನಾಯಕರು ದಾಖಲೆಗಳ ಸಮೇತ ಆರೋಪಿಸುತ್ತಿದ್ದಾರೆ. ಆದರೆ, ಈ ಆರೋಪಗಳನ್ನು ಆಯೋಗವು ಗಂಭೀರವಾಗಿ ಪರಿಗಣಿಸಿದಂತೆ ಕಾಣುತ್ತಿಲ್ಲ.

ದೇಶದ ಮತದಾರರ ಪಟ್ಟಿಯಲ್ಲಿ ಬ್ರೆಜಿಲ್‌ನ ಮಹಿಳಾ ರೂಪದರ್ಶಿಯ ಫೋಟೊ ಬಳಕೆ ಆಗಿರುವುದು ಅಕ್ಷಮ್ಯ. ಈ ರೀತಿಯ ಪ್ರಕರಣಗಳಿಂದ ಜನರಿಗೆ ಆಯೋಗದ ಮೇಲೆ ಅನುಮಾನ ಬಲಗೊಳ್ಳುತ್ತದೆ. ಹಾಗಾಗಿ, ಸಾಂವಿಧಾನಿಕ ಸಂಸ್ಥೆಯಾದ ಚುನಾವಣಾ ಆಯೋಗವು, ತನ್ನ ನಿಷ್ಪಕ್ಷಪಾತ ಕೆಲಸದ ಬಗ್ಗೆ ಗಟ್ಟಿತನ ಪ್ರದರ್ಶಿಸುವ ಸವಾಲು ಎದುರಾಗಿದೆ.

ಸುಜಾತಾ, ರಾಯಚೂರು

ಜೈಲು ಅಧಿಕಾರಿಗಳಿಗೆ ಕಠಿಣ ಶಿಕ್ಷೆಯಾಗಲಿ

ಅಪರಾಧಿಗಳನ್ನು ನ್ಯಾಯಾಲಯವು ಜೈಲಿಗಟ್ಟುತ್ತದೆ. ಜೈಲಿನ ಅಧಿಕಾರಿಗಳು ಅಪರಾಧಿಗಳಿಂದ ಲಂಚ ಪಡೆದು ಅವರ ಕೈಗೆ ಮೊಬೈಲ್ ಫೋನ್, ಸಿಗರೇಟ್, ಮದ್ಯ ಹಾಗೂ ಮಾದಕ ಪದಾರ್ಥ ನೀಡುತ್ತಾರೆ. ಅಪರಾಧಿಗಳ ಕೊಠಡಿಗೆ ಟಿ.ವಿ ವ್ಯವಸ್ಥೆ ಕಲ್ಪಿಸುತ್ತಾರೆ. ತಪ್ಪು ಮಾಡಿದವರನ್ನು ಒದ್ದು ಒಳಗೆ ಹಾಕಬಹುದು. ಒಳಗಿರುವವರೇ ತಪ್ಪು ಮಾಡಿದರೆ ಒದ್ದು ಹೊರಹಾಕಲಾಗುವುದೇ?

ಪಿ.ಜೆ. ರಾಘವೇಂದ್ರ, ಮೈಸೂರು

ಕೇರಿ ಪದ್ಧತಿ ಬಗ್ಗೆ ಮೌನ ಮುರಿಯಿರಿ

ಭಾರತದ ಬಗ್ಗೆ ಮಾತನಾಡುವಾಗ ನಾವು ಜಾತಿ ಪದ್ಧತಿಯ ಬಗ್ಗೆ ಮಾತನಾಡುತ್ತೇವೆ. ಆದರೆ, ದೇಶದಲ್ಲಿರುವ ಕೇರಿ ಪದ್ಧತಿಯ ಬಗ್ಗೆ ಮಾತನಾಡುವುದಿಲ್ಲ. ಬ್ರಾಹ್ಮಣ, ಒಕ್ಕಲಿಗ, ಲಿಂಗಾಯತ, ಮಾದಿಗ, ಲಂಬಾಣಿ, ಮುಸ್ಲಿಂಮರು ಸೇರಿದಂತೆ ಎಲ್ಲಾ ಜಾತಿಯ ಕೇರಿಗಳು ಇವೆ. ಒಂದು ಸಮುದಾಯದ ಜನರು ಮತ್ತೊಂದು ಸಮುದಾಯದ ಕೇರಿಗೆ ಹೋಗಲು ಅಷ್ಟೇಕೆ ಭಯ? ಇದರ ಬಗ್ಗೆಯೂ ಚರ್ಚೆ ಆಗಬೇಕಲ್ಲವೆ?

ನಾಗಾರ್ಜುನ, ಬೆಂಗಳೂರು

ಹಂದಿ ಸ್ಥಳಾಂತರ: ಮಾರ್ಗಸೂಚಿ ರೂಪಿಸಿ

ಸುಪ್ರೀಂ ಕೋರ್ಟ್ ಇತ್ತೀಚೆಗೆ ಬೀದಿನಾಯಿ, ಬೀಡಾಡಿ ದನಗಳ ಸ್ಥಳಾಂತರಕ್ಕೆ ಸೂಚನೆ ನೀಡಿದೆ. ಈ ಆದೇಶ ಸಾಮಾನ್ಯ ಜನರಿಗೆ ನೆಮ್ಮದಿ ತಂದಿದೆ. ರಾಜ್ಯದ ಹಲವು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಹಂದಿಗಳ ಹಾವಳಿ ಮಿತಿಮೀರಿದೆ. ಇದು ಪೌರ ಸಿಬ್ಬಂದಿಗೆ ಸ್ವಚ್ಛತೆ ಕಾಪಾಡಲು ಮತ್ತು ನಿಯಂತ್ರಿಸಲು ಸವಾಲಾಗಿದೆ. ರಸ್ತೆಗಳಲ್ಲಿ ಅಡ್ಡಾದಿಡ್ಡಿಯಾಗಿ ಸಂಚರಿಸುತ್ತಾ ವಾಹನ ಸವಾರರ ಜೀವಕ್ಕೆ ಸಂಚಕಾರ ತರುತ್ತವೆ. ಹಾಗಾಗಿ, ರಾಜ್ಯ ಸರ್ಕಾರವು ನಗರ ಪ್ರದೇಶದೊಳಗಿರುವ ಹಂದಿಗಳ ಸ್ಥಳಾಂತರಕ್ಕೂ ಮಾರ್ಗಸೂಚಿ ರೂಪಿಸಬೇಕಿದೆ.

ಸುರೇಶ ಅರಳಿಮರ, ಬಾದಾಮಿ

ಎಲ್ಲರಿಗೂ ಮಾದರಿ ಈ 'ಶಾಂತಿಯಮ್ಮ'

ಕಲಬುರಗಿ ಜಿಲ್ಲೆಯ ಶಾಂತಿಯಮ್ಮ ಎಂಬ ಲಿಂಗತ್ವ ಅಲ್ಪಸಂಖ್ಯಾತೆಯು ತನ್ನ ಉಳಿತಾಯದ ಹಣದಲ್ಲಿ ಮುಸ್ಲಿಮರಿಗೆ ದರ್ಗಾ ಮತ್ತು ಹಿಂದೂಗಳಿಗೆ ದೇಗುಲ ನಿರ್ಮಿಸಿರುವುದು ಶ್ಲಾಘನೀಯ. ಅವರು ಬಹುತ್ವದ ರಾಯಭಾರಿಯಾಗಿ ಕಂಗೊಳಿಸಿದ್ದಾರೆ. ಇಡೀ ದೇಶವೇ ಕೋಮುದಳ್ಳುರಿಯಲ್ಲಿ ಬೇಯುತ್ತಿದೆ. ಇಂತಹ ಸನ್ನಿವೇಶದಲ್ಲಿ ಚನ್ನಪಟ್ಟಣದ ಮುಸ್ಲಿಂ ಸಮುದಾಯದ ಶ್ರೀಮಂತರೊಬ್ಬರು ದೇವಾಲಯ ನಿರ್ಮಿಸಲು ನೆರವು ನೀಡಿದ್ದಾರೆ.

ಹಾಗೆಯೇ, ಮೈಸೂರು ಜಿಲ್ಲೆಯ ಜಯಪುರ ಗ್ರಾಮದಲ್ಲಿ ಜಾಮಿಯಾ ಮಸೀದಿ ನಿರ್ಮಾಣ ಕಾರ್ಯಕ್ಕೆ ಗ್ರಾಮದ ಹಿಂದೂ ಮುಖಂಡರು ದೇಣಿಗೆ ನೀಡಿದ್ದು ವರದಿಯಾಗಿದೆ. ಈ ಮಾನವತೆ ಮತ್ತು ಜಾತ್ಯತೀತತೆಯ ತಂಗಾಳಿ ಇಡೀ ದೇಶದಾದ್ಯಂತ ಜೋರಾಗಿ ಬೀಸಬೇಕಿದೆ.

ಮೋದೂರು ಮಹೇಶಾರಾಧ್ಯ, ಹುಣಸೂರು

ಚುರುಮುರಿ

ನಾಯಿ ನೀತಿ

• ಮಣ್ಣೆ ರಾಜು

ಅಪಘಾತದಲ್ಲಿ ಗಾಯಗೊಂಡು ಗೋಪಾಲಿ ಹಾಸಿಗೆ ಹಿಡಿದಿದ್ದ. ಬ್ರೆಡ್ಡು, ಬಾಳೆಹಣ್ಣು ತಗೊಂಡು ಶಂಕ್ರಿ, ಸುಮಿ ಆರೋಗ್ಯ ವಿಚಾರಿಸಲು ಬಂದಿದ್ದರು.

'ಅಪಘಾತ ಹೇಗಾಯ್ತೋ ಗೋಪಾಲಿ?' ಶಂಕ್ರಿ ಕೇಳಿದ.

'ಅವರನ್ನು ಕೇಳಬೇಡಿ, ಬಂದವರಿಗೆಲ್ಲಾ ಅಪಘಾತದ ವಿವರ ಹೇಳಿ ಹೇಳಿ ಅವರಿಗೆ 'ಉಪಘಾತ'ವಾಗಿದೆ. ನಾನು ಹೇಳ್ತೀನಿ, ಬೈಕಿನಲ್ಲಿ ಬರುತ್ತಿದ್ದಾಗ ಬೀದಿನಾಯಿ ಅಟ್ಟಿಸಿಕೊಂಡು ಬಂತಂತೆ, ಗಾಬರಿಯಾಗಿ ರಸ್ತೆ ಗುಂಡಿಗೆ ಬಿದ್ದು ಹೀಗೆ ಮಾಡಿಕೊಂಡಿದ್ದಾರೆ...' ಗೋಪಾಲಿ ಹೆಂಡ್ತಿ ವೈಶಾಲಿ ಕಣ್ಣು ಒರೆಸಿಕೊಂಡಳು.

'ರಸ್ತೆ ಗುಂಡಿ, ಬೀದಿನಾಯಿ ಎರಡೂ ಅಪಘಾತಕಾರಿಗಳೇ, ಗುಂಡಿ ಮುಚ್ಚಬಹುದು. ನಾಯಿಯ ಬಾಯಿ ಮುಚ್ಚಲಾಗುವುದಿಲ್ಲ' ಸುಮಿ ಸಂಕಟಪಟ್ಟಳು.

'ಹೌದು. ನಾಯಿ ನಮ್ಮನ್ನು ಕಚ್ಚುವುದು ಅಪರಾಧವಲ್ಲ, ನಾವು ನಾಯಿಯನ್ನು ಕಚ್ಚೋದು ಅಪರಾಧ ಎನ್ನುವಂತಾಗಿದೆ' ಅಂದ ಗೋಪಾಲಿ.

'ಬೀದಿನಾಯಿ ಕಾಡುಪ್ರಾಣಿಯೋ ನಾಡು ಪ್ರಾಣಿಯೊ?'

'ಸದ್ಯಕ್ಕೆ ಕಾಡುವ ಪ್ರಾಣಿ. ಕಾಡಿನಲ್ಲಿ ನೆಲೆಯಿಲ್ಲ, ನಾಡಿನಲ್ಲಿ ಬೆಲೆಯಿಲ್ಲ. ಬೀದಿನಾಯಿಗಳ ಬಾಳು ತ್ರಿಶಂಕುವಾಗಿದೆ'.

'ಬೀದಿನಾಯಿಗಳ ಹಾವಳಿ ತಡೆಯಲು ಸರ್ಕಾರ ನಾಯಿ ನೀತಿ ರೂಪಿಸಬೇಕು. ಆಶ್ರಯ ಕೇಂದ್ರಗಳಲ್ಲಿ ಬೀದಿನಾಯಿಗಳಿಗೆ ಆಶ್ರಯ ಕಲ್ಪಿಸಬೇಕು ಎಂದು ಕೋರ್ಟ್ ಹೇಳಿದೆ'.

'ಬೀದಿನಾಯಿಗಳ ಸಂತತಿ ಜಾಸ್ತಿಯಾಗ್ತಿದೆ. ಅವುಗಳಿಗೂ ಕುಟುಂಬ ಕಲ್ಯಾಣ ನೀತಿ ಜಾರಿ ಮಾಡಬೇಕು, ಆರತಿಗೊಂದು ಮರಿ, ಕೀರುತಿಗೊಂದು ಮರಿ ಸಾಕು ಎಂದು ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ಮಾಡಬೇಕಂತೆ'.

'ಬೀದಿನಾಯಿಗಳಿಗೆ ಉದ್ಯೋಗ ಕೊಟ್ಟರೆ ಕಾಯಕ ಮಾಡಿಕೊಂಡು ತಮ್ಮ ಕಾಲು ಮೇಲೆ ತಾವು ನಿಂತುಕೊಳ್ಳುತ್ತವೆ'.

'ಎಜುಕೇಷನ್ ಇಲ್ಲ, ಲಾಂಗ್ವೇಜ್ ಗೊತ್ತಿಲ್ಲದ ಬೀದಿನಾಯಿಗಳು ಯಾವ ಉದ್ಯೋಗ ಮಾಡುತ್ತವೆ?'

'ಮನೆ, ಕಚೇರಿ, ಕಂಪನಿ, ಕಾರ್ಖಾನೆಗಳ ಕಾವಲಿಗೆ ಬೀದಿನಾಯಿಗಳನ್ನು ನೇಮಿಸಬಹುದು. ಊಟ ಕೊಟ್ಟರೆ ಸಾಕು ಸಂಬಳ-ಸಾರಿಗೆ ಕೇಳೋದಿಲ್ಲ...'

'ಆದರೂ, ಬೀದಿನಾಯಿಗಳು ಬೀದಿಗೆ ಬಾರದಂತೆ ತಡೆಯೋದು ಅನ್ಯಾಯ ಅಲ್ವಾ?' ಗೋಪಾಲಿ ನರಳುತ್ತಾ ಮಗ್ಗುಲಾದ.

ಸಂಗತ

ಮದ್ಯವ್ಯಸನಕ್ಕೆ 'ಸ್ವಾಸ್ಥ್ಯ ಸಂಕಲ್ಪ'ವೇ ಮದ್ದು

ಮದ್ಯಪಾನ ನಿಷೇಧ ಸದ್ಯದ ಸಂದರ್ಭದಲ್ಲಿ ಪ್ರಾಯೋಗಿಕವಲ್ಲ. ಮದ್ಯ ವ್ಯಸನದ ಅಪಾಯಗಳ ಬಗ್ಗೆ ಶಾಲಾ ಮಕ್ಕಳಿಗೆ ಅರಿವು ಮೂಡಿಸುವ ತುರ್ತಿದೆ.

• ಡಾ. ಮುರಳೀಧರ ಕಿರಣಕೆರೆ

ಸುಮಾರು ನಾಲ್ಕು ದಶಕಗಳಿಂದ ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ತೊಡಗಿಸಿಕೊಂಡಿರುವ ಸೇವಾ ಸಂಸ್ಥೆಯೊಂದು ಹಮ್ಮಿಕೊಂಡಿದ್ದ ಮದ್ಯವರ್ಜನ ಶಿಬಿರವದು. ಮದ್ಯವ್ಯಸನಿಗಳನ್ನು ವ್ಯಸನದಿಂದ ಮುಕ್ತಗೊಳಿಸುವ ಸಾಮಾಜಿಕ ಕಳಕಳಿಯ ಕಾರ್ಯಕ್ರಮ ಒಂದು ವಾರ ನಡೆಯುತ್ತದೆ. ವ್ಯಾಯಾಮ, ಯೋಗ, ಧ್ಯಾನ, ಭಜನೆ, ಸಮಾಲೋಚನೆ, ಸಲಹೆ, ಉಪನ್ಯಾಸ, ಮನರಂಜನಾ ಕಾರ್ಯಕ್ರಮಗಳ ಮೂಲಕ ಕುಡುಕರ ಮನಃಪರಿವರ್ತನೆ ಮಾಡಿ ಚಟದಿಂದ ದೂರ ಮಾಡಲಾಗುತ್ತದೆ. ಕುಡಿತದಿಂದ ಹೊರಬಂದವರನ್ನು ನಂತರದಲ್ಲಿ ಹೇಗೆ ಕಾಳಜಿಯಿಂದ ನೋಡಿಕೊಳ್ಳಬೇಕೆಂದು ಕುಟುಂಬದವರಿಗೂ ಮಾರ್ಗದರ್ಶನ ನೀಡಲಾಗುತ್ತದೆ. ಪಾನಮುಕ್ತರಾದವರ ಸಮಿತಿಗಳನ್ನು ರಚಿಸಿ ಮತ್ತೆ ದುಶ್ಚಟದ ಹಾದಿಗೆ ಮರಳದಂತೆ ನಿಗಾ ವಹಿಸುವ ವ್ಯವಸ್ಥೆಯಿಂದಾಗಿ ಈ ಶಿಬಿರಗಳ ಯಶಸ್ಸಿನ ಪ್ರಮಾಣ ಹೆಚ್ಚು.

ನಿರಂತರ ಕುಡಿತದಿಂದಾಗುವ ದೈಹಿಕ, ಮಾನಸಿಕ, ಸಾಮಾಜಿಕ, ಆರ್ಥಿಕ ದುಷ್ಪರಿಣಾಮಗಳು ಮನವರಿಕೆಯಾದಾಗ ಶಿಬಿರಾರ್ಥಿಗಳದ್ದು ಒಂದೇ ಆಕ್ರೋಶದ ಪ್ರಶ್ನೆ. 'ಸರ್ಕಾರವೇಕೆ ಸಂಪೂರ್ಣ ಪಾನನಿಷೇಧ ಜಾರಿ ಮಾಡಬಾರದು? ಇದರಿಂದ ಲಕ್ಷಾಂತರ ಕುಟುಂಬಗಳು ಹಾಳಾಗುವುದನ್ನು ತಪ್ಪಿಸಬಹುದಲ್ಲ'. ಇಂತಹ ಪ್ರಶ್ನೆ ಕೇವಲ ಮದ್ಯವರ್ಜನ ಶಿಬಿರಗಳಲ್ಲಷ್ಟೇ ಅಲ್ಲ, ಶಾಲಾ–ಕಾಲೇಜುಗಳಲ್ಲಿನ ಮದ್ಯ, ಮಾದಕದ್ರವ್ಯಗಳ ದುಷ್ಪರಿಣಾಮಗಳನ್ನು ಸಾರುವ 'ಸ್ವಾಸ್ಥ್ಯ ಸಂಕಲ್ಪ' ಕಾರ್ಯಕ್ರಮಗಳಲ್ಲೂ ವಿದ್ಯಾರ್ಥಿಗಳು ಕೇಳುತ್ತಾರೆ.

ತಂಬಾಕು, ಮದ್ಯದ ಮೇಲೆ ಸಂಪೂರ್ಣವಾಗಿ ನಿಷೇಧ ಹೇರಿದರೆ ಸಮಸ್ಯೆಗಳೆಲ್ಲಾ ಸುಲಭವಾಗಿ ಬಗೆಹರಿಯುತ್ತವಲ್ಲ ಎಂಬುದು ಬಹುತೇಕರ ಅಭಿಮತ. ಆದರೆ, ವಿಷಯ ಅಷ್ಟು ಸರಳವಾಗಿಲ್ಲ.

ನಿಷೇಧ ಹೇರುವುದರಿಂದ ನಕಲಿ ಮದ್ಯದ ಹಾವಳಿ ಹೆಚ್ಚುತ್ತದೆ. ವಿಷಪೂರಿತ, ಆರೋಗ್ಯಕ್ಕೆ ಅಪಾಯ ಉಂಟುಮಾಡುವ ಕಲಬೆರಕೆ ಪಾನೀಯಗಳ ಸೇವನೆಯಿಂದ ಅಮಾಯಕರ ಬಲಿಯಾಗುತ್ತದೆ. ಒಂದು ಮಿತಿಯೊಳಗೆ ಮದ್ಯ ಸೇವನೆಯನ್ನು ತಮ್ಮ ಆಹಾರ ಪದ್ಧತಿ, ಸಂಸ್ಕೃತಿಯ ಭಾಗವಾಗಿಸಿಕೊಂಡವರಿಗೆ ತೊಂದರೆಯಾಗುತ್ತದೆ. ಬಹುಮುಖ್ಯ ವಿಷಯವೆಂದರೆ, ಸರ್ಕಾರಕ್ಕೆ ಇದು ಆದಾಯದ ಪ್ರಮುಖ ಮೂಲ. ನಮ್ಮ ರಾಜ್ಯ ಸರ್ಕಾರವೊಂದೇ ಅಬಕಾರಿ ಬಾಬತ್ತಿನಲ್ಲಿ ವರ್ಷವೊಂದಕ್ಕೆ ನಿರೀಕ್ಷಿಸುವ ಆದಾಯ, ಸುಮಾರು ನಲವತ್ತು ಸಾವಿರ ಕೋಟಿ ರೂಪಾಯಿ! ಇಷ್ಟು ವರಮಾನ ಕಡಿಮೆಯಾದರೆ, ಜನಕಲ್ಯಾಣ ಕಾರ್ಯಕ್ರಮಗಳು ನೆಲಕಚ್ಚುತ್ತವೆ. ಮದ್ಯಪಾನ ನಿಷೇಧ ಪ್ರವಾಸೋದ್ಯಮಕ್ಕೂ ಪೆಟ್ಟು ನೀಡುತ್ತದೆ. ಉತ್ಪಾದನೆ, ಸರಬರಾಜು, ವಿತರಣೆ ವ್ಯವಸ್ಥೆಯಲ್ಲಿ ತೊಡಗಿಸಿಕೊಂಡಿರುವವರ ಹೊಟ್ಟೆಪಾಡಿಗೂ ಹೊಡೆತ ಬೀಳುತ್ತದೆ.

ಸಂಪೂರ್ಣ ನಿಷೇಧ ಅಸಾಧ್ಯದ ಮಾತೂ ಅಲ್ಲ. ವರಮಾನಕ್ಕೆ ಪರ್ಯಾಯ ಮೂಲ ಹುಡುಕಿಕೊಳ್ಳಬೇಕು. ಜೀವನೋಪಾಯ ಕಳೆದುಕೊಳ್ಳುವವರಿಗೆ ಬದುಕು ಕಟ್ಟಿಕೊಳ್ಳಲು ನೆರವಾಗಬೇಕು. ನಕಲಿ ಮದ್ಯ ತಯಾರಿಕೆಯಾಗದಂತೆ ನಿಗಾ ವಹಿಸಬೇಕು. ಎಲ್ಲಕ್ಕೂ ಪ್ರಮುಖವಾಗಿ, ನಿಷೇಧ ಏಕಕಾಲಕ್ಕೆ ದೇಶದಾದ್ಯಂತ ಜಾರಿಯಾಗಬೇಕು. ಇಲ್ಲದಿದ್ದರೆ ಕಳ್ಳಸಾಗಾಣಿಕೆ ಹೆಚ್ಚುತ್ತದೆ. ಇಂತಹ ದೃಢ, ಕಠಿಣ ನಿರ್ಧಾರ ಕೈಗೊಳ್ಳಲು ಪ್ರಬಲ ಇಚ್ಛಾಶಕ್ತಿ ಬೇಕು. ಜನಪ್ರಿಯ ಕಾರ್ಯಕ್ರಮಗಳ ಮೂಲಕ ಓಟು ಮತ್ತು ಅಧಿಕಾರದ ಮೇಲೆ ಕಣ್ಣಿಟ್ಟಿರುವ ಯಾವುದೇ ಆಡಳಿತ, ಮದ್ಯದ ಮೇಲೆ ಸಾರಾಸಗಟಾಗಿ ನಿಷೇಧ ಹೇರುವುದು ಸದ್ಯಕ್ಕಂತೂ ಅಸಂಭವ.

ಕುತೂಹಲ, ಪ್ರಯೋಗಾತ್ಮಕ ಮನೋಭಾವ, ಸ್ನೇಹಿತರ ಒತ್ತಾಯ, ದೈಹಿಕ ಸಾಮರ್ಥ್ಯ ವೃದ್ಧಿಯಾಗುವುದೆಂಬ ಭ್ರಮೆ ಮದ್ಯಪಾನಕ್ಕೆ ಪ್ರೇರಣೆ ಆಗಬಹುದು. ಲೈಂಗಿಕ ಪ್ರಚೋದಕ, ಸಂತೋಷದಾಯಕ, ನೋವು–ದುಃಖಗಳನ್ನೆಲ್ಲ ಮರೆಸುತ್ತದೆ, ಮುಂತಾದ ತಪ್ಪುಗ್ರಹಿಕೆ, ಮೂಢನಂಬಿಕೆ, ಅವಾಸ್ತವಿಕ ವಿಚಾರಗಳಿಂದಲೂ ಮದ್ಯದ ರುಚಿ ನೋಡಲು ಆರಂಭಿಸುವವರಿದ್ದಾರೆ. ಅದರಲ್ಲೂ ಯುವಜನರಲ್ಲಿಯೇ ಇಂತಹ ಮನೋಭಾವ ಹೆಚ್ಚು. ಇದು ಮುಂದುವರಿದಾಗ ದುರ್ಬಲ ಮನಸ್ಸಿನ ಹಲವರಲ್ಲಿ ವ್ಯಸನವಾಗುತ್ತದೆ. ಒಮ್ಮೆ ಚಟದ ಹಂತ ತಲುಪಿದರೆ ಅದರಿಂದ ಹೊರಬರುವುದು ತುಂಬಾ ಕಷ್ಟ. ಮದ್ಯ ವ್ಯಸನದಿಂದ ವ್ಯಕ್ತಿಯ ಬದುಕೇ ಕಮರಿ ಹೋಗಬಹುದು. ಬಡ ಕುಟುಂಬಗಳು ಬೀದಿಪಾಲಾಗಬಹುದು. ದುಡಿಮೆಯ ವಯಸ್ಸಿನ ಮಾನವ ಸಂಪನ್ಮೂಲ ಕಳೆದುಕೊಳ್ಳುವುದರಿಂದ ದೇಶಕ್ಕೂ ನಷ್ಟ.

ನಮ್ಮ ಸುತ್ತಮುತ್ತ ಪ್ರತಿನಿತ್ಯ ಘಟಿಸುತ್ತಿರುವ ಅತ್ಯಾಚಾರ, ಅಪಘಾತ, ಆತ್ಮಹತ್ಯೆ, ಕಲಹ, ಸುಲಿಗೆ, ಕೊಲೆ, ದರೋಡೆಗಳ ಹಿಂದಿರುವ ಪ್ರಮುಖ ಖಳರೇ ಮದ್ಯ, ಮಾದಕದ್ರವ್ಯ. ಯುವಮನಸ್ಸುಗಳನ್ನು ಆಕರ್ಷಿಸಿ, ಅವರಿಗೆ ನಶೆ ಏರಿಸಲು ವಿಧ್ವಂಸಕರು ಕಾರ್ಯೋನ್ಮುಖರಾಗಿರುವಾಗ, ಆ ಬಲೆಗೆ ಬೀಳದಂತೆ ಮಕ್ಕಳನ್ನು ಜಾಗೃತಗೊಳಿಸುವ ಕೆಲಸ ಶಾಲಾ–ಕಾಲೇಜುಗಳಲ್ಲಿ ನಡೆಯಬೇಕಿದೆ. ಮನಸ್ಸು ದೃಢವಾಗಿದ್ದಾಗ ಯಾವುದೇ ಆಮಿಷಗಳಿಗೂ ಬಗ್ಗದು. ಇಂತಹ ಗಂಭೀರ ವಿಚಾರ ನಮ್ಮ ಪಠ್ಯದ ಭಾಗವಾಗಬೇಕಿದೆ. ಈ ನಿಟ್ಟಿನಲ್ಲಿ 'ಸ್ವಾಸ್ಥ್ಯ ಸಂಕಲ್ಪ' ಕಾರ್ಯಕ್ರಮದ ಮೂಲಕ ಹದಿಹರೆಯದವರಲ್ಲಿ ಜಾಗೃತಿ ಮೂಡಿಸುತ್ತಿರುವ ವೇದಿಕೆಗಳ ಪ್ರಯತ್ನ ಪ್ರಶಂಸಾರ್ಹ.

ದೇಶದಲ್ಲಿ ಅತ್ಯಂತ ಹೆಚ್ಚು ಮದ್ಯ ಬಳಕೆಯಾಗುತ್ತಿರುವ ರಾಜ್ಯಗಳಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ತಮಿಳುನಾಡು, ತೆಲಂಗಾಣ ನಮ್ಮ ಜೊತೆ ಪೈಪೋಟಿಯಲ್ಲಿವೆ! ಕ್ಯಾನ್ಸರ್ ಪ್ರಕರಣಗಳು ಏರುಗತಿಯಲ್ಲಿರುವ, ಸಮಗ್ರ ಆರೋಗ್ಯ ಹದಗೆಡುತ್ತಿರುವ, ಜನರು ಅದರಲ್ಲೂ ಯುವಜನಾಂಗ ಹೃದಯಾಘಾತಕ್ಕೆ ಬಲಿಯಾಗುತ್ತಿರುವ ಈ ಹೊತ್ತಿನಲ್ಲಿ ದುಶ್ಚಟಗಳ ಬಗ್ಗೆ ಜಾಗೃತಿ ಮೂಡಿಸಿ, ಆರೋಗ್ಯಕರ ಜೀವನಕ್ರಮಗಳನ್ನು ಪಾಲಿಸುವಂತೆ ಮಾಡಬೇಕಿರುವುದು ಸಮಾಜದ ಹೊಣೆ. ಈ ವಿಚಾರದಲ್ಲಿ ಸರ್ಕಾರವನ್ನು ದೂಷಿಸುತ್ತಾ ಕಾಲಕಳೆಯುವುದು ಸಾಧುವಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದೇಶದ ಜೈಲುಗಳಲ್ಲಿಯೂ ಮಹಿಳೆಯರಿಗಿಲ್ಲ ರಕ್ಷಣೆ, ಪೋಷಣೆ; ಗರ್ಭಿಣಿ, ಬಾಣಂತಿಯರ ಸ್ಥಿತಿ ಅಸಹನೀಯ

ಕಂಬಿಗಳ ಹಿಂದೆ ಬದುಕು ಕಠೋರ

ಸಮಾಜದಲ್ಲಿ, ಕುಟುಂಬದಲ್ಲಿ ಶೋಷಣೆಗೆ ಗುರಿಯಾಗುವ ಮಹಿಳೆಗೆ ಜೈಲಿನಲ್ಲಿಯೂ ಸಂಕಷ್ಟದ ಹಾಗೂ ಸಂಕಟದ ಅನುಭವಗಳೇ ಹೆಚ್ಚು. ಸರ್ಕಾರದ ಅಧೀನದಲ್ಲಿದ್ದರೂ ಅಲ್ಲಿ ಮಹಿಳೆಯರು ಮೂಲಸೌಕರ್ಯಗಳ ಕೊರತೆ ಎದುರಿಸುತ್ತಿದ್ದಾರೆ; ಪೊಲೀಸರ ಸರ್ಪಗಾವಲಿನಲ್ಲಿದ್ದರೂ ಅಲ್ಲಿ ಹೆಣ್ಣಿನ ಮೇಲೆ ಹಲ್ಲೆ, ದೌರ್ಜನ್ಯ ನಡೆಯುತ್ತಿರುವ ಬಗ್ಗೆ ವರದಿಗಳು ಬಂದಿವೆ. ದೇಶದ ವಿವಿಧ ಜೈಲುಗಳಲ್ಲಿ ವಿಚಾರಣಾಧೀನ ಕೈದಿಗಳಾಗಿ, ಅಪರಾಧಿಗಳಾಗಿ ಶಿಕ್ಷೆ ಅನುಭವಿಸುತ್ತಿರುವ ಮಹಿಳೆಯರ ಸ್ಥಿತಿಗತಿ ಕುರಿತ ವರದಿ ಇಲ್ಲಿದೆ

ಎಐ ಚಿತ್ರ: ಹಳೇಮನಿ

• ಬಿ.ವಿ.ಶ್ರೀನಾಥ್

ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಕೆಲವು ಕೈದಿಗಳು ಮೊಬೈಲ್, ಟಿ.ವಿ ಬಳಸುತ್ತಿದ್ದ ವಿಡಿಯೊಗಳು ಬಹಿರಂಗಗೊಂಡು, ಭಾರಿ ಗದ್ದಲವೇ ಉಂಟಾಗಿದೆ. ಕರ್ನಾಟಕವೂ ಸೇರಿದಂತೆ, ದೇಶದ ಬಹುತೇಕ ಎಲ್ಲ ರಾಜ್ಯಗಳಲ್ಲೂ ಇಂಥ ಘಟನೆಗಳು ನಡೆದಿವೆ, ನಡೆಯುತ್ತಲೇ ಇವೆ. ಜೈಲಿನಲ್ಲಿರುವ ಪುರುಷ ಕೈದಿಗಳ ಪೈಕಿ ಕೆಲವರು ಹೇಗೋ ಮಾಡಿ ಇಂಥ ವಿಐಪಿ ಸೌಲಭ್ಯಗಳನ್ನು ಪಡೆಯುತ್ತಾರೆ. ಆದರೆ, ಜೈಲುಗಳಲ್ಲಿರುವ ಮಹಿಳಾ ಬಂದಿಗಳ ಬದುಕು ಅಸಹನೀಯವಾಗಿದೆ. ಮೂಲಭೂತ ಅಗತ್ಯಗಳನ್ನು ಪಡೆಯುವುದರಿಂದ ಹಿಡಿದು ತಮ್ಮ ವೈಯಕ್ತಿಕ ಸ್ವಚ್ಛತೆ, ಘನತೆ ಕಾಪಾಡಿಕೊಳ್ಳಲು ಅಗತ್ಯವಾದ ಸ್ಥಳ, ಸೌಕರ್ಯಗಳನ್ನು ಪಡೆಯುವವರೆಗೆ ಅವರು ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಮಹಿಳಾ ಕೈದಿಗಳ ಸ್ಥಿತಿಗತಿಗಳ ಬಗ್ಗೆ ಹಲವು ಅಧ್ಯಯನಗಳು ನಡೆದಿವೆ. ಜೈಲಿನಲ್ಲಿರುವ ಮಹಿಳೆಯರ ಸ್ಥಿತಿಗತಿ ಸುಧಾರಿಸಲು 210 ಸಂಸ್ಥೆಗಳು (ಎನ್‌ಜಿಒ) ದುಡಿಯುತ್ತಿವೆ.

ಜೈಲುಗಳಲ್ಲಿರುವ ಪುರುಷರ ಸಂಖ್ಯೆಗೆ ಹೋಲಿಸಿದರೆ ಮಹಿಳೆಯರ ಸಂಖ್ಯೆಯು ಕಡಿಮೆ ಇದ್ದರೂ, ಮಹಿಳೆಯರಿಗೆ ಒದಗಿಸಲಾಗಿರುವ (ಸ್ನಾನಗೃಹ, ಶೌಚ ಇತ್ಯಾದಿ) ಸೌಕರ್ಯಗಳು ಅವರ ಅಗತ್ಯಕ್ಕಿಂತಲೂ ತುಂಬಾ ಕಡಿಮೆ ಇವೆ. ಮಹಿಳಾ ಕೈದಿಗಳ ಸಂಖ್ಯೆ ಹೆಚ್ಚಿರುವ ಪಶ್ಚಿಮ ಬಂಗಾಳ, ಮಹಾರಾಷ್ಟ್ರದಂಥ ರಾಜ್ಯಗಳಲ್ಲಿ ಪರಿಸ್ಥಿತಿ ಇನ್ನೂ ಭೀಕರವಾಗಿದೆ. ಅನೇಕ ಜೈಲುಗಳಲ್ಲಿ ಮಹಿಳೆಯರಿಗೆ ಬಟ್ಟೆ ಬದಲಾಯಿಸಲು, ಗರ್ಭಿಣಿ ತಾಯಂದಿರು ಮಕ್ಕಳಿಗೆ ಹಾಲೂಡಿಸಲು ಪ್ರತ್ಯೇಕ ಸ್ಥಳದ ಕೊರತೆ ಇದೆ. ಮುಟ್ಟಿನ ಸಂದರ್ಭಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವುದೂ ಕಷ್ಟಕರವಾಗಿದೆ ಎನ್ನುವುದು ವರದಿಯಾಗಿದೆ. ಆಗಿಂದಾಗ್ಗೆ ನಡೆಯುವ ತಪಾಸಣೆಯ ಹೆಸರಿನಲ್ಲಿ ಪೊಲೀಸರು ಜೈಲುಗಳಲ್ಲಿರುವ ಮಹಿಳೆಯರೊಂದಿಗೆ ಅನುಚಿತವಾಗಿ ವರ್ತಿಸಿ ಲೈಂಗಿಕ ದೌರ್ಜನ್ಯ ನಡೆಸಿದ ಅನೇಕ ಘಟನೆಗಳು ವರದಿಯಾಗಿವೆ.

ಜೈಲುಗಳು ರಾಜ್ಯ ಪಟ್ಟಿಯಲ್ಲಿ ಬರುವುದರಿಂದ ಮೂಲಸೌಕರ್ಯ ಕಲ್ಪಿಸುವುದು, ಬಂದಿಗಳಿಗೆ ಸೂಕ್ತ ಪ್ರಮಾಣದಲ್ಲಿ ಆಹಾರ ಒದಗಿಸುವುದು ರಾಜ್ಯ ಸರ್ಕಾರಗಳ ಕರ್ತವ್ಯವಾಗಿದೆ. ಗರ್ಭಿಣಿಯರು, ಬಾಣಂತಿಯರು, ಮಕ್ಕಳಿಗೆ ವಿಶೇಷ ಆಹಾರ ಒದಗಿಸಬೇಕು. ಕೆಲವು ಜೈಲುಗಳ ಕ್ಯಾಂಟೀನ್‌ಗಳಲ್ಲಿ ಆಹಾರ ಸಿಗುತ್ತದೆಯಾದರೂ ಹೆಚ್ಚಿನ ಮಹಿಳಾ ಕೈದಿಗಳು ಅದಕ್ಕೆ ಹಣ ತೆರುವ ಸ್ಥಿತಿಯಲ್ಲಿ ಇರುವುದಿಲ್ಲ ಎನ್ನಲಾಗಿದೆ.

ಗರ್ಭಿಣಿಯರ ಪರಿಸ್ಥಿತಿ ದುರ್ಬರವಾಗಿದೆ. ನಿಯಮಗಳ ಪ್ರಕಾರ, ಜೈಲಿನಲ್ಲಿ ಅವರಿಗೆ ಸೂಕ್ತ ವೈದ್ಯಕೀಯ ನೆರವು ನೀಡಬೇಕು. ಆದರೆ, ದೇಶದ ಬಹುತೇಕ ಜೈಲುಗಳಲ್ಲಿ ನಿಯಮಗಳು ಕಾಗದದ ಮೇಲಷ್ಟೇ ಇವೆ. ಮಹಾರಾಷ್ಟ್ರದ ಬೈಕುಲ್ಲಾ ಜೈಲಿನಲ್ಲಿ 2012ರಲ್ಲಿ ಗರ್ಭಿಣಿಯೊಬ್ಬರು ಜೈಲಿನ ಶೌಚಾಲಯದಲ್ಲಿಯೇ ಮಗುವನ್ನು ಹೆತ್ತು, ಜೈಲಿನ ಪರಿಸ್ಥಿತಿಗೆ ಹೆದರಿ ಆ ಮಗುವನ್ನು ಬಕೆಟ್‌ನಲ್ಲಿ ಮುಳುಗಿಸಿ ಕೊಂದು ಹಾಕಿದ್ದರು. ಮಹಿಳಾ ಕೈದಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದುದರಿಂದ ಗರ್ಭಿಣಿಯ ಬಗ್ಗೆ ಗಮನ ಕೊಡಲು ಸಾಧ್ಯವಾಗಿರಲಿಲ್ಲ ಎಂದು ಜೈಲು ಅಧಿಕಾರಿಗಳು ಹೇಳಿದ್ದರು.

ದೇಶದಲ್ಲಿರುವ ವಿವಿಧ ರೀತಿಯ ಜೈಲುಗಳಲ್ಲಿ ಶೇ 4ಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯರಿದ್ದಾರೆ. ಆದರೆ, ಮಹಿಳೆಯರಿಗಷ್ಟೇ ಮೀಸಲಾದ ಜೈಲುಗಳ ಸಂಖ್ಯೆ ಕಡಿಮೆ ಇದೆ. ಹಾಗಾಗಿ ಪ್ರತಿ ಐವರಲ್ಲಿ ಒಬ್ಬ ಮಹಿಳಾ ಬಂದಿಗೆ ಮಾತ್ರ ಮಹಿಳಾ ಜೈಲಿನಲ್ಲಿರುವ ಅವಕಾಶ ಸಿಕ್ಕಿದೆ. 2018 ಮತ್ತು 2023ರ ನಡುವೆ ಮಹಿಳಾ ಜೈಲುಗಳ ಸಾಮರ್ಥ್ಯವನ್ನು ಶೇ 26.7ರಷ್ಟು ಹೆಚ್ಚಳ ಮಾಡಲಾಗಿದೆ. ಆದರೆ, ಇದೇ ಅವಧಿಯಲ್ಲಿ ಮಹಿಳಾ ಬಂದಿಗಳ ಪ್ರಮಾಣವು ಶೇ 32ರಷ್ಟು ಹೆಚ್ಚಾಗಿದೆ.

ಆಧಾರ: ಎನ್‌ಸಿಆರ್‌ಬಿ ಪ್ರಿಸನ್ ಸ್ಟ್ಯಾಟಿಸ್ಟಿಕ್ಸ್ 2023, ಸಿಟಿಜನ್ಸ್ ಫಾರ್ ಜಸ್ಟೀಸ್ ಆ್ಯಂಡ್ ಪೀಸ್, ಪುಲಿಟ್ಜರ್ ಸೆಂಟರ್, ದಿ ಗಾರ್ಡಿಯನ್

ದೇಶದಲ್ಲಿ ಜೈಲುಗಳ ಸ್ಥಿತಿಗತಿ

- ದೇಶದ 36 ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು 1,332 ಜೈಲುಗಳಿವೆ. ಆದರೆ, ಈ ಪೈಕಿ ಕೇವಲ 16 ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಾತ್ರ ಮಹಿಳಾ ಜೈಲುಗಳಿವೆ. ಅವುಗಳಲ್ಲಿ 4,293 ಬಂದಿಗಳಿದ್ದಾರೆ (ಈ ಜೈಲುಗಳ ಒಟ್ಟು ಸಾಮರ್ಥ್ಯ 7,086). ಕರ್ನಾಟಕದಲ್ಲಿ ಒಂದು ಮಹಿಳಾ ಜೈಲು ಇದ್ದು, ಅದರಲ್ಲಿ 100 ಮಂದಿ (2023ರ ಅಂತ್ಯಕ್ಕೆ) ಬಂದಿಗಳಿದ್ದಾರೆ. ಉಳಿದ 20 ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಹಿಳೆಯರಿಗೆ ಮೀಸಲಾದ ಜೈಲುಗಳೇ ಇಲ್ಲ
- ರಾಜಸ್ಥಾನದಲ್ಲಿ ಏಳು, ತಮಿಳುನಾಡಿನಲ್ಲಿ ಐದು, ಕೇರಳದಲ್ಲಿ ಮೂರು ಮತ್ತು ಆಂಧ್ರಪ್ರದೇಶ, ಬಿಹಾರ, ಗುಜರಾತ್, ಪಂಜಾಬ್, ತೆಲಂಗಾಣ, ಉತ್ತರ ಪ್ರದೇಶ ಮತ್ತು ದೆಹಲಿಗಳಲ್ಲಿ ತಲಾ ಎರಡು ಮಹಿಳಾ ಜೈಲುಗಳಿವೆ. ಕರ್ನಾಟಕ, ಮಹಾರಾಷ್ಟ್ರ, ಒಡಿಶಾ, ಮಿಜೋರಾಂ, ತ್ರಿಪುರಾ ಮತ್ತು ಪಶ್ಚಿಮ ಬಂಗಾಳದಲ್ಲಿ ತಲಾ ಒಂದು ಮಹಿಳಾ ಜೈಲು ಇದೆ
- ದೇಶದ ವಿವಿಧ ಕಾರಾಗೃಹಗಳಲ್ಲಿ ಒಟ್ಟು 5,30,333 ಬಂದಿಗಳಿದ್ದು, ಅವರಲ್ಲಿ 5,08,715 ಪುರುಷರಾದರೆ, 21,510 ಮಹಿಳೆಯರು, 108 ಮಂದಿ ಲಿಂಗತ್ವ ಅಲ್ಪಸಂಖ್ಯಾತರು
- ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚು ಮಂದಿ ಮಹಿಳೆಯರು ಜೈಲುಗಳಲ್ಲಿದ್ದರೆ (3,926), ಬಿಹಾರದಲ್ಲಿ 2,029 ಮತ್ತು ಮಧ್ಯಪ್ರದೇಶದಲ್ಲಿ 1,803 ಮಹಿಳೆಯರು ಜೈಲಿನಲ್ಲಿದ್ದಾರೆ
- ಮಹಿಳಾ ಜೈಲುಗಳ ಪೈಕಿ ಮಿಜೋರಾಂನಲ್ಲಿ ನಿಗದಿತ ಸಂಖ್ಯೆಗಿಂತ ಬಂದಿಗಳು ಹೆಚ್ಚು ಇದ್ದಾರೆ (ಶೇ 227.1). ತ್ರಿಪುರಾದಲ್ಲಿ ಈ ಪ್ರಮಾಣವು ಶೇ 184, ಮಹಾರಾಷ್ಟ್ರದಲ್ಲಿ ಶೇ 143.9 ಮತ್ತು ಪಶ್ಚಿಮ ಬಂಗಾಳದಲ್ಲಿ ಶೇ 110.2 ಇದೆ

ಹಿಂದುಳಿದವರೇ ಅಧಿಕ

ಮಹಿಳಾ ಬಂದಿಗಳ ಪೈಕಿ ಶೇ 75ರಷ್ಟು ಮಂದಿ ಎಸ್‌ಸಿ, ಎಸ್‌ಟಿ ಮತ್ತು ಎಲ್ಲ ಧರ್ಮಗಳಲ್ಲಿನ ಹಿಂದುಳಿದ ವರ್ಗದವರು, ಬಡವರು ಆಗಿದ್ದಾರೆ. ಸಮಾಜದಲ್ಲಿ ಹೆಚ್ಚು ಶೋಷಣೆಗೆ ಗುರಿಯಾಗುವ ಈ ಮಹಿಳೆಯರು ಜೈಲುಗಳಲ್ಲಿಯೂ ಹೆಚ್ಚು ಶೋಷಣೆ, ದೌರ್ಜನ್ಯಗಳಿಗೆ ಗುರಿಯಾಗುತ್ತಿದ್ದಾರೆ. ಮಹಿಳೆಯರ ಜಾತಿ, ವರ್ಗ, ಧರ್ಮ, ರಾಷ್ಟ್ರೀಯತೆ ಮುಂತಾದ ಅಂಶಗಳನ್ನು ಆಧರಿಸಿ ಮಹಿಳಾ ಕೈದಿಗಳೊಂದಿಗಿನ ಅಧಿಕಾರಿಗಳ ವರ್ತನೆಯು ನಿರ್ಧಾರವಾಗುತ್ತದೆ ಎನ್ನಲಾಗಿದೆ.

ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜೆ.ಜಯಲಲಿತಾ ಅವರ ಆಪ್ತೆ ಶಶಿಕಲಾ ಅವರಿಗೆ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಐಷಾರಾಮಿ ಸೌಲಭ್ಯಗಳನ್ನು ಒದಗಿಸಿದ ಪ್ರಕರಣ ಭಾರಿ ಸುದ್ದಿಯಾಗಿತ್ತು. ಆದರೆ, ಹಣ ನೀಡಿ ಅಕ್ರಮವಾಗಿ ಈ ರೀತಿ ಸೌಲಭ್ಯ ಪಡೆದ ಮಹಿಳಾ ಕೈದಿಗಳ ಪ್ರಮಾಣವು ತೀರಾ ಕಡಿಮೆ.

ಮಕ್ಕಳಿಗೂ ಜೈಲುವಾಸ

ಮಕ್ಕಳನ್ನು ಬೆಳೆಸಲು ಜೈಲುಗಳು ಯಾವ ಕಾರಣಕ್ಕೂ ಉತ್ತಮ ಸ್ಥಳಗಳಲ್ಲ. ಆದರೆ, ಅನಿವಾರ್ಯ ಸಂದರ್ಭಗಳಲ್ಲಿ ಆರು ವರ್ಷದವರೆಗಿನ ಮಕ್ಕಳು ತಮ್ಮ ತಾಯಿಯೊಂದಿಗೆ ಜೈಲಿನಲ್ಲಿ ಇರಲು ಅವಕಾಶವಿದೆ.



ಮಕ್ಕಳಿಗೆ ಆರು ವರ್ಷವಾಗುವವರೆಗೆ ಅವರನ್ನು ಜೈಲಿನಲ್ಲಿಯೇ ಅವರ ತಾಯಂದಿರ ಜೊತೆ ಇರಲು ಅವಕಾಶ ನೀಡಬೇಕೆಂದು ಸುಪ್ರೀಂ ಕೋರ್ಟ್ ಆರ್.ಡಿ.ಉಪಾಧ್ಯಾಯ ಮತ್ತು ಆಂಧ್ರ ಪ್ರದೇಶ ನಡುವಿನ ಪ್ರಕರಣದಲ್ಲಿ (2006) ಆದೇಶಿಸಿತ್ತು.

ದೇಶದ ಜೈಲುಗಳಲ್ಲಿ 1,318 ಮಹಿಳೆಯರು 1,492 ಮಕ್ಕಳೊಂದಿಗೆ ಇದ್ದಾರೆ. ಇವರ ಪೈಕಿ 1,049 ಮಂದಿ ವಿಚಾರಣಾಧೀನ ಕೈದಿಗಳಾಗಿದ್ದು, ಅವರೊಂದಿಗೆ 1,191 ಮಕ್ಕಳಿದ್ದಾರೆ. ಉಳಿದಂತೆ, 249 ಮಹಿಳಾ ಕೈದಿಗಳು ತಪ್ಪಿತಸ್ಥರೆಂದು ನಿರ್ಧಾರವಾಗಿದ್ದು, ಅವರೊಂದಿಗೆ 272 ಮಕ್ಕಳಿದ್ದಾರೆ.

ಜೈಲಿನ ‘ಅಮಾನವೀಯ’ ಮುಖ

ಪಶ್ಚಿಮ ಬಂಗಾಳದ ಕಿಕ್ಕಿರಿದ ಜೈಲುಗಳ ಬಗ್ಗೆ ತನಿಖೆ ಮಾಡಲು ಕಲ್ಕತ್ತ ಹೈಕೋರ್ಟ್ 1990ರಲ್ಲಿ ವಕೀಲ ತಪಸ್ ಕುಮಾರ್ ಭಂಜಾ ಅವರನ್ನು ನೇಮಿಸಿತ್ತು. ಹಲವು ಮಹಿಳಾ ಬಂದಿಗಳ ಮೇಲೆ ಅತ್ಯಾಚಾರ ನಡೆದಿದ್ದು ಅವರ ಗಮನಕ್ಕೆ ಬಂದಿತ್ತು. ಅದರಿಂದ ಅನೇಕರು ಗರ್ಭಿಣಿಯರಾಗಿ, ಜೈಲಿನಲ್ಲಿಯೇ ಮಕ್ಕಳಿಗೆ ಜನ್ಮ ನೀಡಿದ್ದರು. ಮಹಿಳೆಯು ಜೈಲಿಗೆ ಅಡಿಯಿಟ್ಟ ದಿನದಿಂದಲೇ ಆಕೆಗೆ ಲೈಂಗಿಕ ಕಿರುಕುಳ ಆರಂಭವಾಗುತ್ತದೆ ಎನ್ನುವುದನ್ನು ಅವರು ಬಂದಿಗಳಿಂದ ತಿಳಿದರು. ಜೈಲಿನ ಪರಿಸ್ಥಿತಿಯನ್ನು ‘ಅಮಾನವೀಯ’ ಎಂದು ಬಣ್ಣಿಸಿದ್ದ ಅವರು ಕಲ್ಕತ್ತ ಹೈಕೋರ್ಟ್‌ಗೆ ವರದಿ ಸಲ್ಲಿಸಿದ್ದರು. ಆ ವರದಿಯಲ್ಲಿನ ಅಂಶಗಳ ಬಗ್ಗೆ ಸುಪ್ರೀಂ ಕೋರ್ಟ್ ಕೂಡ ಕಳವಳ ವ್ಯಕ್ತಪಡಿಸಿತ್ತು.

ಜೈಲುಗಳಲ್ಲಿ ಮಹಿಳಾ ಕೈದಿಗಳ ಮೇಲೆ ಅತ್ಯಾಚಾರ, ಲೈಂಗಿಕ ದೌರ್ಜನ್ಯ ಪ್ರಕರಣಗಳು ನಡೆಯುತ್ತಲೇ ಇವೆ ಎಂದು ಅವರು ‘ದಿ ಗಾರ್ಡಿಯನ್’ ಪತ್ರಿಕೆಗೆ (2024, ಫೆ.23) ತಿಳಿಸಿದ್ದರು.

ದೇಶದಾದ್ಯಂತ ಮಹಿಳಾ ಬಂದಿಗಳ ಮೇಲೆ ಜೈಲಿನಲ್ಲಿರುವ ಪುರುಷರು ಮತ್ತು ಅಧಿಕಾರಿಗಳಿಂದ ಲೈಂಗಿಕ ದೌರ್ಜನ್ಯ, ಹಿಂಸೆ ನಡೆದಿದೆ ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ 2018ರ ವರದಿ ಉಲ್ಲೇಖಿಸಿದೆ.

ಜೈಲುಗಳ ಸಾಮರ್ಥ್ಯಕ್ಕೆ ಹೋಲಿಸಿದರೆ ಬಂದಿಗಳ ಪ್ರಮಾಣ (ಶೇಕಡವಾರು)



ರಾಷ್ಟ್ರೀಯ

ಎಸ್‌ಐಆರ್ ಸಾಂವಿಧಾನಿಕ ಸಿಂಧುತ್ವ

ಚುನಾವಣಾ ಆಯೋಗಕ್ಕೆ ಸುಪ್ರೀಂ ನೋಟಿಸ್

ನವದೆಹಲಿ: ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳನ್ನು ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಈ ಬಗ್ಗೆ ವಿವರಣೆ ನೀಡುವಂತೆ ಚುನಾವಣಾ ಆಯೋಗಕ್ಕೆ ಮಂಗಳವಾರ ನೋಟಿಸ್ ಜಾರಿಗೊಳಿಸಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಜಾಯ್‌ಮಾಲ್ಯ ಬಾಗ್ಚಿ ಅವರಿದ್ದ ಪೀಠವು ಆಯೋಗಕ್ಕೆ ನೋಟಿಸ್ ನೀಡಿದ್ದು, ಈ ಬಗ್ಗೆ ವಿವರವಾದ ಪ್ರತಿಕ್ರಿಯೆ ನೀಡುವಂತೆ ಸೂಚಿಸಿದೆ. ಮುಂದಿನ ವಿಚಾರಣೆ ನವೆಂಬರ್ 26ಕ್ಕೆ ನಡೆಯಲಿದೆ.

ಈ ವಿಚಾರಣೆ ಪೂರ್ಣ ಆಗುವವರೆಗೆ ತಮಿಳುನಾಡು, ಪಶ್ಚಿಮ ಬಂಗಾಳ ಸೇರಿ ಬೇರೆ ರಾಜ್ಯಗಳಲ್ಲಿ ಎಸ್‌ಐಆರ್ ಪ್ರಶ್ನಿಸಿ ಸಲ್ಲಿಸಲಾಗುವ ಅರ್ಜಿಗಳ ವಿಚಾರಣೆ ತಡೆಹಿಡಿಯುವಂತೆ ಅಥವಾ ಮುಂದೂಡುವಂತೆಯೂ ಹೈಕೋರ್ಟ್‌ಗಳಿಗೆ ಸುಪ್ರೀಂ ಕೋರ್ಟ್ ಆದೇಶಿಸಿದೆ.

ಡಿಎಂಕೆ ಪಕ್ಷದ ಪರವಾಗಿ ಹಾಜರಾದ ವಕೀಲ ಕಪಿಲ್ ಸಿಬಲ್ ಅವರು, ‘ಮತದಾರರ ಪಟ್ಟಿ ಪರಿಷ್ಕರಣೆಗೆ ಸಾಮಾನ್ಯವಾಗಿ ಮೂರು ವರ್ಷಗಳು ಬೇಕಾಗುತ್ತವೆ. ಆದರೆ, ಈಗ, ತರಾತುರಿಯಲ್ಲಿ ಎಸ್‌ಐಆರ್ ಜಾರಿಗೊಳಿಸಲಾಗಿದೆ. ಪರಿಷ್ಕರಣೆ ವೇಳೆ ಮತದಾರರ ವಿವರಗಳನ್ನು ಒಳಗೊಂಡ ಅರ್ಜಿಗಳನ್ನು ಅಪ್‌ಲೋಡ್ ಮಾಡಲು 5ಜಿ ನೆಟ್‌ವರ್ಕ್ ಬೇಕಾಗುತ್ತದೆ. ಆದರೆ, ಹಲವೆಡೆ ನೆಟ್‌ವರ್ಕ್ ಸಮಸ್ಯೆ ದೊಡ್ಡ ಮಟ್ಟದಲ್ಲಿದೆ’ ಎಂದು ಪೀಠದ ಗಮನಕ್ಕೆ ತಂದರು.

ಆಯೋಗದ ಪರವಾಗಿ ಹಾಜರಾದ ವಕೀಲ ರಾಕೇಶ್ ದ್ವಿವೇದಿ ಅವರು, ‘ರಾಜ್ಯಗಳು ಅಭಿವೃದ್ಧಿ ಹೊಂದಿವೆ ಎಂದು ಹೇಳಿಕೊಳ್ಳುವ ಬದಲು, ಎಷ್ಟು ಹಿಂದುಳಿದಿವೆ ಎನ್ನುವುದನ್ನು ತೋರಿಸಿಕೊಳ್ಳಲು ಪೈಪೋಟಿ ನಡೆಸುತ್ತಿವೆ’ ಎಂದರು.

ವಾದ ಆಲಿಸಿದ ಪೀಠವು, ‘ಎಸ್‌ಐಆರ್ ಬಗ್ಗೆ ಇಷ್ಟೊಂದು ಭಯವೇಕೆ’ ಎಂದು ಅರ್ಜಿದಾರರನ್ನು ಪ್ರಶ್ನಿಸಿತು. ಈ ಬಗ್ಗೆ ವಿವರಣೆ ನೀಡಿದ ಕಪಿಲ್ ಸಿಬಲ್, ‘ಎಸ್‌ಐಆರ್ ವಿರೋಧಿಸಲು ರಾಜ್ಯಗಳಿಗೆ ವಿಭಿನ್ನ ಕಾರಣಗಳಿವೆ. ತಮಿಳುನಾಡಿನಲ್ಲಿ ಎಸ್‌ಐಆರ್ ನಡೆಯುವ ಸಮಯದಲ್ಲಿ ಮಳೆಗಾಲ ಇರುತ್ತದೆ. ಬೂತ್ ಮಟ್ಟದ ಅಧಿಕಾರಿಗಳು ಅತಿವೃಷ್ಟಿ ಪರಿಹಾರ ಕಾರ್ಯಕ್ಕೆ ನೇಮಕಗೊಂಡಿರುತ್ತಾರೆ. ಡಿಸೆಂಬರ್–ಜನವರಿಯಲ್ಲಿ ಕಟಾವಿನ ಸಮಯವಾಗಿದ್ದು, ಆಗಲೂ ಸೂಕ್ತ ಸಮಯವಲ್ಲ’ ಎಂದರು.

12 ರಾಜ್ಯಗಳಲ್ಲಿ ಎಸ್‌ಐಆರ್

ಎಸ್‌ಐಆರ್‌ನ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಟಿಎಂಸಿ, ಪಶ್ಚಿಮ ಬಂಗಾಳ ಪ್ರದೇಶ ಕಾಂಗ್ರೆಸ್ ಸಮಿತಿ, ಸಿಪಿಐಎಂ ಮತ್ತು ಡಿಎಂಕೆ ಪಕ್ಷಗಳು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿವೆ. ಬಿಹಾರದಲ್ಲಿ, ವಿಧಾನಸಭೆ ಚುನಾವಣೆಗೆ ಮುನ್ನ ಜೂನ್ 24ರಂದು ಎಸ್‌ಐಆರ್ ಜಾರಿಗೊಳಿಸಲಾಗಿತ್ತು. ನಂತರ ಇದನ್ನು ತಮಿಳುನಾಡು, ಪಶ್ಚಿಮ ಬಂಗಾಳ, ಕೇರಳ, ಪುದುಚೇರಿ ಸೇರಿ 12 ರಾಜ್ಯಗಳಿಗೆ ವಿಸ್ತರಿಸಲಾಗಿತ್ತು. ಸುಮಾರು 51 ಕೋಟಿ ಮತದಾರರು ಎಸ್‌ಐಆರ್ ವ್ಯಾಪ್ತಿಗೆ ಬರಲಿದ್ದಾರೆ.

ಮೋದಿ ಪದವಿ: ಇಂದು ವಿಚಾರಣೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಪದವಿ ವ್ಯಾಸಂಗಕ್ಕೆ ಸಂಬಂಧಿಸಿದ ವಿವರಗಳನ್ನು ಬಹಿರಂಗಪಡಿಸುವಂತೆ ಕೋರಿ ಸಲ್ಲಿಕೆಯಾಗಿರುವ ನಾಲ್ಕು ಅರ್ಜಿಗಳ ವಿಚಾರಣೆಯನ್ನು ದೆಹಲಿ ಹೈಕೋರ್ಟ್ ಬುಧವಾರ ನಡೆಸಲಿದೆ.

ಮಾಹಿತಿ ಬಹಿರಂಗೊಳಿಸಲು ಕೇಂದ್ರ ಮಾಹಿತಿ ಆಯೋಗ (ಸಿಐಸಿ) ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್‌ನ ಏಕ ಸದಸ್ಯ ಪೀಠ ರದ್ದುಗೊಳಿಸಿತ್ತು. ‘ಇದು ವೈಯಕ್ತಿಕ ಮಾಹಿತಿ. ಈ ವಿವರ ಕೋರಿರುವುದರ ಹಿಂದೆ ಯಾವುದೇ ಸಾರ್ವಜನಿಕ ಹಿತಾಸಕ್ತಿ ಇಲ್ಲ’ ಎಂದು ಪೀಠ ಹೇಳಿತ್ತು. ಈ ತೀರ್ಪನ್ನು ಪ್ರಶ್ನಿಸಲಾಗಿದೆ.

ಮುಖ್ಯ ನ್ಯಾಯಮೂರ್ತಿ ದೇವೇಂದ್ರ ಕುಮಾರ್ ಉಪಾಧ್ಯಾಯ ಮತ್ತು ನ್ಯಾಯಮೂರ್ತಿ ತುಷಾರ್ ರಾವ್ ಗೆಡೆಲಾ ಅವರು ಮೇಲ್ಮನವಿ ಅರ್ಜಿಗಳ ವಿಚಾರಣೆ ನಡೆಸಲಿದ್ದಾರೆ. ಮಾಹಿತಿ ಹಕ್ಕು ಕಾರ್ಯಕರ್ತ ನೀರಜ್, ಎಎಪಿ ನಾಯಕ ಸಂಜಯ್ ಸಿಂಗ್, ವಕೀಲ ಮೊಹಮ್ಮದ್ ಇರ್ಷಾದ್ ಅವರು ಅರ್ಜಿಗಳನ್ನು ಸಲ್ಲಿಸಿದ್ದಾರೆ.

ಪಿಟಿಐ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರತ ಮಹಿಳಾ ಕ್ರಿಕೆಟ್ ತಂಡದ ಬ್ಯಾಟರ್ ಸ್ಮೃತಿ ಮಂದಾನ ಮತ್ತು ಪುರುಷರ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಅವರ ಕೊಲಾಜ್ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಕೊಹ್ಲಿ ಅವರಿಗೆ ಹೋಲಿಸಿದರೆ ಮಂದಾನ ಅವರು ಏಕದಿನ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ವೇಗವಾಗಿ 5,000 ರನ್ ಗಳಿಸಿದ್ದಾರೆ. ಕಿರಿಯ ವಯಸ್ಸಿನಲ್ಲೇ ಅವರು ಈ ಸಾಧನೆ ಮಾಡಿದ್ದಾರೆ ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಹೌದು, ಇದು ನಿಜವಾದ ಸುದ್ದಿಯಾಗಿದೆ.

ಚಿತ್ರವನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಹಲವರು ಈ ಪೋಸ್ಟ್ ಅನ್ನು ಇದೇ ಪ್ರತಿಪಾದನೆಯೊಂದಿಗೆ ಹಂಚಿಕೊಂಡಿರುವುದು ಕಂಡಿತು. ನಿರ್ದಿಷ್ಟ ಪದದ ಮೂಲಕ ಹುಡುಕಾಡಿದಾಗ, ಮಂದಾನ ಅವರು ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ 5,000 ರನ್‌ಗಳ ಗಡಿ ದಾಟಿದರು ಎಂದು 2025ರ ಅ.12ರಂದು ‘ದಿ ಎಕನಾಮಿಕ್ ಎಕ್ಸ್‌ಪ್ರೆಸ್’ನಲ್ಲಿ ವರದಿಯಾಗಿರುವುದು ಕಂಡಿತು. 29 ವರ್ಷದ ಅವರು 112 ಪಂದ್ಯಗಳಲ್ಲಿ ಈ ಸಾಧನೆ ಮಾಡಿದ್ದಾರೆ. ಆಟಗಾರ್ತಿಯರಲ್ಲಿ ಈ ಸಾಧನೆ ಮಾಡಿದ ಅತ್ಯಂತ ಕಿರಿಯ ಬ್ಯಾಟರ್ ಅವರು ಎಂದು ಬಿಸಿಸಿಐ ‘ಎಕ್ಸ್’ ಪೋಸ್ಟ್‌ನಲ್ಲಿ ತಿಳಿಸಿದೆ. ಕೊಹ್ಲಿ ಅವರು 114 ಪಂದ್ಯಗಳಲ್ಲಿ 5,000 ರನ್ ಸ್ಕೋರ್ ಮಾಡಿದ್ದರು ಎಂದು ‘ಮನಿ ಕಂಟ್ರೋಲ್’ ವರದಿ ಮಾಡಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುದ್ದಿ ವಾಸ್ತವವಾಗಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪ್ರತಿಕ್ರಿಯೆ ನೀಡದ ಕಲೆ

ನುಡಿ ಬೆಳಗು

ವಾಸುದೇವ ನಾಡಿಗ್

ಅತ್ಯುತ್ತಮ ಪ್ರಾಂತ್ಯವೆಂದೇ ಹೆಸರಾದ ಭಾಗದ ಅತ್ಯುತ್ತಮ ನಾಯಕ ಆತ. ಹೋದೆಡೆ ಬಂದೆಡೆ ಅವನದ್ದೇ ಮಾತು-ಕತೆ. ತಾನು ಇಷ್ಟು ಸಮರ್ಥ ನಾಯಕನೆ ಎಂಬ ಅನುಮಾನ ಸದಾ ಕಾಡುತ್ತಲೇ ಇತ್ತು. ನೆರೆಹೊರೆಯ ಪ್ರಾಂತ್ಯದವರು ಅನೇಕ ಬಾರಿ ಆಹ್ವಾನಿಸಿದ್ದರೂ ಹೊಣೆಗಾರಿಕೆಯ ಒತ್ತಡದಲ್ಲಿ ಎಲ್ಲೂ ಹೋಗಲಾಗುತ್ತಿರಲಿಲ್ಲ. ಆದರೂ ತಾನೆ ತಾನಾಗಿ ನಿರ್ಧರಿಸಿ ಪಕ್ಕದ ಪ್ರಾಂತ್ಯಕ್ಕೆ ಭೇಟಿ ಕೊಡಲು ಹೊರಟ. ಪಕ್ಕದ ಪ್ರಾಂತ್ಯದ ನಾಯಕನೋ ಇನ್ನೂ ಸರಳ ಮತ್ತು ದಕ್ಷ. ಕುತೂಹಲದಿಂದಲೇ ಅವನ ಪ್ರಾಂತ್ಯವನ್ನು ಪ್ರವೇಶಿಸಿ ಅತಿಥಿ ಗೃಹದೊಳಕ್ಕೆ ಕಾಲಿಟ್ಟ. ಇಬ್ಬರೂ ದಕ್ಷ ನಾಯಕರ ಮುಖಾಮುಖಿ ಅದು. ಒಂದಿಷ್ಟು ದಣಿವನ್ನು ನಿವಾರಿಸಿಕೊಳ್ಳಲು ಚಹಾ ವ್ಯವಸ್ಥೆಯನ್ನು ಮಾಡಲಾಗಿತ್ತು. ಇನ್ನೇನು ಪಕ್ಕದ ನಾಯಕ ಇವನಿಗೆ ಚಹಾ ಬಟ್ಟಲು ತುಂಬಿಸಿಕೊಡಬೇಕು ಅನ್ನುವಷ್ಟರಲ್ಲೇ ಎಲ್ಲಿಂದಲೋ ಒಂದು ನೊಣ ಹಾರಿ ಬಂದು ಚಹಾ ಮತ್ತು ಸಕ್ಕರೆಯ ಪರಿಮಳಕ್ಕೆ ಆಸೆ ಪಟ್ಟು ಚಹಾ ಕಪ್ಪಿನ ತುದಿಯಲ್ಲಿ ಕೂತುಬಿಟ್ಟಿತು. ಆತಿಥೇಯ ನಾಯಕನು ಬಹಳ ಸಂಯಮದಿಂದ ಆ ನೊಣವನ್ನು ಓಡಿಸಿ ಕಿಟಕಿಯಾಚೆ ಕಳಿಸಿದನು. ನೊಣ ಕೂತದ್ದನ್ನು ಸಹಿಸದ ಈ ನಾಯಕ ಅಸಹ್ಯ ಪಟ್ಟುಕೊಂಡು ಎಂತಹ ಅಶುದ್ಧ ವಾತಾವರಣ ಅಂತ ಕಿರುಚಾಡಿ ಎದ್ದುಬಿಟ್ಟ.

ಬಹುದೊಡ್ಡ ಮನಸ್ತಾಪವೇ ಹುಟ್ಟುಹಾಕಿದ ಘಟನೆಯಿದು. ಇಬ್ಬರೂ ಸಮರ್ಥ ನಾಯಕರೆಂದೇ ಹೆಸರು ಪಡೆದಿದ್ದರೂ ಸಣ್ಣ ನೊಣ ಬಹುದೊಡ್ಡ ಅಸಮಾಧಾನವನ್ನೇ ಹುಟ್ಟು ಹಾಕಬಹುದಿತ್ತು. ಆದರೆ ಅತಿಥಿ ನಾಯಕನಿಗೆ ಸಮಾಧಾನ ಹೇಳುತ್ತ ಕ್ಷಮೆ ಯಾಚಿಸಿದ ಆತಿಥೇಯ ನಾಯಕ ಬಹಳ ನೊಂದುಕೊಂಡನಾದರೂ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. ಪ್ರತಿಕ್ರಿಯೆ ನೀಡದಂತೆ ಇರುವುದೂ ಕೂಡ ಬಹುದೊಡ್ಡ ಕಲೆ ಇಲ್ಲಿ. ಆ ನಾಯಕ ಎಷ್ಟೇ ಅರಚಾಡಿದರೂ ಸಮಾಧಾನದ ಅರಿವಿನ ಸಮತೋಲನದಿಂದ ವಾತಾವರಣವನ್ನು ತಿಳಿಗೊಳಿಸಲು ಮುಂದಾದ. ಒಂದು ಕ್ಷುಲ್ಲಕ ನೊಣದ ಹಾರಾಟಕ್ಕೆ ಇಷ್ಟು ಸಂಯಮವನ್ನು ಕಳೆದುಕೊಂಡು ಇಡೀ ಔತಣ ಕೂಟದ ಸೌಹಾರ್ದವನ್ನು ಹಾಳು ಗೆಡಹುವ ಅಗತ್ಯವಾದರೂ ಏನಿತ್ತು. ಚಹಾದೊಳಗೆ ನೊಣ ಬಿದ್ದರೂ ಹೊಸ ಚಹಾ ಮಾಡಿಸಬಹುದಾಗಿದೆ. ಎಂತೆಂಥ ಸಂದರ್ಭಗಳನ್ನು ಅವನು ಸಂಯಮದಿಂದ ನಿಭಾಯಿಸಿ ಮಾದರಿ ನಾಯಕ ಎನಿಸಿಕೊಂಡರೂ ನೊಣದ ವಿಷಯದ ಅವನ ಪ್ರತಿಕ್ರಿಯೆ ಅವನ ಇಡೀ ವ್ಯಕ್ತಿತ್ವವನ್ನು ಗಲಿಬಿಲಿಗೊಳಿಸಿತು. ಆಮೇಲೆ ಇಬ್ಬರೂ ನಾಯಕರು ಕೂತು ಮಾತಾಡಿ ಸಂಬಂಧವನ್ನು ತಹಬದಿಗೆ ತಂದದ್ದು ಬೇರೆ ಮಾತು ಬಿಡಿ.

ಅನೇಕ ಸಲ ಅನೇಕ ಸಂಗತಿ ಮತ್ತು ಕ್ರಿಯಾವಳಿಗೆ ಪ್ರತಿಕ್ರಿಯೆಯನ್ನು ನೀಡದಿರುವುದು ಕೂಡ ಬಾಳಿನ ಕಲೆ ಎನಿಸಿಕೊಳ್ಳುತ್ತದೆ. ನಿಜ ಇದು ಬಹುದೊಡ್ಡ ಕಲೆ. ಸಂಯಮವನ್ನು ಕಳೆದುಕೊಂಡು ಅರ್ಥ ಮಾಡಿಕೊಳ್ಳದೆ ಒರಟಾಗಿ ಪ್ರತಿಕ್ರಿಯಿಸುವಿಕೆ ಅನೇಕ ದುರಂತ ಮತ್ತು ಋಣಾತ್ಮಕ ಘಟನೆಗಳಿಗೆ ದಾರಿಯಾಗಿಬಿಡುತ್ತದೆ. ಉಪ್ಪು ಹೆಚ್ಚಾದರೆ, ಒಗ್ಗರಣೆ ಹೊತ್ತಿಹೋದರೆ, ಕಾಫಿ ತಣ್ಣಗಾದರೆ, ಮನೆಗೆ ಬರುವುದು ಸ್ವಲ್ಪ ತಡವಾದರೆ, ಅಲ್ಲಲ್ಲಿ ಕಸ ಬಿದ್ದಿದ್ದರೆ ರಂಪ ಮಾಡುವ ಈ ದಿನಮಾನಗಳಲ್ಲಿ ಈ ಬಗೆಯ ವಿವೇಚನಾರಹಿತ ಪ್ರತಿಕ್ರಿಯೆಗಳು ಮನೆ ಮನ ಸಂಬಂಧಗಳನ್ನೇ ಮುರಿದುಬಿಡುತ್ತವೆ. ಸಣ್ಣ ನೊಣದಂತೆ ಹಾರಿ ಬಂದು ಕೂಡುವ ಇಂತಹ ಆಗುಹೋಗುಗಳಿಗೆ ಕೊಡಲಿ ತೆಗೆದುಕೊಳ್ಳುವ ನಮ್ಮ ಅಸಹಿಷ್ಣುತೆಗೆ ಬೇಕಾದ ಅರಿವು ಇದು. ❖

ಗುಂಡಣ್ಣ

ಪದಬಂಧ 6221

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅತೀ ಕಠಿಣವಾದ ಈ ವಸ್ತು ನವರತ್ನಗಳಲ್ಲಿ ಒಂದಾಗಿದೆ (2)
3.ಸ್ವಲ್ಪ ಅಂತರದಲ್ಲಿದ್ದಾಗಲೇ ಕಣ್ಮರೆಯಾಗುವುದು! (4)
5.ಪ್ರಕೃತಕ್ಕೆ ಸಂಬಂಧಪಡದಿರುವುದು (4)
8.ತಾನಾಗಿ ಕಲ್ಪಿಸಿಕೊಡದ್ದು (6)
11.ತನಗೆ ಸಂಬಂಧಿಸದ ವಿಷಯದಲ್ಲಿ ತಲೆ ಹಾಕುವುದು (6)
13.ಇದೊಂದು ಚರ್ಮವಾದ್ಯ (4)
15.ಹೊಸದಾಗಿ ಅಭಿನಯಿಸುತ್ತಿರುವವನು (4)
16.ನಾವೆಲ್ಲರೂ ಕುಳಿತಿರುವ ದೋಣಿ! (2)

ಮೇಲಿಂದ ಕೆಳಕ್ಕೆ

1.ವರಮಾನವುಳ್ಳ ಕಾಡು! (2)
2.ತಿರುಗಿ ನಿಂತು ಮಾಡಿರುವ ಹೊಗಳಿಕೆ! (2)
4.ಅತಿಯಾದ ಆತುರ (3)
6.ಪ್ರಭಾವ ಬೀರುವ ಪ್ರಾತಃಕಾಲ! (3)
7.ಕೆನ್ನೆಗೆ ಹೊಡೆಯುವ ಏಟು (4)
9.ಕನ್ನ ಹಾಕಿ ಕದ್ದೊಯ್ದ ಚಿನ್ನ (3)
10.ತಡವಾಗಿದ್ದಕ್ಕೇ ಈ ತಬ್ಬಿಬ್ಬು! (4)
11.ಖನಿಜದ್ರವ್ಯ ಇಲ್ಲಿದೆ (3)
12.ಸುಲಭವಲ್ಲದುದು ಇದು (3)
14.ಬಟ್ಟೆ ನೇಯುವ ಸಾಧನ (2)
15.ಕಡಿತ ಈ ರೀತಿ ಬಂದಿದೆ (2)



6220ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಂಬುಧಿ 3.ಸಟೆ
5.ಚಿರಂಜೀವಿ 6.ಯಮಲ
7.ರವಿ 9.ಕುಮಾರವ್ಯಾಸ
11.ವಿಸ 13.ವಿಧುರ
14.ಪರೂವದ್ರ 15.ರಾಣಿ
16.ಬೆಸುಗೆ

ಮೇಲಿಂದ ಕೆಳಕ್ಕೆ:
2.ಬುಸುಕಲಕು
3.ಸವಿಸ್ತಾರ 4.ಉದಯರವಿ
5.ಚಿಕವೀರರಾಜೇಂದ್ರ
8.ವಿಚಾರಗೋಷ್ಠಿ 10.ಸವಿಗನಸು
12.ಸರಪಣಿ

ಸುಡೊಕು 6605

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		7		6				2
	8		5		2	3		
6	3	2		4		7		8
	7				9			
5		9			6		3	7
	6		7					4
2		3	8		4	6		
		6		2			8	9
8	1		6		7	4		

6604 ಸುಡೊಕು

8	7	9	4	6	1	2	5	3
2	4	3	9	8	5	7	6	1
6	5	1	2	7	3	4	8	9
7	9	2	1	5	8	3	4	6
4	3	8	7	9	6	1	2	5
5	1	6	3	4	2	9	7	8
3	2	5	6	1	4	8	9	7
1	6	7	8	2	9	5	3	4
9	8	4	5	3	7	6	1	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

12 ನವೆಂಬರ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಅಷ್ಟಮಿ ಗಂ. 22-59 ನಕ್ಷತ್ರ: ಆಶ್ಲೇಷ ಗಂ 18-36 ಯೋಗ: ಶುಕ್ಲ (ಶುಕ್ರ) ಗಂ. 8-03 ಕರಣ: ಬಾಲವ ಗಂ. 10-58 ತುಲಾ ಮಾಸದ 26 ನೇ ದಿನ. ಮಳೆ ನಕ್ಷತ್ರ: ವಿಶಾಖ 2 ನೇ ಪಾದ. **ರಾಹುಕಾಲ:** ಮಧ್ಯಾಹ್ನ 12-00 - 01-30, ಸೂರ್ಯೋದಯ: 06-32 ಸೂರ್ಯಾಸ್ತ: 05-57, ಮುಸ್ಲಿಂ ದಿನಾಂಕ: 20 ಜುಮಾದುಲ್ಲಾವಲ್, **ಅದೃಷ್ಟ ಸಂಖ್ಯೆ:** 3, 12

ಮೇಷ: ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯಸಮ್ಮತವಾಗಿ ಬಗೆಹರಿಸಿಕೊಳ್ಳುವ ಪ್ರಯತ್ನ ಮಾಡಿ. ದಾಂಪತ್ಯದಲ್ಲಿ ಸಣ್ಣಪುಟ್ಟ ವಿಚಾರಗಳಿಗೆ ಅಸಮಾಧಾನ ಹೊಂದಬೇಡಿ.

ವೃಷಭ: ಹಲವಾರು ಕಾರಣಗಳಿಗೆ ಸ್ನೇಹಿತರು ಮಾರ್ಗದರ್ಶನ, ಬೆಂಬಲ ಹಾಗೂ ಸಹಕಾರ ಅಪೇಕ್ಷಿಸ ಬಹುದು. ಅವಿರೋಧ ಆಯ್ಕೆಗೆ ಒಲವು ತೋರಿದ್ದರಿಂದ ಸ್ಥಾನಗಳಿಸುವಲ್ಲಿ ಸಫಲರಾಗುವಿರಿ.

ಮಿಥುನ: ಉಂಟಾಗುತ್ತಿರುವ ದೈಹಿಕ ಬದಲಾವಣೆಗಳು ಔಷಧದ ಅಡ್ಡಪರಿಣಾಮಗಳೇ ಎಂದು ಪರೀಕ್ಷಿಸಿಕೊಳ್ಳಿರಿ. ಸಾಧ್ಯವಾದಷ್ಟು ಶಾಂತಚಿತ್ತದಿಂದ ಕೆಲಸ ಸಾಧಿಸಿ. ಸಂಧಿವಾತ ಕಾಡಬಹುದು.

ಕರ್ಕಾಟಕ: ಮರಗೆಲಸ ಮಾಡುವವರಿಗೆ ಅವಕಾಶಗಳು ಬಂದರೂ ಕೆಲಸಕ್ಕೆ ಸೋಮಾರಿತನ ಅಡ್ಡಿ ಉಂಟುಮಾಡುವುದು. ಹಿರಿಯರ ಆಶೀರ್ವಾದ ಪಡೆದು ಕೆಲಸ ಕಾರ್ಯಗಳನ್ನು ಆರಂಭಿಸಿ.

ಸಿಂಹ: ಆರ್ಥಿಕ ಬಲವನ್ನು ಮತ್ತು ನೆಮ್ಮದಿ ಇಲ್ಲದೇ ಇರುವುದರಿಂದ ಮಹಾಗಣಪತಿಯ ಆರಾಧನೆ ಶುಭ ಉಂಟುಮಾಡುವುದು. ಹೊಗಳಿಕೆಯ ಮಾತುಗಳನ್ನು ಕೇಳಿ ಸಂತೋಷ ಹೊಂದುವಿರಿ.

ಕನ್ಯಾ: ಬಾಣಸಿಗರಿಗೆ ಕಾರ್ಯದ ಶುಚಿತ್ವವು ರುಚಿತ್ವದಷ್ಟೇ ಪ್ರಾಮುಖ್ಯ ಪಡೆದುಕೊಳ್ಳುತ್ತದೆ. ಮೇಲಧಿಕಾರಿಯ ಅಪರೂಪದ ಮೃದು ವರ್ತನೆಯಿಂದ ಕಾರ್ಯಗಳಲ್ಲಿ ತೃಪ್ತಿಯುಂಟಾಗುವುದು.

ತುಲಾ: ವಿವಾಹ ವಿಚಾರವಾಗಿ ಮುಂದುವರಿದ ಸಂಬಂಧಗಳು ವಿನಾಕಾರಣ ಮುರಿದು ಬೀಳಲಿವೆ. ಜೀವನದಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ಹೆಜ್ಜೆಹಾಕುವ, ಹೊಂದಿಕೊಳ್ಳುವ ಅನಿವಾರ್ಯ ಕಂಡುಬರುತ್ತದೆ.

ವೃಶ್ಚಿಕ: ನಿಮ್ಮೊಳಗಿನ ಹಲವು ವರ್ಷಗಳ ದುಃಖ ಪ್ರಕಾಶಿಸಲಿದೆ. ಅಚ್ಚರಿಯನ್ನು ಉಂಟು ಮಾಡಬಹುದು. ಕೆಟ್ಟ ಹಾಗೂ ಅನವಶ್ಯಕ ಆಲೋಚನೆಗಳು ಅನಾರೋಗ್ಯವನ್ನು ಅಧಿಕಗೊಳಿಸುವುದು.

ಧನು: ತಿಳಿಯದೆ ಮಾಡಿದ ತಪ್ಪಿನಿಂದ ಅನುಭವಿಸುತ್ತಿರುವ ಕಷ್ಟಗಳಿಗೆ ಪರಿಹಾರವನ್ನು ಪ್ರಾಜ್ಞರಿಂದ ಪಡೆಯಿರಿ. ಮಕ್ಕಳೊಂದಿಗಿನ ಸಂಜೆಯ ಸುತ್ತಾಟ, ಮಾತುಕತೆ ಮನಸ್ಸಿಗೆ ಹಿತ ತರಲಿದೆ.

ಮಕರ: ವಿದ್ಯಾರ್ಥಿ ಜೀವನವನ್ನು ಇಷ್ಟ ಪಡುವವರಿಗೆ ಅಧ್ಯಯನಕ್ಕೆ ಸಕಾಲ. ನಂಬಿಕೆಯನ್ನು ಇಟ್ಟಿರುವ ವ್ಯಕ್ತಿಗಳೇ ನಡುನೀರಿನಲ್ಲಿ ಕೈಬಿಡುವಂತೆ ಮಾಡಬಹುದು.

ಕುಂಭ: ನಡೆದು ಹೋದ ದುರ್ಘಟನೆಗಳನ್ನು ಪದೇ ಪದೇ ನೆನಪಿಸಿಕೊಂಡು ದುಃಖ ಪಡುವುದು ಸರಿಯಲ್ಲ. ಮಕ್ಕಳ ಮೇಲಿನ ಅತಿ ಮೋಹವು ಅವರ ಶ್ರೇಯೋಭಿವೃದ್ಧಿಗೆ ತೊಡಕಾಗಲಿದೆ.

ಮೀನ: ಭೂಮಿಗೆ ಸಂಬಂಧಿಸಿದ ಸಮಸ್ಯೆಗಳು ನಿವಾರಣೆಗೊಳ್ಳಲಿವೆ. ಸ್ವ ಅಧ್ಯಯನ ಮಾಡುವವರಿಗೆ ಸರಳವಾಗಿ ಅರ್ಥವಾಗುವ ಪುಸ್ತಕಗಳು ದೊರೆತು ಅಧ್ಯಯನಕ್ಕೆ ಅನುಕೂಲವಾಗುವುದು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,574
ಇಂದಿನ ಅಂತ್ಯ: 25,694
ದಿನದ ಕನಿಷ್ಠ: 25,449
120

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹630
12 ಕ್ಕೆ ₹80
ಮೈಸೂರು: 100 ಕ್ಕೆ ₹632

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹330-676
ದ್ವಿತಳಿ (ಬಿ.ವಿ) ₹566-799

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹181.50
ಆರ್‌ಎಸ್‌ಎಸ್-5 ₹176.50
ಗುಡ್ ಲಾಟ್ ₹163.50

ಮುದ್ರೆ-ಮನೆ ಕಾಫಿ (50 ಕೆಜಿಗೆ)
ಎಪಿ ₹29,000
ಎಸಿ ₹15,540
ಆರ್‌ಪಿ ₹18,900
ಆರ್‌ಸಿ ₹11,000

‘ನಮಗೆ ನ್ಯಾಯಸಮ್ಮತ ಒಪ್ಪಂದ ಬೇಕು’

ಅಮೆರಿಕ ಜೊತೆಗಿನ ವ್ಯಾಪಾರ ಒಪ್ಪಂದದ ಕುರಿತಾಗಿ ಸಚಿವ ಗೋಯಲ್ ಹೇಳಿಕೆ

ಮುಖ್ಯಾಂಶಗಳು
- ಅಮೆರಿಕದ ಜೊತೆ ಇದುವರೆಗೆ ಐದು ಸುತ್ತುಗಳಲ್ಲಿ ಮಾತುಕತೆ
- ಮಾತುಕತೆ ಡಬ್ಲ್ಯುಟಿಒ ನಿಯಮಗಳಿಗೆ ಅನುಗುಣವಾಗಿದೆ: ಅಧಿಕಾರಿಗಳ ಹೇಳಿಕೆ

ನವದೆಹಲಿ (ಪಿಟಿಐ): ಭಾರತವು ಅಮೆರಿಕದ ಜೊತೆ ನ್ಯಾಯ ಸಮ್ಮತವಾದ, ಸಮಾನ ನೆಲೆಯ ವ್ಯಾಪಾರ ಒಪ್ಪಂದವನ್ನು ಬಯಸುತ್ತಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ರೈತರು, ಮೀನುಗಾರರು, ಕಾರ್ಮಿಕರು ಮತ್ತು ಹೈನುಗಾರರ ಹಿತಾಸಕ್ತಿಗಳ ವಿಚಾರದಲ್ಲಿ ದೇಶವು ರಾಜಿ ಮಾಡಿಕೊಳ್ಳುವುದಿಲ್ಲ ಎಂದು ಗೋಯಲ್ ಅವರು ಸ್ಪಷ್ಟಪಡಿಸಿದ್ದಾರೆ. ಭಾರತ ಮತ್ತು ಅಮೆರಿಕದ ನಡುವೆ ಒಳ್ಳೆಯ ವ್ಯಾಪಾರ ಒಪ್ಪಂದದ ವಿಚಾರವಾಗಿ ಮಾತುಕತೆ ನಡೆದಿದೆ ಎಂದಿದ್ದಾರೆ.

‘ಭಾರತದ ಹಿತಾಸಕ್ತಿಗಳಿಗೆ ಪೂರಕವಾದ ಉತ್ತಮ ವ್ಯಾಪಾರ ಒಪ್ಪಂದಕ್ಕಾಗಿ ನಾವು ಕೆಲಸ ಮಾಡುತ್ತಿದ್ದೇವೆ’ ಎಂದು ಅವರು ರಾಜ್ಯಗಳ ಕೈಗಾರಿಕೆ ಹಾಗೂ ವಾಣಿಜ್ಯ ಸಚಿವರ ಸಮಾವೇಶದಲ್ಲಿ ಹೇಳಿದ್ದಾರೆ. ‘ಅಮೆರಿಕದ ಜೊತೆ ನ್ಯಾಯಸಮ್ಮತ, ಸಮಾನ ನೆಲೆಯ ವ್ಯಾಪಾರ ಒಪ್ಪಂದವು ನಮಗೆ ಬೇಕು. ಅದು ಯಾವತ್ತು ಬೇಕಿದ್ದರೂ ಸಾಧ್ಯವಾಗಬಹುದು. ಅದು ನಾಳೆಯೇ ಆಗಬಹುದು, ಮುಂದಿನ ತಿಂಗಳು ಆಗಬಹುದು, ಮುಂದಿನ ವರ್ಷ ಆಗಬಹುದು. ಆದರೆ ಸರ್ಕಾರವಾಗಿ ನಾವು ಎಲ್ಲದಕ್ಕೂ ಸಿದ್ಧವಾಗುತ್ತಿದ್ದೇವೆ’ ಎಂದು ಅವರು ತಿಳಿಸಿದ್ದಾರೆ.

ದೇಶದ ಮೀನುಗಾರಿಕಾ ವಲಯದ ಉತ್ಪನ್ನಗಳಿಗೆ ರಫ್ತಾದಲ್ಲಿ ಹೊಸ ಮಾರುಕಟ್ಟೆ ಅರಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ ಎಂದಿದ್ದಾರೆ. ದೇಶದ ಮೀನುಗಾರಿಕಾ ವಲಯದ ಉತ್ಪನ್ನಗಳ ಮೇಲೆ ಅಮೆರಿಕವು ಹೆಚ್ಚಿನ ಸುಂಕ ವಿಧಿಸಿದೆ.

ಭಾರತ ಮತ್ತು ಅಮೆರಿಕದ ನಡುವೆ ವ್ಯಾಪಾರ ಒಪ್ಪಂದದ ವಿಚಾರವಾಗಿ ಐದು ಸುತ್ತುಗಳಲ್ಲಿ ಮಾತುಕತೆ ನಡೆದಿದೆ. ಒಪ್ಪಂದದ ಮೊದಲ ಹಂತವು ಈ ವರ್ಷದ ಅಂತ್ಯದ ಮೊದಲು ಸಾಧ್ಯವಾಗಲಿದೆ ಎಂದು ಎರಡೂ ದೇಶಗಳು ಹೇಳಿವೆ.

ಪೀಯೂಷ್ ಗೋಯಲ್

‘ಬೇರೆ ದೇಶಗಳು ಅಮೆರಿಕದ ಜೊತೆ ನಡೆಸಿದ ಮಾತುಕತೆಗಳಿಗೆ ಹೋಲಿಸಿದರೆ ಭಾರತ ನಡೆಸಿರುವ ವಾಣಿಜ್ಯ ಒಪ್ಪಂದ ಕುರಿತ ಮಾತುಕತೆಯು ಹೆಚ್ಚು ಸಮಗ್ರವಾಗಿದೆ, ಡಬ್ಲ್ಯುಟಿಒ ನಿಯಮಗಳಿಗೆ ಅನುಗುಣವಾಗಿದೆ. ಮಾತುಕತೆಯು ಹೆಚ್ಚು ಸಮಯ ತೆಗೆದುಕೊಂಡಿರಬಹುದು. ಆದರೆ ನಾವು ನಮ್ಮ ಸೂಕ್ಷ್ಮ ವಲಯಗಳ ಹಿತಾಸಕ್ತಿಯನ್ನು ಗಮನದಲ್ಲಿ ಇರಿಸಿಕೊಂಡು ಬಹಳ ಎಚ್ಚರಿಕೆಯಿಂದ ಮಾತುಕತೆ ನಡೆಸಿದ್ದೇವೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭಾರತದ ಜೊತೆ ನ್ಯಾಯ ಸಮ್ಮತವಾದ ವ್ಯಾಪಾರ ಒಪ್ಪಂದವೊಂದನ್ನು ಮಾಡಿಕೊಳ್ಳುವ ಹಂತದ ಸನಿಹಕ್ಕೆ ಬಂದಿರುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇಳಿದ್ದಾರೆ. ಭಾರತದ ಸರಕುಗಳ ಮೇಲೆ ವಿಧಿಸಿರುವ ತೆರಿಗೆಯನ್ನು ಒಂದು ಹಂತದಲ್ಲಿ ಕಡಿಮೆ ಮಾಡುವುದಾಗಿ ಅವರು ತಿಳಿಸಿದ್ದಾರೆ.

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು

ದೊಡ್ಡ	₹1000-1500
ಮಧ್ಯಮ	₹800-1200
ಸಣ್ಣ	₹100-1000

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1440 (–)
ಸೋಯಾ (ರಿಫೈನ್ಡ್)	₹1270 (–)
ಸೂರ್ಯಕಾಂತಿ (ರಿಫೈನ್ಡ್)	₹1480 (–)
ಪಾಮೋಲಿನ್	₹1250 (–)

ಅಡಿಕೆ ಧಾರಣೆ

ಪುತ್ತೂರು		ಶಿರಸಿ		ಯಲ್ಲಾಪುರ	
ಕೋಕ	20000-31500	ಕೋಕ	20619-32299	ಆಪಿ	60099-72600
ಹೊಸತು	26000-37000	ಕೆಂಪುಗೋಟು	22300-31200	ಬಿಳಿಗೋಟು	14209-36199
ಸಾಗರ		ರಾಶಿ	45019-56289	ಚಾಲಿ	36669-49435
ಬಿಳಿಗೋಟು	23266-23266	ತಟ್ಟಿಬೆಟ್ಟೆ	30619-36899	ಕೋಕ	12009-30699
ಚಾಲಿ	37599-41470	**ಶಿರಸಿ**		ಕೆಂಪುಗೋಟು	14899-32969
ಸಿಪ್ಪೆಗೋಟು	10786-22899	ಬೆಟ್ಟೆ	41599-52909	ರಾಶಿ	42620-66099
ಸಿದ್ದಾಪುರ		ಬಿಳಿಗೋಟು	29199-40399	ತಟ್ಟಿಬೆಟ್ಟೆ	36199-51000
ಬಿಳಿಗೋಟು	27999-36809	ಚಾಲಿ	44099-49501		
ಚಾಲಿ	41819-48500	ಕೆಂಪುಗೋಟು	24201-34169		
		ರಾಶಿ	54089-59089		

ಸುಂಕ ಕಡಿತಕ್ಕೆ ಕ್ರಮ: ಟ್ರಂಪ್ ಭರವಸೆ

ವಾಷಿಂಗ್ಟನ್ (ಪಿಟಿಐ): ‘ಭಾರತದೊಂದಿಗೆ ನ್ಯಾಯಯುತ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವ ದಿನಗಳು ಹತ್ತಿರವಾಗಿವೆ. ಜತೆಗೆ, ಭಾರತದ ಉತ್ಪನ್ನಗಳ ಮೇಲೆ ವಿಧಿಸಿರುವ ಸುಂಕವನ್ನು ಸಹ ಮುಂದಿನ ದಿನಗಳಲ್ಲಿ ಕಡಿಮೆ ಮಾಡಲಾಗುವುದು’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭರವಸೆ ನೀಡಿದ್ದಾರೆ.

ಭಾರತದೊಂದಿಗೆ ಪ್ರಸ್ತಾವಿತ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕುವ ಭರವಸೆಯನ್ನು ಟ್ರಂಪ್ ಎರಡನೇ ಬಾರಿಗೆ ವ್ಯಕ್ತಪಡಿಸಿದ್ದಾರೆ.

ಭಾರತದಲ್ಲಿನ ಅಮೆರಿಕ ರಾಯಭಾರಿಯಾಗಿ ನೇಮಕಗೊಂಡಿರುವ ಸೆರ್ಗಿಯೊ ಗೋರ್ ಅವರ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಮಾತನಾಡಿದ ಅವರು, ‘ನಾವು ಸಾಕಷ್ಟು ಅನ್ಯಾಯದ ವ್ಯಾಪಾರ ಒಪ್ಪಂದಗಳನ್ನು ಹೊಂದಿದ್ದೇವೆ. ಹೀಗಾಗಿ, ಭಾರತದೊಂದಿಗೆ ನ್ಯಾಯಯುತ ಒಪ್ಪಂದ ಮಾಡಿಕೊಳ್ಳುತ್ತೇವೆ’ ಎಂದು ಹೇಳಿದ್ದಾರೆ.

‘ಭಾರತ ರಷ್ಯಾದ ತೈಲ ಖರೀದಿಯನ್ನು ಗಣನೀಯವಾಗಿ ಕಡಿಮೆ ಮಾಡಿದೆ. ಹೀಗಾಗಿ, ನಾವು ಸುಂಕಗಳನ್ನು ಕಡಿಮೆ ಮಾಡುತ್ತೇವೆ’ ಎಂದಿದ್ದಾರೆ.

ಸಕ್ಕರೆ ಉತ್ಪಾದನೆ ಶೇ 18ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಅಕ್ಟೋಬರ್‌ಗೆ ಶುರುವಾದ 2025–26ನೇ ಸಾಲಿನ ಸಕ್ಕರೆ ಮಾರುಕಟ್ಟೆ ವರ್ಷದಲ್ಲಿ ದೇಶದ ಸಕ್ಕರೆ ಉತ್ಪಾದನೆ ಪ್ರಮಾಣವು ಶೇ 18.58ರಷ್ಟು ಹೆಚ್ಚಳವಾಗಿ, 3.09 ಕೋಟಿ ಟನ್‌ಗೆ ತಲುಪುವ ನಿರೀಕ್ಷೆ ಇದೆ ಎಂದು ಭಾರತೀಯ ಸಕ್ಕರೆ ಮತ್ತು ಜೈವಿಕ ಇಂಧನ ತಯಾರಕರ ಒಕ್ಕೂಟ (ಐಎಸ್‌ಎಂಎ) ಹೇಳಿದೆ.

ಕಳೆದ ಮಾರುಕಟ್ಟೆ ವರ್ಷದಲ್ಲಿ ದೇಶದಲ್ಲಿ 2.61 ಕೋಟಿ ಟನ್ ಸಕ್ಕರೆ ಉತ್ಪಾದನೆ ಆಗಿತ್ತು. ಈ ಮಾರುಕಟ್ಟೆ ವರ್ಷದ ಆರಂಭದಲ್ಲಿ ಸಕ್ಕರೆಯ ದಾಸ್ತಾನು 50 ಲಕ್ಷ ಟನ್ ಆಗಿದೆ. ಎಥೆನಾಲ್‌ಗಾಗಿ ಈ ವರ್ಷ 34 ಲಕ್ಷ ಟನ್ ಸಕ್ಕರೆಯನ್ನು ಬಳಸಿಕೊಳ್ಳುವ ಅಂದಾಜು ಇದೆ ಎಂದು ಐಎಸ್‌ಎಂಎ ಹೇಳಿದೆ. ವರ್ಷದ ಆರಂಭದಲ್ಲಿ ಇದ್ದ ಸಕ್ಕರೆ ದಾಸ್ತಾನು ಹಾಗೂ ಹೆಚ್ಚಿನ ಪ್ರಮಾಣದ ಉತ್ಪಾದನೆಯನ್ನು ಪರಿಗಣಿಸಿದರೆ ಈ ಬಾರಿ ಸಕ್ಕರೆಯ ಲಭ್ಯತೆಯು 3.59 ಕೋಟಿ ಟನ್ ಆಗಲಿದೆ. ಇದು ದೇಶದ ಮಾರುಕಟ್ಟೆಗೆ ಅಗತ್ಯವಿರುವ ಸಕ್ಕರೆಯ ಪ್ರಮಾಣವಾದ 2.85 ಕೋಟಿ ಟನ್‌ಗಿಂತ ಹೆಚ್ಚು ಎಂದು ಐಎಸ್‌ಎಂಎ ಹೇಳಿದೆ.

ಸಕ್ಕರೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸುವ ಮಹಾರಾಷ್ಟ್ರ, ಉತ್ತರ ಪ್ರದೇಶ ಮತ್ತು ಕರ್ನಾಟಕದಲ್ಲಿ ಉತ್ಪಾದನೆಯು ಹೆಚ್ಚಾಗುವ ನಿರೀಕ್ಷೆ ಇದೆ. ಹೀಗಾಗಿ ದೇಶದ ಒಟ್ಟಾರೆ ಸಕ್ಕರೆ ಉತ್ಪಾದನೆಯೂ ಜಾಸ್ತಿ ಆಗಬಹುದು ಎಂದು ಅಂದಾಜು ಮಾಡಿದೆ. 2025–26ರಲ್ಲಿ ಕರ್ನಾಟಕದಲ್ಲಿ 63.5 ಲಕ್ಷ ಟನ್ ಸಕ್ಕರೆ ಉತ್ಪಾದನೆ ಆಗುವ ನಿರೀಕ್ಷೆ ಇದೆ.

‘ದೇಶದಲ್ಲಿ ಸಕ್ಕರೆ ಲಭ್ಯತೆಯು ಈ ಬಾರಿ ಉತ್ತಮ ಮಟ್ಟದಲ್ಲಿ ಇರುವ ಅಂದಾಜು ಇದೆ. ಹೀಗಾಗಿ ಭಾರತದಿಂದ ಸರಿಸುಮಾರು 20 ಲಕ್ಷ ಟನ್ ಸಕ್ಕರೆ ರಫ್ತು ಮಾಡಲು ಅವಕಾಶ ಇದೆ. ರಫ್ತು ನೀತಿಯನ್ನು ಆದಷ್ಟು ಬೇಗ ಪ್ರಕಟಿಸುವಂತೆ ನಾವು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದೇವೆ’ ಎಂದು ಐಎಸ್‌ಎಂಎ ಹೇಳಿದೆ.

ಟಾಟಾ ಪವರ್ ಲಾಭ ಶೇ 14ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಟಾಟಾ ಪವರ್ ಕಂಪನಿಯ ನಿವ್ವಳ ಲಾಭವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇಕಡ 14ರಷ್ಟು ಹೆಚ್ಚಾಗಿದ್ದು ₹1,245 ಕೋಟಿಗೆ ತಲುಪಿದೆ. ಕಂಪನಿಯು ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ₹1,093 ಕೋಟಿ ಲಾಭ ಗಳಿಸಿತ್ತು.

ಕಂಪನಿಯ ವರಮಾನವು ಶೇ 3ರಷ್ಟು ಹೆಚ್ಚಾಗಿದ್ದು ₹15,769 ಕೋಟಿಗೆ ತಲುಪಿದೆ. ಭೂತಾನ್ ದೇಶದಲ್ಲಿ 1,125 ಮೆಗಾವಾಟ್ ಸಾಮರ್ಥ್ಯದ ದೋರ್ಜಿಲಂಗ್ ಜಲ ವಿದ್ಯುತ್ ಉತ್ಪಾದನಾ ಘಟಕವನ್ನು ನಿರ್ಮಾಣ ಮಾಡಲಿರುವ ಕಂಪನಿಯಲ್ಲಿ (ಎಸ್‌ಪಿವಿ) ಶೇಕಡ 40ರಷ್ಟು ಪಾಲು ಹೊಂದಲು ಟಾಟಾ ಪವರ್ ಕಂಪನಿಯು ₹1,572 ಕೋಟಿ ಹೂಡಿಕೆ ಮಾಡಲಿದೆ. ಈ ಜಲ ವಿದ್ಯುತ್ ಉತ್ಪಾದನಾ ಘಟಕವು ₹13,100 ಕೋಟಿ ಹೂಡಿಕೆಯೊಂದಿಗೆ ನಿರ್ಮಾಣ ಆಗಲಿದೆ.

ಈ ಎಸ್‌ಪಿವಿ ಇನ್ನಷ್ಟೇ ಜನ್ಮತಳೆಯಬೇಕಿದೆ ಎಂದು ಟಾಟಾ ಪವರ್ ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ನಾರಾಯಣ ರಾವ್, ಉಡುಪಿ

- **ಪ್ರಶ್ನೆ: ನಾನು ಹೂಡಿಕೆಯ ಕ್ಷೇತ್ರಕ್ಕೆ ಹೊಸಬ. ಬಂಗಾರ ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ಲಾಭ ನೀಡುತ್ತಿದೆ. ಹಿಂದೆ ಗೋಲ್ಡ್ ಬಾಂಡ್ ಆರಂಭಿಸಿದ್ದಾಗ ನಾನು ಖರೀದಿಸಿದ್ದೆ. ಈ ಹೂಡಿಕೆಯಿಂದ ನನಗೆ ಸಾಕಷ್ಟು ಲಾಭ ಆಗಿದೆ. ಆದರೆ ಈತ್ತೀಚಿನ ಕೆಲವು ವರ್ಷಗಳಿಂದ ಇದನ್ನು ನಿಲ್ಲಿಸಲಾಗಿದೆ. ಹೀಗಾಗಿ, ನೇರ ಚಿನ್ನ ಖರೀದಿಗಿಂತ ಅದೇ ಕ್ಷೇತ್ರದ ಯಾವುದಾದರೂ ಕಂಪನಿಯ ಷೇರು, ಡಿಜಿಟಲ್ ಗೋಲ್ಡ್, ಗೋಲ್ಡ್ ಫಂಡ್, ಇಟಿಎಫ್ ಖರೀದಿ ಮಾಡಿ ಅದೇ ರೀತಿಯ ಲಾಭ ಗಳಿಸಬಹುದೇ?**

ಉತ್ತರ: ಬಂಗಾರದ ಮೇಲಿನ ಹೂಡಿಕೆಯನ್ನು ದೀರ್ಘಕಾಲಿಕ ಮೌಲ್ಯವರ್ಧನೆ ಹಾಗೂ ಸಂರಕ್ಷಣೆಯ ಸಾಧನವಾಗಿ ಪರಿಗಣಿಸಲಾಗಿದೆ. ನೀವು ಹಿಂದೆ ಗೋಲ್ಡ್ ಬಾಂಡ್‌ಗಳಲ್ಲಿ ಹೂಡಿಕೆ ಮಾಡಿ ಲಾಭ ಗಳಿಸಿದ್ದೀರಿ. ಅದು ನಿಮಗೆ ಸರಿಯಾದ ನಿರ್ಣಯವಾಗಿತ್ತು. ಏಕೆಂದರೆ ಗೋಲ್ಡ್ ಬಾಂಡ್‌ಗಳು ಬಂಗಾರದ ಬೆಲೆಯ ಏರಿಕೆಗೆ ಸಮಾನವಾದ ಲಾಭ ನೀಡುವುದರ ಜೊತೆಗೆ ಪ್ರತಿವರ್ಷ ನಿಮ್ಮ ಹೂಡಿಕೆಗೆ ಬಡ್ಡಿ ಆದಾಯವನ್ನೂ ನೀಡುತ್ತವೆ. ಇತ್ತೀಚೆಗೆ ಹೊಸ ಗೋಲ್ಡ್ ಬಾಂಡ್ ನೀಡುವುದನ್ನು ತಾತ್ಕಾಲಿಕವಾಗಿ ನಿಲ್ಲಿಸಿರುವುದರಿಂದ ಪರ್ಯಾಯ ಮಾರ್ಗಗಳ ಬಗ್ಗೆ ಯೋಚಿಸುವುದು ಸಮಂಜಸ.

ನೇರ ಚಿನ್ನ ಖರೀದಿಸುವುದು ಭದ್ರತೆ, ಸಂಗ್ರಹ, ಸುರಕ್ಷತಾ ವೆಚ್ಚ ಮತ್ತು ಮಾರುಕಟ್ಟೆಯಲ್ಲಿ ಅದರ ಮರುಮಾರಾಟದ ಕುರಿತಾಗಿ ಅನಿಶ್ಚಿತತೆಗಳನ್ನು ಹೊಂದಿರುತ್ತದೆ. ಇದಕ್ಕಿಂತ ಡಿಜಿಟಲ್ ಗೋಲ್ಡ್ ಮತ್ತು ಗೋಲ್ಡ್ ಇಟಿಎಫ್‌ಗಳು ವ್ಯವಹಾರ ನಡೆಸುವುದನ್ನು ಸುಲಭ ಮಾಡಿಕೊಡುತ್ತವೆ ಮತ್ತು ಅವುಗಳನ್ನು ನಗದಾಗಿ ಪರಿವರ್ತಿಸಿಕೊಳ್ಳುವುದು ಕೂಡ ಸುಲಭ. ಗೋಲ್ಡ್ ಇಟಿಎಫ್‌ಗಳನ್ನು ಷೇರುಪೇಟೆಗಳ ಮೂಲಕ ಮಾರಾಟ, ಖರೀದಿ ಮಾಡುವುದರಿಂದ ಬೆಲೆಯಲ್ಲಿ ಪಾರದರ್ಶಕತೆ ಇರುತ್ತದೆ. ಇವುಗಳನ್ನು ಯಾವುದೇ ಸಮಯದಲ್ಲಿ ಮಾರಾಟ ಮಾಡುವ ಅಥವಾ ಖರೀದಿ ಮಾಡುವ ಸೌಲಭ್ಯ ಇರುತ್ತದೆ. ಭೌತಿಕವಾಗಿ ಚಿನ್ನವನ್ನು ಸಂಗ್ರಹಿಸಿ ಇಟ್ಟುಕೊಳ್ಳುವಾದ ಎದುರಾಗುವ ಸಮಸ್ಯೆ ಇದರಲ್ಲಿ ಇಲ್ಲ.

ಡಿಜಿಟಲ್ ಗೋಲ್ಡ್ ಕೂಡ ಸುಲಭವಾಗಿ ಸಿಗುವುದಾದರೂ, ದೀರ್ಘಾವಧಿಯ ಭದ್ರತೆ ದೃಷ್ಟಿಯಿಂದ ಇಟಿಎಫ್‌ಗಳು ಮತ್ತಷ್ಟು ವಿಶ್ವಾಸಾರ್ಹ. ಇನ್ನು ಸ್ವರ್ಣಾಭರಣ ಮಾರುಕಟ್ಟೆ ಕಂಪನಿಗಳ ಷೇರುಗಳು ಬಂಗಾರದ ಬದಲು ಖರೀದಿಗೆ ಯೋಗ್ಯವೇ ಎಂಬ ಬಗ್ಗೆ ನಿಮ್ಮ ಪ್ರಶ್ನೆಯಿದೆ. ಆದರೆ ಈ ಕಂಪನಿಗಳ ಷೇರುಗಳು ಬಂಗಾರಕ್ಕೆ ಪರ್ಯಾಯವಲ್ಲ. ಬಂಗಾರದ ದರ ಏರಿಕೆಯ ವಾರ್ಷಿಕ ತುಲನೆ ಮಾಡಿದರೆ, ಅದರ ಇಳಿಮುಖ ಚಲನೆ ದರ ಯಾವತ್ತೂ ಅತ್ಯಲ್ಪವೆಂಬುದನ್ನು ಖಂಡಿತವಾಗಿ ಹೇಳಬಹುದು. ಆದರೆ, ಚಿನ್ನ ಮಾರಾಟ ಮಾಡುವ ಕಂಪನಿ ಷೇರುಗಳ ಮೌಲ್ಯವು ಇತರ ಅನೇಕ ಮಾರುಕಟ್ಟೆ ಹಾಗೂ ಕಂಪನಿ ಸಂಬಂಧಿತ ವ್ಯವಹಾರದ ಮೇಲೆ ನಿರ್ಧಾರ ಆಗುತ್ತದೆ. ಆದ್ದರಿಂದ ಅವು ಬಂಗಾರದ ಪ್ರತಿ ದಿನದ ಮೌಲ್ಯಕ್ಕೆ ಸಮರ್ಪಕ ತುಲನೆ ಆಗಲಾರದು. ನಿಮ್ಮ ಹೂಡಿಕೆಯ ಉದ್ದೇಶಕ್ಕೆ ಗೋಲ್ಡ್ ಇಟಿಎಫ್ ಅಥವಾ ಗೋಲ್ಡ್ ಮ್ಯೂಚುವಲ್ ಫಂಡ್ ಆಯ್ಕೆ ಮಾಡುವುದು ಸೂಕ್ತ.

ರೂಪ ದೊಡಮನಿ

- **ಪ್ರಶ್ನೆ: ನಾನು ಸರ್ಕಾರಿ ನೌಕರಳಾಗಿದ್ದು ನಿವೇಶನ ಕೊಂಡಿದ್ದೇನೆ. ಈಗ ಮನೆ ಕಟ್ಟಲು ನಿರ್ಧರಿಸಿದ್ದೇವೆ. ನನ್ನ ಹಿತೈಷಿಗಳು ಗೃಹಸಾಲ ಮಾಡುವುದಕ್ಕಿಂತ ವೈಯಕ್ತಿಕ ಸಾಲ ಮಾಡುವುದು ಸೂಕ್ತ ಎಂದು ಸಲಹೆ ನೀಡುತ್ತಿದ್ದಾರೆ. ಗೃಹಸಾಲ ತೀರಿಸುವವರೆಗೂ ದುಪ್ಪಟ್ಟು ಮೊತ್ತ ಕಟ್ಟಿದಂತಾಗುತ್ತದೆ ಎನ್ನುತ್ತಿದ್ದಾರೆ. ಆದ್ದರಿಂದ ನನಗೆ ಗೊಂದಲವಿದೆ. ವೈಯಕ್ತಿಕ ಸಾಲ ಅಥವಾ ಗೃಹಸಾಲ ಪೈಕಿ ಯಾವುದು ಸೂಕ್ತ?**

ಉತ್ತರ: ಗೃಹ ನಿರ್ಮಾಣಕ್ಕಾಗಿ ಸಾಲ ತೆಗೆದುಕೊಳ್ಳುವಾಗ ಗೃಹಸಾಲ ಮತ್ತು ವೈಯಕ್ತಿಕ ಸಾಲದ ನಡುವಿನ ವ್ಯತ್ಯಾಸವನ್ನು ಸರಿಯಾಗಿ ಅರಿತುಕೊಳ್ಳುವುದು ಮುಖ್ಯ. ನಿಮ್ಮ ಹಿತೈಷಿಗಳು ಹೇಳಿರುವಂತೆ ಸಾಮಾನ್ಯ ಸಂದರ್ಭದಲ್ಲಿ ಒಟ್ಟು ಬಡ್ಡಿ ಲೆಕ್ಕ ಹಾಕಿದರೆ ಸಂಪೂರ್ಣ ಸಾಲ ಮರುಪಾವತಿ ಅವಧಿಯಲ್ಲಿ (20 ವರ್ಷಗಳ ಮರುಪಾವತಿ) ಬಡ್ಡಿ ಸಹಜವಾಗಿ ಅಸಲಿಗೆ ಸಮ ಆಗಿರುತ್ತದೆ. ಆದರೆ ಇಂತಹ ದ್ವಂದ್ವ ಇದ್ದಾಗ ಯಾವ ಸಾಲವನ್ನು ಆಯ್ಕೆ ಮಾಡಬೇಕು ಎಂಬುದು ಬಡ್ಡಿ, ತೆರಿಗೆ ಲಾಭ, ಇಎಂಐ ಹೊರೆ, ನಿಮ್ಮ ಉಳಿತಾಯ ಮತ್ತು ವೇತನದ ಸ್ಥಿರತೆ ಮೇಲೂ ಅವಲಂಬಿತವಾಗಿದೆ.

ಗೃಹಸಾಲದ ಬಡ್ಡಿದರ ಸಾಮಾನ್ಯವಾಗಿ ಶೇ 8ರಿಂದ ಶೇ 9ರಷ್ಟು ಇರುತ್ತದೆ. ಇದು ನಿಮ್ಮ ವಯಸ್ಸಿಗೆ ಅನುಗುಣವಾಗಿ 15ರಿಂದ 30 ವರ್ಷ ಅವಧಿಯ ಪಾವತಿ ಆಗಿರುತ್ತದೆ. ಈ ವರ್ಗದಲ್ಲಿ ನಿಮಗೆ ಸಿಗುವ ಸಾಲದ ಮೊತ್ತ ನಿಮ್ಮ ಆಸ್ತಿಯ ಅಡಮಾನದ ಮೇಲೆ ಇರುವುದರಿಂದ ಸಾಲದ ಮೊತ್ತ ಸಹಜವಾಗಿ ಹೆಚ್ಚಾಗಿರುತ್ತದೆ. ಅಂದರೆ ನಿಮ್ಮ ಮನೆಯ ನಿರ್ಮಾಣ ವೆಚ್ಚದ ಶೇ 70-80ರಷ್ಟು ಸಾಲ ಸಿಗುತ್ತದೆ. ಆದರೆ, ವೈಯಕ್ತಿಕ ಸಾಲ ಪಡೆದು ಅದೇ ಮೊತ್ತವನ್ನು ಮನೆ ನಿರ್ಮಾಣಕ್ಕೆ ಬಳಸುವುದಿದ್ದರೆ, ನಿಮ್ಮ ಸಾಲದ ಮೊತ್ತ ಕಡಿಮೆಯಾಗುತ್ತದೆ. ಹೀಗಾಗಿ ಕೊರತೆಯಾಗುವ ಮೊತ್ತವನ್ನು ನಿಮ್ಮ ಉಳಿತಾಯದಿಂದ ಭರಿಸಬೇಕು. ಸಾಲ ಮರುಪಾವತಿ ಅವಧಿಯೂ ಕಡಿಮೆ (3-5 ವರ್ಷ) ಇರುವುದರಿಂದ ಇಎಂಐ ಪ್ರತಿ ತಿಂಗಳು ಹೆಚ್ಚು ಇರುತ್ತದೆ. ಈ ಸಾಲವನ್ನು ಯಾವುದೇ ಭದ್ರತೆ ಇಲ್ಲದೆ ನೀಡಲಾಗುವುದರಿಂದ ಬಡ್ಡಿ ದರ ಹೆಚ್ಚು–ಸಾಮಾನ್ಯವಾಗಿ ಶೇ 12ರಿಂದ ಶೇ 18ರಷ್ಟು ಅಥವಾ ಹೆಚ್ಚಿನ ಮಟ್ಟಕ್ಕೂ ಹೋಗಬಹುದು. ನಿಮ್ಮ ಆರ್ಥಿಕ ಕ್ಷಮತೆಗೆ ತಕ್ಕಂತೆ ಇದು ವ್ಯತ್ಯಾಸ ಆಗಬಹುದು. ಈ ಸಾಲಕ್ಕೆ ತೆರಿಗೆ ರಿಯಾಯಿತಿ ದೊರೆಯುವುದಿಲ್ಲ. ವೈಯಕ್ತಿಕ ಸಾಲವನ್ನು ಕಡಿಮೆ ಮೊತ್ತದ ಹೆಚ್ಚುವರಿ ವೆಚ್ಚಗಳಿಗಾಗಿ ಮಾತ್ರ ಪರಿಗಣಿಸಬಹುದು.

ನೀವು ಸರ್ಕಾರಿ ನೌಕರರಾಗಿರುವ ಕಾರಣ ನಿಮ್ಮ ಆದಾಯ ಸ್ಥಿರವಾಗಿದೆ. ಹೀಗಾಗಿ ಬ್ಯಾಂಕಿನಿಂದ ಸಿಗುವ ಗೃಹಸಾಲವನ್ನು ನೀವು ಪಡೆಯುವುದೊಳಿತು. ದೀರ್ಘಾವಧಿಯ ದೃಷ್ಟಿಯಿಂದ, ಕಡಿಮೆ ಬಡ್ಡಿದರ ಪರಿಗಣಿಸಿದರೆ ಬ್ಯಾಂಕ್ ಸಾಲವೇ ಸೂಕ್ತ. ಇನ್ನೂ ಮುಖ್ಯವಾಗಿ ನಿಮ್ಮ ಸಾಲದ ಬಡ್ಡಿ ಹೊರೆ ಇಳಿಸಲು ಉಳಿತಾಯದ ಹಣ ಹೆಚ್ಚುವರಿ ಸಂಗ್ರಹ ಆದಾಗ ಮುಂಗಡ ಅಸಲು ಪಾವತಿ ಮಾಡಿ ಬೇಗನೆ ಋಣ ಮುಕ್ತರಾಗುವ ಬಗ್ಗೆ ಯೋಚಿಸಿ. ಹೀಗಾಗಿ ಕಡಿಮೆ, ಅಗತ್ಯದಷ್ಟು ಸಾಲ ಪಡೆದು ಅವಧಿಗೂ ಮುನ್ನ ಪೂರ್ವ ಪಾವತಿ ಮಾಡುವ ಅವಕಾಶ ಇರುವ ಆಯ್ಕೆ ಸೂಕ್ತ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಇಸ್ಲಾಮಾಬಾದ್‌ನಲ್ಲಿ ಘಟನೆ: 27 ಮಂದಿಗೆ ಗಾಯ

ಬಾಂಬ್ ದಾಳಿ: 12 ಸಾವು

ಇಸ್ಲಾಮಾಬಾದ್ (ಪಿಟಿಐ): ಇಲ್ಲಿನ ಜಿಲ್ಲಾ ನ್ಯಾಯಾಲಯ ಸಮುಚ್ಚಯದ ಹೊರಗೆ ಮಂಗಳವಾರ ವ್ಯಕ್ತಿಯೊಬ್ಬ ನಡೆಸಿದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ 12 ಮಂದಿ ಮೃತಪಟ್ಟಿದ್ದು, 27 ಮಂದಿ ಗಾಯಗೊಂಡಿದ್ದಾರೆ.

ಯಾವುದೇ ಗುಂಪು ಅಥವಾ ವ್ಯಕ್ತಿಯು ಈ ದಾಳಿಯ ಹೊಣೆಯನ್ನು ವಹಿಸಿಕೊಂಡಿಲ್ಲ. ಆದರೆ, ಇಂತಹ ದಾಳಿಗಳನ್ನು ಸಾಮಾನ್ಯವಾಗಿ ತೆಹ್ರೀಕ್-ಇ-ತಾಲಿಬಾನ್ ಪಾಕಿಸ್ತಾನ (ಟಿಟಿಪಿ) ನಡೆಸುತ್ತದೆ ಎಂದು ಮೂಲಗಳು ತಿಳಿಸಿವೆ.

‘ಆತ್ಮಾಹುತಿ ದಾಳಿ ನಡೆಸಲು ಬಂದ ವ್ಯಕ್ತಿಯು ನ್ಯಾಯಾಲಯ ಸಮುಚ್ಚಯ ಪ್ರವೇಶಿಸಲು ವಿಫಲ ಯತ್ನ ನಡೆಸಿದ್ದ. ಬಳಿಕ, ಜಿ–11 ಪ್ರದೇಶದ ಕಟ್ಟಡದ ಪ್ರವೇಶ ದ್ವಾರದ ಬಳಿ ನಿಂತಿದ್ದ ಪೊಲೀಸ್ ವಾಹನದ ಬಳಿ ಬಾಂಬ್ ಸ್ಫೋಟಿಸಿದ್ದಾನೆ. ಘಟನೆಯಲ್ಲಿ ಭದ್ರತಾ ಸಿಬ್ಬಂದಿ ಮತ್ತು ವಕೀಲರು ಸೇರಿದಂತೆ ಹಲವರು ಗಾಯಗೊಂಡಿದ್ದಾರೆ. ಅವರನ್ನು ಪಾಕಿಸ್ತಾನ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ (ಪಿಐಎಂಎಸ್) ದಾಖಲಿಸಲಾಗಿದೆ’ ಎಂದು ಆಂತರಿಕ ವ್ಯವಹಾರಗಳ ಸಚಿವ ಮೊಹ್ಸಿನ್ ನಕ್ವಿ ತಿಳಿಸಿದ್ದಾರೆ.

ದಾಳಿಕೋರನನ್ನು ಗುರುತಿಸುವುದು ನಮ್ಮ ಮೊದಲ ಆದ್ಯತೆಯಾಗಿದೆ. ಅಪರಾಧಿಗಳನ್ನು ಪತ್ತೆ ಮಾಡಿ ಕಠಿಣ ಶಿಕ್ಷೆಗೆ ಗುರಿಪಡಿಸ ಲಾಗುವುದು. ಸಂತ್ರಸ್ತರನ್ನು ಗುರುತಿಸುವ ಪ್ರಕ್ರಿಯೆಯು ನಡೆಯುತ್ತಿದೆ. ನಾವು ಈ ಸ್ಫೋಟವನ್ನು ಅನೇಕ ಆಯಾಮಗಳಿಂದ ನೋಡುತ್ತಿದ್ದೇವೆ’ ಎಂದು ಅವರು ಹೇಳಿದ್ದಾರೆ.

‘ಪಾಕಿಸ್ತಾನದಲ್ಲಿ ಭಯೋತ್ಪಾದನೆ ಚಟುವಟಿಕೆಗಳಿಗೆ ಹಣಕಾಸಿನ ನೆರವು ಒದಗಿಸುತ್ತಿರುವವರು ಈಗ ಮೂರು ಪಟ್ಟು ಹೆಚ್ಚಿಸಿದ್ದಾರೆ. ಅಫ್ಗಾನಿಸ್ತಾನವು ತನ್ನ ನೆಲದಲ್ಲಿ ಭಯೋತ್ಪಾದನೆ ಚಟುವಟಿಕೆಗಳಿಗೆ ಆಶ್ರಯ ನೀಡುವುದನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ನಾವು ಅವರ ವಿರುದ್ಧ ಕ್ರಮ ಕೈಗೊಳ್ಳಬೇಕಾಗುತ್ತದೆ’ ಎಂದು ನಕ್ವಿ ಎಚ್ಚರಿಕೆ ನೀಡಿದ್ದಾರೆ.

ಈ ದಾಳಿಯನ್ನು ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ತೀವ್ರವಾಗಿ ಖಂಡಿಸಿದ್ದಾರೆ.

ಭಯೋತ್ಪಾದಕ ಚಟುವಟಿಕೆ ನಿಗ್ರಹ ಸಂಬಂಧ ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನ ದೇಶಗಳು ಮೂರನೇ ಸುತ್ತಿನ ಮಾತುಕತೆ ನಡೆಸಿದ ಕೆಲ ದಿನಗಳ ಬಳಿಕ ಈ ದಾಳಿ ನಡೆದಿದೆ.

ಇಸ್ಲಾಮಾಬಾದ್‌ನ ನ್ಯಾಯಾಲಯ ಸಮುಚ್ಚಯದ ಬಳಿ ನಡೆದ ಆತ್ಮಾಹುತಿ ದಾಳಿಯಲ್ಲಿ ಹಾನಿಗೊಳಗಾದ ವಾಹನ –ಎಎಫ್‌ಪಿ ಚಿತ್ರ

‘ಅಫ್ಗಾನ್‌ಗೆ ತಕ್ಕ ಪ್ರತ್ಯುತ್ತರ’

‘ಬಾಂಬ್ ದಾಳಿಯ ಮೂಲಕ ಅಫ್ಗಾನ್ ತಾಲಿಬಾನ್ ತನ್ನ ಸಂದೇಶವನ್ನು ರವಾನಿಸಿದೆ. ಕಾಬೂಲ್ ಆಡಳಿತಗಾರರು ಪಾಕಿಸ್ತಾನದಲ್ಲಿ ಭಯೋತ್ಪಾದನಾ ಚಟುವಟಿಕೆಗಳನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಇದಕ್ಕೆ ತಕ್ಕ ಪ್ರತ್ಯುತ್ತರ ನೀಡಲಾಗುವುದು’ ಎಂದು ರಕ್ಷಣಾ ಸಚಿವ ಖ್ವಾಜಾ ಆಸಿಫ್ ಎಚ್ಚರಿಸಿದ್ದಾರೆ.

ಎಂ.ಎಫ್: ಒಳಹರಿವು ಇಳಿಕೆ

ಮುಂಬೈ (ಪಿಟಿಐ): ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಿಗೆ ಹರಿದುಬರುವ ನಿವ್ವಳ ಮೊತ್ತವು ಅಕ್ಟೋಬರ್‌ನಲ್ಲಿ ಶೇಕಡ 19ರಷ್ಟು ಕಡಿಮೆ ಆಗಿದ್ದು, ₹24,690 ಕೋಟಿಗೆ ತಲುಪಿದೆ. ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಿಗೆ ಹರಿದುಬರುವ ಮೊತ್ತವು ಸತತ ಮೂರು ತಿಂಗಳುಗಳಿಂದ ಕಡಿಮೆ ಆಗುತ್ತಿದೆ.

ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಮೂಲಕ ಹೂಡಿಕೆ ಆಗಿರುವ ಒಟ್ಟು ಮೊತ್ತವು ₹29,529 ಕೋಟಿ ಆಗಿದೆ. ಚಿನ್ನದ ಬೆಲೆಯು ಅಕ್ಟೋಬರ್‌ನಲ್ಲಿ ಏರಿಕೆ ಕಂಡಿದ್ದ ಕಾರಣದಿಂದಾಗಿ ಚಿನ್ನದ ಇಟಿಎಫ್‌ಗಳಲ್ಲಿ ಒಟ್ಟು ₹7,743 ಕೋಟಿ ನಿವ್ವಳ ಹೂಡಿಕೆ ಆಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟವು (ಎಎಂಎಫ್‌ಐ) ಹೇಳಿದೆ.

ಅಕ್ಟೋಬರ್‌ನಲ್ಲಿ ಹೂಡಿಕೆದಾರರು ಒಟ್ಟು ₹38,920 ಕೋಟಿಯನ್ನು ಹಿಂಪಡೆದಿದ್ದಾರೆ.

ಮುಂಬೈ ಧಾರಣೆ (ಶೇಂಗಾ)
11-11-2025

ಜಾವಾ 70/80(ಹೊಸ)	10500-10600
ಜಾವಾ 80/90(ಹೊಸ)	9800-9900
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	8800-8900
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1450 (–)
ಒಂದು ವಾರದ ಡೆಲಿವರಿ	1445 (–)
ಪಾಮ್ ವಾರದ ಡೆಲಿವರಿ	1248 (–)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (–)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,23,650 (–)
ಬೆಳ್ಳಿ ಕೆ.ಜಿಗೆ	1,54,750 (–)

ಹಿಂದಿನ ದಿನದ ಧಾರಣೆ ಲಭ್ಯವಿಲ್ಲ

ಎಲ್ಲರ ಚಿತ್ತ 14ರತ್ತ

ಒಂದನೇ ಪುಟದಿಂದ...

2020ರ ಚುನಾವಣೆಯಲ್ಲಿ ರಾಜ್ಯದಲ್ಲಿ ಶೇ 57.29ರಷ್ಟು ಮತದಾನವಾಗಿತ್ತು.

ಬಿಹಾರದ ಎಲ್ಲ 243 ಕ್ಷೇತ್ರಗಳ ಅಭ್ಯರ್ಥಿಗಳ ಹಣೇಬರಹ ವಿದ್ಯುನ್ಮಾನ ಮತಯಂತ್ರಗಳಲ್ಲಿ (ಇವಿಎಂ) ಅಡಕವಾಗಿದ್ದು, ಮುಂದಿನ ಐದು ವರ್ಷಗಳ ಅಧಿಕಾರ ಯಾರ ಪಾಲಾಗಲಿದೆ ಎಂಬುದು ನವೆಂಬರ್ 14ರ ಮತಎಣಿಕೆ ದಿನ ಗೊತ್ತಾಗಲಿದೆ. ಹೀಗಾಗಿ ಎಲ್ಲರ ದೃಷ್ಟಿ ನ. 14ರ ಫಲಿತಾಂಶದ ಮೇಲೆ ನೆಟ್ಟಿದೆ.

ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಬಳಿಕ ರಾಜ್ಯದಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆ ಇದಾಗಿದೆ. ನ. 6ರಂದು ಮೊದಲ ಹಂತದಲ್ಲಿ 121 ಕ್ಷೇತ್ರಗಳಿಗೆ ಮತದಾನ ನಡೆದಿತ್ತು. ಆಗ ಶೇ 65.1ರಷ್ಟು ಜನರು ಮತ ಚಲಾಯಿಸಿದ್ದರು.

ರೋಹತಾಸ್ ಜಿಲ್ಲೆಯಲ್ಲಿ, ಶಾಲಾ ನಿರ್ಮಾಣದ ಬೇಡಿಕೆ ಈಡೇರದ್ದರಿಂದ ಅಸಮಾಧಾನಗೊಂಡ ಮತದಾರರಲ್ಲಿ ದೊಡ್ಡ ಗುಂಪೊಂದು ಮತದಾನವನ್ನು ಬಹಿಷ್ಕರಿಸಿತ್ತು. ನವಡಾದಲ್ಲಿ ಎರಡು ರಾಜಕೀಯ ಪಕ್ಷಗಳ ಬೆಂಬಲಿಗರ ನಡುವೆ ತಿಕ್ಕಾಟ ನಡೆಯಿತು. ಪೊಲೀಸರ ಮಧ್ಯ ಪ್ರವೇಶದಿಂದ ಬಿಕ್ಕಟ್ಟು ಶಮನಗೊಂಡಿತು.

‘ಫ್ಲೆಷ್’ ಕೃತಿಗೆ ಬುಕರ್

ಲಂಡನ್ (ಪಿಟಿಐ): ಹಂಗೇರಿ–ಬ್ರಿಟನ್ ಲೇಖಕ ಡೇವಿಡ್ ಝಲೈ ಅವರ ‘ಫ್ಲೆಷ್’ ಕಾದಂಬರಿಗೆ 2025ರ ಪ್ರತಿಷ್ಠಿತ ‘ಬುಕರ್ ಪ್ರಶಸ್ತಿ’ ಸಂದಿದೆ.

ಭಾರತೀಯ ಲೇಖಕಿ ಕಿರಣ್ ದೇಸಾಯಿ ಅವರ ‘ದಿ ಲೋನ್ಲಿನೆಸ್ ಆಫ್ ಸೋನಿಯಾ ಆ್ಯಂಡ್ ಸನ್ನಿ’ ಕಾದಂಬರಿ ಸೇರಿದಂತೆ ಆರು ಲೇಖಕರ ಕೃತಿಗಳು ಬುಕರ್ ಪ್ರಶಸ್ತಿ ಸ್ಪರ್ಧೆಯ ಅಂತಿಮ ಸುತ್ತಿನಲ್ಲಿದ್ದವು.

ಬುಕರ್ ಪ್ರಶಸ್ತಿ ಜತೆ ಡೇವಿಡ್ ಝಲೈ

ಲಂಡನ್‌ನ ಬಿಲ್ಲಿಂಗ್ಸ್‌ಗೇಟ್‌ನಲ್ಲಿ ಸೋಮವಾರ ರಾತ್ರಿ ನಡೆದ ಸಮಾರಂಭದಲ್ಲಿ ಕಳೆದ ವರ್ಷದ ಬುಕರ್ ಪ್ರಶಸ್ತಿ ವಿಜೇತೆ ಸಂತಾ ಹಾರ್ವಿ ಅವರು ಡೇವಿಡ್ ಝಲೈ ಅವರಿಗೆ ಪಾರಿತೋಷಕವನ್ನು ನೀಡಿದರು. ಈ ಪ್ರಶಸ್ತಿಯು ಪಾರಿತೋಷಕದ ಜೊತೆಗೆ ₹50 ಸಾವಿರ ಪೌಂಡ್ (₹58.25 ಲಕ್ಷ) ನಗದನ್ನೂ ಒಳಗೊಂಡಿದೆ.

ಒಂದು ವೇಳೆ ಕಿರಣ್ ದೇಸಾಯಿ ಅವರಿಗೆ ಈ ಪ್ರಶಸ್ತಿ ದೊರೆತಿದ್ದರೆ, ಬುಕರ್ ಪ್ರಶಸ್ತಿಯ ಇತಿಹಾಸದಲ್ಲಿ ಎರಡು ಬಾರಿ ಪ್ರಶಸ್ತಿ ಗೆದ್ದ 5ನೇ ವ್ಯಕ್ತಿ ಎನ್ನುವ ಗೌರವಕ್ಕೆ ಪಾತ್ರರಾಗುತ್ತಿದ್ದರು. 2006ರಲ್ಲಿ ದೇಸಾಯಿ ಅವರ ‘ದಿ ಇನ್‌ಹೆರಿಟೆನ್ಸ್ ಆಫ್ ಲಾಸ್’ ಕೃತಿಗೆ ಬುಕರ್ ಪ್ರಶಸ್ತಿ ಲಭಿಸಿತ್ತು. ಪ್ರಶಸ್ತಿಯ ಅಂತಿಮ ಸುತ್ತಿನಲ್ಲಿ ಅಮೆರಿಕನ್ ಕೊರಿಯನ್ ಲೇಖಕಿ ಸುಸಾನ್ ಚೋಯ್ ಅವರ ‘ಫ್ಲಾಶ್ ಲೈಟ್’ ಅಮೆರಿಕನ್ ಜಪಾನೀಸ್ ಲೇಖಕಿ ಕೇಟಿ ಕಿಟಮುರಾ ಅವರ ‘ಆಡಿಷನ್’, ಬ್ರಿಟಿಷ್ ಅಮೆರಿಕನ್ ಲೇಖಕಿ ಬೆನ್ ಮಾರ್ಕೊವಿಟ್ಸ್ ಅವರ ‘ದಿ ರೆಸ್ಟ್ ಆಫ್ ಅವರ್ ಲೈವ್ಸ್’ ಮತ್ತು ಇಂಗ್ಲಿಷ್ ಕಾದಂಬರಿಕಾರ ಆಂಡ್ರ್ಯೂ ಮಿಲ್ಲರ್ ಅವರ ‘ದಿ ಲ್ಯಾಂಡ್ ಇನ್ ವಿಂಟರ್’ ಕೃತಿಗಳು ಇದ್ದವು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, ಫೆಡರಲ್ ಬ್ಯಾಂಕ್‌ನಿಂದ 10ಲಕ್ಷ ಇನ್ಶೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9606385001.

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ನಮಗೆ ಅನುಭವ ಇರುವ ವಿದ್ಯುತ್ ಸೋಲಾರ್ ಮತ್ತು ಬ್ಯಾಟರಿ ಹಾಗೂ ಯು.ಪಿ.ಎಸ್ (ಎಲೆಕ್ಟ್ರಿಷಿಯನ್) ಕೆಲಸಗಾರರು ಬೇಕಾಗಿದ್ದಾರೆ ಉಚಿತ ವಸತಿ ನೀಡಲಾಗುವುದು. ಸಂಪರ್ಕಿಸಿ: 9448511991.

ಕಂಪನಿಗಳಿಗೆ ಬೇಕಾಗಿದ್ದಾರೆ 7th, PUC, Degree, ITI, ಡಿಪ್ಲೋಮೋಆದವರು ಯುವಕ ಯುವತಿಯರಿಗೆ ಸಂಬಳ 18,000 -45,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9916788422.

Part-Time Jobs

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000-25000/- 7th, 10th, Any Degree. 8095043191

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777503, 8884777502.

Wanted

ಸರ್ಕಾರಿ ಇಲಾಖೆಗಳಿಗೆ ಗುತ್ತಿಗೆ ಎಜೆನ್ಸಿ ಗೆ DEO, ಸೆಕ್ಯುರಿಟಿ, ಅಟೆಂಡರ್, ಹೆಲ್ಪರ್, ಬೇಕಾಗಿದ್ದಾರೆ. ಸಂಪರ್ಕಿಸಿ. ಕರ್ನಾಟಕ ಉದ್ಯೋಗ 9606155699

ಪ್ರವಾಸ

Travel Agencies

6 ದಿನಗಳು ದುಬೈ, 6 ದಿನಗಳು ಶ್ರೀಲಂಕಾ, 7 ದಿನಗಳು ಜಪಾನ್, 16 ದಿನಗಳು ಯುಕೆ & ಯುರೋಪ್ 7/11 ದಿನಗಳು ಸಿಂಗಪೂರ್ ಮಲೇಶಿಯಾ & ಥೈಲ್ಯಾಂಡ್, ಭಟ್ ಟ್ರಾವೆಲ್ಸ್: 9844037295

Travel

22.12.2025 ಶಿರಡಿ ಮತ್ತು ಮಹಾರಾಷ್ಟ್ರ 5 ಜ್ಯೋತಿರ್ಲಿಂಗಗಳ ಪ್ರವಾಸ 22.12.2025 ಗುರುವಾಯುರು, ಮುನ್ನಾರ್, ಅಲಪೇ, ತಿರುವನಂತಪುರ, ಕನ್ಯಾಕುಮಾರಿ, ರಾಮೇಶ್ವರಂ ಕರ್ನಾಟಕ ಹೆರಿಟೇಜ್ ಟೂರ್ಸ್, (ಹನುಮಂತನಗರ). 9845035349, 9482435755

ಪುರಿಜಗನ್ನಾಥ್ ಕಾಶಿವಿಶ್ವನಾಥ ಅಯೋಧ್ಯ ರಾಮ ಜನ್ಮಭೂಮಿ ಯಾತ್ರ. ವೈಷ್ಣೋದೇವಿ ಕಾಶ್ಮೀರ್ ಟೂರ್ ಗ್ಯಾಂಗ್‌ಟಾಕ್ ಡಾರ್ಜಿಲಿಂಗ್ ಪ್ರವಾಸ. ಸಂಪರ್ಕಿಸಿ. ವಿಜಯ ಟ್ರಾವೆಲ್ಸ್ ಬೆಂಗಳೂರು. 9035911899

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಎನ್.ಚಂದ್ರೇಗೌಡರು
ಬಿ.ನಾರಾಯಣಪುರ,
(ಶ್ರೀಮೀಸೆ ನಾರಾಯಣಪ್ಪನವರ ಹಿರಿಯ ಪುತ್ರ)
ಜನನ 11–08–1952
ದಿನಾಂಕ 11–11–2025 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.
ಅಂತ್ಯಕ್ರಿಯೆ 12/11.2025 ರಂದು ಮಧ್ಯಾಹ್ನ 3 ಗಂಟೆಯ ನಂತರ ನೆರವೇರಿಸಲಾಗುವುದು.
ಇಂತಿ ದುಃಖತಪ್ತರು
ಕುಟುಂಬ ವರ್ಗ

ಅನಂತಸ್ಮರಣೆ

1959 - 2018
ನೇತೃತ್ವ - ಕರ್ತೃತ್ವ - ವ್ಯಕ್ತಿತ್ವ ಈ ಮೂರಕ್ಕೂ ಉದಾತ್ತ ಮಾದರಿಯಾಗಿ ದೇಶ ಮೊದಲು ಎಂಬ ದೃಢ ನಂಬಿಕೆಯಿಂದ ಅವಿಶ್ರಾಂತ ಚೇತನವಾಗಿ ಅಜರಾಮರರಾದ
ದಿ. ಅನಂತಕುಮಾರ
ತಮಗೆ ನಮ್ಮ ಅನಂತ ವಂದನೆಗಳು
ಶ್ರೀಮತಿ ತೇಜಸ್ವಿನಿ ಅನಂತಕುಮಾರ
ಅಧ್ಯಕ್ಷರು : ಅದಮ್ಯ ಚೇತನ ಫೌಂಡೇಶನ್
ನಂದಕುಮಾರ, ವಿಭವ ಸಮೂಹ ಸಂಸ್ಥೆಗಳು
ಐಶ್ವರ್ಯಾ ಅನಂತಕುಮಾರ | ವಿಜೇತಾ ಅನಂತಕುಮಾರ
ಅನಂತ ಸ್ಮರಣಾರ್ಥ ಪಂಜಿನ ಮೆರವಣಿಗೆ
ದಿನಾಂಕ : 12 ನವಂಬರ್ 2025 ಸಮಯ : ಸಾಯಂಕಾಲ 5.30 ಕ್ಕೆ
ಅನಂತ ಪ್ರೇರಣಾ ಕೇಂದ್ರ, ಸೌಥ್‌ಎಂಡ್ ಸರ್ಕಲ್‌ನಿಂದ ಪ್ರಾರಂಭ
7.00 ಕ್ಕೆ ಉತ್ತರಾದಿ ಮಠದ (ನ್ಯಾಶನಲ್ ಹೈಸ್ಕೂಲ್ ಎದುರು) ವರೆಗೆ
ಅಲ್ಲಿಯೇ ಭೋಜನ ವ್ಯವಸ್ಥೆ ಮಾಡಲಾಗಿದೆ. ಬನ್ನಿ! ಭಾಗವಹಿಸಿ
ಅನಂತಕುಮಾರ ಪ್ರತಿಷ್ಠಾನ ಬೆಂಗಳೂರು

ನ.28ಕ್ಕೆ ಜಿಎಸ್‌ಟಿ ಬಿಡುಗಡೆ

ರಜನಿ, ಸೃಜನ್

ನಟ ಸೃಜನ್ ಲೋಕೇಶ್ ನಿರ್ದೇಶನದ ಚೊಚ್ಚಲ ಸಿನಿಮಾ 'ಜಿಎಸ್‌ಟಿ' ನ.28ರಂದು ತೆರೆಗೆ ಬರಲಿದೆ. ಇತ್ತೀಚೆಗಷ್ಟೇ ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು, ಚಿತ್ರಕ್ಕೆ 'ಘೋಸ್ಟ್ಸ್ ಇನ್ ಟ್ರಬಲ್' ಎನ್ನುವ ಅಡಿಬರಹ ನೀಡಲಾಗಿದೆ.

ಸುಮಾರು ಎರಡು ವರ್ಷಗಳ ಹಿಂದೆ ಸೆಟ್ಟೇರಿದ್ದ ಈ ಸಿನಿಮಾವನ್ನು ಸಂದೇಶ್ ಪ್ರೊಡಕ್ಷನ್ಸ್‌ನಡಿ ಸಂದೇಶ್ ನಾಗರಾಜ್ ನಿರ್ಮಾಣ ಮಾಡಿದ್ದಾರೆ. ನಿರ್ದೇಶನದ ಜೊತೆಗೆ ನಾಯಕನಾಗಿಯೂ ಸೃಜನ್ ಈ ಸಿನಿಮಾದಲ್ಲಿ ನಟಿಸಿದ್ದಾರೆ. ಚಿತ್ರದ ನಿರ್ಮಾಣದ ಜೊತೆಗೆ ನಿರ್ಮಾಪಕ ಸಂದೇಶ್ ಅವರು ಪ್ರಮುಖ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ.

ಟ್ರೇಲರ್ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಸೃಜನ್, 'ಕನಸಲ್ಲಿ ಬಂದ ಕಥೆಗೆ ಸಿನಿಮಾ ರೂಪ ನೀಡಿದ್ದೇನೆ. ಪ್ರಾಮಾಣಿಕವಾಗಿ, ನಿಷ್ಠೆಯಿಂದ ಈ ಚಿತ್ರ ಮಾಡಿದ್ದೇನೆ. ಜನರನ್ನು ನಗಿಸಬೇಕು ಎನ್ನುವ ಉದ್ದೇಶದಿಂದಲೇ ಈ ಚಿತ್ರ ಹೆಣೆದಿದ್ದೇನೆ. ಮೊದಲ ಬಾರಿ ನಿರ್ದೇಶನದ ಜವಾಬ್ದಾರಿ ಹೊತ್ತಿದ್ದೆ. ಇದು ಎಷ್ಟು ಕಷ್ಟ ಎನ್ನುವುದನ್ನು ಅರಿತೆ. ನಟನೆಯ ಜೊತೆಗೆ ನಿರ್ದೇಶನ ಮಾಡುವುದು ಸವಾಲಿನ ವಿಷಯವೇ. ನನ್ನದೇ ಕಾನ್ಸೆಪ್ಟ್ ಆಗಿರುವ ಕಾರಣ ನಾನೇ ನಿರ್ದೇಶನ ಮಾಡುವುದಕ್ಕೆ ಮುಂದಾದೆ. ಈ ಸಿನಿಮಾದಲ್ಲಿ ಹೀರೊಯಿಸಂ ಇಲ್ಲ. ಜನರನ್ನು ನಗಿಸುವುದಷ್ಟೇ ನನಗೆ ಗೊತ್ತಿದೆ. ಪ್ರೇಕ್ಷಕರಿಗೆ ಖಂಡಿತವಾಗಿಯೂ ಮನರಂಜನೆ ನೀಡುತ್ತೇನೆ. ಶೀರ್ಷಿಕೆಗೆ ಹಲವು ಆಯ್ಕೆಗಳಿದ್ದವು. ಆದರೆ ಈಗ ಜಿಎಸ್‌ಟಿ ಎನ್ನುವುದು ಪ್ರತಿ ಭಾರತೀಯನಿಗೂ ಗೊತ್ತು. ಹೀಗಾಗಿ ಈ ಶೀರ್ಷಿಕೆ ಅಂತಿಮಗೊಳಿಸಿದೆವು. ಚಿತ್ರವು 2 ಗಂಟೆ 10 ನಿಮಿಷ ಅವಧಿಯದ್ದಾಗಿದ್ದು, ಇದರಲ್ಲಿ ಸುಮಾರು 70 ನಿಮಿಷ ರೋಟೊ ಇದೆ. ಅಂದರೆ ದೆವ್ವಗಳು ಸೇಪಿಯಾ ಬಣ್ಣದಲ್ಲಿ ಇರುತ್ತವೆ. ಸುಮಾರು 40ಕ್ಕೂ ಅಧಿಕ ಕಲಾವಿದರು ಚಿತ್ರದಲ್ಲಿ ನಟಿಸಿದ್ದು, 40 ನಿಮಿಷದ ಕ್ಲೈಮ್ಯಾಕ್ಸ್ ಇದೆ. ಈ ಸಿನಿಮಾ ಮೂಲಕ ಲೋಕೇಶ್ ಮ್ಯೂಸಿಕ್ ಆರಂಭಿಸಿದ್ದೇನೆ' ಎಂದರು.

ಚಿತ್ರದಲ್ಲಿ ಗಿರಿಜಾ ಲೋಕೇಶ್, ಸೃಜನ್ ಲೋಕೇಶ್ ಹಾಗೂ ಸೃಜನ್ ಅವರ ಪುತ್ರ ಸುಕೃತ್ ಅಭಿನಯಿಸಿದ್ದಾರೆ. ತಮ್ಮ ನಿರ್ದೇಶನದ ಮೊದಲ ಚಿತ್ರದಲ್ಲೇ ಸೃಜನ್ ತಮ್ಮ ತಾಯಿ ಹಾಗೂ ಮಗನಿಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಸೃಜನ್ ಲೋಕೇಶ್‌ಗೆ ನಾಯಕಿಯಾಗಿ ರಜನಿ ಭಾರದ್ವಾಜ್ ನಟಿಸಿದ್ದಾರೆ. ಪ್ರಮೋದ್ ಶೆಟ್ಟಿ, ಶೋಭರಾಜ್, ಶರತ್ ಲೋಹಿತಾಶ್ವ, ನಿವೇದಿತಾ, ಅರವಿಂದ್ ರಾವ್, ತಬಲ ನಾಣಿ, ರವಿಶಂಕರ್ ಗೌಡ ಮುಂತಾದವರು ತಾರಾಬಳಗದಲ್ಲಿದ್ದಾರೆ. ಚಂದನ್ ಶೆಟ್ಟಿ ಸಂಗೀತ ನಿರ್ದೇಶನ ಹಾಗೂ ಗುಂಡ್ಲುಪೇಟೆ ಸುರೇಶ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ❖

'1979' ಪೋಸ್ಟರ್ ಬಿಡುಗಡೆ

ಪುಷ್ಪರಾಜ್ ಕಥೆ ಬರೆದು ನಿರ್ದೇಶಿಸಿರುವ '1979' ಚಿತ್ರದ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. 'ಆ ದಿನಗಳು' ಖ್ಯಾತಿಯ ಚೇತನ್ ಪೋಸ್ಟರ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು. ಬಿ.ಎಂ.ಶ್ರೀನಿವಾಸ್ ಬೀರಮಾನಹಳ್ಳಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

'1904ರಿಂದ 1979ರವರೆಗೆ ಪಶ್ಚಿಮ ಬಂಗಾಳದಲ್ಲಿ ನಡೆದ ಸತ್ಯ ಘಟನೆಗಳನ್ನು ಆಧಾರವಾಗಿಟ್ಟುಕೊಂಡು ಹೆಣೆದ ಕಥೆಯಿದು. ಒಂದಷ್ಟು ಅಂಶಗಳನ್ನು ಕಮರ್ಷಿಯಲ್ ರೂಪದಲ್ಲಿ ತೋರಿಸುವ ಪ್ರಯತ್ನ ಮಾಡಲಾಗಿದೆ. ನಿರಾಶ್ರಿತ ಒಂದು ಸಮುದಾಯದವರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸಲುವಾಗಿ ಯಾವ ರೀತಿ ಹೋರಾಟ ಮಾಡುತ್ತಾರೆ? ಅಲ್ಲಿನ ದಬ್ಬಾಳಿಕೆ ವಿರುದ್ಧ ಕ್ರಾಂತಿ ಹೇಗೆ ಶುರುವಾಗುತ್ತದೆ ಎಂಬುದೇ ಚಿತ್ರದ ತಿರುಳು' ಎಂದರು ನಿರ್ದೇಶಕ.

ಅಜ್ಜು, ಪ್ರಾಣ್ವಿ, ಸುಜಿತ್, ಅಮೃತ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ದುರ್ಗಾ, ಪ್ರೀತಿ, ತಕ್ಷಾರಾಮ್, ನಿರಂಜನ್, ಧನುಷ್ ಮುಂತಾದವರು ಚಿತ್ರದಲ್ಲಿದ್ದಾರೆ. ಜಸ್ವಂತ್ ಪಸುಪುಲೇಟಿ ಸಂಗೀತ, ಚಲಾಕಿ ಚರಣ್ ಛಾಯಾಚಿತ್ರಗ್ರಹಣ, ವಸಂತ್ ಸಂಕಲನ ಚಿತ್ರಕ್ಕಿದೆ. ಕೋಲಾರ, ತೇರಳ್ಳಿ, ಯರಗೋಳ ಮುಂತಾದೆಡೆ ಚಿತ್ರೀಕರಿಸಲಾಗಿದೆ.

'ನಿರಾಶ್ರಿತರ ಕಥೆಗಳು ಕನ್ನಡದಲ್ಲಿ ಹೆಚ್ಚು ಬಂದಿಲ್ಲದಿರಬಹುದು. ಕನ್ನಡ ಸಿನಿಮಾಗಳು ಪ್ಯಾನ್ ಇಂಡಿಯಾ ಮಟ್ಟದಲ್ಲಿವೆ. ಈ ಕಾಲದಲ್ಲಿ ಪ್ಯಾನ್ ಇಂಡಿಯಾ ಕಥೆಗಳನ್ನು ಕರ್ನಾಟಕಕ್ಕೆ ತಂದು, ಇತಿಹಾಸದಲ್ಲಿ ಮುಚ್ಚಿ ಹಾಕಿರುವ ವಿಷಯಗಳನ್ನು ಜನತೆಗೆ ಪರಿಚಯಿಸುವ ಈ ತಂಡದ ಶ್ರಮ ನಿಜಕ್ಕೂ ಶ್ಲಾಘನೀಯವಾಗಿದೆ' ಎಂದರು ನಟ ಚೇತನ್.

'ಇನಿಯನ ಆತ್ಮ'ದ ಹಿಂದೆ ಹೊಸಬರು

ನಿಶಾ ರೆಡ್ಡಿ

ಬಹುತೇಕ ಹೊಸಬರಿಂದಲೇ ಕೂಡಿರುವ 'ಇನಿಯನ ಆತ್ಮ' ಚಿತ್ರದ ಟ್ರೇಲರ್ ಮತ್ತು ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ನರೇಶ್ ಸಿದ್ದಘಟ್ಟ ಕಥೆ, ನಿರ್ದೇಶನವಿದೆ. ಶ್ರೀ ವಿನಾಯಕ ವೆಂಕಟೇಶ್ವರ ಫಿಲ್ಮ್ಸ್ ಅಡಿಯಲ್ಲಿ ಬಿ.ಕಲಾವತಿ ನಿರ್ಮಾಣ ಮಾಡಿದ್ದಾರೆ.

'ಏಳು ಜನ ಪ್ರವಾಸಕ್ಕೆಂದು ದೂರದ ಸ್ಥಳಕ್ಕೆ ಹೋಗುತ್ತಾರೆ. ಅಲ್ಲಿ ಇವರನ್ನೆ ಗುರಿಯಾಗಿಸಿಕೊಂಡು ಒಂದಷ್ಟು ಘಟನೆಗಳು ನಡೆಯುವುದು ಏಕೆ ಎಂಬುದೇ ಚಿತ್ರಕಥೆ. ಕರ್ಮ ಯಾರನ್ನೂ ಬಿಡುವುದಿಲ್ಲ ಎಂಬ ವಿಷಯವನ್ನು ಹಾರರ್, ಥ್ರಿಲ್ಲರ್ ರೀತಿಯಲ್ಲಿ ಹೇಳಿದ್ದೇವೆ. ಒಂದಷ್ಟು ಹಾಸ್ಯಮಯ ಸನ್ನಿವೇಶಗಳು ಇವೆ. ಕೋಲಾರ, ಚಿಕ್ಕಬಳ್ಳಾಪುರ ಮೊದಲಾದೆಡೆ ಚಿತ್ರೀಕರಣ ನಡೆಸಲಾಗಿದೆ' ಎಂದರು ನಿರ್ದೇಶಕ.

ನಾಯಕ ಸಿದ್ದಾರ್ಥ್ ಹರಿಗೆ ನಿಶಾ ರೆಡ್ಡಿ ಜೋಡಿಯಾಗಿದ್ದಾರೆ. ಕೋಲಾರ ಸೂರ್ಯ, ರಾಜ್‌ವೀರ್, ಕಿಟ್ಟಿ ತಾಳಿಕೋಟೆ, ಆದಿ ಮಧುಗಿರಿ, ಸುಶ್ಮಿತ, ನಯನಾ ಮುಂತಾದವರು ನಟಿಸಿದ್ದಾರೆ. ಎ.ಟಿ.ರವೀಶ್ ಸಂಗೀತ, ಚರಣ್‌ತೇಜ್ ಛಾಯಾಚಿತ್ರಗ್ರಹಣ, ಪವನ್.ಬಿ.ಕೆ ಸಂಕಲನ ಚಿತ್ರಕ್ಕಿದೆ.

ಕೆಎಸ್‌ಸಿಎ ಅಧ್ಯಕ್ಷ ಸ್ಥಾನಕ್ಕೆ ಪ್ರಸಾದ್ ಸ್ಪರ್ಧೆ

ನವೆಂಬರ್ 30ರಂದು ಚುನಾವಣೆ
ಉಪಾಧ್ಯಕ್ಷ ಸ್ಥಾನಕ್ಕೆ ಸುಜಿತ್ ಆಕಾಂಕ್ಷಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ವೆಂಕಟೇಶ್ ಪ್ರಸಾದ್ ಅವರು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಚುನಾವಣೆಯಲ್ಲಿ 'ಟೀಮ್ ಗೇಮ್ ಚೇಂಜರ್ಸ್' ಬಳಗದಿಂದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದಾಗಿ ಖಚಿತಪಡಿಸಿದರು. ಇನ್ನುಳಿದ ಪದಾಧಿಕಾರಿಗಳು ಮತ್ತು ಆಡಳಿತ ಸಮಿತಿಯ ಸದಸ್ಯ ಸ್ಥಾನಗಳ ಅಭ್ಯರ್ಥಿಗಳ ಹೆಸರುಗಳನ್ನೂ ಪ್ರಕಟಿಸಿದರು.

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ವೆಂಕಟೇಶ ಪ್ರಸಾದ್, 'ನಮ್ಮ ತಂಡವು ಚುನಾವಣೆಗೆ ಸ್ಪರ್ಧಿಸುತ್ತಿರುವುದಕ್ಕೆ ಮುಖ್ಯ ಕಾರಣವೆಂದರೆ ಕರ್ನಾಟಕದ ಕ್ರಿಕೆಟ್ ವೈಭವವನ್ನು ಮರಳಿ ತರುವುದಾಗಿದೆ. ಹೋದ ಜೂನ್ 4ರಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಜಯೋತ್ಸವದ ಸಂದರ್ಭದಲ್ಲಿ ಸಂಭವಿಸಿದ್ದ ಕಾಲ್ತುಳಿತ ದುರ್ಘಟನೆಯ ನಂತರ ರಾಜ್ಯದ ಕ್ರಿಕೆಟ್‌ಗೆ ಹಿನ್ನಡೆಯಾಗಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳು ನಡೆಯುತ್ತಿಲ್ಲ. ಮುಂದಿನ ವರ್ಷ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯ ಒಂದೇ ಒಂದು ಪಂದ್ಯವನ್ನೂ ಇಲ್ಲಿಗೆ ನೀಡಲಾಗಿಲ್ಲ. ಇದು ಬೇಸರದ ಸಂಗತಿ. ನಾವು ಅಧಿಕಾರಕ್ಕೆ ಬಂದರೆ ರಾಜ್ಯ ಸರ್ಕಾರ ಮತ್ತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯೊಂದಿಗೆ (ಬಿಸಿಸಿಐ) ಸಮನ್ವಯ ಸಾಧಿಸಿ ಈ ಐತಿಹಾಸಿಕ ಕ್ರೀಡಾಂಗಣದಲ್ಲಿ ಮತ್ತೆ ಟಿ20 ವಿಶ್ವಕಪ್ ಪಂದ್ಯಗಳನ್ನು ಆಯೋಜನೆ ಮಾಡುತ್ತೇವೆ' ಎಂದರು.

'2010 ರಿಂದ 2013ರವರೆಗೆ ಅನಿಲ್ ಕುಂಬ್ಳೆ ಅಧ್ಯಕ್ಷತೆಯಲ್ಲಿ ನಾನು ಉಪಾಧ್ಯಕ್ಷನಾಗಿದ್ದೆ. ಜಾವಗಲ್ ಶ್ರೀನಾಥ್ ಕಾರ್ಯದರ್ಶಿಯಾಗಿದ್ದರು. ಆ ಸಂದರ್ಭದಲ್ಲಿ ರಾಜ್ಯ ಕ್ರಿಕೆಟ್‌ನಲ್ಲಿ ಮೂಲ ಸೌಲಭ್ಯಗಳು ಅಭಿವೃದ್ಧಿಯಾದವು. ಗ್ರಾಮಾಂತರ ಪ್ರದೇಶದಲ್ಲಿ ಮೈದಾನಗಳು ನಿರ್ಮಾಣವಾದವು. ಮತ್ತೊಮ್ಮೆ ಅಂತಹದೇ ಆಡಳಿತ ನೀಡಲು ನಾವು ಬದ್ಧರಾಗಿದ್ದೇವೆ' ಎಂದು ಪ್ರಸಾದ್ ಹೇಳಿದರು.

ಬೆಂಗಳೂರಿನಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ವೆಂಕಟೇಶ್ ಪ್ರಸಾದ್ ಮಾತನಾಡಿದರು. ವಿನಯ್ ಮೃತ್ಯುಂಜಯ, ಸುಜಿತ್ ಸೋಮಸುಂದರ ಹಾಜರಿದ್ದರು ಪ್ರಜಾವಾಣಿ ಚಿತ್ರ

ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್ (ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕಾ ಸಮೂಹ) ನಿರ್ದೇಶಕ ಕೆ.ಎನ್. ಶಾಂತಕುಮಾರ್ ಅವರು ಮಾಜಿ ಕ್ರಿಕೆಟಿಗ ಬ್ರಿಜೇಶ್ ಪಟೇಲ್ ಅವರ ಬಣದಿಂದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದಾರೆ. ಅವರ ಎದುರು ಪ್ರಸಾದ್ ಕಣಕ್ಕಿಳಿಯಲಿದ್ದಾರೆ.

ಈ ಸಂದರ್ಭದಲ್ಲಿ ಹಾಜರಿದ್ದ ಸುಜಿತ್ ಸೋಮಸುಂದರ, 'ಹುಬ್ಬಳ್ಳಿ, ಶಿವಮೊಗ್ಗ, ಮೈಸೂರು, ಮಂಗಳೂರು ಮತ್ತು ಬೆಳಗಾವಿಯಲ್ಲಿ ಇರುವ ಕ್ರಿಕೆಟ್ ಮೈದಾನಗಳು ಮತ್ತು ಸೌಲಭ್ಯಗಳ ನಿರ್ವಹಣೆ ಸರಿಯಾಗಿಲ್ಲ. ಬಹಳಷ್ಟು ಅವ್ಯವಸ್ಥೆಗಳು ಇವೆ' ಎಂದರು. ಅದಕ್ಕೆ ಸಂಬಂಧಿಸಿದ ಛಾಯಾಚಿತ್ರಗಳನ್ನೂ ಸ್ಲೈಡ್ ಮೂಲಕ ಪ್ರದರ್ಶಿಸಿದರು.

'ಗ್ರಾಮಾಂತರ ಪ್ರದೇಶದ ಪ್ರತಿಭಾನ್ವಿತ ಮಕ್ಕಳಿಗೆ ತರಬೇತಿ ನೀಡುವ ಕೆಎಸ್‌ಸಿಎ ಅಕಾಡೆಮಿಗಳು ಕೂಡ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ವಿವಿಧ ವಿಭಾಗಗಳಲ್ಲಿ ಟೂರ್ನಿಗಳು ಮತ್ತು ಪಂದ್ಯಗಳನ್ನು ಹೆಚ್ಚಿಸಿ ಮಕ್ಕಳಿಗೆ ಬೆಳೆಯುವ ಅವಕಾಶ ನೀಡಬೇಕಿತ್ತು. ಆದರ ಬದಲಿಗೆ ಪಂದ್ಯಗಳ ಸಂಖ್ಯೆ ಕಡಿಮೆಯಾಗಿವೆ' ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ತಮ್ಮ ಬೆಂಬಲವನ್ನು ಪ್ರಸಾದ್ ಮತ್ತು ತಂಡಕ್ಕೆ ನೀಡುವುದಾಗಿ ಅನಿಲ್ ಕುಂಬ್ಳೆ ಮತ್ತು ಜಾವಗಲ್ ಶ್ರೀನಾಥ್ ಘೋಷಿಸಿದರು.

'ನಾವು ಅಧಿಕಾರದಲ್ಲಿದ್ದಾಗ ಹಲವಾರು ಅಭಿವೃದ್ಧಿ ಕಾರ್ಯಗಳು ಆಗಿದ್ದವು. ಆಟಗಾರರು ಮತ್ತು ಅಭಿಮಾನಿಗಳಿಂದ ಕ್ರಿಕೆಟ್ ಬೆಳೆಯುತ್ತದೆ. ಆದರೆ ಅವರನ್ನೇ ಕಳೆದ ಒಂದು ದಶಕದಲ್ಲಿ ನಿರ್ಲಕ್ಷಿಸಲಾಗಿದೆ ಎಂದು ನನಗನಿಸುತ್ತದೆ' ಎಂದು ಅನಿಲ್ ಹೇಳಿದರು.

ಕೆಎಸ್‌ಸಿಎ ಚುನಾವಣೆ ಕಣದಲ್ಲಿರುವ ಉಭಯ ತಂಡಗಳ ಅಭ್ಯರ್ಥಿಗಳು

ಸ್ಥಾನ	ಅಭ್ಯರ್ಥಿಯ ಹೆಸರು
ಅಧ್ಯಕ್ಷ	ಕೆ.ಎನ್. ಶಾಂತಕುಮಾರ್
ಉಪಾಧ್ಯಕ್ಷ	ಡಿ. ವಿನೋದ್ ಶಿವಪ್ಪ
ಕಾರ್ಯದರ್ಶಿ	ಇ.ಎಸ್. ಜಯರಾಮ್
ಖಜಾಂಚಿ	ಎಂ.ಎಸ್. ವಿನಯ್
ಜಂಟಿ ಕಾರ್ಯದರ್ಶಿ	ಬಿ.ಕೆ. ರವಿ
ಆಜೀವ ಸದಸ್ಯರು	ಸಂಜಯ್ ಅಶೋಕ್ ಆನಂದ ಪೋಳ್, ಕೆ.ಎಸ್. ಕೇದಾರನಾಥ್
ಸಾಂಸ್ಥಿಕ ಸದಸ್ಯರು–ಬೆಂಗಳೂರು ವಲಯ: ರಾಹುಲ್ ಪಿ. ಬಾಫ್ನಾ, ವೈ. ಜಗನ್ನಾಥ್ (ಗರುಡ), ವಿ.ಎಸ್. ತಿಲಕ್ ನಾಯ್ಡು	
ಮೈಸೂರು ವಲಯ	ಹರಿಕೃಷ್ಣ ಕುಮಾರ್ ಆರ್.ಕೆ
ಹುಬ್ಬಳ್ಳಿ–ಧಾರವಾಡ ವಲಯ	ವೀರಣ್ಣ ಎಸ್. ಸವಡಿ
ತುಮಕೂರು ವಲಯ	ಎಸ್. ಅಶೋಕ
ಶಿವಮೊಗ್ಗ ವಲಯ	ಡಿ.ಎಸ್. ಅರುಣ್
ರಾಯಚೂರು ವಲಯ	ಕುಶಲ್ ಪಾಟೀಲ ಗಾಡ್ಗಿ
ಮಂಗಳೂರು ವಲಯ	ಶೇಖರ್ ಐ. ಶೆಟ್ಟಿ

ಸ್ಥಾನ	ಅಭ್ಯರ್ಥಿಯ ಹೆಸರು
ಅಧ್ಯಕ್ಷ	ವೆಂಕಟೇಶ್ ಪ್ರಸಾದ್
ಉಪಾಧ್ಯಕ್ಷ	ಸುಜಿತ್ ಸೋಮಸುಂದರ
ಕಾರ್ಯದರ್ಶಿ	ವಿನಯ್ ಮೃತ್ಯುಂಜಯ
ಖಜಾಂಚಿ	ಬಿ.ಎನ್. ಮಧುಕರ್
ಜಂಟಿ ಕಾರ್ಯದರ್ಶಿ	ಎ.ವಿ. ಶಶಿಧರ್
ಸಾಂಸ್ಥಿಕ ಸದಸ್ಯರು ಬೆಂಗಳೂರು ವಲಯ	ಅವಿನಾಶ್ ವೈದ್ಯ, ಕಲ್ಪನಾ ವೆಂಕಟಾಚಾರ್, ಆಶಿಶ್ ಅಮರಲಾಲ್
ಆಜೀವ ಸದಸ್ಯರು	ಶೈಲೇಶ್ ಪೋಳ್, ಬಿ.ಎಂ. ಮಂಜುನಾಥ್
ಮೈಸೂರು	ಶ್ರೀನಿವಾಸ್ ಪ್ರಸಾದ್
ಶಿವಮೊಗ್ಗ	ನಾಗೇಂದ್ರ ಪಂಡಿತ್
ತುಮಕೂರು	ಹರೀಶ್ ಸಿ.ಆರ್.
ಧಾರವಾಡ	ಅಹಮದ್ ರಝಾ ಕಿತ್ತೂರ್
ರಾಯಚೂರು	ಪಾರ್ಥಸಾರಥಿ ಕನಕವೀಡು
ಮಂಗಳೂರು	ಡಾ.ಶ್ರೀಕಾಂತ್ ರೈ

ದ್ವಿಸ್ತರ ಟೆಸ್ಟ್ ಮಾದರಿ ಜಾರಿ ಸದ್ಯಕ್ಕಿಲ್ಲ

ದುಬೈ (ಪಿಟಿಐ): ಸಾಕಷ್ಟು ಚರ್ಚೆಗೊಳಗಾಗಿರುವ ದ್ವಿಸ್ತರದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಮಾದರಿ ಸದ್ಯಕ್ಕೆ ಜಾರಿಯಾಗುವ ಸಾಧ್ಯತೆಯಿಲ್ಲ. ಇದರ ಬದಲು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯು, ಎಲ್ಲ 12 ಪೂರ್ಣಪ್ರಮಾಣದ ಸದಸ್ಯ ತಂಡಗಳಿಗೆ ಮುಂದಿನ (2027ರ)ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ (ಡಬ್ಲ್ಯುಟಿಸಿ) ಆಡಲು ಅವಕಾಶ ನೀಡುವ ಸಾಧ್ಯತೆಯಿದೆ.

ಪ್ರಸ್ತುತ 9 ರಾಷ್ಟ್ರಗಳು ಡಬ್ಲ್ಯುಟಿಸಿಯಲ್ಲಿ ಒಳಗೊಂಡಿವೆ. ಜಿಂಬಾಬ್ವೆ, ಅಫ್ಗಾನಿಸ್ತಾನ ಮತ್ತು ಐರ್ಲೆಂಡ್ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಒಳಗೊಂಡಿಲ್ಲ.

ದುಬೈನಲ್ಲಿ ನಡೆದ ಐಸಿಸಿಯ ಮಾಸಿಕ ಸಭೆಯಲ್ಲಿ ನ್ಯೂಜಿಲೆಂಡ್‌ನ ಮಾಜಿ ಬ್ಯಾಟರ್ ರೋಜರ್ ಟೂಸ್ ಅವರು ದ್ವಿಸ್ತರ ಮಾದರಿ ಬಗ್ಗೆ ಯೋಜನೆ ಮಂಡಿಸಿದರೂ ಅದಕ್ಕೆ ಬೆಂಬಲ ದೊರೆಯಲಿಲ್ಲ. ಪಾಕಿಸ್ತಾನ, ಶ್ರೀಲಂಕಾ ಮತ್ತು ವೆಸ್ಟ್ ಇಂಡೀಸ್ ಪ್ರತಿನಿಧಿಗಳು ದ್ವಿಸ್ತರ ಯೋಚನೆಗೆ ವಿರೋಧ ಸೂಚಿಸಿದವು. ಏಕದಿನ ಕ್ರಿಕೆಟ್‌ನಲ್ಲಿ ಸೂಪರ್ ಲೀಗ್ ಯೋಜನೆಯನ್ನು ಮತ್ತೆ ಜಾರಿಗೊಳಿಸಲು ಐಸಿಸಿ ಪರಿಶೀಲಿಸುತ್ತಿದೆ.

ಎರಡು ಆಟಗಳಲ್ಲಷ್ಟೇ ನಿರ್ಣಾಯಕ ಫಲಿತಾಂಶ
ಡ್ರಾ ಪಂದ್ಯಗಳಲ್ಲಿ ಭಾರತದ ಆಟಗಾರರು

ಪಣಜಿ (ಪಿಟಿಐ): ವಿಶ್ವಕಪ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನಲ್ಲಿ ಆಡುತ್ತಿರುವ ಭಾರತದ ಐದೂ ಆಟಗಾರರು ಮಂಗಳವಾರ ಎದುರಾಳಿಗಳ ವಿರುದ್ಧ ತಮ್ಮ ಮೊದಲ ಕ್ಲಾಸಿಕಲ್ ಆಟವನ್ನು ಡ್ರಾ ಮಾಡಿಕೊಂಡರು. ಆ ಮೂಲಕ ಮುಂದಿನ ಸುತ್ತಿಗೆ ಮುನ್ನಡೆಯುವ ಆಸೆಯನ್ನು ಜೀವಂತವಾಗಿರಿಸಿದ್ದಾರೆ.

ನಾಲ್ಕನೇ ಸುತ್ತಿನ ಒಟ್ಟು 16 ಪಂದ್ಯಗಳಲ್ಲಿ ಎರಡರಲ್ಲಷ್ಟೇ ನಿರ್ಣಾಯಕ ಫಲಿತಾಂಶಗಳು ಬಂದವು. ಹೆಚ್ಚಿನ ಆಟಗಾರರು ಜಯಕ್ಕೆ ಯತ್ನಿಸಿ ಅಪಾಯ ಮೈಮೇಲೆ ಎಳೆದುಕೊಳ್ಳಲು ಹೋಗದೇ ಸುರಕ್ಷಿತ ಡ್ರಾಕ್ಕೆ ಒಲವು ತೋರಿದರು.

ಎರಡನೇ ಶ್ರೇಯಾಂಕದ ಅರ್ಜುನ್ ಇರಿಗೇಶಿ, ಹಿರಿಯ ಆಟಗಾರ ಪೀಟರ್ ಲೆಕೊ (ಹಂಗೆರಿ) ಜೊತೆ ಕೇವಲ 19 ನಡೆಗಳಲ್ಲಿ ಡ್ರಾ ಸಾಧಿಸಿದರು. ಮೂರನೇ ಶ್ರೇಯಾಂಕದ ಪ್ರಜ್ಞಾನಂದ ಅವರು ಫಿಡೆ ಪ್ರತಿನಿಧಿಸಿರುವ ರಷ್ಯಾದ ಡೇನಿಯಲ್ ದುಬೋವ್ ಜೊತೆ ಪಾಯಿಂಟ್ ಹಂಚಿಕೊಂಡರು.

ಅನುಭವಿ ಪಿ.ಹರಿಕೃಷ್ಣ ಅವರು ಸ್ವೀಡನ್‌ನ ನಿಲ್ಸ್ ಗ್ರಾಂಡೆಲಿಯಸ್ ಜೊತೆ ಡ್ರಾಕ್ಕೆ ಬೇಗ ಸಮ್ಮತಿಸಿದರು. ವಿಯೆಟ್ನಾಮಿನ ಪ್ರಬಲ ಆಟಗಾರ ಲೀ ಕ್ವಾಂಗ್ ಲೀಮ್ ಅವರು ಕಾರ್ತಿಕ್ ವೆಂಕಟರಾಮನ್ ಜೊತೆ ಡ್ರಾ ಮಾಡಿಕೊಂಡರು.

ಅರ್ಜುನ್ ಇರಿಗೇಶಿ

ವಿ. ಪ್ರಣವ್ ಮತ್ತು ಉಜ್ಬೇಕಿಸ್ತಾನದ ನದಿರ್ಬೆಕ್ ಯಾಕುಬ್ಬೊಯೆವ್ ಕೂಡ ಅಂಕ ಹಂಚಿಕೊಂಡರು. ಜರ್ಮನಿಯ ಫ್ರೆಡರಿಕ್ ಸ್ವೇನ್ ಮತ್ತು ಅರ್ಮೇನಿಯಾದ ಶಾಂತ್ ಸರ್ಗಿಸ್ಯಾನ್ ನಡುವಣ ಆಟ ಡ್ರಾ ಆಯಿತು.

ಅಮೆರಿಕದ ಲೆವೊನ್ ಅರೋನಿಯನ್, ಪೋಲೆಂಡ್‌ನ ವೊಜ್ತಾಝೆಕ್ ರಡೊಸ್ಲಾವ್ ಅವರನ್ನು ಸೋಲಿಸಿದರೆ, ಮೆಕ್ಸಿಕೊದ ಮಾರ್ಟಿನೆಜ್ ಅಲ್ಕಾಂತರ ಎಡ್ವರ್ಡೊ, ಸರ್ಬಿಯಾದ ಅಲೆಕ್ಸಿ ಸರನ ಅವರನ್ನು ಮಣಿಸಿದರು.

ಉದ್ಯೋಗ ವಾಣಿ

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

Jr. EXECUTIVE - CIRCULATION

Work Location : Across Karnataka
Experience : 4+ years of experience in sales and possess excellent interpersonal skills.
Skills : Sales or Circulation of newspapers.
Qualification : Minimum PUC/12th
Job Purpose :
- Achieve circulation target, promote and monitor publication in the assigned region.
- Formulate and implement various market strategies.
- Distributes and explains circulation instructions and changes to distributors and dealers.
- Managing escalations.
- Early morning reporting on field is mandatory.
- Two-wheeler is mandatory.

Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

MANAGER - CIRCULATION

Work Location : Across Karnataka
No. Of Position : 4
Experience : 8+ years of experience in sales and possess excellent interpersonal skills.
Skills : Sales or Circulation of newspapers.
Qualification : Any Graduate
Job Purpose :
- Achieve circulation target, promote and monitor publication in the assigned region.
- Formulate and implement various market strategies.
- Distributes and explains circulation instructions and changes to distributors and dealers and investigates and adjusts dealer complaints.
- Early morning reporting on field is mandatory.
- Two-wheeler is mandatory.

Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

ಮಯಂಕ್ ಶತಕ: ಅಭಿನವ್ ಅಬ್ಬರ

ರಣಜಿ ಟ್ರೋಫಿ: ಕರ್ನಾಟಕ–ಮಹಾರಾಷ್ಟ್ರ ಪಂದ್ಯ ಡ್ರಾ, ಅಗರವಾಲ್ ಪಡೆಗೆ 3 ಅಂಕ

ಪ್ರಜಾವಾಣಿ ವಾರ್ತೆ

ಪುಣೆ: ಎಚ್ಚರಿಕೆಯ ನಡೆ ಅನುಸರಿಸಿದ ಕರ್ನಾಟಕ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಮಹಾರಾಷ್ಟ್ರ ಎದುರು ಡ್ರಾ ಮಾಡಿಕೊಂಡಿತು. ಮೊದಲ ಇನಿಂಗ್ಸ್ ಮುನ್ನಡೆಗೆ 3 ಅಂಕ ಗಳಿಸಿತು.

ಮಂಗಳವಾರ ಮುಕ್ತಾಯವಾದ ಪಂದ್ಯದಲ್ಲಿ ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್ (103; 249ಎ, 4X8, 6X1) ಎರಡನೇ ಇನಿಂಗ್ಸ್‌ನಲ್ಲಿ ಶತಕ ಬಾರಿಸಿದರು. ಹಲವು ದಿನಗಳಿಂದ ಲಯಕ್ಕಾಗಿ ಪರದಾಡಿದ್ದ ಮಯಂಕ್ ಈ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಅರ್ಧಶತಕ ಹೊಡೆದಿದ್ದರು. ಆದರೆ ಅಭಿನವ್ ಮನೋಹರ್ (96; 161ಎ, 4X11, 6X2) ಅಲ್ಪ ಅಂತರದಲ್ಲಿ ಶತಕ ತಪ್ಪಿಸಿಕೊಂಡರು. ಇವರಿಬ್ಬರ ಬ್ಯಾಟಿಂಗ್‌ನಿಂದಾಗಿ ಎರಡನೇ ಇನಿಂಗ್ಸ್‌ನಲ್ಲಿ ತಂಡವು 110 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 309 ರನ್ ಗಳಿಸಿ ಡಿಕ್ಲೇರ್ಡ್ ಮಾಡಿಕೊಂಡಿತು. ಒಟ್ಟು 326 ರನ್‌ಗಳ ಮುನ್ನಡೆ ಸಾಧಿಸಿತು. ಮೊದಲ ಇನಿಂಗ್ಸ್‌ನಲ್ಲಿ ಕರ್ನಾಟಕ 13 ರನ್‌ಗಳ ಅಲ್ಪ ಮುನ್ನಡೆ ಪಡೆದಿತ್ತು.

ಮಹಾರಾಷ್ಟ್ರ ತಂಡಕ್ಕೆ ಗುರಿಯೊಡ್ಡಿ ಗೆಲುವಿಗೆ ಪ್ರಯತ್ನಿಸುವ ಗೋಜಿಗೆ ಮಯಂಕ್ ಬಳಗ ಹೋಗಲಿಲ್ಲ. ಸೋಮವಾರ ದಿನದಾಟದ ಮುಕ್ತಾಯಕ್ಕೆ ಕರ್ನಾಟಕವು 5 ವಿಕೆಟ್‌ಗಳಿಗೆ 144 ರನ್ ಗಳಿಸಿತ್ತು. 64 ರನ್ ಗಳಿಸಿದ್ದ ಮಯಂಕ್ ಕ್ರೀಸ್‌ನಲ್ಲಿದ್ದರು. ಮಂಗಳವಾರ ಆಟ

ಅಭಿನವ್ ಮನೋಹರ್

ಮುಂದುವರಿಸಿದ ಅವರು ಈ ಟೂರ್ನಿಯಲ್ಲಿ ತಮ್ಮ ಮೊದಲ ಶತಕದ ಗಡಿ ದಾಟಿದರು. ಎದುರಾಳಿ ಬೌಲರ್‌ಗಳನ್ನು ಬಹಳ ಎಚ್ಚರಿಕೆಯಿಂದ ಎದುರಿಸಿದರು.

ಅಭಿನವ್ ಮನೋಹರ್ ಮತ್ತು ಶ್ರೇಯಸ್ ಗೋಪಾಲ್ ಏಳನೇ ವಿಕೆಟ್ ಜೊತೆಯಾಟದಲ್ಲಿ 92 ರನ್ ಸೇರಿಸಿದರು. ಇದರಿಂದಾಗಿ ತಂಡದ ಮೊತ್ತವು ಹೆಚ್ಚಿತು. ಸಮಯವೂ ಕಳೆಯಿತು. ವಿಕೆಟ್ ಉಳಿಸಿಕೊಂಡು ಆಡಿದ ಕರ್ನಾಟಕದ ಆಟಗಾರರು ಡ್ರಾದತ್ತ ವಾಲಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 111 ಓವರ್‌ಗಳಲ್ಲಿ 313. ಮಹಾರಾಷ್ಟ್ರ: 99.2 ಓವರ್‌ಗಳಲ್ಲಿ 300. 2ನೇ ಇನಿಂಗ್ಸ್: ಕರ್ನಾಟಕ 110 ಓವರ್‌ಗಳಲ್ಲಿ 8ಕ್ಕೆ309 ಡಿಕ್ಲೇರ್ಡ್ (ಮಯಂಕ್ ಅಗರವಾಲ್ 103, ಅಭಿವನ್ ಮನೋಹರ್ 96; ವಿಕಿ ಓಸ್ವಾಲ್ 49ಕ್ಕೆ2) ಫಲಿತಾಂಶ ಡ್ರಾ. ಕರ್ನಾಟಕಕ್ಕೆ 3, ಮಹಾರಾಷ್ಟ್ರಕ್ಕೆ 1 ಅಂಕ. ಪಂದ್ಯಶ್ರೇಷ್ಠ: ಶ್ರೇಯಸ್ ಗೋಪಾಲ್

ಶತಕ ದಾಖಲಿಸಿದ ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್

ಜಮ್ಮು–ಕಾಶ್ಮೀರಕ್ಕೆ ಚಾರಿತ್ರಿಕ ಜಯ

ನವದೆಹಲಿ (ಪಿಟಿಐ): ಸ್ಫೂರ್ತಿಯುತ ಆಟವಾಡಿದ ಜಮ್ಮು ಮತ್ತು ಕಾಶ್ಮೀರ ತಂಡ 65 ವರ್ಷಗಳಲ್ಲಿ ಇದೇ ಮೊದಲ ಬಾರಿ ದೆಹಲಿ ತಂಡದ ವಿರುದ್ಧ ಏಳು ವಿಕೆಟ್‌ಗಳಿಂದ ಚಾರಿತ್ರಿಕ ಗೆಲುವು ಸಾಧಿಸಿತು. ಆರಂಭ ಆಟಗಾರ ಕಮ್ರಾನ್ ಇಕ್ಬಾಲ್ ಅಜೇಯ 133 ರನ್ ಗಳಿಸಿ ಗೆಲುವಿನಲ್ಲಿ ಮಿಂಚಿದರು.

ಇದರೊಂದಿಗೆ ಒಂದು ಕಾಲದ ಪ್ರಬಲ ತಂಡ ದೆಹಲಿ ಮುಖಭಂಗ ಅನುಭವಿಸಿತು. 1960ರ ನಂತರ ಜಮ್ಮು– ಕಾಶ್ಮೀರ ವಿರುದ್ಧ 43 ಪಂದ್ಯಗಳಲ್ಲಿ 37ರಲ್ಲಿ ದೆಹಲಿ ಜಯಗಳಿಸಿತ್ತು. ಉಳಿದವು ಡ್ರಾ ಆಗಿದ್ದವು.

ಗೋವಾ ವಿರುದ್ಧ ಮಧ್ಯಪ್ರದೇಶಕ್ಕೆ ಜಯ

ಪಾರ್ವೊರಿಮ್ (ಗೋವಾ): ಕುತೂಹಲ ಕೆರಳಿಸಿದ ಬಿ ಗುಂಪಿನ ಇನ್ನೊಂದು ಪಂದ್ಯದಲ್ಲಿ ಮಧ್ಯಪ್ರದೇಶ ತಂಡವು ಸಾರಾಂಶ್ ಜೈನ್ ಅವರ ಅಜೇಯ 82 ರನ್‌ಗಳ ನೆರವಿನಿಂದ ಮಂಗಳವಾರ ಗೋವಾ ತಂಡವನ್ನು 3 ವಿಕೆಟ್‌ಗಳಿಂದ ಸೋಲಿಸಿತು. ಮೊದಲ ಇನಿಂಗ್ಸ್‌ನಲ್ಲಿ 97 ರನ್‌ಗಳ ಮುನ್ನಡೆ ಪಡೆದಿದ್ದ ಗೋವಾಕ್ಕೆ ಇದು ಋತುವಿನ ಮೊದಲ ಸೋಲು.

ಸ್ಕೋರುಗಳು: ಗೋವಾ: 284 ಮತ್ತು 230; ಮಧ್ಯಪ್ರದೇಶ: 187 ಮತ್ತು 94 ಓವರುಗಳಲ್ಲಿ 7 ವಿಕೆಟ್‌ಗೆ 328. ಫಲಿತಾಂಶ: ಮಧ್ಯಪ್ರದೇಶಕ್ಕೆ 3 ವಿಕೆಟ್ ಜಯ

14ರಿಂದ ದಕ್ಷಿಣ ಆಫ್ರಿಕಾ ವಿರುದ್ಧ ಎರಡು ಪಂದ್ಯಗಳ ಟೆಸ್ಟ್ ಸರಣಿ

ನೆಟ್ಸ್‌ನಲ್ಲಿ ಗಿಲ್, ಜೈಸ್ವಾಲ್ ತಾಲೀಮು

ಕೋಲ್ಕತ್ತ (ಪಿಟಿಐ): ಅಲ್ಪಾವಧಿಯ ಕ್ರಿಕೆಟ್‌ನಿಂದ ದೀರ್ಘಾವಧಿ ಪಂದ್ಯಗಳ ಸರಣಿಗೆ ಸಜ್ಜಾಗುತ್ತಿರುವ ಭಾರತ ತಂಡದ ನಾಯಕ ಶುಭಮನ್ ಗಿಲ್ ಅವರು ಮಂಗಳವಾರ ಸುಮಾರು ಒಂದೂವರೆ ಗಂಟೆಗಳ ಕಾಲ ನೆಟ್ಸ್‌ನಲ್ಲಿ ಬೆವರು ಹರಿಸಿದರು. ದಕ್ಷಿಣ ಆಫ್ರಿಕಾ ವಿರುದ್ಧ ಶುಕ್ರವಾರ ಆರಂಭವಾಗುವ ಮೊದಲ ಟೆಸ್ಟ್‌ಗೆ ಮುನ್ನ ತಮ್ಮ ಕೌಶಲವನ್ನು ಹುರಿಗೊಳಿಸಲು ಶ್ರಮಹಾಕಿದರು.

ಪಾಕಿಸ್ತಾನ ವಿರುದ್ಧ ಹೋದ ತಿಂಗಳು ಸವಾಲಿನ ನಡುವೆಯೂ ಟೆಸ್ಟ್ ಸರಣಿಯನ್ನು 1–1 ಡ್ರಾ ಮಾಡಿಕೊಂಡ ವಿಶ್ವಾಸದಲ್ಲಿರುವ ದಕ್ಷಿಣ ಆಫ್ರಿಕಾ ತಂಡ ಕೂಡ ತಾಲೀಮಿನಲ್ಲಿ ತೊಡಗಿತು.

ಅಕ್ಟೋಬರ್ ಆರಂಭದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ತವರಿನಲ್ಲಿ ನಡೆದ ಎರಡು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಗಿಲ್ ಅವರು ಅವರು ಅರ್ಧ ಶತಕ, ಮತ್ತೊಂದು ಅಜೇಯ ಶತಕ ಗಳಿಸಿದ್ದರು. ಆದರೆ ನಂತರ ನಡೆದ ನಿಯಮಿತ ಓವರುಗಳ (ಏಕದಿನ ಮತ್ತು ಟಿ20) ಕ್ರಿಕೆಟ್‌ನಲ್ಲಿ ಅವರು ಅಂಥ ಯಶಸ್ಸು ಗಳಿಸಿರಲಿಲ್ಲ.

ನೆಟ್ಸ್‌ನಲ್ಲಿ ತೊಡಗುವ ಮುನ್ನ ಅವರು ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ಸಹಾಯಕ ಕೋಚ್ ಸಿತಾಂಶು ಕೊಟಕ್ ಜೊತೆ ದೀರ್ಘ ಸಮಾಲೋಚನೆಯಲ್ಲಿ ತೊಡಗಿದ್ದು ಕಂಡಿತು. ಕೆಲಕಾಲ ಸ್ಲಿಪ್ ಫೀಲ್ಡಿಂಗ್ ಅಭ್ಯಾಸದಲ್ಲಿ ತೊಡಗಿದರು. ಬಳಿಕ ಯಶಸ್ವಿ ಜೈಸ್ವಾಲ್ ಅವರೊಂದಿಗೆ ಪ್ಯಾಡ್ ಕಟ್ಟಿಕೊಂಡು ದೀರ್ಘಕಾಲ ಬ್ಯಾಟಿಂಗ್ ತಾಲೀಮಿನಲ್ಲಿ ತೊಡಗಿದರು.

ರವೀಂದ್ರ ಜಡೇಜ, ವಾಷಿಂಗ್ಟನ್ ಸುಂದರ್ ಅವರನ್ನು ಎದುರಿಸಿದರು.

ಭಾರತದ ತಂಡದ ನಾಯಕ ಶುಭಮನ್ ಗಿಲ್ ಮತ್ತು ಯಶಸ್ವಿ ಜೈಸ್ವಾಲ್ ಅಭ್ಯಾಸದ ವೇಳೆ ಮಾತುಕತೆ ನಡೆಸಿದರು ಪಿಟಿಐ ಚಿತ್ರ

ಕೆಲವು ಸ್ವೀಪ್‌ಗಳನ್ನು ಆಡಿದರು. ನಿತೀಶ್ ಕುಮಾರ್ ರೆಡ್ಡಿ ಜೊತೆಗೆ ಕೆಲವು ಕ್ಲಬ್ ಬೌಲರ್‌ಗಳನ್ನು ಎದುರಿಸಿದರು. ಬೌನ್ಸ್ ಮತ್ತು ವೇಗಕ್ಕೆ ಸಜ್ಜಾಗಲು ಥ್ರೊಡೌನ್‌ಗಳ-ನ್ನೂ ಎದುರಿಸಿದರು.

ರಾಜಸ್ತಾನ ಪರ ರಣಜಿ ಪಂದ್ಯದಲ್ಲಿ 67 ಮತ್ತು 156 ರನ್ ಹೊಡೆದಿದ್ದ ಎಡಗೈ ಬ್ಯಾಟರ್ ಜೈಸ್ವಾಲ್ ಕೂಡ ಮಧ್ಯದ ಪಿಚ್‌ನಲ್ಲಿ ಸುಮಾರು ಹೊತ್ತು ಆಡಿದರು.

ಸುದರ್ಶನ್ ಮೇಲೆ ಗಮನ: ನೆಟ್ಸ್‌ನಲ್ಲಿ ಸಾಕಷ್ಟು ಹೊತ್ತು ಕಳೆದ ಇನ್ನೊಬ್ಬ ಬ್ಯಾಟರ್ ಸಾಯಿ ಸುದರ್ಶನ್. ಅವರು ಬೆಂಗಳೂರಿನಲ್ಲಿ ಇತ್ತೀಚೆಗೆ ದಕ್ಷಿಣ ಆಫ್ರಿಕಾ 'ಎ' ವಿರುದ್ಧ ಎರಡು 'ಟೆಸ್ಟ್'ಗಳಲ್ಲಿ ಅಂಥ ಯಶಸ್ಸು ಗಳಿಸಿರಲಿಲ್ಲ. ಅವರು ಮೂರನೇ ಕ್ರಮಾಂಕದಲ್ಲಿ ಆಡುವ ಸಾಧ್ಯತೆ ಹೆಚ್ಚು.

ಭಾರತ ಎ ತಂಡದಲ್ಲಿ ಅವರ ಜೊತೆ ಆಡಿದ್ದ ಕೆ.ಎಲ್.ರಾಹುಲ್, ಧ್ರುವ್ ಜುರೆಲ್, ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್, ರಿಷಭ್ ಪಂತ್, ದೇವದತ್ತ ಪಡಿಕ್ಕಲ್ ಅವರು ಐಚ್ಛಿಕವಾಗಿದ್ದ ತಾಲೀಮಿನಲ್ಲಿ ಪಾಲ್ಗೊಳ್ಳಲಿಲ್ಲ.

ಟೆಸ್ಟ್‌ಗಳಲ್ಲಿ 47.77 ಸರಾಸರಿ ಹೊಂದಿರುವ ಧ್ರುವ್ ಜುರೆಲ್ ವೆಸ್ಟ್ ಇಂಡೀಸ್ ವಿರುದ್ಧ ಚೊಚ್ಚಲ ಶತಕ ಬಾರಿಸಿದ್ದು, ಅಮೋಘ ಲಯದಲ್ಲಿದ್ದಾರೆ. ದಕ್ಷಿಣ ಆಫ್ರಿಕಾ 'ಎ' ವಿರುದ್ಧ ಎರಡೂ ಇನಿಂಗ್ಸ್‌ಗಳಲ್ಲಿ ಶತಕ ಬಾರಿಸಿದ್ದು ಅವರ ಲಯಕ್ಕೆ ನಿದರ್ಶನ. ವೇಗಿಗಳ ಪೈಕಿ ಜಸ್‌ಪ್ರೀತ್ ಬೂಮ್ರಾ ಸುಮಾರು 15 ನಿಮಿಷಗಳ ಕಾಲ ಅಭ್ಯಾಸದಲ್ಲಿ ತೊಡಗಿದ್ದರು. ಉಲ್ಲಸಿತರಾಗಿದ್ದ ಅವರು ತಂಡದ ಇತರ ಆಟಗಾರರ ಜೊತೆ ಹರಟೆ ಹೊಡೆದರು. ಬಲಮೊಣಕಾಲಿಗೆ ಪಟ್ಟಿಕಟ್ಟಿಕೊಂಡಿದ್ದು ಕಾಣಿಸಿತು.

ಪಿಚ್ ಮೇಲೆ ಕಣ್ಣು

ಮೂರು ಗಂಟೆಗಳ ತರಬೇತಿಯ ಬಳಿಕ ಗಂಭೀರ್, ಕೋಟಕ್, ಮಾರ್ಕೆಲ್ ಮತ್ತು ಗಿಲ್ ಅವರಿದ್ದ 'ಚಿಂತಕರ ತಂಡ'ವು ಪಂದ್ಯ ನಡೆಯುವ 'ಸೆಂಟರ್ ಪಿಚ್' ಪರಿಶೀಲಿಸಿತು. ಮಾರ್ಕೆಲ್ ಮತ್ತು ಗಿಲ್ ಅವರು ಕ್ಯುರೇಟರ್ ಸುಜನ್ ಮುಖರ್ಜಿ ಅವರನ್ನು ಕರೆಸಿ 15 ನಿಮಿಷ ಮಾತನಾಡಿದರು. ಆಚೀಚೆಯ ಪಿಚ್‌ಗೆ ನೀರು ಹಾಯಿಸಲಾಗಿದ್ದು, ಮಧ್ಯದ ಪಿಚ್ ಹಾಗೇ ಬಿಡಲಾಗಿತ್ತು.

ಹರಿಣಗಳ ತಂಡ ಸ್ಪಿನ್ ಮತ್ತು ವೇಗದ ಬೌಲರ್‌ಗಳಿಂದ ಸಮತೋಲನ ಹೊಂದಿದೆ. ಕಗಿಸೊ ರಬಾಡ ಮತ್ತು ಮಾರ್ಕೊ ಯಾನ್ಸೆನ್ ಒಳಗೊಂಡ ವೇಗದ ವಿಭಾಗ ಮತ್ತು ಕೇಶವ ಮಹಾರಾಜ್, ಸೈಮನ್ ಹರ್ಮರ್, ಸೆನರಾನ್ ಮುತ್ತುಸಾಮಿ ಅವರಿದ್ದ ಸ್ಪಿನ್ ವಿಭಾಗ ಪಾಕಿಸ್ತಾನದಲ್ಲಿ ಉತ್ತಮ ಪ್ರದರ್ಶನ ನೀಡಿತ್ತು.

ಹರ್ಮರ್ (13), ಮುತ್ತುಸಾಮಿ (11), ಮಹಾರಾಜ್ (9) ಅವರು 33 ವಿಕೆಟ್‌ಗಳನ್ನು ಹಂಚಿಕೊಂಡಿದ್ದರು. 106 ರನ್ ಕಲೆಹಾಕಿದ್ದ ಮುತ್ತುಸಾಮಿ ಸರಣಿಯ ಆಟಗಾರನಾಗಿದ್ದರು.

ಸಂಕ್ಷಿಪ್ತ ಸುದ್ದಿ

ವಿಶ್ವ ಶೂಟಿಂಗ್: ಐಶ್ವರಿ ಪ್ರಸಾದ್‌ಗೆ ಬೆಳ್ಳಿ ಪದಕ

ಕೈರೊ (ಪಿಟಿಐ): ಒಲಿಂಪಿಯನ್ ಐಶ್ವರಿ ಪ್ರಸಾದ್ ಸಿಂಗ್ ತೋಮಾರ್ ಅವರು ಐಎಸ್‌ಎಸ್‌ಎಫ್ ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಪುರುಷರ 50 ಮೀ. ರೈಫಲ್ 3 ಪೊಸಿಷನ್ಸ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದರು. ಅರ್ಹತಾ ಸುತ್ತಿನಲ್ಲಿ ವಿಶ್ವದಾಖಲೆ ಸರಿಗಟ್ಟಿದರು.

ಐಶ್ವರಿ ಅವರು 466.9 ಸ್ಕೋರ್‌ನೊಡನೆ ಎರಡನೇ ಸ್ಥಾನ ಗಳಿಸಿದರು. ಚೀನಾದ ಯುಕುನ್ ಲಿಯು (467.1) ಅವರು ಚಿನ್ನ ಗೆದ್ದರೆ, ಫ್ರಾನ್ಸ್‌ನ ರೊಮೇನ್ ಆಫ್ರೆರಿ (454.8) ಕಂಚಿನ ಪದಕ ಗಳಿಸಿದರು.

ಫೈನಲ್‌ನಲ್ಲಿದ್ದ ಭಾರತದ ಇನ್ನೊಬ್ಬ ಶೂಟರ್ ನೀರಜ್ ಕುಮಾರ್ (432.6) ಅವರು ಐದನೇ ಸ್ಥಾನ ಪಡೆದರು.

ಐಶ್ವರಿ ಪ್ರಸಾದ್ ಇದಕ್ಕೆ ಮೊದಲು ತಮ್ಮ ಸ್ಪರ್ಧೆಯ ಫೈನಲ್ ತಲುಪುವ ಮೊದಲು ಅರ್ಹತಾ ಸುತ್ತಿನಲ್ಲಿ ವಿಶ್ವ ದಾಖಲೆ (597–40x) ಸರಿಗಟ್ಟಿದ್ದರು. ನೀರಜ್ 592ರ ಸ್ಕೋರ್‌ನೊಡನೆ ಅಂತಿಮ ಸುತ್ತು ತಲುಪಿದ್ದರು.

ರಾಣಾ–ಇಶಾಗೆ ಬೆಳ್ಳಿ: ಏರ್ ಪಿಸ್ತೂಲ್ ವಿಶ್ವ ಚಾಂಪಿಯನ್ ಆದ ಸಾಮ್ರಾಟ್ ರಾಣಾ –ಹಾಲಿ ಚಾಂಪಿಯನ್ ಇಶಾ ಸಿಂಗ್ ಅವರು 10 ಮೀ. ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಬೆಳ್ಳಿ ಗೆದ್ದರು.

ಎರಡನೇ ಸ್ಥಾನ: ಮೂರು ಚಿನ್ನ, ಐದು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳೊಂದಿಗೆ ಭಾರತವು ಪದಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಚೀನಾ (8 ಚಿನ್ನ ಸಹಿತ 14 ಪದಕ) ಅಗ್ರಸ್ಥಾನದಲ್ಲಿದೆ.

ಮುಂದಿನ ವಿಶ್ವಕಪ್ ಕೊನೆಯದ್ದು: ರೊನಾಲ್ಡೊ

ರಿಯಾಧ್ (ಎಎಫ್‌ಪಿ): ಮುಂದಿನ ವರ್ಷದ ಫುಟ್‌ಬಾಲ್ ವಿಶ್ವಕಪ್ ತಮ್ಮ ಪಾಲಿಗೆ ಕೊನೆಯದಾಗಲಿದೆ ಎಂದು ಪೋರ್ಚುಗಲ್‌ನ ಸೂಪರ್ ಸ್ಟಾರ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಮಂಗಳವಾರ ತಿಳಿಸಿದ್ದಾರೆ. ಆ ಮೂಲಕ ಈ ಕ್ರೀಡೆಯ ಮಹಾನ್ ಆಟಗಾರ ಮುಂದಿನ ವರ್ಷ ವೃತ್ತಿಜೀವನ ಕೊನೆಗೊಳಿಸುವ ಸುಳಿವು ನೀಡಿದ್ದಾರೆ.

40 ವರ್ಷ ವಯಸ್ಸಿನ ರೊನಾಲ್ಡೊ ಅವರು ಅಂತರರಾಷ್ಟ್ರೀಯ ಮತ್ತು ಕ್ಲಬ್ ಪಂದ್ಯಗಳಲ್ಲಿ 950ಕ್ಕೂ ಹೆಚ್ಚು ಗೋಲುಗಳನ್ನು ಗಳಿಸಿದ್ದಾರೆ. ಒಂದು ಅಥವಾ ಎರಡು ವರ್ಷಗಳಲ್ಲಿ ನಿವೃತ್ತರಾಗುವುದಾಗಿಯೂ ತಿಳಿಸಿದ್ದಾರೆ.

ನೈಶಾ ಕೌರ್‌ಗೆ ನಿರಾಶೆ

ಕುಮಾಮೊಟೊ (ಜಪಾನ್), (ಪಿಟಿಐ): ಹದಿಹರೆಯದ ಆಟಗಾರ್ತಿ, ಭಾರತದ ನೈಶಾ ಕೌರ್ ಭತೊಯೆ ಅವರು ಕುಮಾಮೊಟೊ ಮಾಸ್ಟರ್ಸ್ ಜಪಾನ್ ಬ್ಯಾಡ್ಮಿಂಟನ್ ಟೂರ್ನಿಯ ಪ್ರಧಾನ ಸುತ್ತಿಗೇರಲು ವಿಫಲರಾದರು.

ಮಹಿಳಾ ಸಿಂಗಲ್ಸ್ ಅರ್ಹತಾ ಸುತ್ತಿನಲ್ಲಿ ನೈಶಾ 17–21, 18–21ರಲ್ಲಿ ತಮಗಿಂತ ಮೇಲಿನ ಕ್ರಮಾಂಕದ ಆಟಗಾರ್ತಿ, ನ್ಯೂಜಿಲೆಂಡ್‌ನ ಶಾವುನ್ನ ಲಿ ಅವರಿಗೆ ಮಣಿದರು. ಹೀಗಾಗಿ ಮಹಿಳಾ ಸಿಂಗಲ್ಸ್‌ನಲ್ಲಿ ಭಾರತದ ಪ್ರಾತಿನಿಧ್ಯ ಕೊನೆಗೊಂಡಂತಾಗಿದೆ.

ಲೇಸರ್ ಟ್ಯಾಗ್‌ನಲ್ಲಿ ಬಳ್ಳಾರಿ ಕ್ವೀನ್ಸ್ ತಂಡ ಪಾರಮ್ಯ

ಗೋ ಕಾರ್ಟಿಂಗ್: ಹಾಸನ ಕ್ವೀನ್ಸ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಕ್ವೀನ್ಸ್ ಮತ್ತು ಬಳ್ಳಾರಿ ಕ್ವೀನ್ಸ್ ತಂಡಗಳು ಮಂಗಳವಾರ ಕ್ವೀನ್ಸ್ ಪ್ರೀಮಿಯರ್ ಲೀಗ್‌ನ (ಕ್ಯೂಪಿಎಲ್) ಎರಡನೇ ಆವೃತ್ತಿಯಲ್ಲಿ ಕ್ರಮವಾಗಿ ಗೋ ಕಾರ್ಟಿಂಗ್ ಮತ್ತು ಲೇಸರ್ ಟ್ಯಾಗ್ ಸ್ಪರ್ಧೆಗಳ ಪ್ರಶಸ್ತಿಯನ್ನು ಗೆದ್ದುಕೊಂಡವು.

ನಗರದ ಮಾರತ್ತಹಳ್ಳಿಯ ಇ-ಝೋನ್‌ನಲ್ಲಿ ಗೋ ಕಾರ್ಟಿಂಗ್, ಲೇಜರ್ ಟ್ಯಾಗ್ ಮತ್ತು ಬೌಲಿಂಗ್ ಸ್ಪರ್ಧೆಗಳು ನಡೆದವು. ಕ್ಯೂಪಿಎಲ್ ಸಂಸ್ಥಾಪಕ ಮಹೇಶ್ ಕುಮಾರ್ ಜೆ, ನಟ ಪ್ರಮೋದ್ ಶೆಟ್ಟಿ, ಸಂತೋಷ್ ಬಿಲ್ಲವ, ಪ್ರೇಮ್ ಮಲ್ಲೂರ್ ಮತ್ತು ಚೇತನ್ ಪರೀಕ್ ಉಪಸ್ಥಿತರಿದ್ದು, ಸ್ಪರ್ಧಿಗಳನ್ನು ಹುರಿದುಂಬಿಸಿದರು.

ಸ್ಟಾರ್ ಕ್ಯಾಪ್ಟನ್‌ಗಳನ್ನು ಒಳಗೊಂಡ ಹತ್ತು ತಂಡಗಳೂ ಎರಡನೇ ದಿನದ ಸ್ಪರ್ಧೆಗಳಲ್ಲಿ ಉತ್ಸಾಹದಿಂದ ಪಾಲ್ಗೊಂಡವು. ರೋಮಾಂಚಕಾರಿಯಾಗಿದ್ದ ಗೋ ಕಾರ್ಟಿಂಗ್ ಸ್ಪರ್ಧೆಯು ಪ್ರೇಕ್ಷಕರನ್ನು ತುದಿಗಾಲಿನಲ್ಲಿ ನಿಲ್ಲಿಸಿತ್ತು. ಸ್ಟಾರ್ ನಾಯಕಿಯರಾದ ಸಪ್ತಮಿ ಗೌಡ (ಬೆಂಗಳೂರು ಕ್ವೀನ್ಸ್) ಮತ್ತು ರಾಧಿಕಾ ನಾರಾಯಣ್ (ಚಿತ್ರದುರ್ಗ ಕ್ವೀನ್ಸ್) ಟ್ರ್ಯಾಕ್‌ನಲ್ಲಿ ಸೆಣಸಾಟ ನಡೆಸಿದ್ದು ಗಮನ ಸೆಳೆಯಿತು.

ಕೊನೆವರೆಗೂ ಛಲ ಬಿಡದೆ ಹೋರಾಟ ನಡೆಸಿದ ಹಾಸನ ಕ್ವೀನ್ಸ್ ತಂಡವು ಗೋ ಕಾರ್ಟಿಂಗ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು. ಲೇಜರ್ ಟ್ಯಾಗ್ ಫೈನಲ್ಸ್‌ನಲ್ಲಿ ಬಳ್ಳಾರಿ ಕ್ವೀನ್ಸ್ ತಂಡ ಪಾರಮ್ಯ ಸಾಧಿಸಿತು. ಈ ಎರಡೂ ತಂಡಗಳು ಈ ಬಾರಿಯ ಅಭಿಯಾನದಲ್ಲಿ ಉತ್ತಮ ಆರಂಭ ಪಡೆದವು. ಬೌಲಿಂಗ್ ಲೀಗ್ ಫಲಿತಾಂಶ ಶೀಘ್ರದಲ್ಲೇ ಪ್ರಕಟಿಸಲಾಗುತ್ತದೆ.

ಸ್ಪರ್ಧೆಯ ಮೊದಲ ದಿನವಾದ ಸೋಮವಾರ ಬೆಂಗಳೂರು ನಗರ ವಿಶ್ವ-ವಿದ್ಯಾಲಯದ ಆವರಣದಲ್ಲಿರುವ ಬೇಸ್ ಕ್ಯಾಂಪ್‌ನಲ್ಲಿ ಬ್ಯಾಸ್ಕೆಟ್‌ಬಾಲ್ ಮತ್ತು ಪಿಕಲ್‌ಬಾಲ್ ಲೀಗ್‌ನಲ್ಲಿ ಕೋಲಾರ ಕ್ವೀನ್ಸ್ ತಂಡವು ಎರಡೂ ಸ್ಪರ್ಧೆಗಳನ್ನು ಗೆಲ್ಲುವ ಮೂಲಕ ಆರಂಭಿಕ ಮುನ್ನಡೆ ಸಾಧಿಸಿತ್ತು. ಬುಧವಾರದಿಂದ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಇತರ ಸ್ಪರ್ಧೆಗಳು ನಿಗದಿಯಾಗಿವೆ. ಒಳಾಂಗಣ ಆಟಗಳಾದ ಚೆಸ್, ಕೇರಂ, ಲುಡೊ ಮತ್ತು ಲಗೋರಿ ಸ್ಪರ್ಧೆಗಳು ಇಲ್ಲಿ ನಡೆಯಲಿವೆ.

ಸ್ಪರ್ಧೆಗಳಲ್ಲಿ ಸಿನಿ ಕಲಾವಿದರು ಮತ್ತು ಸೆಲೆಬ್ರಿಟಿಗಳು ಉತ್ಸಾಹದಿಂದ ಭಾಗ ವಹಿಸುತ್ತಿದ್ದಾರೆ. ಈ ಸ್ಪರ್ಧೆಗಳ ವೀಕ್ಷಣೆಗೆ ಸಾರ್ವಜನಿಕರಿಗೆ ಪ್ರವೇಶ ಉಚಿತವಾಗಿದೆ.

ಮಾರತ್ತಹಳ್ಳಿಯ ಇ–ಝೋನ್‌ನಲ್ಲಿ ಮಂಗಳವಾರ ಗೋ ಕಾರ್ಟಿಂಗ್ ಸ್ಪರ್ಧೆಗೆ ನಟ ಪ್ರಮೋದ್ ಶೆಟ್ಟಿ ಚಾಲನೆ ನೀಡಿದರು

ಅಬುಧಾಬಿಯಲ್ಲಿ ಐಪಿಎಲ್ ಹರಾಜು

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್‌ಗೆ ಹರಾಜು ಪ್ರಕ್ರಿಯೆ ಮುಂದಿನ ತಿಂಗಳು ಅಬುಧಾಬಿಯಲ್ಲಿ ನಡೆಯಲಿದೆ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

ಸತತ ಮೂರನೇ ಬಾರಿ ಹರಾಜು ಪ್ರಕ್ರಿಯೆ ವಿದೇಶದಲ್ಲಿ ನಡೆಯುತ್ತಿದೆ. 2023ರ ಆಕ್ಷನ್ ದುಬೈನಲ್ಲಿ ನಡೆದರೆ, 2024ರ ಬಿಡ್ ಪ್ರಕ್ರಿಯೆ ಜೆಡ್ಡಾದಲ್ಲಿ ನಡೆದಿತ್ತು. ಈ ಬಾರಿಯ ಆಕ್ಷನ್ ಡಿಸೆಂಬರ್ 15 ಅಥವಾ 16ರಂದು ನಡೆಯುವ ಸಾಧ್ಯತೆಯಿದೆ.

'ಅಬುಧಾಬಿಯನ್ನು ಐಪಿಎಲ್ ಆಕ್ಷನ್‌ಗೆ ಅಂತಿಮಗೊಳಿಸಿದ್ದೇವೆ' ಎಂದು ಅಧಿಕಾರಿ ತಿಳಿಸಿದರು. ಕಳೆದ ವರ್ಷ ಸೌದಿ ಅರೇಬಿಯದಲ್ಲಿ ಮೆಗಾ ಆಕ್ಷನ್ ನಡೆದಿತ್ತು. ಹೀಗಾಗಿ ಅಬುಧಾಬಿಯಲ್ಲಿ ಮಿನಿ ಆಕ್ಷನ್ ನಡೆಯಲಿದೆ.

ಟೆನಿಸ್ ತಾರೆಯರು ಸಜ್ಜು

ಪುಷ್ಕರ್ ವಿ.

ಪ್ರತಿಷ್ಠಿತ ಬಿಲ್ಲೀ ಜೀನ್ ಕಿಂಗ್ ಕಪ್ ಅಂತರರಾಷ್ಟ್ರೀಯ ಮಹಿಳಾ ಟೆನಿಸ್ ಟೂರ್ನಿಯ 'ಜಿ' ಗುಂಪಿನ ಪ್ಲೇಆಫ್ ಪಂದ್ಯಗಳು ಬೆಂಗಳೂರಿನ ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಇದೇ 14ರಿಂದ ಆರಂಭವಾಗಲಿದ್ದು, ಆತಿಥೇಯ ಭಾರತ ತಂಡದ ಕೋಚ್ ರಾಧಿಕಾ ಕಾನಿಟ್ಕರ್ ಮತ್ತು ವಿಶಾಲ್ ಉಪ್ಪಲ್ ಅವರು ಮಂಗಳವಾರ ಅಭ್ಯಾಸದ ವೇಳೆ ಆಟಗಾರ್ತಿಯರೊಂದಿಗೆ ಮಾತುಕತೆ ನಡೆಸಿದರು

ಅಪರೂಪದ 10 ಆಯುರ್ವೇದಿಕ ಮೂಲಿಕೆಗಳ ಸಾರಗಳಿಂದ ಅಥವಾ ತೈಲಗಳಿಂದ ತಯಾರಿಸಲಾದ ಡಾ. ಆರ್ಥೋ ಸ್ಟ್ರಾಂಗ್ ಆಯಿಲ್, ನೋವಿರುವ ಭಾಗದಲ್ಲಿ ಆಳಕ್ಕಿಳಿಯುತ್ತದೆ ಮತ್ತು ಪರಿಣಾಮಕಾರಿಯಾಗಿ ನೋವು ನಿವಾರಿಸಲು ನೆರವಾಗುತ್ತದೆ. ದಿನಕ್ಕೆ 1–2 ಬಾರಿ ನೋವಿರುವ ಭಾಗದ ಮೇಲೆ 8–10 ಮಿ.ಲೀ. ಆಯಿಲ್ ಹಾಕಿ ಮೃದುವಾಗಿ ಮಸಾಜ್ ಮಾಡಿರಿ. ಇದರ ಪರಿಣಾಮಗಳು ತಾತ್ಕಾಲಿಕವಾಗಿರದೆ, ದೀರ್ಘಕಾಲದವರೆಗೆ ನೋವಿನಿಂದ ಮುಕ್ತಿ ನೀಡುತ್ತವೆ.

24x7 Helpline: 78769 77777 | www.drorthooil.com

GST benefits now make buying a Kia even more rewarding. Add in our additional benefits, and the savings get even better. It's the perfect time to bring home the Kia you've always wanted.

Model	Seltos	Sonet	Syros	Carens	Carens Clavis
Range starts at	₹ 10 79 276	₹ 7 30 138	₹ 8 67 053	₹ 10 47 454	₹ 11 17 835
Total benefits	₹ 1 77 100	₹ 95 000	₹ 1 53 300	₹ 68 900	₹ 1 40 900

*Benefits available on other Kia cars as per applicability.

For more information, visit our dealership or contact:
1800 108 5000 | 093195 91407 | www.kia.com | Book Kia | kiacare@kiaindia.net | Look for "Kia India" @

*Terms & condition apply. Ex-showroom price mentioned is for the base variant (PAN India). Benefits shown are the combination of exchange, loyalty, corporate, scrappage and special benefits, which are applicable on select models and variants, may vary from model to model and region to region. The product shown is for representation purposes only. Actual features, colors, and specifications may not be part or standard fitment and may vary. Kia India Pvt. Ltd. reserves the right to make any changes with respect to the trims, colors, specifications, and other details of any model as mentioned or to modify/ discontinue any offer/ scheme/ service without prior notice. Kia urges you to follow traffic rules, these are meant to keep you safe on the roads. Visit your nearest Kia dealership for more details.

Bangalore: **PPS Kia:** Mysore Road, Tel: 6309990010; **JSP Kia:** Bellandur, Tel: 9071077717; Hosur Road, Tel: 9606011244; Sarjapur, Tel: 9513138856; **VST Kia:** Palace Cross, Tel: 9606988123, Yeshwanthpur, Tel: 9606988124 **Naara Kia:** JP Nagar, Tel: 7406528200, Kanakpura Road, Tel: 907010099; **Epitome Kia:** Whitefield, Tel: 9606970216, Yelahanka, Tel: 7406343339, Varthur, Tel: 9844240044, Avalahalli, Tel: 7022317666; **Taapasi Kia:** Kalyan Nagar, Tel: 8095537777; Koramangala, Tel: 9071177333; **Advaith Kia:** Lalbagh, Tel: 9611006006, Magadi Road, Tel: 6364871023, Banashankari, Tel: 6364871022, Basaweshwar Nagar, Tel: 6364871024; Tumkur: **PPS Kia:** Tel: 6303622210; Kolar: **Epitome Kia:** Tel: 8951903224